ಭಾನುವಾರ, ಏಪ್ರಿಲ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 94 | ಪುಟ 20 • www.prajavani.net /prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭಾನುವಾರದ ಪುರವಣಿ** ಸೂಯಜ್ ಕಾಲುವೆಯಲ್ಲಿ ಸಿಲುಕಿದ 'ಎವರ್ ಗಿವನ್' ಹಡಗಿನ ಪ್ರಸಂಗ ಕೊಳ್ಳುಬಾಕತನ ಮಿತಿಮೀರಿರುವ ಈ ದಿನಗಳಲ್ಲಿ ಮರೆಯಲಾದ ಪಾಠವೊಂದನ್ನು ಕಲಿಸಿದೆ.



₹1.18 ಕೋಟಿ ಮೌಲ್ಯದ ಚಿನ್ನ ವಶ 4

ಮಾಜಿ ರಾಯಭಾರಿ ಬರ್ನ್ಸ್ ಅವರೊಂದಿಗೆ ಸಂವಾದದ ವೇಳೆ ರಾಹುಲ್ ಕಳವಳ

ಸಹಿ ಸಂಗ್ರಹಕ್ಕೆ ಬಗ್ಗುವುದಿಲ್ಲ: ಈಶ್ವರಪ್ಪ 5

ಭಾರತದ ವಿದ್ಯಮಾನಗಳತ್ತ ಅಮೆರಿಕ ಮೌನ 12

ಸರ್ಕಾರ ಬದಲಾದಾಗ ನೀತಿಯೂ ಬದಲು • ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆ ಕಗ್ಗಂಟು

# ಅಗ್ಗದ ಆಹಾರಕ್ಕೆ ಅನುದಾನ ಬರ

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ದುಡಿದು ಉಣ್ಣುವ ಬಡ ಜನರಿಗೆ ಅಗ್ಗದ ದರದಲ್ಲಿ ಊಟೋಪಾಹಾರ ಒದಗಿಸಲು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆರಂಭಿಸಿದ್ದ ಮಹತ್ವಾಕಾಂಕ್ಷೆಯ 'ಇಂದಿರಾ ಕ್ಯಾಂಟೀನ್' ಯೋಜನೆ ಶುರುವಾದ ನಾಲ್ಕೇ ವರ್ಷಗಳಲ್ಲಿ ದುಸ್ಥಿತಿಗೆ ತಲುಪಿದೆ.

ದುರ್ಬಲವರ್ಗದ ಶ್ರಮಜೀವಿಗಳು ಹಸಿವಿನಿಂದ ಬಳಲುವ ಪರಿಸ್ಥಿತಿ ಇರಬಾರದು ಎಂಬ ಆಶಯದಿಂದ ಆರಂಭವಾದ ಈ ಯೋಜನೆ ಅಲ್ಪಾವಧಿಯಲ್ಲೇ ಜನರ ಮೆಚ್ಚುಗೆ ಗಳಿಸಿತ್ತು. ಒಪ್ಪೊತ್ತಿನ ಊಟಕ್ಕೆ ದುಬಾರಿ ದರ ತೆರಲಾಗದವರ ಪಾಲಿಗೆ ವರವಾಗಿದ್ದ ಈ ಯೋಜನೆ ವಿಫಲವಾಗುವ ಹಾದಿ ಹಿಡಿಯುತ್ತಿರುವುದು 'ಇದು ಜನರಿಗೆ ಬೇಡವಾಗಿದೆ' ಎಂಬ ಕಾರಣಕ್ಕಲ್ಲ; ಸರ್ಕಾರದ ಅನಾದರದಿಂದಾಗಿ. ಸತತ ಮೂರು ವರ್ಷಗಳಿಂದ ಈ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ನೀಡದೇ, ಸರ್ಕಾರವೇ ಈ ಕ್ಯಾಂಟೀನ್‌ಗಳ ಕತ್ತು ಹಿಸುಕುತ್ತಿದೆ.

'ನಗರದಲ್ಲಿ ಶೇ 28ರಷ್ಟು ಐದು ವರ್ಷಗಳ ಒಳಗಿನ ಮಕ್ಕಳು, ಶೇ 13ರಷ್ಟು ಮಹಿಳೆಯರು ಹಾಗೂ ಶೇ 10ರಷ್ಟು ಪುರುಷರು ಸರಾಸರಿಗಿಂತ ಕಡಿಮೆ ತೂಕ ಹೊಂದಿದ್ದಾರೆ. ದಕ್ಷಿಣ ಭಾರತದ ಅನ್ಯರಾಜ್ಯಗಳ ನಗರಗಳಿಗೆ ಹೋಲಿಸಿದರೆ, ಎರಡು ಹೊತ್ತು ಊಟ ಸಿಗದೆ ಇರುವ ಜನರ ಸಂಖ್ಯೆ ಬೆಂಗಳೂರಿನಲ್ಲಿ ಜಾಸ್ತಿ. ಹಾಗಾಗಿ ಈ ನಗರದಲ್ಲಿ ಯೋಜನೆಯನ್ನು ಆರಂಭಿಸಲಾಗುತ್ತಿದೆ. ಕ್ಯಾಂಟೀನ್‌ಗಳ ನಿರ್ಮಾಣ ಹಾಗೂ ನಿರ್ವಹಣೆಯ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸಲಿದೆ' ಎಂದು ಇಂದಿರಾ ಕ್ಯಾಂಟೀನ್ ಯೋಜ ನೆಯ ಉದ್ಘಾಟನೆಯ ಸಂದರ್ಭದಲ್ಲಿ ಆಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. 2017ರ ಆ. 16ರಂದು ಬೆಂಗಳೂರಿನಲ್ಲಿ 101 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿತ್ತು. ಇದಕ್ಕೆ ದೊರೆತ ಉತ್ತಮ ಪ್ರತಿಕ್ರಿಯೆ ನೋಡಿ ಸರ್ಕಾರ ರಾಜ್ಯದ ಇತರ ನಗರಗಳಿಗೂ ಈ ಯೋಜನೆಯನ್ನು ವಿಸ್ತರಿಸಿತ್ತು.

ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಮೊದಲ ಎರಡು ವರ್ಷ ಇಂದಿರಾ ಕ್ಯಾಂಟೀನ್‌ಗಳು ಯಾವುದೇ ಅಡೆತಡೆಗಳಿಲ್ಲದೆಯೇ ನಡೆದವು. ಆದರೆ, ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಹಾಗೂ ಬಿಜೆಪಿ ನೇತೃತ್ವದ ಸರ್ಕಾರ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಕಾಯ್ದಿರಿಸದ ಪರಿಣಾಮ ಇವುಗಳ ನಿರ್ವಹಣೆ ಕಗ್ಗಂಟಾಗಿದೆ.

**ಒಳನೋಟ**

**ಕ್ಯಾಂಟೀನ್‌ಗೆ ಕಂಟಕ**

ಪ್ರತಿಕ್ರಿಯಿಸಿ: 9606038256

### 'ಇಂದಿರಾ' ಹೆಸರಿಗೆ ಆಕ್ಷೇಪ

ಇಂದಿರಾ ಕ್ಯಾಂಟೀನ್ ಹೆಸರಿನ ಬಗ್ಗೆ ಬಿಜೆಪಿಯ ನಾಯಕರು ಆಕ್ಷೇಪ ಎತ್ತಿದ್ದರು. ಈ ಹೆಸರನ್ನು ಬದಲಾಯಿಸಬೇಕು ಎಂದೂ ಒತ್ತಾಯಿಸಿದ್ದರು. ಇದು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ, ಸ್ವತಃ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೇ, 'ಸರ್ಕಾರದ ಮುಂದೆ ಅಂತಹ ಪ್ರಸ್ತಾವ ಇಲ್ಲ' ಎಂದು ಸ್ಪಷ್ಟಪಡಿಸಿದ್ದರು.

**191** ನಗರದಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಇಂದಿರಾ ಕ್ಯಾಂಟೀನ್‌ಗಳು

**18** ಸಂಚಾರ ಇಂದಿರಾ ಕ್ಯಾಂಟೀನ್

**173** ಸ್ಥಿರ ಇಂದಿರಾ ಕ್ಯಾಂಟೀನ್

ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಯಾದ ಬಳಿಕ ರಾಜ್ಯದ ವಿವಿಧ ಕಡೆಗಳಲ್ಲಿ ಒಂದೊಂದೇ ಕ್ಯಾಂಟೀನ್‌ಗಳನ್ನು ಮುಚ್ಚಲಾಗಿದೆ. ಬೆಂಗಳೂರು ನಗರದಲ್ಲೇ ನಾಲ್ಕು ಕ್ಯಾಂಟೀನ್‌ಗಳು ಈಗ ಕಾರ್ಯನಿರ್ವಹಿಸುತ್ತಿಲ್ಲ. ಇವುಗಳ ಸಿಬ್ಬಂದಿಗೂ ವೇತನ ಕಾಲಕಾಲಕ್ಕೆ ಪಾವತಿ ಆಗುತ್ತಿಲ್ಲ.


ಕೆಲವೆಡೆ ಕ್ಯಾಂಟೀನ್‌ಗಳು ನಡೆಯುತ್ತಿವೆಯಾದರೂ, ಅವುಗಳಲ್ಲಿ ಈ ಹಿಂದಿನಂತೆ ಬಗೆ ಬಗೆಯ ಆಹಾರಗಳನ್ನು ನೀಡುತ್ತಿಲ್ಲ. ಬೆಂಗಳೂರಿನ ಕ್ಯಾಂಟೀನ್‌ಗಳಲ್ಲಿ ಬೆಳಿಗ್ಗೆ ಉಪಾಹಾರಕ್ಕೆ ಇಡ್ಲಿ ಸಾಂಬಾರ್ ಹಾಗೂ ಅನ್ನದಿಂದ ತಯಾರಿಸುವ ಬಾತ್‌ಗಳನ್ನು ನೀಡಲಾಗುತ್ತಿತ್ತು. ಇತ್ತೀಚೆಗೆ ಇಡ್ಲಿ ಸಾಂಬಾರ್ ಮಾರಾಟವನ್ನು ಸದ್ದಿಲ್ಲದೇ ಸ್ಥಗಿತಗೊಳಿಸಲಾಗಿದೆ. ಮಧ್ಯಾಹ್ನ ಊಟಕ್ಕೆ ಅನ್ನ ಸಾಂಬಾರ್, ಪಲಾವ್, ಮೊಸರು ಗೊಜ್ಜು, ಪಾಯಸ ನೀಡಲಾಗುತ್ತಿತ್ತು. ಬಹುತೇಕ ಕ್ಯಾಂಟೀನ್‌ಗಳಲ್ಲಿ ಈಗ ಅನ್ನ ಸಾಂಬಾರ್ ಮಾತ್ರ ನೀಡಲಾಗುತ್ತಿದೆ. ನೀಡುವ ಆಹಾರದ ಪ್ರಮಾಣವನ್ನು ಕಡಿಮೆ ಮಾಡಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಕ್ಯಾಂಟೀನ್‌ನಲ್ಲಿ ಊಟ ಮಾಡುವ ಅನೇಕರು, 'ಈಗ ಹಿಂದಿನಷ್ಟು ಪ್ರಮಾಣದ ಆಹಾರ ನೀಡುತ್ತಿಲ್ಲ' ಎಂದು ದೂರುತ್ತಾರೆ.

ಒಂದೆಡೆ ತರಕಾರಿ, ದಿನಸಿ, ಬೇಳೆ ಕಾಳುಗಳ ದರ ಗಗನಕ್ಕೇರಿದ್ದರೆ, ಇನ್ನೊಂದೆಡೆ ಸರ್ಕಾರ ಸಕಾಲದಲ್ಲಿ ಗುತ್ತಿಗೆದಾರರಿಗೆ ಹಣವನ್ನೂ ಪಾವತಿ ಮಾಡಿಲ್ಲ.



ದಾವಣಗೆರೆಯ ಸಿ ಜೆ ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟಿನ್‌ನಲ್ಲಿ ಊಟ ಸವಿಯುತ್ತಿರುವುದು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

**ಬಿಬಿಎಂಪಿ ಇಂದಿರಾ ಕ್ಯಾಂಟೀನ್‌ಗೆ ಮಾಡಿರುವ ವೆಚ್ಚ (ವರ್ಷವಾರು)**




6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

### ಬಡವರ ವಿರೋಧಿ ನಿಲುವು ಬಹಿರಂಗ



ಬಡವರು ಹಸಿವಿನಿಂದ ನರಳಬಾರದು ಎಂಬ ಉದ್ದೇಶದಿಂದ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿತ್ತು. ಕಡು ಬಡತನದಲ್ಲಿರುವ ಕೂಲಿ ಕಾರ್ಮಿಕರು, ಆಟೊ ಮತ್ತು ಟ್ಯಾಕ್ಸಿ ಚಾಲಕರು, ದೂರದ ಊರುಗಳಿಂದ ಆಸ್ಪತ್ರೆಗಳಿಗೆ ಬರುವ ಬಡವರಿಗೆ ಕಡಿಮೆ ದರದಲ್ಲಿ ಊಟ, ಉಪಾಹಾರ ಪೂರೈಸುವ ವ್ಯವಸ್ಥೆ ಮಾಡಲಾಗಿತ್ತು. ಯೋಜನೆಯಿಂದ ಲಕ್ಷಾಂತರ ಮಂದಿ ಬಡವರು ಅನುಕೂಲ ಪಡೆಯುತ್ತಿದ್ದರು.

ವರ್ಷಕ್ಕೆ ₹ 200 ಕೋಟಿಯಷ್ಟು ವೆಚ್ಚ ಮಾಡಿದರೆ ಇಂದಿರಾ ಕ್ಯಾಂಟೀನ್‌ಗಳನ್ನು ನಡೆಸಬಹುದು. ಆದರೆ, ಇದು ಬಡವರಿಗಾಗಿ ಮಾಡಿದ ಯೋಜನೆ ಎಂಬ ಕಾರಣಕ್ಕೆ ಬಿಜೆಪಿ ಸರ್ಕಾರ ಅನುದಾನ ಒದಗಿಸಿಲ್ಲ. ನೀರು, ವಿದ್ಯುತ್ ಬಿಲ್ ಪಾವತಿ ಮಾಡದೇ, ಆಹಾರ ತಯಾರಿಗೂ ಹಣ ಒದಗಿಸದೇ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಲಾಗಿದೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹೆಸರಿನಲ್ಲಿ ಬಡವರಿಗಾಗಿ ಆರಂಭಿಸಿದ್ದ ಯೋಜನೆ ಎಂಬುದೂ ಬಿಜೆಪಿ ಸರ್ಕಾರದ ತೀರ್ಮಾನಕ್ಕೆ ಕಾರಣವಾಗಿರಬಹುದು. ಬಿಜೆಪಿ ಹೊಂದಿರುವ ಬಡವರ ವಿರೋಧಿ ನಿಲುವು ಬಹಿರಂಗವಾಗಿದೆ.

**ಸಿದ್ದರಾಮಯ್ಯ,**
ವಿಧಾನಸಭೆ ವಿರೋಧ ಪಕ್ಷದ ನಾಯಕ

# 'ಚುನಾವಣೆ ನಂತರ ಗಮನ'

## ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಈಶ್ವರಪ್ಪ ಪತ್ರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿರುವ ಪ್ರಕರಣದ ಕುರಿತು ಐದು ರಾಜ್ಯಗಳ ಚುನಾವಣೆಯ ನಂತರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಗಮನ ಹರಿಸಲಿದ್ದಾರೆ.

ಖಾಸಗಿ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಈ ವಿಷಯ ತಿಳಿಸಿರುವ ಕೇಂದ್ರದ ಗೃಹ ಸಚಿವ ಅಮಿತ್ ಶಾ, ಪಕ್ಷದ ಮುಖಂಡರ ನಡುವೆ ಕರ್ನಾಟಕದಲ್ಲಿ ಉದ್ಭವಿಸಿರುವ ಬಿಕ್ಕಟ್ಟನ್ನು ಚುನಾವಣೆಯ ನಂತರ ನಡ್ಡಾ ಅವರು ಬಗೆಹರಿಸಲಿದ್ದಾರೆ ಎಂದು ಹೇಳಿದ್ದಾರೆ.



ಅಮಿತ್ ಶಾ

ಇದು ಪಕ್ಷದ ಆಂತರಿಕ ವಿಷಯ. ನಡ್ಡಾ ಅವರು ಈ ಸಂಬಂಧ ಕೂಲಂಕಷ ಚರ್ಚೆ ನಡೆಸಿ, ಮನಸ್ತಾಪ, ಗೊಂದಲ ಬಗೆಹರಿಸಲಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

3 ಕ್ಷೇತ್ರಗಳ ಉಪ ಚುನಾವಣೆಯ ಪ್ರಚಾರದಲ್ಲಿ ಪಾಲ್ಗೊಳ್ಳಲು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಇದೇ 8ರಂದು ರಾಜ್ಯ ಪ್ರವಾಸ ಕೈಗೊಳ್ಳಲಿದ್ದು, ರಾಜ್ಯಪಾಲರಿಗೆ ಬರೆದಿರುವ ಪತ್ರದಿಂದ ಉಂಟಾಗಿರುವ ಬೆಳವಣಿಗೆಗಳ ಕುರಿತು ಇದೇ ವೇಳೆ ಉಭಯ ನಾಯಕರೊಂದಿಗೆ ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಮುಖ್ಯಮಂತ್ರಿಯೊಂದಿಗಿನ ಮನಸ್ತಾಪದ ಕುರಿತು ನೇರವಾಗಿ ಅಥವಾ ಸಂಬಂಧಿಸಿದ ಮುಖಂಡರೊಂದಿಗೆ ಮಾತನಾಡುವ ಬದಲು ರಾಜ್ಯಪಾಲರಿಗೆ ಪತ್ರ ಬರೆದಿದ್ದಕ್ಕಾಗಿ ಈಶ್ವರಪ್ಪ ಅವರನ್ನು ತರಾಟೆಗೆ ತೆಗೆದುಕೊಂಡಿದ್ದ ಅರುಣ್ ಸಿಂಗ್, ಈ ರೀತಿ ಬಹಿರಂಗ ಪತ್ರ ಬರೆಯಬಾರದಿತ್ತು ಎಂದು ಹೇಳಿದ್ದರು.

ಮಾರ್ಗಸೂಚಿ ಜಾರಿ: ಸಮರ್ಥಿಸಿಕೊಂಡ ಸಚಿವ

# 'ಕಾಡಿ–ಬೇಡಿ ಜನರಿಗೆ ಲಸಿಕೆ'

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** 'ಸರ್ಕಾರ ಉಚಿತವಾಗಿ ಕೋವಿಡ್ ಲಸಿಕೆ ಕೊಡುತ್ತಿದೆ. ಆದರೂ ಜನರು ತೆಗೆದುಕೊಳ್ಳುತ್ತಿಲ್ಲ. ಆದರೂ ನಮ್ಮ ಸಿಬ್ಬಂದಿ ಕಾಡಿ-ಬೇಡಿ ಲಸಿಕೆ ನೀಡುತ್ತಿದ್ದಾರೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಬೇಸರ ವ್ಯಕ್ತಪಡಿಸಿದ್ದಾರೆ.

ರಾಜ್ಯದ 5,500 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡಲಾಗುತ್ತಿದೆ. ಒಂದು ಕೇಂದ್ರದಲ್ಲಿ ಕನಿಷ್ಠ 100 ಜನರು ಲಸಿಕೆ ಹಾಕಿಸಿಕೊಂಡರೂ ನಿತ್ಯ 5.50 ಲಕ್ಷ ಜನರಿಗೆ ಲಸಿಕೆ ಹಾಕಿದಂತೆ ಆಗುತ್ತದೆ. ಆದರೆ, ಈಗ ಪ್ರತಿದಿನ ಒಂದೂವರೆಯಿಂದ ಎರಡು ಲಕ್ಷ ಜನರು ಮಾತ್ರ ಲಸಿಕೆ ಪಡೆಯುತ್ತಿದ್ದಾರೆ ಎಂದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ಶೇ 50ಕ್ಕೆ ಮಿತಿಗೊಳಿಸುವುದು, ಕಲ್ಯಾಣ ಮಂಟಪ, ಧಾರ್ಮಿಕ ಸ್ಥಳ, ಶಾಲೆಗಳಿಗೆ ನಿರ್ಬಂಧ ವಿಧಿಸುವುದು ಸರ್ಕಾರಕ್ಕೆ ಸಂತೋಷ ತರುವ ವಿಚಾರವಲ್ಲ. ಆದರೆ ಒಬ್ಬ ವ್ಯಕ್ತಿ, ಆತನ ಚಟುವಟಿಕೆಗಳನ್ನು ನೋಡಿ ಮಾರ್ಗಸೂಚಿ ಸಿದ್ಧಪಡಿಸಲು ಸಾಧ್ಯವಿಲ್ಲ. ರಾಜ್ಯದ ಆರೂವರೆ ಕೋಟಿ ಜನರ ಹಿತ ಮುಖ್ಯ. ಸೋಂಕು ಕಡಿಮೆ ಮಾಡುವ ಉದ್ದೇಶದಿಂದ ಮಾರ್ಗಸೂಚಿ ನಿಗದಿಗೊಳಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಕೊರೊನಾ ಮೊದಲ ಅಲೆಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದು ದಿನದಲ್ಲಿ ಗರಿಷ್ಠ ನಾಲ್ಕೂವರೆ ಸಾವಿರ ಮಂದಿಗೆ ಸೋಂಕು ತಗುಲಿತ್ತು. ಆದರೆ, ಎರಡನೇ ಅಲೆ ಆರಂಭದಲ್ಲಿಯೇ ಮೂರೂವರೆ ಸಾವಿರ ಸೋಂಕಿತರು ಆಗಿದ್ದಾರೆ. ಇದೆಲ್ಲ ಗಮನಿಸಿ ಮಾರ್ಗಸೂಚಿ ಜಾರಿಗೆ ತರಲಾಗಿದೆ ಎಂದು ಸಮರ್ಥಿಸಿಕೊಂಡರು.



**ತಾಂತ್ರಿಕ ಸಲಹಾ ಸಮಿತಿ ವರದಿ ಆಧರಿಸಿ ಕೋವಿಡ್ ಮಾರ್ಗಸೂಚಿ ಜಾರಿಗೊಳಿಸಲಾಗಿದೆ. ಚಟುವಟಿಕೆಗಳನ್ನು ನಿರ್ಬಂಧಿಸಿದಾಗ ನಷ್ಟ ಆಗುತ್ತದೆ. ಆದರೆ ಇದು ಅನಿವಾರ್ಯ**

**ಡಾ.ಕೆ.ಸುಧಾಕರ್**
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ


# ಪಟ್ಟದಕಲ್ಲು: ವಿಜಯಸ್ತಂಭಕ್ಕೆ ಹಿತ್ತಾಳೆ ಉಂಗುರ ಆಸರೆ

• ವೆಂಕಟೇಶ ಜಿ.ಎಚ್

**ಬಾಗಲಕೋಟೆ:** ವಿಶ್ವ ಪಾರಂಪರಿಕ ತಾಣ ಪಟ್ಟದಕಲ್ಲಿನಲ್ಲಿ ಬಿರುಕು ಬಿಟ್ಟಿರುವ ಚಾಲುಕ್ಯರ ಕಾಲದ ವಿಜಯಸ್ತಂಭ ಹೋಳಾಗಿ ಕೆಳಗೆ ಬೀಳದಂತೆ ತಡೆಯಲು ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ಹಿತ್ತಾಳೆಯ ಬೃಹತ್ ಉಂಗುರವನ್ನು ಅಳವಡಿಸಿದೆ.

'ಕಚೇರಿಯ ತಂತ್ರಜ್ಞರೇ ಉಂಗುರ ಅಳವಡಿಸಿದ್ದು, ಈಗ ವಿಜಯ ಸ್ತಂಭ ಬೀಳುವ ಅಪಾಯ ಇಲ್ಲ' ಎಂದು ಭಾರತೀಯ ಪುರಾತತ್ವ ಇಲಾಖೆ ಧಾರವಾಡ ವೃತ್ತದ ಸೂಪರಿಟೆಂಡೆಂಟ್ ವಿಠ್ಠಲ ಎಸ್. ಬಡಿಗೇರ 'ಪ್ರಜಾವಾಣಿ' ಗೆ ತಿಳಿಸಿದರು.

'ಮುಂದಿನ ಹಂತದಲ್ಲಿ ಅದಕ್ಕೆ ಕೆಮಿಕಲ್ ಟ್ರೀಟ್‌ಮೆಂಟ್ ಮಾಡಲಾಗುವುದು.ಈ ಕಂಬದ ಅವಧಿಯಲ್ಲಿಯೇ ರೂಪುಗೊಂಡಿರುವ ಕಲ್ಲನ್ನು ಹುಡುಕಿ, ಪುಡಿ ಮಾಡಿ, ಸ್ತಂಭದಲ್ಲಿರುವ ಬಿರುಕುಗಳನ್ನು ಮುಚ್ಚಲು ಬಳಸಲಾಗುವುದು. ಹಿತ್ತಾಳೆ ಉಂಗುರದ ಗುರುತು, ಸ್ತಂಭದ ಮೇಲೆ ಮೂಡದಂತೆ ನೋಡಕೊಳ್ಳಬೇಕಿದೆ. ಇದಕ್ಕೆ ತಾಂತ್ರಿಕ ನೆರವು ನೀಡುವಂತೆ ಹುಬ್ಬಳ್ಳಿಯ ಕೆಎಲ್‌ಇ ಪಾಲಿಟೆಕ್ನಿಕ್ ಕಾಲೇಜು ಆಡಳಿತ ಮಂಡಳಿಗೆ ಮನವಿ ಮಾಡಲಾಗಿದೆ' ಎಂದು ಬಡಿಗೇರ ಹೇಳಿದರು.



ವಿಜಯ ಸ್ತಂಭಕ್ಕೆ ಹಿತ್ತಾಳೆಯ ಉಂಗುರ ಆಸರೆ ಆಗಿರುವುದು

**ವರದಿ ಪರಿಣಾಮ**

1,200 ವರ್ಷಗಳಷ್ಟು ಹಳೆಯ ಕಂಬ ಅಪಾಯದಂಚಿನಲ್ಲಿರುವ ಬಗ್ಗೆ ಜನವರಿ 7ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

**ಪಲ್ಲವರೊಡನೆ ಯುದ್ಧ ಗೆದ್ದ ನೆನಪಿನ ಉಲ್ಲೇಖ:** ವಿಜಯಸ್ತಂಭ ಕ್ರಿ.ಶ.730 ರಿಂದ 742ರ ಅವಧಿಯಲ್ಲಿ ನಿರ್ಮಾಣವಾಗಿದೆ. ಚಾಲುಕ್ಯ ಚಕ್ರವರ್ತಿ 2ನೇ ವಿಕ್ರಮಾದಿತ್ಯ ಕಂಚಿಯ ಪಲ್ಲವರೊಡನೆ ಸತತ ಮೂರನೇ ಬಾರಿಗೆ ಯುದ್ಧದಲ್ಲಿ ಗೆದ್ದ ನೆನಪಿಗೆ ಆತನ ಮಹಾರಾಣಿಯರಾದ ಲೋಕಮಹಾದೇವಿ ಹಾಗೂ ತ್ರೈಲೋಕ ಮಹಾದೇವಿ ಪಟ್ಟದಕಲ್ಲಿನಲ್ಲಿ ಲೋಕೇಶ್ವರ (ಈಗಿನ ವಿರೂಪಾಕ್ಷ ಗುಡಿ) ಹಾಗೂ ತ್ರೈಲೋಕೇಶ್ವರ (ಮಲ್ಲಿಕಾರ್ಜುನ) ದೇವಸ್ಥಾನಗಳನ್ನು ನಿರ್ಮಿಸಿದರು ಎಂಬ ಉಲ್ಲೇಖ ಈ ವಿಜಯಸ್ತಂಭದಲ್ಲಿ ಇದೆ.

## 1– 9: ಲಿಖಿತ ಪರೀಕ್ಷೆ ಇಲ್ಲ?

**ಬೆಂಗಳೂರು:** ರಾಜ್ಯದಲ್ಲಿ 1ರಿಂದ 9ನೇ ತರಗತಿಯ ಮಕ್ಕಳಿಗೆ ಪರೀಕ್ಷೆ ನಡೆಸಬೇಕೆ, ಬೇಡವೇ ಎಂಬ ಬಗ್ಗೆ ಚರ್ಚಿಸಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಸೋಮವಾರ ಮಹತ್ವದ ಸಭೆ ಕರೆದಿದ್ದಾರೆ. 4

ಮಹಾರಾಷ್ಟ್ರ: 1- 8 ಪರೀಕ್ಷೆ ರದ್ದು 3B

ಕೋವಿಡ್: ಐಸಿಯು ದಾಖಲಾತಿ ಏರಿಕೆ 13

## ಕೆಪಿಎಸ್‌ಸಿಗೆ ಶಿವಶಂಕರಪ್ಪ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಹಾಲಿ ಸದಸ್ಯರಾಗಿರುವ ಶಿವಶಂಕರಪ್ಪ ಎಸ್. ಸಾಹುಕಾರ್ ಅವರನ್ನು ಆಯೋಗದ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಿ ರಾಜ್ಯಪಾಲ ವಜುಭಾಯಿ ವಾಲಾ ಶನಿವಾರ ಆದೇಶ ಹೊರಡಿಸಿದ್ದಾರೆ.



ಶಿವಶಂಕರಪ್ಪ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಹೇಮನಾಳ ಗ್ರಾಮದ ಶಿವಶಂಕರಪ್ಪ 2019ರ ಸೆಪ್ಟೆಂಬರ್ 3ರಂದು ಆಯೋಗದ ಸದಸ್ಯರಾಗಿ ನೇಮಕಗೊಂಡಿದ್ದರು.

ಕೃಷಿ ಎಂಜಿನಿಯರಿಂಗ್ ಪದವೀಧರರಾಗಿರುವ ಇವರ ಅಧಿಕಾರದ ಅವಧಿ ಇನ್ನೂ ಮೂರೂವರೆ ವರ್ಷ ಇದೆ.

ನಿವೃತ್ತ ಐಎಎಸ್ ಅಧಿಕಾರಿ ಷಡಾಕ್ಷರಿ ಸ್ವಾಮಿ ಅವರು ಕೆಪಿಎಸ್‌ಸಿ ಅಧ್ಯಕ್ಷರ ಹುದ್ದೆಯಿಂದ ಶನಿವಾರ ನಿವೃತ್ತರಾದರು.

ಅವರ ಸ್ಥಾನಕ್ಕೆ ಶಿವಶಂಕರಪ್ಪ ಅವರನ್ನು ನೇಮಕ ಮಾಡುವಂತೆ ರಾಜ್ಯ ಸರ್ಕಾರ ಮಾಡಿದ್ದ ಶಿಫಾರಸು ಆಧರಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಸದಸ್ಯರೊಬ್ಬರನ್ನೇ ಅಧ್ಯಕ್ಷರಾಗಿ ನೇಮಕ ಮಾಡಿರುವುದರಿಂದಾಗಿ ಕೆಪಿಎಸ್‌ಸಿಯಲ್ಲಿ ಒಂದು ಸದಸ್ಯ ಸ್ಥಾನ ಖಾಲಿ ಆದಂತಾಗಿದೆ.

## ಚಿತ್ರಮಂದಿರ ನಿರ್ಬಂಧ ಸದ್ಯಕ್ಕೆ ವಾಪಸ್

**ಬೆಂಗಳೂರು:** ಚಿತ್ರಮಂದಿರಗಳಲ್ಲಿ ಶೇಕಡ 50ರಷ್ಟು ಸೀಟುಗಳ ಭರ್ತಿಗೆ ಮಾತ್ರ ಅವಕಾಶ ಕಲ್ಪಿಸುವ ನೂತನ ಕೋವಿಡ್ ಮಾರ್ಗಸೂಚಿಯ ಷರತ್ತು ಏಪ್ರಿಲ್ 7ರ ಬಳಿಕ ಜಾರಿಯಾಗಲಿದೆ.ಶುಕ್ರವಾರ ಹೊರಡಿಸಿದ್ದ ಮಾರ್ಗಸೂಚಿಯಲ್ಲಿ ಬೆಂಗಳೂರು ನಗರ ಸೇರಿದಂತೆ ಎಂಟು ಜಿಲ್ಲೆಗಳ ಚಿತ್ರ ಮಂದಿರಗಳಲ್ಲಿ ಸೀಟು ಭರ್ತಿಗೆ ನಿರ್ಬಂಧ ವಿಧಿಸಲಾಗಿತ್ತು.

ನಟ ಪುನೀತ್ ರಾಜ್‌ಕುಮಾರ್ ಮತ್ತು ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಜೈರಾಜ್ ಅವರು, ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಶನಿವಾರ ಭೇಟಿ ಮಾಡಿ, ಈ ನಿರ್ಬಂಧ ಹಿಂಪಡೆಯುವಂತೆ ಒತ್ತಾಯಿಸಿದ್ದರು. ಬಳಿಕ ಪರಿಷ್ಕೃತ ಆದೇಶ ಹೊರಡಿಸಿರುವ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಶೇ 50ರಷ್ಟು ಸೀಟು ಭರ್ತಿಯ ನಿರ್ಬಂಧ ಏ.7ರ ರಾತ್ರಿ 12ರ ಬಳಿಕ ಅನ್ವಯವಾಗಲಿದೆ. ಅಲ್ಲಿಯವರೆಗೂ ಪೂರ್ಣ ಪ್ರಮಾಣದ ಸೀಟುಗಳನ್ನು ಭರ್ತಿ ಮಾಡಬಹುದು ಎಂದಿದ್ದಾರೆ.

ಇನ್ನೊಂದು ಸುದ್ದಿ 5

## ಪೆಟ್ರೋಲ್ ಸುರಿದು ಮನೆಗೆ ಬೆಂಕಿ: ಆರು ಮಂದಿ ಸಾವು

**ಮಡಿಕೇರಿ:** ಪೊನ್ನಂಪೇಟೆ ತಾಲ್ಲೂಕಿನ ಮುಗುಟಗೇರಿ ಗ್ರಾಮದಲ್ಲಿ, ಮದ್ಯದ ಅಮಲಿನಲ್ಲಿದ್ದ ವ್ಯಕ್ತಿಯೊಬ್ಬ ತನ್ನ ಕುಟುಂಬದವರು ವಾಸವಾಗಿದ್ದ ಮನೆಗೇ ಶನಿವಾರ ನಸುಕಿನಲ್ಲಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ. ಈ ಘಟನೆಯಲ್ಲಿ, ನಾಲ್ವರು ಮಕ್ಕಳು ಹಾಗೂ ಆರೋಪಿಯ ಪತ್ನಿಯೂ ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ.



ಆರೋಪಿ ಬೋಜ

ಮೂವರು ಸ್ಥಳದಲ್ಲಿಯೇ ಸಜೀವ ದಹನವಾಗಿದ್ದರೆ, ಮತ್ತೆ ಮೂವರು ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

5ನೇ ಪುಟ ನೋಡಿ

**ಇಂದಿನ ಪಾಡ್‌ಕಾಸ್ಟ್ ವಿಶೇಷ**


**ವೈದ್ಯ ಮಿತ್ರ ಕಥಾ ಸಾಗರ**

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ


Prajavani.net/podcast

**ಚಿನಕುರಳಿ**

ಪ್ರಕಾಶ್ ಶೆಟ್ಟಿ




**ಒಳ ಪುಟಗಳು**



## ಕಥಾ ಸ್ಪರ್ಧೆಗೆ ಕಥೆಗಳ ಆಹ್ವಾನ

**ಬೆಂಗಳೂರು:** ಕನ್ನಡ ಸಂಘರ್ಷ ಸಮಿತಿಯು ಡಾ. ಅನುಪಮಾ ನಿರಂಜನ ಹುಟ್ಟುಹಬ್ಬದ ಅಂಗವಾಗಿ ಉದಯೋನ್ಮುಖ ಕಥೆಗಾರ್ತಿಯರಿಗೆ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆಯನ್ನು ಆಯೋಜಿಸಿದೆ.

ಇದುವರೆಗೆ ಒಂದೂ ಕಥಾ ಸಂಕಲನವನ್ನು ಪ್ರಕಟಿಸದೆ ಇರುವವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಮಹಿಳಾ ಕೇಂದ್ರಿತ ಕಥಾವಸ್ತುವನ್ನು ಒಳಗೊಂಡಿರಬೇಕು.

₹ 200 ಪ್ರವೇಶ ಶುಲ್ಕ ಸಹಿತ ಕಥೆಯನ್ನು ಕಳುಹಿಸಲು ಏ.26 ಕಡೆಯ ದಿನಾಂಕವಾಗಿದೆ.

ಆಸಕ್ತರು ಕಥೆಯನ್ನು ಡಾ.ಕೋ.ವೆಂ. ರಾಮಕೃಷ್ಣೇಗೌಡ, ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತಿ, ನಂ.313, 25ನೇ ಅಡ್ಡರಸ್ತೆ, 6ನೇ ಬಡಾವಣೆ, ಜಯನಗರ, ಈ ವಿಳಾಸಕ್ಕೆ ಕಳುಹಿಸಿ ಸಂಪರ್ಕ ಸಂಖ್ಯೆ: 9902589424, ಇ ಮೇಲ್ ವಿಳಾಸ: kannadasangharshasamiti@gmail.com







₹ 4 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ ಪ್ರಕರಣ; ತನಿಖೆ ಚುರುಕು

# ‘ಡ್ರಗ್ಸ್’ ಪಾರ್ಟಿಯಲ್ಲಿ ತೆಲಂಗಾಣ ಶಾಸಕರು?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಪ್ರಕರಣದಲ್ಲಿ ಇತ್ತೀಚೆಗೆ ಬಂಧಿಸಲಾದ ನಿರ್ಮಾಪಕ ಶಂಕರಗೌಡ ಹಾಗೂ ಇತರರು ನಗರದಲ್ಲಿ ನಡೆಸುತ್ತಿದ್ದ ಪಾರ್ಟಿಗಳಲ್ಲಿ ತೆಲಂಗಾಣದ ನಾಲ್ವರು ಶಾಸಕರು ಪಾಲ್ಗೊಳ್ಳುತ್ತಿದ್ದ ಅನುಮಾನ ಪೂರ್ವ ವಿಭಾಗದ ಪೊಲೀಸರಿಗೆ ಬಂದಿದ್ದು, ಈ ಆಯಾಮದಲ್ಲಿ ತನಿಖೆ ಚುರುಕುಗೊಳಿಸಿದ್ದಾರೆ.

ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ಕಳೆದ ತಿಂಗಳು ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಇಬ್ಬರು ನೈಜೀರಿಯಾ ಪ್ರಜೆಗಳು ಸೇರಿ ಹಲವರನ್ನು ಡ್ರಗ್ಸ್ ಸಮೇತ ಸೆರೆ ಹಿಡಿದಿದ್ದರು. ಡ್ರಗ್ಸ್ ಖರೀದಿಸಿ ಪಾರ್ಟಿಯಲ್ಲಿ ವಿತರಣೆ ಮಾಡುತ್ತಿದ್ದ ಆರೋಪದಡಿ, ‘ಕೆಂಪೇಗೌಡ’ ಸೇರಿ ಹಲವು ಸಿನಿಮಾ ನಿರ್ಮಾಣ ಮಾಡಿದ್ದ ಶಂಕರಗೌಡ ಅವರನ್ನು ಬಂಧಿಸಿದ್ದರು. ತೆಲುಗು ನಟ ತನೀಶ್ ಅವರನ್ನೂ ವಿಚಾರಣೆಗೆ ಒಳಪಡಿಸಿದ್ದರು.

**ಶಾಸಕರು ವಿಷಯ ಬಾಯ್ಬಿಟ್ಟ ಉದ್ಯಮಿಗಳು:** ‘ಶಂಕರಗೌಡ ಅವರಿಗೆ ಪರಿಚಯವಿದ್ದ ಹೈದರಾಬಾದ್‌ನ ಇಬ್ಬರು ಉದ್ಯಮಿಗಳು, ನಗರದಲ್ಲಿ ಪಬ್ ಹಾಗೂ ಹೋಟೆಲ್ ನಡೆಸುತ್ತಿದ್ದಾರೆ. ಶಂಕರಗೌಡ ಅವರ ಹಲವು ಸಿನಿಮಾಗಳಿಗೆ ಉದ್ಯಮಿಗಳು ಫೈನಾನ್ಸ್ ಸಹ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಂಕರಗೌಡ ಜೊತೆ ಸೇರಿ ಉದ್ಯಮಿಗಳು ನಗರದಲ್ಲಿ ಹಲವು ಪಾರ್ಟಿಗಳನ್ನು ಆಯೋಜಿಸುತ್ತಿದ್ದರು. ಅದೇ ಪಾರ್ಟಿಯಲ್ಲಿ ಡ್ರಗ್ಸ್ ಪೂರೈಕೆಯಾಗುತ್ತಿದ್ದ ಮಾಹಿತಿ ಸಿಕ್ಕಿತ್ತು. ಉದ್ಯಮಿಗಳಿಗೆ ನೋಟಿಸ್ ನೀಡಿ ಇತ್ತೀಚೆಗೆ ವಿಚಾರಣೆ ನಡೆಸಲಾಗಿದೆ. ತೆಲಂಗಾಣದ ನಾಲ್ವರು ಶಾಸಕರು ಹಾಗೂ ಸಿನಿಮಾ ತಾರೆಯರ ಹೆಸರುಗಳನ್ನು ಉದ್ಯಮಿಗಳು ಬಾಯ್ಬಿಟ್ಟಿದ್ದಾರೆ. ಅದರ ಖಚಿತತೆ ಬಗ್ಗೆ ತನಿಖೆ ಮುಂದುವರಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ಬೆಂಗಳೂರಿನಲ್ಲಿ ಆಗಾಗ ಪಾರ್ಟಿಗಳನ್ನು ಆಯೋಜಿಸಲಾಗುತ್ತಿತ್ತು. ಅದೇ ಪಾರ್ಟಿಗಳಲ್ಲಿ ತೆಲಂಗಾಣದ ನಾಲ್ವರು ಶಾಸಕರು ಹಾಗೂ ಸಿನಿಮಾ ತಾರೆಯರು ಬರುತ್ತಿದ್ದರೆಂದು ಉದ್ಯಮಿಗಳು ಹೇಳಿಕೆ ನೀಡಿದ್ದಾರೆ. ವಿಚಾರಣೆ ನಡೆಸಿ ಅವರನ್ನು ವಾಪಸು ಕಳುಹಿಸಲಾಗಿದೆ. ಉದ್ಯಮಿಗಳ ಹೇಳಿಕೆ ಪರಿಶೀಲಿಸಲಾಗುತ್ತಿದ್ದು, ಕೆಲ ಗೊಂದಲಗಳು ಇವೆ. ಹೀಗಾಗಿ, ಪುನಃ ವಿಚಾರಣೆಗೆ ಬರುವಂತೆ ಅವರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆಗೆ ಹಾಜರಾದ ನಂತರ, ಶಾಸಕರ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

### ಆಸ್ಪತ್ರೆ ಪಾರ್ಕಿಂಗ್ ಜಾಗದಲ್ಲಿ ಡ್ರಗ್ಸ್ ಮಾರಾಟ

**ಬೆಂಗಳೂರು:** ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಸಿಸಿಬಿ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಜಯನಗರ 7ನೇ ಹಂತದ ನಿವಾಸಿ ಜಿದಾನ್ ಸೌದ್ (23) ಹಾಗೂ ಬನಶಂಕರಿ ಎರಡನೇ ಹಂತದ ನಾಗರಾಜ್ ರಾವ್ (22) ಬಂಧಿತರು. ಅವರಿಂದ ₹10 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಬನಶಂಕರಿ ಪೊಲೀಸ್ ಠಾಣೆ ವ್ಯಾಪ್ತಿಯ ಆಸ್ಪತ್ರೆಯೊಂದರ ಪಾರ್ಕಿಂಗ್ ಜಾಗದ ಪಾದಚಾರಿ ಮಾರ್ಗದಲ್ಲಿ ಮಾರ್ಚ್ 1ರಂದು ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.


ಬಂಧಿತ ಆರೋಪಿಗಳು

‘100 ಎಕ್ಸ್‌ಟಸಿ ಮಾತ್ರೆಗಳು ಹಾಗೂ 100 ಎಲ್ಎಸ್‌ಡಿ ಕಾಗದ ಚೂರುಗಳು ಆರೋಪಿಗಳ ಬಳಿ ಸಿಕ್ಕಿವೆ. ಅವರ ಎರಡು ಮೊಬೈಲ್‌ಗಳನ್ನು ಸುಪರ್ದಿಗೆ ಪಡೆದು, ಅವರು ಯಾರೊಂದಿಗೆ ಸಂಪರ್ಕದಲ್ಲಿದ್ದರು ಎಂಬ ಬಗ್ಗೆ ತನಿಖೆ ಮುಂದುವರಿಸಲಾಗಿದೆ’ ಎಂದರು.

**ಸಹಚರರ ಮೂಲಕ ಖರೀದಿ:** ‘ಹಲವು ತಿಂಗಳಿನಿಂದ ಆರೋಪಿಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ತಮ್ಮ ಸಹಚರರಾದ ಅನೂಪ್ ಹಾಗೂ ಹರ್ಷವರ್ಧನ್ ಎಂಬುವರಿಂದ ಡ್ರಗ್ಸ್ ಖರೀದಿಸುತ್ತಿದ್ದರು. ಈ ಬಗ್ಗೆ ಆರೋಪಿಗಳೇ ಹೇಳಿಕೆ ನೀಡಿದ್ದಾರೆ’ ಎಂದೂ ಪೊಲೀಸರು ತಿಳಿಸಿದರು.

‘ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಗ್ರಾಹಕರಾಗಿದ್ದರು. ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸಿ, ಅದನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು’ ಎಂದರು.

## ಪ್ರತ್ಯೇಕ ಅಪಘಾತ; ಇಬ್ಬರ ಸಾವು

ಅಪರಾಧ ಸುದ್ದಿ

**ಬೆಂಗಳೂರು:** ನಗರದ ಎರಡು ಕಡೆ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಪಾದಚಾರಿಗಳು ಮೃತಪಟ್ಟಿದ್ದಾರೆ. ಸುಬ್ರಮಣಿ (85) ಹಾಗೂ ಕೋಮತಿ (30) ಮೃತರು. ಅಪಘಾತ ಸಂಬಂಧ ವಿಲ್ಸನ್ ಗಾರ್ಡನ್ ಹಾಗೂ ಹೆಬ್ಬಾಳ ಸಂಚಾರ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

‘ಲಾಲ್‌ಬಾಗ್ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಿವಾಸಿ ಸುಬ್ರಮಣಿ, ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅದೇ ಸಂದರ್ಭದಲ್ಲಿ ಆರೋಪಿ ಮಾಜ್ ಅಹಮ್ಮದ್, ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬಂದು ಡಿಕ್ಕಿಹೊಡೆದಿದ್ದ. ತೀವ್ರ ಗಾಯಗೊಂಡು ಸುಬ್ರಮಣಿ ಅಸುನೀಗಿದರು’ ಎಂದು ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸರು ಹೇಳಿದರು.

**ಕಾರು ಗುದ್ದಿ ಸಾವು:** ‘ಕೋಮತಿ ಅವರು ಶುಕ್ರವಾರ ರಾತ್ರಿ ಬಿ.ಬಿ ರಸ್ತೆಯ ಬ್ಯಾಟರಾಯನಪುರ ಜಂಕ್ಷನ್ ಹತ್ತಿರ ರಸ್ತೆ ದಾಟುತ್ತಿದ್ದರು. ಅದೇ ಸಂದರ್ಭದಲ್ಲೇ ಕಾರೊಂದು ಗುದ್ದಿತ್ತು. ತೀವ್ರ ಗಾಯಗೊಂಡಿದ್ದ ಕೋಮತಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಶನಿವಾರ ಅವರು ಮೃತಪಟ್ಟಿದ್ದಾರೆ’ ಎಂದು ಹೆಬ್ಬಾಳ ಪೊಲೀಸರು ಹೇಳಿದರು.

## ₹ 4 ಲಕ್ಷ ಮೌಲ್ಯದ ದ್ವಿಚಕ್ರ ವಾಹನ ಜಪ್ತಿ

**ಬೆಂಗಳೂರು:** ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ತೌಫಿಕ್ ಪಾಷಾ ಎಂಬಾತನನ್ನು (27) ಜಗಜೀವನ್‌ರಾಮ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಾದರಾಯನಪುರದ ನಿವಾಸಿ ತೌಫಿಕ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 4 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಗುತ್ತಿಗೆದಾರರ ಕಿಸೆತುಂಬಿಸಲು ಆದ್ಯತೆ: ಕಟ್ಟಡ ಹಾಗೂ ಪೌರ ಕಾರ್ಮಿಕರ ಕಡೆಗಣನೆ

# ‘ಬಡವರ ವಿರೋಧಿ ಬಜೆಟ್: ಮುಖಂಡರ ಟೀಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪ್ರಸಕ್ತ ಸಾಲಿನ ಬಜೆಟ್ ಬಡವರ ವಿರೋಧಿಯಾಗಿದೆ. ಗುತ್ತಿಗೆದಾರರ ಕಿಸೆ ತುಂಬಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ’ ಎಂದು ವಿವಿಧ ರಾಜಕೀಯ ಪಕ್ಷಗಳು ಮುಖಂಡರು ಅಭಿಪ್ರಾಯಪಟ್ಟರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ಶನಿವಾರ ಆಯೋಜಿಸಿದ್ದ ‘ಬೆಂಗಳೂರಿಗರ ನಿರೀಕ್ಷೆಗಳು ಮತ್ತು ಬಿಬಿಎಂಪಿ ಬಜೆಟ್ ಭರವಸೆಗಳು’ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.


ಕಾರ್ಯಕ್ರಮದಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ (ಎಡದಿಂದ ನಾಲ್ಕನೆಯವರು) ಮತ್ತು ಉಪಾಧ್ಯಕ್ಷ ಪಿಳ್ಳರಾಜು ಬೋಸಪ್ಪ ಮಾತುಕತೆಯಲ್ಲಿ ತೊಡಗಿದ್ದರು. (ಎಡದಿಂದ) ಆಮ್ ಆದ್ಮಿ ಪಕ್ಷದ ವಕ್ತಾರ ಆರ್‌.ಜಿ ಮೋಹನ್, ಬಿಜೆಪಿ ಮುಖಂಡ ನಾರಾಯಣಸ್ವಾಮಿ ಮತ್ತು ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಅಬ್ದುಲ್ ವಾಜಿದ್ ಇದ್ದರು ಪ್ರಜಾವಾಣಿ ಚಿತ್ರ

‘ಬೆಂಗಳೂರು ಬಡವರ ನಗರ. ಸುಮಾರು 700 ಕೊಳೆಗೇರಿಗಳಲ್ಲಿ ಲಕ್ಷಾಂತರ ಮಂದಿ ವಾಸಿಸುತ್ತಿದ್ದಾರೆ. ವಲಸೆ, ಕಟ್ಟಡ ಹಾಗೂ ಪೌರ ಕಾರ್ಮಿಕರೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರನ್ನು ಕಡೆಗಣಿಸಲಾಗಿದೆ. ಬೆಂಗಳೂರಿನ ಜೀವನಾಡಿಗಳಾಗಿರುವ ಕೆರೆಗಳು ಹಾಗೂ ರಾಜಕಾಲುವೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿಲ್ಲ’ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ ಹೇಳಿದರು.

‘ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಒದಗಿಸಿರುವುದು, ವಿಕೇಂದ್ರೀಕರಣಕ್ಕೆ ಒತ್ತು ನೀಡಿರುವುದು, ಅತಿ ಹೆಚ್ಚು ಅಂಕ ಗಳಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ವಿದ್ಯಾರ್ಥಿಗಳಿಗೆ ₹25 ಸಾವಿರ ಹಾಗೂ ಉತ್ತಮ ಶಿಕ್ಷಕರಿಗೆ ₹2 ಲಕ್ಷ ಪ್ರೋತ್ಸಾಹ ಧನ ಪ್ರಕಟಿಸಿರುವುದು ಸ್ವಾಗತಾರ್ಹ’ ಎಂದರು.

ಮಕ್ಕಳ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷ ವೈ.ಮರಿಸ್ವಾಮಿ ‘ಬಿಬಿಎಂಪಿ ವ್ಯಾಪ್ತಿಯ ಶಾಲಾ ಮತ್ತು ಕಾಲೇಜುಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕಿತ್ತು. ಈ ವಿಚಾರದಲ್ಲಿ ದೆಹಲಿ ಸರ್ಕಾರವು ನಮಗೆ ಮಾದರಿಯಾಗಬೇಕು. ದೆಹಲಿಯಲ್ಲಿ ಸರ್ಕಾರಿ ಶಾಲೆಗಳಿಗೆ ಹೈಟೆಕ್ ಸ್ಪರ್ಶ ನೀಡಲಾಗಿದೆ. ಮಕ್ಕಳ ಭಿಕ್ಷಾಟನೆ ತಪ್ಪಿಸಲು ಬಜೆಟ್‌ನಲ್ಲಿ ಯಾವ ಪರಿಹಾರ ಪ್ರಕಟಿಸಿಲ್ಲ’ ಎಂದರು.

ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಅಬ್ದುಲ್ ವಾಜಿದ್, ‘ಚುನಾಯಿತ ಕೌನ್ಸಿಲ್‌ನಲ್ಲಿ ಬಜೆಟ್ ಕುರಿತು ಸುದೀರ್ಘ ಚರ್ಚೆ ನಡೆಯುತ್ತಿತ್ತು. ಯಾವ ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಬೇಕು, ಯಾವುದಕ್ಕೆ ನೀಡಬಾರದು ಎಂಬುದರ ಬಗ್ಗೆ ಎಲ್ಲಾ ಸದಸ್ಯರ ಅಭಿಪ್ರಾಯ ಕೇಳಲಾಗುತ್ತಿತ್ತು. ಆದರೆ ಈಗ ಯಾರೊಂದಿಗೂ ಚರ್ಚಿಸದೇ ನೇರವಾಗಿ ಬಜೆಟ್ ಮಂಡಿಸಲಾಗಿದೆ’ ಎಂದರು.

ಬಿಜೆಪಿ ಮುಖಂಡ ನಾರಾಯಣ ಸ್ವಾಮಿ, ‘ಬಜೆಟ್‌ನಲ್ಲಿ ವಿಕೇಂದ್ರೀಕರಣಕ್ಕೆ ಒತ್ತು ನೀಡಲಾಗಿದ್ದು, ಅಭಿವೃದ್ಧಿ ಕೆಲಸಗಳು ಸುಲಲಿತವಾಗಿ ನಡೆಯಲಿವೆ’ ಎಂದರು.





ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸಭೆ

# ಮಳೆಗಾಲಕ್ಕೆ ಸಜ್ಜಾಗಲು ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಇನ್ನೆರಡು ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗಲಿದ್ದು, ಯಾವುದೇ ಅನಾಹುತ–ಅವಘಡಗಳಿಗೆ ಆಸ್ಪದ ನೀಡದಂತೆ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು’ ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ, ಮಳೆಗಾಲದ ಸಿದ್ಧತೆ ಬಗ್ಗೆ ಶನಿವಾರ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

‘ಕಾಮಗಾರಿಗಳನ್ನು ಕಾಲಮಿತಿಯೊಳಗೆಪೂರ್ಣಗೊಳಿಸಬೇಕು. ರಸ್ತೆ ಬದಿಯ ಚರಂಡಿ ಅಥವಾ ಮೋರಿಗಳಿಂದ ಹೂಳು ತೆಗೆದು ನೀರು ಸರಿಯಾಗಿ ಹರಿಯುವಂತೆ ವ್ಯವಸ್ಥೆ ಮಾಡಬೇಕು. ಪಾದಚಾರಿ ಮಾರ್ಗಗಳನ್ನು ದುರಸ್ತಿ ಮಾಡಬೇಕು. ರಸ್ತೆ ಬದಿ ಸುರಿದಿರುವ ಕಟ್ಟಡದ ಅವಶೇಷಗಳನ್ನು ತೆರವುಗೊಳಿಸಬೇಕು’ ಎಂದು ಸೂಚನೆ ನೀಡಿದರು.

‘ಮಳೆಗಾಲದ ನಾಲ್ಕು ತಿಂಗಳು ವಾರ್ಡ್ ಮಟ್ಟದಲ್ಲಿ 63 ತಾತ್ಕಾಲಿಕ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗುತ್ತದೆ. ಉರುಳಿ ಬೀಳುವ ಮರ ಹಾಗೂ ಕೊಂಬೆಗಳನ್ನು ತೆರವುಗೊಳಿಸಲು ಅಗತ್ಯ ಸಿಬ್ಬಂದಿ, ಸಲಕರಣೆ ಹಾಗೂ ವಾಹನಗಳ ವ್ಯವಸ್ಥೆ ಮಾಡಿಕೊಳ್ಳಲಾಗುತ್ತದೆ. ಜಲಾವೃತಗೊಳ್ಳುವ ಪ್ರದೇಶಗಳಲ್ಲಿ 45 ಎಚ್‌ಪಿ ಸಾಮರ್ಥ್ಯದ ಪಂಪ್‌ಗಳಿಂದ ನೀರೆತ್ತಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

### ನಿತ್ಯ ಮೂರು ತಾಸು ವಲಯ ಕಚೇರಿಯಲ್ಲಿರಿ

**ಬೆಂಗಳೂರು:** ನಗರದಲ್ಲಿ ಆಡಳಿತ ವಿಕೇಂದ್ರೀಕರಣಕ್ಕೆ ಬಿಬಿಎಂಪಿ ಆದ್ಯತೆ ನೀಡಿದ್ದು, ಜನಸಂಪರ್ಕಕ್ಕಾಗಿ ನಿತ್ಯ ಕನಿಷ್ಠ ಪಕ್ಷ ಮೂರು ತಾಸುಗಳಾದರೂ ವಲಯ ಕಚೇರಿಯಲ್ಲಿರಬೇಕು ಎಂದು ವಲಯ ಆಯುಕ್ತರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಆದೇಶ ಮಾಡಿದ್ದಾರೆ.

ಪಾಲಿಕೆಯ ಹೊಸ ಕಾಯ್ದೆಯ ಪ್ರಕಾರ ವಿಶೇಷ ಆಯುಕ್ತರನ್ನೇ ವಲಯ ಆಯುಕ್ತರನ್ನಾಗಿ ಸರ್ಕಾರ ನಿಯೋಜಿಸಿದೆ. ಆಯುಕ್ತರಿಗೆ ಇರುವ ಬಹುತೇಕ ಅಧಿಕಾರವನ್ನು ಅವರಿಗೂ ನೀಡಲಾಗಿದೆ.

ಪಾಲಿಕೆಯ ಎಂಟು ವಲಯಗಳಲ್ಲೂ ಆಯಾ ವಲಯ ಆಯುಕ್ತರು ಅಲ್ಲಿನ ಕಚೇರಿಯಲ್ಲಿ ಖುದ್ದು ಹಾಜರಿದ್ದು, ಜನರಿಗೆ ಸ್ಪಂದಿಸಬೇಕು ಎಂದು ಮುಖ್ಯ ಆಯುಕ್ತರು ನಿರ್ದೇಶನ ನೀಡಿದ್ದಾರೆ.

### ವಲಯ ಆಯುಕ್ತರಿಗೆ ಸೂಚನೆಗಳು

- ಆಯಾ ವಲಯದಲ್ಲಿ ಪ್ರತ್ಯೇಕ ಕಚೇರಿ ತೆರೆದು ವಲಯ ಆಯುಕ್ತರ ಹೆಸರು, ಹುದ್ದೆ ವಿವರ, ದೂರವಾಣಿ ಸಂಖ್ಯೆ ಮತ್ತು ವಿಳಾಸದೊಂದಿಗೆ ಮಾಹಿತಿ ಫಲಕ ಅಳವಡಿಸಬೇಕು.
- ವಲಯ ಆಯುಕ್ತರ ಆಪ್ತ ಶಾಖೆಗೆ ಅವಶ್ಯ ಸಿಬ್ಬಂದಿ ಒದಗಿಸಬೇಕು.
- ವಿಡಿಯೊ ಸಂವಾದ ನಡೆಸಲು ಅನುವಾಗುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು.
- ವಲಯ ಆಯುಕ್ತರ ಕಚೇರಿ ಸ್ಥಾಪಿಸಿರುವ ಬಗ್ಗೆ ಆಯಾ ವಲಯದ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು.

ಬಿಬಿಎಂಪಿ ಸುದ್ದಿ

ಮುಖ್ಯ ಆಯುಕ್ತ ಗೌರವ್ ಗುಪ್ತಾ, ವಿಶೇಷ ಆಯುಕ್ತರಾದ ರಾಜೇಂದ್ರ ಚೋಳನ್, ಮನೋಜ್ ಜೈನ್, ರೆಡ್ಡಿ ಶಂಕರ ಬಾಬು, ಎಸ್.ಬಸವರಾಜು, ಡಿ.ರಂದೀಪ್, ತುಳಸಿ ಮದ್ದಿನೇನಿ, ಎಸ್.ಜಿ.ರವೀಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ.ವಿಜಯೇಂದ್ರ ಉಪಸ್ಥಿತರಿದ್ದರು.

# ಕೆಂಚೇನಹಳ್ಳಿ ಕೆರೆ: ಶೀಘ್ರ ಕಾಮಗಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜರಾಜೇಶ್ವರಿ ನಗರದಲ್ಲಿರುವ ಕೆಂಚೇನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರವೇ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಕೆರೆಗಳ ಘಟಕದ ಮುಖ್ಯ ಎಂಜಿನಿಯರ್ ಬಿ.ಟಿ. ಮೋಹನ್‌ಕೃಷ್ಣ ತಿಳಿಸಿದರು.

ಕೆಂಚೇನಹಳ್ಳಿ ಕೆರೆ ಪ್ರದೇಶಕ್ಕೆ ಶನಿವಾರ ಭೇಟಿ ನೀಡಿದ್ದ ಮೋಹನ್ ಕೃಷ್ಣ, ಕೆರೆ ಅಂಗಳವನ್ನು ಪರಿಶೀಲಿಸಿದರು. ‘ಒಳಚರಂಡಿ ನೀರು ಹರಿಯುತ್ತಿದ್ದು, ಇದನ್ನು ಸ್ಥಗಿತಗೊಳಿಸಲಾಗುತ್ತದೆ. ಶಾಸಕ ಮುನಿರತ್ನ ಅವರು ಮುಖ್ಯಮಂತ್ರಿ ಅವರಿಂದ ಕೆರೆ ಅಭಿವೃದ್ಧಿಗೆ ಹಣ ಮಂಜೂರು ಮಾಡಿಸಿದ್ದಾರೆ. ಅಭಿವೃದ್ಧಿ ಕಾರ್ಯಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ಈ ಸಂದರ್ಭದಲ್ಲಿ ಕೈಲಾಸ ಆಶ್ರಮ ಮಹಾಸಂಸ್ಥಾನದ ಜಯೇಂದ್ರಪುರಿ ಸ್ವಾಮೀಜಿ ಮಾತನಾಡಿ, ‘ರಾಜರಾಜೇಶ್ವರಿ ದೇವಸ್ಥಾನದ ಹಿಂಭಾಗವೇ ಇರುವ ಈ ಕೆರೆಯನ್ನು ಮಾದರಿಯಾಗಿ ಅಭಿವೃದ್ಧಿ ಮಾಡಿಬೇಕು’ ಎಂದರು.


ರಾಜರಾಜೇಶ್ವರಿ ನಗರದಲ್ಲಿರುವ ಕೆಂಚೇನಹಳ್ಳಿ ಕೆರೆಗೆ ಬಿಬಿಎಂಪಿ ಕೆರೆಗಳ ಘಟಕದ ಮುಖ್ಯ ಎಂಜಿನಿಯರ್ ಬಿ.ಟಿ. ಮೋಹನ್ ಕೃಷ್ಣ ಭೇಟಿ ನೀಡಿ ಪರಿಶೀಲಿಸಿದರು. ಸ್ಥಳೀಯರಾದ ಟಿ.ಇ. ಶ್ರೀನಿವಾಸ್, ಪಟ್ಟಣಗೆರೆ ಜಯಣ್ಣ ಹಾಗೂ ಬಿಬಿಎಂಪಿ ಎಂಜಿನಿಯರ್‌ಗಳು ಇದ್ದಾರೆ

**ಸಿಬ್ಬಂದಿ ನೇಮಕ:** ‘ರಾಜರಾಜೇಶ್ವರಿನಗರದ ಭೀಮನಕಟ್ಟೆ ಕೆರೆಯ ಏರಿ ಮೇಲ್ಭಾಗ ಒಡೆದುಹೋಗಿದ್ದು, ನೀರು ಜಿನುಗುತ್ತಿದೆ. ಇದರ ಕಾಮಗಾರಿಯೂ ಸೇರಿದಂತೆ ಕೆರೆ ನಿರ್ವಹಣೆಗೆ ಕೂಡಲೇ ಸಿಬ್ಬಂದಿ ನೇಮಕ ಮಾಡಲಾಗುತ್ತದೆ’ ಎಂದು ಮೋಹನ್ ಕೃಷ್ಣ ಭರವಸೆ ನೀಡಿದರು.

‘ಕೆಂಚೇನಹಳ್ಳಿ ಕೆರೆ ಕೊಳಚೆ ತಾಣ’ ಮತ್ತು ‘ಭೀಮನಕಟ್ಟೆ ಕೆರೆ ಏರಿ ಒಡೆಯುವ ಆತಂಕ’ ಕುರಿತ ವರದಿಗಳು ‘ಪ್ರಜಾವಾಣಿ’ಯಲ್ಲಿ ಇತ್ತೀಚೆಗೆ ಪ್ರಕಟಗೊಂಡಿತ್ತು. ಈ ಹಿನ್ನೆಲೆಯಲ್ಲಿ ರಾಜರಾಜೇಶ್ವರಿನಗರ ವಲಯದ ಕೆರೆ ಘಟಕದ ಎಂಜಿನಿಯರ್‌ಗಳೊಂದಿಗೆ ಮೋಹನ್ ಕೃಷ್ಣ ಸ್ಥಳ ಪರಿಶೀಲನೆ ನಡೆಸಿದರು.

ಅಕ್ಷಯ ಗಾರ್ಡನ್: ಪಾಲಿಕೆಗೆ, ಪೊಲೀಸರಿಗೆ ದೂರು ನೀಡಿದ ಬಳಿಕವೂ ನಿಂತಿಲ್ಲ ಕಸ ಸುರಿಯುವಿಕೆ

# ಕಟ್ಟಡ ತ್ಯಾಜ್ಯ ಸುರಿದು ರಸ್ತೆ ಬಂದ್

• ಮನೋಹರ್ ಎಂ.



ಬೇಗೂರು ವಾರ್ಡ್ ವ್ಯಾಪ್ತಿಗೆ ಬರುವ ಯೆಲೇನಹಳ್ಳಿ ಮುಖ್ಯರಸ್ತೆಯಲ್ಲಿರುವ ಅಕ್ಷಯ ಗಾರ್ಡನ್ ಬಡಾವಣೆ ಸಂಪರ್ಕಿಸುವ ರಸ್ತೆಗೆ ಕಟ್ಟಡ ಅವಶೇಷಗಳ ಮಣ್ಣಿನ ರಾಶಿ ಹಾಕಿರುವುದು ಪ್ರಜಾವಾಣಿ ಚಿತ್ರ

**ಬೆಂಗಳೂರು:** ಬನ್ನೇರುಘಟ್ಟ ರಸ್ತೆಯ ಬೇಗೂರು ವಾರ್ಡ್‌ನ ಯೆಲೇನಹಳ್ಳಿ ಸಮೀಪದ ಅಕ್ಷಯ ಗಾರ್ಡನ್ ಬಡಾವಣೆಯ ರಸ್ತೆಯೊಂದಕ್ಕೆ ಕಿಡಿಗೇಡಿಗಳು ಕಟ್ಟಡ ತ್ಯಾಜ್ಯವನ್ನು ತಂದು ಸುರಿಯುತ್ತಿದ್ದಾರೆ. ಇದರಿಂದಾಗಿ ಸ್ಥಳೀಯರು ರಸ್ತೆ ಸಂಪರ್ಕವನ್ನೇ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

‘15 ವರ್ಷಗಳಿಂದ ಇದೇ ರಸ್ತೆಯಲ್ಲಿ ಸಂಚರಿಸುತ್ತಿದ್ದೆವು. ವಾರದಿಂದ ಈಚೆಗೆ ರಸ್ತೆಗೆ ಅಡ್ಡಲಾಗಿ ಕಟ್ಟಡ ಅವಶೇಷಗಳನ್ನು, ಮಣ್ಣನ್ನುತಂದು ರಾಶಿಗಳನ್ನು ಹಾಕಲಾಗುತ್ತಿದೆ. ನಮ್ಮ ಮನೆಗಳನ್ನು ಸಂಪರ್ಕಿಸಲು ರಸ್ತೆಯೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ’ ಎಂದು ಬಡಾವಣೆಯ ನಿವಾಸಿಗಳು ‘ಪ್ರಜಾವಾಣಿ’ ಜೊತೆ ಅಳಲು ತೋಡಿಕೊಂಡರು.

‘ಈ ರಸ್ತೆಯಲ್ಲೇ ಒಳಚರಂಡಿ ಸಂಪರ್ಕ, ಕುಡಿಯುವ ನೀರು ಪೂರೈಕೆಯ ಕೊಳವೆ ಮಾರ್ಗ ಹಾಗೂ ಮಳೆನೀರು ಹರಿಯುವ ಚರಂಡಿ ಇದೆ. ರಸ್ತೆ ಪಕ್ಕದಲ್ಲಿ ವಿದ್ಯುತ್ ಕಂಬಗಳಿವೆ. ನಿವಾಸಿಗಳು ಪ್ರತಿದಿನ ಸಂಚರಿಸುತ್ತಿದ್ದ ರಸ್ತೆಯಲ್ಲಿ ಏಕಾಏಕಿ ಅವಶೇಷ ಕಸದ ರಾಶಿಗಳನ್ನು ತಂದು ಹಾಕುವ ಮೂಲಕ ಕೆಲ ಪ್ರಭಾವಿಗಳು ಸ್ಥಳೀಯರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ’ ಎಂದು ಸ್ಥಳೀಯರು ವಿವರಿಸಿದರು.

ರಸ್ತೆಯಲ್ಲಿ ಕಟ್ಟಡ ತ್ಯಾಜ್ಯ ರಾಶಿ ಹಾಕುತ್ತಿರುವುದನ್ನು ಸ್ಥಳೀಯರು ಪ್ರಶ್ನಿಸಿದರು. ಯಾರು ಈ ಕೆಲಸ ಮಾಡಿಸುತ್ತಿದ್ದಾರೆ ಎಂಬ ಮಾಹಿತಿಯನ್ನೂ ಕಾರ್ಮಿಕರು ಬಹಿರಂಗಪಡಿಸಲಿಲ್ಲ. ‘ಕಟ್ಟಡ ತ್ಯಾಜ್ಯವನ್ನು ಇಲ್ಲಿ ವಿಲೇವಾರಿ ಮಾಡುವಂತೆ ನಮಗೆ ಸೂಚನೆ ನೀಡಿದ್ದಾರೆ. ನಮ್ಮ ಕೆಲಸ ಮಾಡುತ್ತಿದ್ದೇವೆ. ಈ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ’ ಎಂದು ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ತಿಳಿಸಿದರು.

> **ನೂರಕ್ಕೂ ಹೆಚ್ಚು ಕುಟುಂಬಗಳಿರುವ ಬಡಾವಣೆಗೆ ಇದುವೇ ರಸ್ತೆ. ಕಸದ ರಾಶಿಯಿಂದ ಸಂಚಾರಕ್ಕೆ ಸಮಸ್ಯೆಯಾಗಿದೆ. ಈ ಸಮಸ್ಯೆ ಪರಿಹರಿಸಿ.**
> **ಶಶಿಧರ್,**
> ಅಕ್ಷಯ ಗಾರ್ಡನ್ ಬಡಾವಣೆ ನಿವಾಸಿ

‘ಮಾ.23ರಂದು ಏಕಾಏಕಿ ಟ್ರ್ಯಾಕ್ಟರ್‌ಗಳಲ್ಲಿ ಕಟ್ಟಡ ಅವಶೇಷದ ಮಣ್ಣನ್ನು ತಂದು ರಸ್ತೆಗೆ ಸುರಿದು ಸಂಚಾರ ನಿರ್ಬಂಧಿಸಿದರು. ಅದನ್ನು ಪ್ರಶ್ನಿಸಿದಾಗ, ‘ಇದು ರಸ್ತೆಯಲ್ಲ. ಖಾಸಗಿ ಜಮೀನು’ ಎಂದು ತಿಳಿಸಿದರು. ಇದೊಂದು ರಸ್ತೆ. ಖಾಸಗಿ ಜಮೀನು ಹೇಗಾಗುತ್ತದೆ’ ಎಂದು ಸ್ಥಳೀಯ ನಿವಾಸಿ ಪವನ್ ಪ್ರಶ್ನಿಸಿದರು.

‘ರಸ್ತೆ ಕಬಳಿಸಿ ಇಲ್ಲಿ ಏನೋ ಕಾಮಗಾರಿ ನಡೆಸಲು ಮುಂದಾಗಿದ್ದಾರೆ’ ಎಂದು ಸಂಶಯ ವ್ಯಕ್ತಪಡಿಸಿದ ಅವರು, ‘ಇಲ್ಲಿ ಹಾಕಿರುವ ಕಸದಲ್ಲಿ ಗಾಜು ಸೇರಿದಂತೆ ಅಪಾಯಕಾರಿ ವಸ್ತುಗಳಿವೆ. ಸಾರ್ವಜನಿಕರಿಗೆ ಅಡ್ಡಿ ಮಾಡುವ ಉದ್ದೇಶದಿಂದಲೇ ಈ ರೀತಿ ಮಾಡುತ್ತಿದ್ದಾರೆ. ಇದರ ಹಿಂದೆ ಪ್ರಭಾವಿಗಳು ಇದ್ದಾರೆ. ನಮ್ಮ ನಿವಾಸಗಳಿಗೆ ಮೊದಲಿನಂತೆ ಇದೇ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು’ ಎಂದು ಮನವಿ ಮಾಡಿದರು.

‘ಒಂದು ವಾರದಿಂದ ಮನೆಯಿಂದ ಹೊರ ಬಂದರೆ ಕಸದ ದುರ್ವಾಸನೆಗೆ ಮೂಗು ಮುಚ್ಚಿಕೊಳ್ಳಬೇಕಾಗಿದೆ. ಮಳೆ ಬಂದರೆ, ಈ ಕಸದಿಂದಲೇ ಹಲವು ಆರೋಗ್ಯ ಸಮಸ್ಯೆಗಳೂ ಬರಬಹುದು. ಕಸವನ್ನು ಕೂಡಲೇ ತೆರವು ಮಾಡಬೇಕು’ ಎಂದು ಸ್ಥಳೀಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಿವಾಸಿ ಅಮೃತ್ ಒತ್ತಾಯಿಸಿದರು.

**ರಸ್ತೆ ಕಬಳಿಕೆ ಯತ್ನ:** ‘ಸಾರ್ವಜನಿಕರಿಂದ ದೂರು ಬಂದ ನಂತರ ಸ್ಥಳಕ್ಕೆ ಭೇಟಿ ನೀಡಿದೆವು. ರಸ್ತೆಯನ್ನು ಖಾಸಗಿಯವರು ಕಬಳಿಸುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ರಾಮಕೃಷ್ಣ ಅವರಿಗೆ ವಿಚಾರ ತಿಳಿಸಿದಾಗ, ಬೇಜವಾಬ್ದಾರಿಯಿಂದ ಉತ್ತರಿಸುತ್ತಾರೆ. ಇದರಲ್ಲಿ ಅಧಿಕಾರಿಗಳು ಹಾಗೂ ಪೊಲೀಸರು ಶಾಮೀಲಾಗಿರುವ ಶಂಕೆಯಿದೆ’ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ ಎಸ್.ಮಂಜುನಾಥ್ ಆರೋಪಿಸಿದರು.

### ಪತ್ರಕರ್ತರ ಮೇಲೂ ದಾಳಿ ಯತ್ನ!

ಈ ಸಮಸ್ಯೆ ಕುರಿತು ವರದಿ ಮಾಡಲು ಸ್ಥಳಕ್ಕೆ ಶನಿವಾರ ತೆರಳಿದ್ದ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಟ್ರ್ಯಾಕ್ಟರ್ ಚಾಲಕನೊಬ್ಬ ಪತ್ರಕರ್ತರ ಮೇಲೂ ದಾಳಿ ನಡೆಸಲು ಮುಂದಾದ. ಛಾಯಾ ಚಿತ್ರ ತೆಗೆಯುತ್ತಿದ್ದಾಗ ಕ್ಯಾಮೆರಾಗೆ ಹಾನಿ ಮಾಡಲೂ ಯತ್ನಿಸಿದ. ಕೂಡಲೇ ಹುಳಿಮಾವು ಪೊಲೀಸರಿಗೆ ಮಾಹಿತಿ ನೀಡಲಾಯಿತು. ಅವರು ಸ್ಥಳಕ್ಕೆ ಬರುವಷ್ಟರಲ್ಲಿ ಚಾಲಕ ಪರಾರಿಯಾದ.

ಹಿರಿಯ ಅಧಿಕಾರಿಗಳ ಸೂಚನೆಮೇರೆಗೆ ಸ್ಥಳಕ್ಕೆ ಬಂದ ಪೊಲೀಸ್ ಸಿಬ್ಬಂದಿ, ರಸ್ತೆಯಲ್ಲಿರುವ ಕಸದ ರಾಶಿಯನ್ನು ಪೂರ್ಣವಾಗಿ ತೆರವು ಮಾಡಲು ಅಲ್ಲಿದ್ದ ಜೆಸಿಬಿ ಸಿಬ್ಬಂದಿಗೆ ಸೂಚಿಸಿದರು. ಅದಕ್ಕೆ ಸ್ಪಂದಿಸದ ಜೆಸಿಬಿ ಚಾಲಕನನ್ನು ವಾಹನದೊಂದಿಗೆ ಜಪ್ತಿ ಮಾಡಿ ಠಾಣೆಗೆ ಕರೆದೊಯ್ದರು.



ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರು ಬೇಗೂರು ವೃತ್ತದ ಬಳಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು. ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶ್ರೀನಿವಾಸ್, ಸಹಾಯಕ ಎಂಜಿನಿಯರ್ ಮಲ್ಲಪ್ಪ, ಚಲುವರಾಜು, ಬಿಜೆಪಿಯ ರಮೇಶ್, ಬಿಜೆಪಿ ವಾರ್ಡ್ ಘಟಕದ ಅಧ್ಯಕ್ಷ ಶಶಿಧರ್, ಬಿಜೆಪಿ ನಗರ ಜಿಲ್ಲಾ ಘಟಕದ ಕಾರ್ಯದರ್ಶಿ ಶಿಲ್ಪಾ, ಪ್ರಧಾನ ಕಾರ್ಯದರ್ಶಿ ಹನುಮಂತ ಭಜಂತ್ರಿ, ಮುಖಂಡರಾದ ಹನುಮಂತ, ಸಂಪತ್ ಹಾಗೂ ಲೋಕೇಶ್ ಇದ್ದಾರೆ.

# ಬೆಂಗಳೂರಿನಲ್ಲಿ ದಿಂಡಿಗಲ್ ತಲಪ್ಪಾಕಟ್ಟಿ ಬಿರಿಯಾನಿ ಮಳಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಮಿಳುನಾಡಿನ ಹೆಸರಾಂತ ದಿಂಡಿಗಲ್ ತಲಪ್ಪಾಕಟ್ಟಿ ಬಿರಿಯಾನಿ ಮಳಿಗೆ ಈಗ ಬೆಂಗಳೂರಿನ ಉತ್ತರಹಳ್ಳಿಗೂ ವಿಸ್ತರಿಸಿದೆ.

7 ದೇಶಗಳಲ್ಲಿ 80ಕ್ಕೂ ಹೆಚ್ಚು ಮಳಿಗೆ ಹೊಂದಿರುವ ದಿಂಡಿಗಲ್ ತಲಪ್ಪಾಕಟ್ಟಿಯ ಮುಖ್ಯ ವ್ಯವಹಾರ ಅಧಿಕಾರಿ ಅರವಿಂದ ಅಯ್ಯರ್, ‘ವಿಶಿಷ್ಟ ಗುಣಮಟ್ಟದ ಆಹಾರ ಪೂರೈಸುವ ದಿಂಡಿಗಲ್ ತಲಪ್ಪಾಕಟ್ಟಿ 60 ವರ್ಷಗಳ ಪರಂಪರೆ ಹೊಂದಿದೆ. ಗುಣಮಟ್ಟ ಮತ್ತು ರುಚಿಗೆ ನಮ್ಮ ಮೊದಲ ಆದ್ಯತೆಯಾಗಿವೆ. ಉನ್ನತ ಗುಣಮಟ್ಟದ ಸೀರಾಗಾ ಸಾಂಬಾ ಅಕ್ಕಿ, ಸಾಂಪ್ರದಾಯಿಕ ಮಸಾಲೆಗಳ ವಿಶೇಷ ಸಂಯೋಜನೆ, ಕೈಗಳಲ್ಲಿ ಅರೆಯಲಾದ ಮಸಾಲೆಗಳು ಮತ್ತು ವಿಭಿನ್ನ ರೀತಿಯ ಅಡುಗೆ ಶೈಲಿಯು ನಮ್ಮ ಬಿರಿಯಾನಿಯ ವಿಶೇಷ’ ಎಂದರು.

‘ಎಷ್ಟು ಸಾಧ್ಯವೋ ಅಷ್ಟು ಗ್ರಾಹಕರನ್ನು ತಲುಪಲು ಪ್ರಯತ್ನಿಸುತ್ತಿದ್ದೇವೆ. ಅವರಿಗೆ ಮಹತ್ತರ ಹಾಗೂ ವಿಶಿಷ್ಟ ದಕ್ಷಿಣದ ಭಾರತೀಯ ಡೈನಿಂಗ್ ಅನುಭವ ಒದಗಿಸುತ್ತಿದ್ದೇವೆ’ ಎಂದು ಹೇಳಿದರು.

‘ತಲಪ್ಪಾಕಟ್ಟಿ ಮಟನ್ ಬಿರಿಯಾನಿ, ತಲಪ್ಪಾಕಟ್ಟಿ ಗನ್ ಫೈರ್ ಚಿಕನ್, ತಲಪ್ಪಾಕಟ್ಟಿ ಚಿಕನ್ ಬಿರಿಯಾನಿ ಪ್ರಮುಖ ತಿನಿಸಿಸುಗಳನ್ನು ನಮ್ಮ ರೆಸ್ಟೋರೆಂಟ್ ಒಳಗೊಂಡಿವೆ. 1957ರಲ್ಲಿ ದಿಂಡಿಗಲ್‌ನಲ್ಲಿ ನಾಗಸ್ವಾಮಿ ನಾಯ್ಡು ಅವರಿಂದ ಪ್ರಾರಂಭವಾದ ಆನಂದ ವಿಲಾಸ್ ಬಿರಿಯಾನಿ ಹೋಟೆಲ್ ಈಗ ದಿಂಡಿಗಲ್ ತಲಪ್ಪಾಕಟ್ಟಿ ಬಿರಿಯಾನಿ ಹೋಟೆಲ್ ಆಗಿ ಖ್ಯಾತಿ ಪಡೆದಿದೆ. ಉತ್ತರಹಳ್ಳಿಯಲ್ಲಿ ಶಾಖೆ ತೆರೆಯುವ ಮೂಲಕ ಬೆಂಗಳೂರಿನ ಜನರಿಗೆ ಸೇವೆ ಒದಗಿಸಲು ಸಿದ್ಧವಾಗಿದೆ’ ಎಂದು ವಿವರಿಸಿದರು.



# ಕಸಾಪ: ಅಧ್ಯಕ್ಷ ಸ್ಥಾನಕ್ಕೆ 9 ಮಂದಿ ನಾಮಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ದೊಡ್ಡಬಳ್ಳಾಪುರದ ಮ.ಸಿ. ಕೃಷ್ಣ ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಇದರಿಂದಾಗಿ ಈವರೆಗೆ ನಾಮಪತ್ರ ಸಲ್ಲಿಸಿದವರ ಸಂಖ್ಯೆ 9ಕ್ಕೆ ತಲುಪಿದೆ.

ಏ.7ರವರೆಗೆ ನಾಮಪತ್ರ ಸಲ್ಲಿಸಲು ಕಾಲಾವಕಾಶವಿದ್ದು, ಏ.8ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏ.12ರಂದು ಸ್ಪರ್ಧೆಯಲ್ಲಿ ಅಂತಿಮವಾಗಿ ಉಳಿದ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ.

ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯನ್ನೇರಲು ಆಕಾಂಕ್ಷಿಗಳು ಬಿರುಸಿನ ಪ್ರಚಾರ ಪ್ರಾರಂಭಿಸಿದ್ದಾರೆ. ಈಗಾಗಲೇ ವ.ಚ. ಚನ್ನೇಗೌಡ, ಮಹೇಶ್ ಜೋಶಿ, ಸಂಗಮೇಶ ಬಾದವಾಡಗಿ, ಸಿ.ಕೆ. ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಸಿ. ಹಳ್ಳೂರ, ಬಾಡದ ಬದ್ರಿನಾಥ್ ಹಾಗೂ ಶಿವರಾಜ ಪಾಟೀಲ ನಾಮಪತ್ರ ಸಲ್ಲಿಸಿದ್ದಾರೆ. ಕೇರಳ ಗಡಿನಾಡ ಘಟಕಕ್ಕೆ ಕಾಸರಗೋಡಿನ ರಾಧಾಕೃಷ್ಣ ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಸುಬ್ರಮಣ್ಯ ವಿ. ಭಟ್ ಕೂಡ ಈ ಘಟಕಕ್ಕೆ ಸ್ಪರ್ಧಿಸುತ್ತಿದ್ದಾರೆ.

ಆಂಧ್ರ ಪ್ರದೇಶ ಗಡಿನಾಡ ಘಟಕಕ್ಕೆ ಕುಣೆ ಬಾಲರಾಜ್ ಹಾಗೂ ಮಹಾರಾಷ್ಟ್ರ ಗಡಿನಾಡ ಘಟಕಕ್ಕೆ ಎಸ್.ಎಸ್. ಸಾಲೀಮಠ ನಾಮಪತ್ರ ಸಲ್ಲಿಸಿದ್ದಾರೆ.

ಪರಿಷತ್ತಿನ ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ರಂದು ಚುನಾವಣೆ ನಡೆಯಲಿದೆ.

## ನಗರ ಜಿಲ್ಲೆಗೆ ಐವರು ನಾಮಪತ್ರ ಸಲ್ಲಿಕೆ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಐವರು ನಾಮಪತ್ರ ಸಲ್ಲಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 36,596 ಸದಸ್ಯರಿದ್ದಾರೆ. ಇವರಲ್ಲಿ 36,389 ಮಂದಿ ಮತ ಚಲಾವಣೆಯ ಅರ್ಹತೆ ಹೊಂದಿದ್ದಾರೆ. ರಾಜ್ಯದಲ್ಲಿ ಅತೀ ಹೆಚ್ಚು ಮತದಾರರನ್ನು ಒಳಗೊಂಡಿರುವ ಜಿಲ್ಲೆ ಇದಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಹಲವರು ಇಚ್ಛೆ ವ್ಯಕ್ತಪಡಿಸಿ, ಈಗಾಗಲೇ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರಲ್ಲಿ ದಯಾನಂದ ತಿಪ್ಪೇರುದ್ರಪ್ಪ, ಆತ್ಮಾನಂದ, ವೇದಮೂರ್ತಿ ಕೆ.ಸಿ., ಎಂ. ಪುಟ್ಟರಾಜು ಹಾಗೂ ಎಂ. ಪ್ರಕಾಶಮೂರ್ತಿ ನಾಮಪತ್ರ ಸಲ್ಲಿಸಿದ್ದಾರೆ.

5 ವರ್ಷಗಳಿಂದ ಪರಿಷತ್ತಿನ ಸದಸ್ಯರಾಗಿರುವವರು ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ. ಈ ಬಾರಿ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲಿಯೂ ಪ್ರತ್ಯೇಕವಾಗಿ ಮತದಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

## ಜೆ.ಪಿ.ನಗರ: ಸಾಂಪ್ರದಾಯಿಕ ರೇಷ್ಮೆ ಉತ್ಪನ್ನ ಪ್ರದರ್ಶನ

ಬೆಂಗಳೂರು: ಶಗುನ್ ಸಿಲ್ಕ್ ಟ್ರೆಂಡ್ಸ್ ವತಿಯಿಂದ ದೇಶದ ನುರಿತ ನೇಕಾರರಿಂದ ತಯಾರಾದ ಕೂಲ್ ಕಾಟನ್ ಹ್ಯಾಂಡ್‌ಲೂಂ ಹಾಗೂ ಎಥ್ನಿಕ್ ಮತ್ತು ಸಾಂಪ್ರದಾಯಿಕ ರೇಷ್ಮೆ ಉತ್ಪನ್ನಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಜೆ.ಪಿ.ನಗರದ ಸಾರಕ್ಕಿ ವಾರ್ಡ್‌ನ 15ನೇ ತಿರುವಿನಲ್ಲಿರುವ ಸಿಂಧೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇದೇ 11ರವರೆಗೆ ಪ್ರದರ್ಶನ ಇರಲಿದೆ.

ಸಂಪರ್ಕ: 8095688238.

## ಕನ್ನಡಿಗರ ಮನೆ ನೆಲಸಮ: ನೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಾದ ವಾಸ್ಕೋ ಬೈನಾ ಬೀಚ್ ತಟದಲ್ಲಿ ತಲೆಮಾರುಗಳಿಂದ ವಾಸವಿದ್ದ ಕನ್ನಡಿಗರ ಮನೆಗಳನ್ನು ಗೋವಾ ಸರ್ಕಾರ ರಾತ್ರೋರಾತ್ರಿ ನೆಲಸಮ ಮಾಡಿದ್ದು, ಅವರ ರಕ್ಷಣೆಗೆ ರಾಜ್ಯ ಸರ್ಕಾರ ಧಾವಿಸಬೇಕು' ಎಂದು ಕರ್ನಾಟಕ ಗಡಿ ಹೋರಾಟ ಸಮಿತಿ ಮನವಿ ಮಾಡಿದೆ.

ಈ ಸಂಬಂಧ ಸಮಿತಿಯ ಅಧ್ಯಕ್ಷ ಬಿ.ಕೆ.ರಾ.ರಾವ್ ಬೈಂದೂರು ಅವರ ನಿಯೋಗ ಸಚಿವ ಜಗದೀಶ್ ಶೆಟ್ಟರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ.

'ಕನ್ನಡಿಗರನ್ನು ನಿರಾಶ್ರಿತರನ್ನಾಗಿ ಮಾಡಲು ಹಲವು ವರ್ಷಗಳಿಂದ ಅಲ್ಲಿನ ಸರ್ಕಾರ ಸಂಚು ರೂಪಿಸಿತ್ತು. ಈಗ ರಾತ್ರೋರಾತ್ರಿ ಕನ್ನಡಿಗರ ಮನೆಗಳನ್ನು ನೆಲಸಮ ಮಾಡಿದೆ. ಇವರ ಪರವಾಗಿ ಸಮಿತಿ ಬೆಂಬಲವಾಗಿ ನಿಂತಿದೆ. ರಾಜ್ಯ ಸರ್ಕಾರ ನಿರಾಶ್ರಿತ ಕನ್ನಡಿಗರ ನೆರವಿಗೆ ಧಾವಿಸಬೇಕು' ಎಂದೂ ರಾವ್ ಬೈಂದೂರು ಮನವಿ ಮಾಡಿದ್ದಾರೆ.

## ಅತ್ಯುತ್ತಮ ಅಭಿಯೋಜಕ ಪ್ರಶಸ್ತಿ

ಬೆಂಗಳೂರು: ಸಿಬಿಐ (ಭ್ರಷ್ಟಾಚಾರ ನಿಗ್ರಹ ಶಾಖೆ) ಸಾರ್ವಜನಿಕ ಅಭಿಯೋಜಕ ಶಿವಾನಂದ ಪೆರ್ಲ ಅವರು 2020ನೇ ಸಾಲಿನ ಅತ್ಯುತ್ತಮ ಸಾರ್ವಜನಿಕ ಅಭಿಯೋಜಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಿಬಿಐನ ಚೆನ್ನೈ ವಿಶೇಷ ಅಪರಾಧ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಅವರು ಹಲವು ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. ಇದೇ ತಿಂಗಳಲ್ಲಿ ನಡೆಯಲಿರುವ ಸಿಬಿಐ ಪ್ರಶಸ್ತಿ ದಿನಾಚರಣೆ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.



ಶಿವಾನಂದ ಪೆರ್ಲ

---

# ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

# WEEKEND CORNER ಕ್ಲಾಸಿಫೈಡ್ಸ್

## REAL ESTATE SELLING

### Commerical

### General

**INVEST MIN 25 lacs in Grade A Industrial Property in high profile industrial zone at Hosur and get assured rent of Rs 19500 per month. MNC tenant with 10 years rent contract and 5 years lock.in. 9945323691**

### Rajarajeshwari Nagar

**FOR** SALE, Semi-commercial 3050sqft, in Ideal Homes. South Facing: 9448508410/9844216344 (Brokers Excuse)

### Vasanthnagar

**2 BHK** converted to office fully furnished space 1262 sqft incl car park for sale. Palace garden compound, palace cross Road. 1.27 cr. neg. Contact 9845493251/ 9449009325.

### Industrial & Factory

### Kanakapura Road

**INDUSTRIAL PLOTS** 4000sft to 6500sft for Sale. suitable for Service Station, Garage, Small Scale Industries etc at Jaraganahalli Pipe-line road, Kanakapura Road,near JP Nagar Metro Station. Contact:Verna Developers MG Road. 9620253180/ 08050749740

### Tumkur Road

**KIADB ALLOTTED** Industrial land Sale 2.25 Acre, Tumkur, Facing NH-4, @ Guidance Price. Owner: 9448311478

## RENTAL PROPERTIES

### Accommodation Available

### Commercial

**COMMERCIAL SPACE** for rent @Bannerghatta Road and Thilaknagar Road junction opp HP petrolbunk, ground floor 1000sqft for bank, showroom, hotel, 120sqft for ATM, 2ND floor 2100sqft furnished cabins workstations, 4th floor 1300 and 400sqft with power backup, lift, carparking. Contact 9845522122, 9353883078.

**OFFICE SPACE** Available. 2nd Floor 1200 sft, 3rd Floor 700 sft -Vijayanagar Club Road 9845162186

Only For The Big Retailers, MNC, Software Companies . 80000 Square Feet Stand Alone Building For Rent In Bommasandra. 400 Metres From Upcoming Metro Station. Contact 9844016139

**SHOWROOM_&_OFFICE_SPACES FURNISHED** & Unfurnished Available for Rent.T Dasarahalli, 8th Mile, Tumkur Road, Ph: 9391024959

**CARLTON TOWERS** Old Airport Road, 1047 sqft partially furnished office space FOR RENT. Contact-9449458018

### Flats

**2 BHK** FLAT RENT, 14,000/-, Negotiable. Fortitude Proxima Apartment, Opposite Uttarahalli Bus Stand. 8904981417, 9886392651.

**980 SQFT.** TWO BHK INCLUDES ONE ATTACHED BATH WITH BALCONY-SEMI FURNISHED AND RENOVATED TOILET / KITCHEN FOR RENT AT RAHEJA PARK AGRAHARA DASARAHALLI IMMEDIATE OCCUPATION -9341752719

**3 BHK** 1950 sqft semi furnished apartment at Kothanur, Evergreen Layout, near Airport Main Road, 24 hours Water, Security, Solar Hot Water, Lift available. Rent Rs. 32000 including maintenance. Contact 9845824977, 9686548479.

**BRIGADE PANORAMA** MYSORE ROAD, 11TH FLOOR, FURNISHED 3 ½ BHK LUXURY APARTMENT LEASE-23 LAKHS, RENT-21800, 9986033339, 9341823353.

**1800 SQ.FT.** 3 BHK Flat for RENT. 'Esteem Heritage', J.P. Nagar 5th Phase, 29,000/- Maintenance Extra. VEG ONLY. Phone: 9743411659, 9886115986.

**BANGALORE RAJAJINAGAR** 1st phase 1 BHK 3 Floor 650 sqft 1 bike park No lift , 9848512997

### Industrial And Factory

**RENT AT** Nadakarappa Industrial Estate near Peenya 2nd stage, Total- 3 acres land, Built-up total 1,00,000 sqft. Power- 500 KVA, Lift, garden, fire security,fully compounded. Previously occupied by Bosch-Rexroth. Contact: 9538199944, 9535388399

### House

**4 BED** ROOM north east facing independent house for rent at BSK 3rd stage near kamakya. Contact 9790039509

**3-BHK ATTACHED** Bathroom with Pooja room in Domlur 2nd stage, 1st floor, 24hr water,Rent 35000/-. Owner: 9886185803

**3BHK RESIDENTIAL/** Commercial 1st floor for Rent, Near Metro Station, Vijayanagar. Owner: 9986001949

**INDEPENDENT HOUSE** 1BHK 7K 2BHK 15K semi furnished at akshaya nagara, TC palya 9160087707, 7981438521

## BUILDERS ESSENTIAL

### Water Proofing Materials

**LEAKAGE... LEAKAGE...** Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

### Water Proofing

***WE FIX LEAKING*** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

## REAL ESTATE BUYING

### House

### J P Nagar

**WANTED 30X40** old house at JP nagar 1st, 2nd 3rd phase brokers excuse immediate settlement 9844270806

### Sites

### Arkavathy Layout

**BDA SITES** WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

## JOB OPPORTUNITIES

### Walk-in

**3D INNOVATE** #1348/444A, Mariya Street Mariyannapalya, Bengaluru Ph: 080-22026000
Invites Application for the Position of College Principal, Sectional Principals
TEACHERS (With min 2yrs of exp in CBSE) English, Math, Business Studies, Chemistry, Science, Computer Science, Physics, Social Science, Accountancy, Economics, Special Educator
MBA, Franchise Manager
Mail Your Resume to hr@kensri.in | Walk-in on 7th & 8th April 2021

### Teachers/ Professors

**515 ABW HIGH SCHOOL** Halasuru, Bangalore-08 REQUIRES
- Physical Education Teacher
- Part -Time Sanskrit Teacher
- Computer Teacher

Kindly visit: http://515armyschool.co.in/recruitment For details or Contact: 080-25307559

**WANTED: TEACHERS:** SCIENCE- B.Sc/M.Sc-B.Ed (CBZ/PCM) Attend Interview on 09-04-2021 at 10am Secretary, SAVM ENGLISH MEDIUM SCHOOL, Kumarswamy Layout, Near Srinivasa Theatre, Bangalore. Contact: 94837-55974/ 96637-42763. Gmail: savm2003@gmail.com

**WANTED** Teachers for Higher Primary & High School Mathematics & Physics. MSc/BSc, B.Ed.Maths, Physics. Yeshwanthpur, Divanarapalya, Bangalore. Contact No. 9379191544

**WANTED QUALIFIED** and Experienced TEACHERS to teach ENGLISH, SOCIAL SCIENCE, EVS, MATHEMATICS, SCIENCE, KANNADA,HINDI, COMPUTER and PE for HIGH SCHOOL and Primary, NTT Teachers for Nursery. Contact immediately or Apply within 15days to Secretary, SRI VINAYAKA VIDYA KENDRA, Kodigehalli, Thindlu MainRoad, Sahakarnagar Post, Bangalore-560092. Phone:9880357297/ 08041698983

**worth®** All Big Brand Garments at Affordable Prices
Men's and Women's
1st Time in Bengaluru Genuine Garments
upto 70% Off.
Collect special gift on every purchase of Rs. 10,000/- & Rs. 15,000/-
From 3.4.2021 to 6.4.2021 at :-
✻ Chandrasagar, 2nd Block, Near Ashoka Pillar, Jayanagar
From 3.4.2021 to 7.4.2021 at :-
✻ Suryodaya Mandir, Near D Mart, Vijaynagar, Bengaluru

**ARVIND Residential School & PU College, Kunigal**
Ph: 08132-210000/ 01. Mob: 9483683002/ 005. Website: www.arvindinternationalschool.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURER (Science & Commerce Stream)
- Well Experienced NEET & JEE faculties for PUC
- Nursery/ Primary/ Middle School/ High school Teachers (ICSE/ CBSE & State)
- Co-Ordinator (ICSE & CBSE), Hostel Co-Ordinatior
- Warden (M/F), Cooks, Nurse (F), Office Assistant (F)

Experienced in all streams with desired qualification
Send your resume with recent passport size photo to airsjobs@gmail.com within 7 days
OR Walk-in interview from 21st April Onwards (Monday to Thursday Between 10.00 to 2.00pm only)

**Little Lillys Education Society** Vidyaranyapura Requires Lady Teachers with Experience Sanskrit for 10th Std, Salary: 25K To 30K Trained and Experience Teachers for Primary all Subjects, Salary: 20K To 25K 9535498177 6363935893

**REQUIRED P.G. Faculties for Pharmacy, Nursing, Physiotherapy,Ayurveda, Homeopathy & Bio-Chemistry.Contact: K.T.G College, HegganahalliCross, Sunkadakatte, Bengaluru-560 091. Mob: 9845051023 / 9880453539 Email: ktgcolleges@gmail.com**

**LADY TEACHERS** wanted for CBZ, Maths, English/ Social, Computer science. Contact in person with certificates. Camlin Middle/High school, 6th C main 4th cross, Hampinagar B'lore

**ST SOPHIA** Convent (CBSE) Nagarabhavi requires Trained /experienced Office Assistants, Teachers for Mathematicians, Science, Socialscience, English, for primary & High school (Immediate Appointment) principal@stsophiaconvent.org Contact: 9243031872

**REQUIRES LADY** Teachers for English B.A BEd & M.A BEd Walk-in Interview with the Secretary on 5th & 6th April between 10am to 2pm Srikrishna International School, ITI-Layout, BSK 3rd Stage, Bangalore-85. Phone: 65365824

**SBE & CT HARWARD INTERNATIONAL SCHOOL CBSE & PU COLLEGE SCIENCE INTEGRATED** Affiliated No.830335 Dasanapura, Tumkur Road, Bangalore North – 562123 www.harwardinstitution.com
Walk in interview from 04-04-2021 onwards Regularly @ 10:30 am to 4:00 pm
LECTURERS: INTEGRATED Physics, Chemistry, Biology Mathematics,(having experience in handling integrated courses)
Requirement for School
Vice-Principal, (Female) Co-ordinator (Female) Require qualified & 10 yrs exp as per CBSE norms.
P.G.T & T.G.T Teachers with B.Ed for ALL SUBJECTS English, Social Studies, Maths, Computer Science, Hindi, Kannada & NTT exp. of at least 3-5yrs.
DTP operator (exp. of 3yrs in a reputed CBSE school).
Note: All candidates should have: 1. Excellent communication skills. 2. Openness to innovative methods of teaching 3. Ability to work in team.
Please mail your resume to infoharwardschoolbgl@gmail.com
Ph:9880112833/9945230285 9945230286 , 080-29723540

### Accounts & Finance

**REQUIRED ACCOUNTANTS** B.com Graduate Experience 3-5 years With Tally, TDS & GST Salary upto 20000/- to 25000/- Call:7338084555 9880727889 Email:glprojects7889@gmail.com

**WANTED: CHARTERED** ACCOUNTANTS, Commerce Graduates,Auditors, Retired Auditors/Accountants and CA (Inter/Final-Articles Completed).Apply RANGARAJU and ASSOCIATES, 503 & 504, Brigade Towers, Brigade Road, Bangalore. Contact:080 22249077, 9448070838 or Email:rangaraju.associates@gmail.com

**IMMEDIATE JOINER** Male Accountant with GST Rules, Returns Filing for Company in Bangalore Mail Resume to daphombale48@gmail.com

### Engg/ Production Technical

**WANTED DIPLOMA** in Electronics and Communication. Freshers/experienced. Atel Devices and systems, Kanakapura Road.Ph: 8880888071

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

**ENGINEER- B.E Mechanical & Solid works Proficient for Quality Control. ITI Refrigeration Technician sincere and hard worker Proficiency for a Factory in Nelamangala. Apply to admin@siskin.in or Call: 9980988823.**

**CALIBRE UPS,** Inverters & Batteries Near Yeshwanthpur Requires Male PUC/ITI/DIPLOMA Pass or Fail for Electrical/Electronics Technicians Post. Male/Female Office Assistant With Good Communication Contact-9845034531

Need Mechanical/ Electrical Diploma/ ITI Fresher/ Failed Candidates Accept Contact Muthu 9113007837

### Drivers

**ಡ್ರೈವರ್ ಬೇಕಾಗಿದ್ದಾರೆ.**
ಐಷಾರಾಮಿ ಕಾರುಗಳಾದಂತಹ Benz, BMW, Range Rover and SUVs ಗಳನ್ನು ಓಡಿಸಿ ಕನಿಷ್ಠ 5 ವರ್ಷಗಳ ಡ್ರೈವಿಂಗ್ ಅನುಭವವಿರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ: 8105357300, 080-22210800

**DRIVERS** wanted for Water Tankers in Bangalore, Contact : 9448171416

### Factory

**WANTED IMMEDIATELY** a).PRODUCTION MANAGER/ ENGINEER and b).MARKETING EXECUTIVE with-min-3years experience for-a manufacturing Company located-in Bommanahalli, Hosur-Road, Bangalore-68. Send-resume with-expected salaries-to: uppbangalore@gmail.com/ Contact: 9449817703.

### General

**BANK JOB**
WALK IN INTERVIEW
NEED FIELD EXECUTIVE
Salary + Incentive
AREA
- BANASHANKARI
- ELECTRONIC CITY
- WHITE FIELD
- KENGERI
- K. R. PURAM
- HEBBAL

TELE CALLERS: Salary + Incentives (Required Skill, Basic Computers)
QUALIFICATION SSLC, PUC, Any Degree
Banking Collections Fresh / Experience DRA
Call : 63642 13123 63826 32480
# 119/1, 2nd Floor, Srinidhi Complex, 11th Cross, Malleswaram, Bangalore-560 003

**WANTED SCANNING** & Data Entry Operators (25No.s), Qualification:10th, 12th, Graduate with knowledge in computer and Kannada,Salary: 9K + conveyance,Contact: Ninestars Information Technologies Private Limited,Gandhinagar, Bangalore. Mobile: 9840322363, 9972573003 Email: amit.a@ninestars.in, sathya@ninestars.in




### Cook

**WANTED /AVAILABLE** Experienced Cook (North/South indian) Babycare /Elderly People Attender 15000/- Food, Room, 9886458648

### Hospital & Medical Jobs

**Phlebotomist Vacancy**
DoctorC is hiring for Home collections in Bangalore
EXPERIENCE 6 months using vacutainers OR 1 month experience in collecting Covid samples
QUALIFICATION DMLT / BSC MLT / BSC Nursing
Call at 6281708684

### Office Boys/ Peon

**REQUIRED IMMEDIATELY** OFFICE BOY -2wheeler driving, Bachelor Room Provided, Good salary, Around Malleshwaram Contact: 9663383127/ 9620323323

### Security & Detectives

**WANTED MALE/FEMALE** SECURITY GUARDS For S-VYASA YOGA UNIVERSITY, Bangalore. Free Food and accommodation provided. Contact A.O: 7411389754. Email: hrdesk@svyasa.org

## AUTOMOTIVE

### Four Wheelers Selling

### Honda

**ACCIDENT DAMAGED** WRV 1.5 VXMT BS IV/2017 KA-06 P 7898 is For Sale without RC. Contact: 9844048926




## BUSINESS

### Business to Business

### Construction And Maintenance

**CONSTRUCTION OF** YOUR Dream House/ Villa- Renovation, Extension Floor Work etc with good Materials- 9353082981.

**A2Z BUILDING** Materials (Wholesale Price) & New Building Construction & Demolition & Interior Works & A2Z Crusher Materials. shanenterprises25@gmail.com CALL: 7349237786, 7349247786

**WE CONSTRUCT** any type of buildings anywhere and also rent the same call 7026375404 Bangalore

### Services

**OPPORTUNITY TO** Earn 1.50 Lacs Per Month, If You Own Space 2000 To 5000 SquareFeet In Prime Business Locality In Bengaluru Without Disturbing Your PresentActivity. For Details Email To : corprentals123@gmail.com

### Business Offers

### Agents Wanted

**WANTED PROMOTERS** Dealers Marketing Staff for Unique Healthy Consumer Products Contact: 9448041257

### General

**EARN DAILY** income through small investment in Real Estate, Resorts, Timeshare, Sharemarket, Crypto trading, Export & Imports, Movies, Media, E-commerce, Kirana, Tours and Travels. 7659977788, 8374332116.

**IS_YOUR_BUSINESS DOING** very good but you want to retire? To sell your business or to take_over your business or to find a good partner for your Business. Call-Arun. 9845077299

## MATRIMONIAL

### Brides Wanted

### Hindu

**CASTE NO** BAR. Myself Vegetarian 38 own house, engineer MNC Bangalore seeks vegetarian educated business/police/lawyer/ teacher partner. 8431100739. srininag82@gmail.com

### Matrimonial Bureaus

**ವೈವಾಹಿಕ**
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸುಮ ಗೋಪಾಲಕೃಷ್ಣ ದೂರವಾಣಿ: 9886908152

## PERSONAL

### Change of Name

**I, GEETHA.V.S** aged about 59 years, W/o. Mr. Shivanna, residing at No.177, 7th Cross, Ranganatha Colony, Mysore Road, Bangalore-560026 have changed my name to GEETHAMMA vide affidavit dated 30-03-2021 before G.S Susheela, Notary

**POORNANITHI GAYATHRI** W/o 14846313P- NK/MT- D C KRISHNAN R/a 2x/56, Kalainger Nagar, Thuthipet, Ambur, Vellore changed name from POORNANITHI GAYATHRI to C GAYATHRI notary KV Mani Bangalore.

**D SUJATHA** W/o 14827517M- NK/MT- PICHAI KARAN S R/a 4-74/4, Vadakku Kollaimedu, Munjurpattu, Vellore changed name from D SUJATHA to SUJATHA P notary KV Mani Bangalore.

**I, GEETHA** MRUTHYUNJAYA SWAMY have changed my name to GEETHA vide affidavit dated: 2/4/2021 Before Notary C.Srinivas Bangalore

## SOCIAL SERVICES

### Old Age Home

**LUXURY SENIOR** Citizen Homes for Ladies Independent Attached Bathroom Nemmadi Mane Foundation in Rajajinagar: 9341494200

MORE Classifieds IN SUPPLEMENT

ಮತ್ತೆ ಜಿಮ್‌ಗಳು ಬಂದ್ • ಮಾಲೀಕರು ಕಂಗಾಲು • ಬೀದಿಗೆ ಬೀಳುವ ಆತಂಕ

# ‘ನಮಗೆ ಒಂಚೂರು ವಿಷ ಕೊಟ್ಟುಬಿಡಿ’

• ಜಿ.ಶಿವಕುಮಾರ

ಬೆಂಗಳೂರು: ‘ಲಾಕ್‌ಡೌನ್‌ನಿಂದಾಗಿ ಬದುಕು ಬೀದಿಗೆ ಬಿದ್ದಿತ್ತು. ಆ ಆಘಾತದಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಸರ್ಕಾರ ಮತ್ತೆ ಜಿಮ್‌ಗಳ ಬಾಗಿಲು ಮುಚ್ಚಿಸಿದೆ. ಆ ಮೂಲಕ ಗಾಯದ ಮೇಲೆ ಬರೆ ಎಳೆದಿದೆ. ಆಳುವವರು ಹಾಗೂ ಅಧಿಕಾರಿಗಳ ದಿಢೀರ್ ನಿರ್ಧಾರದಿಂದ ದಿಕ್ಕೇ ತೋಚದಂತಾಗಿದೆ. ಸರ್ಕಾರವು ನಮ್ಮನ್ನು ಮಾನಸಿಕವಾಗಿ ಹಿಂಸಿಸುವ ಬದಲು ಒಂಚೂರು ವಿಷ ಕೊಟ್ಟುಬಿಡಲಿ’...

ಹೀಗೆಂದು ಅಳಲು ತೋಡಿಕೊಂಡಿದ್ದಾರೆ ಉದ್ಯಾನನಗರಿಯ ಜಿಮ್‌ಗಳ ಮಾಲೀಕರು.

ಕೋವಿಡ್ ಎರಡನೇ ಅಲೆ ವ್ಯಾಪಿಸುತ್ತಿದೆ. ಅದಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಸರ್ಕಾರ ಶುಕ್ರವಾರ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆಮಾಡಿದೆ. ಎಲ್ಲಾ ಜಿಮ್‌ಗಳನ್ನು ಮುಚ್ಚುವಂತೆ ಆದೇಶಿಸಿದೆ. ಸರ್ಕಾರದ ಈ ನಿರ್ಧಾರದಿಂದ ಜಿಮ್ ಮಾಲೀಕರು ಕಂಗಾಲಾಗಿದ್ದಾರೆ.

‘ಬ್ಯಾಂಕ್‌ನಿಂದ ₹20 ಲಕ್ಷ ಸಾಲ ಪಡೆದು ಜಿಮ್ ಆರಂಭಿಸಿದ್ದೇನೆ. ನಮ್ಮದು ಎಂಟು ಸದಸ್ಯರಿರುವ ಕುಟುಂಬ. ಜಿಮ್‌ನಿಂದ ಬರುವ ಆದಾಯವೇ ನಮ್ಮ ಬದುಕಿಗೆ ಆಧಾರ. ಲಾಕ್‌ಡೌನ್ ಸಂದರ್ಭದಲ್ಲಿ ನಾಲ್ಕು ತಿಂಗಳು ಜಿಮ್‌ಗೆ ಬೀಗ ಬಿದ್ದಿತ್ತು. ಆ ಸಮಯದಲ್ಲಿ ಹೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಸರ್ಕಾರ ನಿರ್ಬಂಧ ಸಡಿಲಿಸಿದರು ಕೂಡ ಜನ ಜಿಮ್‌ಗಳಿಗೆ ಬರಲು ಹೆದರುತ್ತಿದ್ದರು. ಕ್ರಮೇಣ ಆ ಮನಸ್ಥಿತಿ ಬದಲಾಗಿತ್ತು. ಜನವರಿಯಲ್ಲಿ ಸಾಕಷ್ಟು ಮಂದಿ ಜಿಮ್ ಸೇರಿದ್ದರು. ಇದರಿಂದ ಬಂದ ಹಣದಿಂದ ನವೆಂಬರ್ ಹಾಗೂ ಡಿಸೆಂಬರ್ ತಿಂಗಳ ಬಾಡಿಗೆ ಕಟ್ಟಿದ್ದೆ. ಬದುಕು ಹಳಿಗೆ ಮರಳುತ್ತಿದೆ ಎಂದುಕೊಳ್ಳುತ್ತಿರುವಾಗಲೇ ಸರ್ಕಾರ ಮತ್ತೆ ಜಿಮ್‌ಗಳಿಗೆ ಬೀಗ ಹಾಕುವಂತೆ ಆದೇಶಿಸಿದೆ. ಇದರಿಂದ ನಾವು ಮತ್ತಷ್ಟು ತೊಂದರೆಗೆ ಸಿಲುಕುವಂತಾಗಿದೆ’ ಎಂದು ಶ್ರೀನಿವಾಸನಗರದಲ್ಲಿರುವ ಫಿಟ್ ಆ್ಯಂಡ್ ಫಿಸಿಕ್ ಜಿಮ್ ಮಾಲೀಕ ನಾಗಭೂಷಣ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾನು ಮಾಸಿಕ ₹50 ಸಾವಿರ ಬಾಡಿಗೆ ಕಟ್ಟುತ್ತಿದ್ದೇನೆ. ತಿಂಗಳ ಮೊದಲ ದಿನದಿಂದಲೇ ಕಟ್ಟಡದ ಮಾಲೀಕರಿಂದ ಮೊಬೈಲ್‌ಗೆ ಕರೆ ಬರುತ್ತದೆ. ಬಾಡಿಗೆ ಕಟ್ಟುವಂತೆ ದಿನವೂ ಪೀಡಿಸುತ್ತಾರೆ. ಮನೆಯಲ್ಲಿದ್ದ ಚಿನ್ನ ಅಡವಿಟ್ಟು ಜನವರಿ ಮತ್ತು ಫೆಬ್ರುವರಿ ತಿಂಗಳ ಬಾಡಿಗೆ ಕಟ್ಟಿದ್ದೇನೆ. ಮಾರ್ಚ್ ತಿಂಗಳ ಬಾಡಿಗೆ ಕೊಡುವಂತೆ ಬೆನ್ನು ಬಿದ್ದಿದ್ದಾರೆ. ಈಗ ಅವರಿಗೆ ಎಲ್ಲಿಂದ ದುಡ್ಡು ಕೊಡಲಿ. ಬ್ಯಾಂಕ್ ಸಾಲ ಹೇಗೆ ತೀರಿಸಲಿ’ ಎಂದು ಪ್ರಶ್ನಿಸಿದರು.

‘ಈಗ ಜನ ಜಿಮ್‌ಗಳತ್ತ ಮುಖ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲೇ ಜಿಮ್ ಮುಚ್ಚಿಸಿರುವುದರಿಂದ ನಮಗೆ ತುಂಬಾ ನಷ್ಟವಾಗುತ್ತದೆ. ಪಬ್, ಬಾರ್, ಕ್ಲಬ್ ಹಾಗೂ ರೆಸ್ಟೋರೆಂಟ್‌ಗಳಿಗೆ ಶೇ 50ರಷ್ಟು ಜನರ ಮಿತಿ ಹೇರಲಾಗಿದೆ. ಈ ವಿಚಾರದಲ್ಲಿ ನಮಗೆ ಅನ್ಯಾಯ ಮಾಡಲಾಗಿದೆ’ ಎಂದು ಮುನೇಶ್ವರ ಬ್ಲಾಕ್‌ನ ಎನ್‌.ಡಿ.ರವಿಕುಮಾರ್ ದೂರಿದರು.


ಪ್ರಾತಿನಿಧಿಕ ಚಿತ್ರ

**ಮಾಡೆಲಿಂಗ್ ಮಾಡುವವರು ದೇಹ ದಂಡಿಸಿ ಅಂಗಸೌಷ್ಠವ ಕಾಪಾಡುತ್ತಾರೆ. ಜಿಮ್‌ನಿಂದ ದೂರ ಉಳಿದರೆ ತೂಕ ಹೆಚ್ಚಬಹುದು. ಕಂಪನಿಗಳು ಒಪ್ಪಂದ ರದ್ದು ಮಾಡಬಹುದು. ಸರ್ಕಾರ ನಿರ್ಧಾರ ಮರುಪರಿಶೀಲಿಸಲಿ**

**ಸುಮನ್ ಚಂದ್ರಶೇಖರ್,** ತರಬೇತುದಾರ

**ಕೋವಿಡ್ ನಿಯಂತ್ರಣಕ್ಕಾಗಿ ಜಿಮ್‌ಗಳನ್ನು ಮುಚ್ಚಿಸುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ. ನಮ್ಮ ಜೀವನವೂ ಸಾಗಬೇಕಲ್ಲ. ಇದನ್ನು ಗಮನದಲ್ಲಿರಿಸಿ ಜಿಮ್ ಮಾಲೀಕರಿಗೆ ವಿಶೇಷ ಪ್ಯಾಕೇಜ್ ಪ್ರಕಟಿಸಲಿ**

**ಎ.ವಿ.ರವಿ,** ಕರ್ನಾಟಕ ಜಿಮ್ ಮಾಲೀಕರ ಸಂಘದ ಅಧ್ಯಕ್ಷ

## ‘ಜಿಮ್‌ಗೆ ಹೋದವರಲ್ಲಿ ಕೋವಿಡ್ ಕಾಣಿಸಿಕೊಂಡಿಲ್ಲ’

‘ರಾಜ್ಯದಲ್ಲಿ ಒಟ್ಟು 10 ಸಾವಿರ ಜಿಮ್‌ಗಳಿವೆ. ಈ ಪೈಕಿ 9 ಸಾವಿರ ಜಿಮ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಅವರು ತಿಂಗಳಿಗೆ ₹1 ಲಕ್ಷದಿಂದ₹2 ಲಕ್ಷದವರೆಗೆ ಬಾಡಿಗೆ ಕಟ್ಟಬೇಕು. ಸರ್ಕಾರ ಏಕಾಏಕಿಯಾಗಿ ಜಿಮ್‌ಗಳನ್ನು ಮುಚ್ಚುವಂತೆ ಆದೇಶಿಸಿದರೆ ಅವರು ಬಾಡಿಗೆ ಕೊಡುವುದು ಹೇಗೆ. ತರಬೇತುದಾರರಿಗೆ ಎಲ್ಲಿಂದ ಸಂಬಳ ಕೊಡಬೇಕು’ ಎಂದು ಕರ್ನಾಟಕ ಜಿಮ್ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಎ.ವಿ.ರವಿ ಪ್ರಶ್ನಿಸಿದರು.

‘ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರವು ಜಿಮ್ ಮಾಲೀಕರಿಗೆ ಯಾವ ನೆರವನ್ನೂ ನೀಡಿರಲಿಲ್ಲ. ಹಾಗಿದ್ದರೂ ಎಲ್ಲರೂ ಹೇಗೋ ಜೀವನ ಸಾಗಿಸಿದರು. ಜಿಮ್ ಆರಂಭವಾದಾಗಿನಿಂದಲೂ ನಾವು ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದೇವೆ. ಜಿಮ್‌ಗೆ ಬರುವವರೆಲ್ಲಾ ವಿದ್ಯಾವಂತರು. ಅವರು ಅಂತರ ಕಾಪಾಡಿಕೊಂಡೇ ವ್ಯಾಯಾಮ ಮಾಡುತ್ತಾರೆ. ಜಿಮ್‌ಗೆ ಬಂದವರ ಪೈಕಿ ಯಾರೊಬ್ಬರಿಗೂ ಕೋವಿಡ್ ಬಂದಿಲ್ಲ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು’ ಎಂದು ಹೇಳಿದರು.


‘ನಾವು ಆದಾಯ ತೆರಿಗೆ ಪಾವತಿಸುತ್ತಿದ್ದೇವೆ. ನಮ್ಮಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ಹಣ ಸಂದಾಯವಾಗುತ್ತದೆ’ ಎಂದರು.

## ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**4,44,244** ಒಟ್ಟು ಸೋಂಕಿತರು

**4,13,058** ಗುಣಮುಖರಾದವರು

**26,544** ಸಕ್ರಿಯ ಪ್ರಕರಣ




**ಶನಿವಾರದ ಏರಿಕೆ**

**3,002** ದೃಢಪಟ್ಟ ಪ್ರಕರಣ

**1,052** ಗುಣಮುಖ

**06** ಸಾವು

# ಈ ಬಾರಿಯೂ ಕಳೆ ಇಲ್ಲದ ಕರಗ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ಪ್ರಸಿದ್ಧ ಕರಗ ಮಹೋತ್ಸವವು ಈ ಬಾರಿಯೂ ಕಳೆಗುಂದುವ ಸಾಧ್ಯತೆ ಇದೆ. ಕೊರೊನಾ ಎರಡನೇ ಅಲೆ ಪ್ರಾರಂಭವಾಗಿರುವುದರಿಂದ ಉತ್ಸವವನ್ನು ದೇವಸ್ಥಾನದ ಆವರಣಕ್ಕೆ ಸೀಮಿತಗೊಳಿಸುವ ಸಾಧ್ಯತೆ ನಿಚ್ಚಳವಾಗಿದೆ.

ಈ ವರ್ಷ ಕರಗ ಪೂಜಾ ಕಾರ್ಯಕ್ರಮಗಳು ಏ.18ರಿಂದ ಪ್ರಾರಂಭವಾಗಿ ಏ. 27ಕ್ಕೆ ಪೂರ್ಣಗೊಳ್ಳಬೇಕಿದೆ. ಆದರೆ, ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ನಿತ್ಯ 3,500ಕ್ಕೂ ಅಧಿಕ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಕೊರೊನಾ ಸೋಂಕು ಹೆಚ್ಚಳವಾಗುತ್ತಿರುವುದರಿಂದ ಈ ಬಾರಿಯೂ ಸರಳವಾಗಿ ಕರಗ ಮಹೋತ್ಸವ ನಡೆಯುವ ಸಾಧ್ಯತೆ ಇದೆ.

ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಅರ್ಚಕ ರಾಮಚಂದ್ರ ‘ಈ ಬಾರಿ ದೇವಸ್ಥಾನದ ಮಟ್ಟಿಗೆ ಮತ್ತು ದೇವಸ್ಥಾನದ ಸುತ್ತಮುತ್ತದ ರಸ್ತೆಗೆ ಸೀಮಿತವಾಗುವಂತೆ ಕರಗ ಆಚರಣೆಗೆ ಸರ್ಕಾರ ಅವಕಾಶ ಮಾಡಿಕೊಡಬೇಕು’ ಎಂದು ಮನವಿ ಮಾಡಿದರು.

ಈ ಸಂಬಂಧ ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಕೂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

**ಸಭೆ ನಾಳೆ:** ನಗರದಲ್ಲಿ ಕರಗ ಮಹೋತ್ಸವ ಆಚರಣೆ ಮಾಡುವುದಕ್ಕೆ ಯಾವ ತೀರ್ಮಾನ ತೆಗೆದುಕೊಳ್ಳಬೇಕು ಹಾಗೂ ಆಚರಣೆ ಮಾಡಲು ಅವಕಾಶ ಕೊಟ್ಟರೆ ಯಾವ ಕ್ರಮ ಅನುಸರಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೋಮವಾರ (ಏ.5) ವಿಶೇಷ ಸಭೆ ಕರೆದಿದ್ದಾರೆ.

ಸ್ಥಳೀಯ ಶಾಸಕರು, ಸಂಸದರು ಹಾಗೂ ಧರ್ಮರಾಯ ಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

## ಮಹಾರಾಷ್ಟ್ರದಲ್ಲಿ 1ರಿಂದ 8ನೇ ತರಗತಿ ಪರೀಕ್ಷೆ ರದ್ದು

ಮುಂಬೈ: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಮಹಾರಾಷ್ಟ್ರದಲ್ಲಿ 1ರಿಂದ 8ನೇ ತರಗತಿಯವರೆಗೆ ವಾರ್ಷಿಕ ಪರೀಕ್ಷೆ ನಡೆಸದೇ ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗೆ ಬಡ್ತಿ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.



9 ಮತ್ತು 11ನೇ ತರಗತಿ ಕುರಿತು ನಂತರ ತೀರ್ಮಾನಿಸಲಾಗುತ್ತದೆ. 10 ಮತ್ತು 12ನೇ ತರಗತಿಯ ಮುಖ್ಯ ಪರೀಕ್ಷೆಗಳು ಈ ತಿಂಗಳ ಅಂತ್ಯದಲ್ಲಿ ಆರಂಭವಾಗಲಿದ್ದು, ಮೇ ಅಂತ್ಯಕ್ಕೆ ಪೂರ್ಣಗೊಳ್ಳಲಿವೆ ಎಂದು ಶಿಕ್ಷಣ ಸಚಿವರಾದ ವರ್ಷಾ ಗಾಯಕ್ವಾಡ್ ಅವರು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಲಸಿಕೆ ಪಡೆಯುವಂತೆ ಮಣಿಪಾಲ ಆಸ್ಪತ್ರೆಗಳ ವೈದ್ಯರ ಕಿವಿಮಾತು

# ಕೋವಿಡ್ 2ನೇ ಅಲೆ: ಭಯ ಬೇಡ, ಎಚ್ಚರ ಇರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಎರಡನೇ ಅಲೆಯ ಬಗ್ಗೆ ಭಯ ಪಡುವುದರ ಬದಲು ಮುನ್ನೆಚ್ಚರಿಕಾ ಕ್ರಮ ಅನುಸರಿಸಬೇಕು. ಈಗ ಯುವಜನರೇ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ. ಮನೆಯ ಹಿರಿಯರಿಗೆ ಮತ್ತು ಮಕ್ಕಳಿಗೆ ಸೋಂಕು ಹರಡದಂತೆ ಅವರು ಎಚ್ಚರ ವಹಿಸಬೇಕು’ ಎಂದು ಮಣಿಪಾಲ ಆಸ್ಪತ್ರೆಯ ವೈದ್ಯರು ಕಿವಿ ಮಾತು ಹೇಳಿದರು.

ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಣಿಪಾಲ ಆಸ್ಪತ್ರೆಗಳ ಸಮೂಹವು ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಶನಿವಾರ ಆಯೋಜಿಸಿದ ವಿಚಾರಸಂಕಿರಣದಲ್ಲಿ ಕೋವಿಡ್ ಎರಡನೇ ಅಲೆ, ಲಸಿಕೆ ಕುರಿತು ವಿವಿಧ ವಲಯಗಳ ಪ್ರತಿನಿಧಿಗಳು ಮಾತನಾಡಿದರು.

‘ಕೋವಿಡ್ ಹರಡುವಿಕೆ ತಡೆಗೆ ಹಾಗೂ ಹಿರಿಯ ನಾಗರಿಕರು ಸೇರಿದಂತೆ ವಿವಿಧ ದುರ್ಬಲ ವರ್ಗದವರ ರಕ್ಷಣೆಗೆ ಲಸಿಕೆ ಸಹಕಾರಿ. ಗೊತ್ತುಪಡಿಸಿರುವ ಎಲ್ಲ ಫಲಾನುಭವಿಗಳಿಗೆ ಲಸಿಕೆ ಸುಲಭವಾಗಿ ಸಿಗಬೇಕು. ಅಪಾರ್ಟ್‌ಮೆಂಟ್ ಸಮುಚ್ಚಯಗಳೂ ಸೇರಿದಂತೆ ವಿವಿಧೆಡೆ ವಿಶೇಷ ಶಿಬಿರಗಳನ್ನು ಆಯೋಜಿಸಿ, ಲಸಿಕೆ ಒದಗಿಸುವ ಕ್ರಮ ಕೈಗೊಳ್ಳಬೇಕು’ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಮಣಿಪಾಲ ಆಸ್ಪತ್ರೆಗಳ ನಿರ್ದೇಶಕ ಡಾ. ಮನೀಶ್ ರೈ, ‘ಹಿರಿಯ ನಾಗರಿಕರು ಹಾಗೂ ಸಹವರ್ತಿ ಕಾಯಿಲೆಪೀಡಿತರು ಆದಷ್ಟು ಬೇಗ ಲಸಿಕೆ ಪಡೆಯಬೇಕು. ಮಣಿಪಾಲ ಆಸ್ಪತ್ರೆಯು ವಿಶೇಷ ಶಿಬಿರಗಳನ್ನು ಆಯೋಜಿಸುವ ಮೂಲಕ ಫಲಾನುಭವಿಗಳಿಗೆ ನೆರವಾಗಲಿದೆ’ ಎಂದು ತಿಳಿಸಿದರು.

ರುಸ್ತುಂಬಾಗ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷೆ ಪೂರ್ಣಿಮಾ ಶೆಟ್ಟಿ, ‘ಮನೆಯ ಕೆಲಸಗಾರರು, ರಕ್ಷಣಾ ಸಿಬ್ಬಂದಿ, ಅಡುಗೆಯವರು ಸೇರಿದಂತೆ ವಿವಿಧ ವರ್ಗದವರಲ್ಲಿ ಲಸಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಬೇಕು. ಅಪಪ್ರಚಾರಗಳಿಗೆ ಕಿವಿಗೊಡಬಾರದು’ ಎಂದು ಮನವಿ ಮಾಡಿಕೊಂಡರು.

**ಗೋಚರಿಸದ ಲಕ್ಷಣ:** ಮನ್ನತ್ ಫರ್ಟಿಲಿಟಿ ಕ್ಲಿನಿಕ್‌ನ ವೈದ್ಯೆ ಡಾ. ಅರ್ಚನಾ ಅಗರ್ವಾಲ್, ‘ಇತ್ತೀಚೆಗೆ ಯುವಜನರೇ ಹೆಚ್ಚಾಗಿ ಸೋಂಕಿತರಾಗುತ್ತಿದ್ದಾರೆ. ವರದಿಯಾಗುತ್ತಿರುವ ಬಹುತೇಕ ಪ್ರಕರಣಗಳಲ್ಲಿ ಸೋಂಕಿನ ಲಕ್ಷಣಗಳೂ ಗೋಚರಿಸುತ್ತಿಲ್ಲ. ಇದರಿಂದ ಮನೆಯ ಹಿರಿಯ ಸದಸ್ಯರು ಕೂಡ ಕೋವಿಡ್ ಪೀಡಿತರಾಗುವ ಸಾಧ್ಯತೆ ಅಧಿಕ. ಮನೆ ಕೆಲಸ ಮಾಡುವವರಿಂದಲೂ ಸೋಂಕು ಹರಡುವ ಸಾಧ್ಯತೆ ಇದೆ. ದಿನಗೂಲಿ ನೌಕರರು ವೇತನವನ್ನು ಕಳೆದುಕೊಳ್ಳುವ ಭಯದಲ್ಲಿ ಅನಾರೋಗ್ಯವಿದ್ದರೂ ಕೆಲಸ ನಿರ್ವಹಿಸುತ್ತಿದ್ದಾರೆ. ಇದರಿಂದಲೂ ಸಮಸ್ಯೆ ಉಂಟಾಗುತ್ತದೆ’ ಎಂದು ಹೇಳಿದರು.

ಅಲ್ ಅಮೀನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಡಾ. ಸರ್ತಾಜ್ ಖಾನ್, ‘ಕೋವಿಡ್ ವಿರುದ್ಧದ ಎಲ್ಲರೂ ಒಟ್ಟಾಗಿ ಹೋರಾಡಬೇಕು. ಹಿರಿಯ ನಾಗರಿಕರು ಸೇರಿದಂತೆ ಸೋಂಕು ಹೆಚ್ಚು ಅಪಾಯವನ್ನುಂಟು ಮಾಡುವ ವರ್ಗದವರಿಗೆ ಸೂಕ್ತ ರಕ್ಷಣೆ ಹಾಗೂ ನೆರವನ್ನು ಒದಗಿಸಬೇಕು’ ಎಂದರು.

ಮಣಿಪಾಲ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ.ಲಿ.ನ ಪ್ರಾದೇಶಿಕ ಮುಖ್ಯ ಕಾರ್ಯಾಚರಣೆ ಅಧಿಕಾರಿ ದೀಪಕ್ ವೇಣುಗೋಪಾಲನ್, ವೈಟ್‌ಫೀಲ್ಡ್ ಮಣಿಪಾಲ್ ಆಸ್ಪತ್ರೆಯ ನಿರ್ದೇಶಕ ಅರ್ನಬ್ ಮೊಂಡಾಲ್, ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ವಿಕ್ರಮ್ ರೈ, ‘ಐ ಚೇಂಜ್ ಇಂದಿರಾನಗರ’ದ ಕೋವಿಡ್ ಉಸ್ತುವಾರಿ ಸತೀಶ್ ರಾವ್ ಹಾಗೂ ವಿವಿಧ ಅಪಾರ್ಟ್‌ಮೆಂಟ್ ಸಮುಚ್ಚಯದ ಮುಖ್ಯಸ್ಥರು ಇದ್ದರು.

## ‘ಮುಖಗವಸು, ಅಂತರದಿಂದ ರಕ್ಷಣೆ’

‘ಕೋವಿಡ್ ಲಸಿಕೆ ಬಂದರೂ ಮುಖವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆಯನ್ನು ಮುಂದುವರಿಸಬೇಕು. ಹಲವಾರು ಸೋಂಕಿತರಿಗೆ ಚಿಕಿತ್ಸೆ ಒದಗಿಸಿದ್ದೇನೆ. ವೈಯಕ್ತಿಕ ಸುರಕ್ಷತಾ ಸಾಧನಗಳನ್ನು (ಪಿಪಿಇ ಕಿಟ್) ಧರಿಸಿದ್ದ ಕಾರಣ ಸೋಂಕು ನನಗೆ ತಗುಲಿಲ್ಲ. ಮುಖಗವಸು ಧರಿಸುವುದರಿಂದ ಸೋಂಕು ಹರಡುವಿಕೆ ತಡೆಯಬಹುದು’ ಎಂದು ಮಣಿಪಾಲ ಆಸ್ಪತ್ರೆಯ ಶ್ವಾಸಕೋಶ ಶಾಸ್ತ್ರಜ್ಞ ಡಾ. ಸತ್ಯನಾರಾಯಣ ಮೈಸೂರು ತಿಳಿಸಿದರು.

‘ಕೋವಿಡ್ ಮೊದಲ ಅಲೆ ಕಾಣಿಸಿಕೊಂಡಾಗ ಲಾಕ್‌ಡೌನ್ ಜಾರಿ ಮಾಡಿದ ಕಾರಣ ಪ್ರಕರಣಗಳು ಗರಿಷ್ಠ ಸಂಖ್ಯೆ ತಲುಪಲು ದೀರ್ಘಾವಧಿ ಬೇಕಾಯಿತು. ಈಗ ಲಾಕ್‌ಡೌನ್ ಘೋಷಿಸದ ಕಾರಣ ಪ್ರಕರಣಗಳು ವೇಗವಾಗಿ ಹೆಚ್ಚಳವಾಗಲಿವೆ. ಅಷ್ಟಕ್ಕೂ ಯಾರಿಗೂ ಲಾಕ್‌ಡೌನ್ ಬೇಕಾಗಿಲ್ಲ’ ಎಂದರು.

## ಕೊಡಗು ಪ್ರವಾಸಿ ತಾಣಗಳಿಗೆ ಪ್ರವೇಶ ನಿಷೇಧ

ಮಡಿಕೇರಿ: ಕೊಡಗು ಜಿಲ್ಲೆಯಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ, ಏ.20ರ ತನಕ ಜಿಲ್ಲೆಯ ಎಲ್ಲ ಪ್ರವಾಸಿ ತಾಣಗಳಿಗೆ ಪ್ರವೇಶ ನಿಷೇಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಶನಿವಾರ ಆದೇಶಿಸಿದ್ದಾರೆ.

ರಾಜಾಸೀಟ್, ಮಾಂದಲ್‌ಪಟ್ಟಿ, ತಲಕಾವೇರಿ, ಅಬ್ಬಿ ಹಾಗೂ ಇರ್ಪು ಜಲಪಾತ, ರಾಜರ ಗದ್ದುಗೆ, ದುಬಾರೆ, ಕಾವೇರಿ ನಿಸರ್ಗಧಾಮಕ್ಕೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಭೇಟಿ ನಿಷೇಧಿಸಲಾಗಿದೆ. ಆದೇಶ ಉಲ್ಲಂಘಿಸಿದರೆ, ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದ್ದಾರೆ.

## ನಿಯಮ ಉಲ್ಲಂಘನೆ: ತರಬೇತಿ ಸಂಸ್ಥೆ ಸ್ಥಗಿತ

ಬೆಂಗಳೂರು: ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಕ್ಯೂಸ್ಪೈಡರ್ ಸಾಫ್ಟ್‌ವೇರ್ ತರಬೇತಿ ಸಂಸ್ಥೆಯನ್ನು ಸ್ಥಗಿತಗೊಳಿಸಿ ಬಿಬಿಎಂಪಿ ಆದೇಶಿಸಿದೆ.

‘ಮಾಸ್ಕ್ ಧರಿಸದೆ, ನಿರ್ದಿಷ್ಟ ಅಂತರ ಕಾಯ್ದುಕೊಳ್ಳದೆ ಶೈಕ್ಷಣಿಕ ತರಗತಿ ನಡೆಸುತ್ತಿದ್ದುದರಿಂದ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಬಿಬಿಎಂಪಿ ಆರೋಗ್ಯ ವೈದ್ಯಾಧಿಕಾರಿ ಡಾ. ಮಂಜುಳಾ ಹೇಳಿದ್ದಾರೆ.

‘ರಾಜಾಜಿನಗರ 3ನೇ ಬ್ಲಾಕ್‌ನಲ್ಲಿರುವ ಈ ಸಂಸ್ಥೆಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿತ್ತು. ಮಾಸ್ಕ್ ಧರಿಸಿರದ ಮೂವರು ವಿದ್ಯಾರ್ಥಿಗಳಿಗೆ ₹750 ದಂಡ ವಿಧಿಸಲಾಗಿದೆ. ಸಂಸ್ಥೆಗೆ ನೋಟೀಸ್ ನೀಡಲಾಗಿದ್ದು, ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲು ಸೂಚನೆ ನೀಡಲಾಗಿದೆ’ ಎಂದು ಅವರು ತಿಳಿಸಿದ್ದಾರೆ.


ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದ ಸಾರಿಗೆ ಸಂಸ್ಥೆಗಳ ನೌಕರರು –ಪ್ರಜಾವಾಣಿ ಚಿತ್ರ

ಮುಷ್ಕರಕ್ಕೆ ಬೆಂಬಲ ಕೋರಿಕೆ

# ಸಾರಿಗೆ ನೌಕರರಿಂದ ಭಿತ್ತಿಪತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ವೇತನ ಆಯೋಗದ ಶಿಫಾರಸು ಅನ್ವಯಗೊಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಸಾರಿಗೆ ನೌಕರರು, ಶನಿವಾರ ಅಲ್ಲಲ್ಲಿ ಭಿತ್ತಿಪತ್ರಗಳ ಪ್ರದರ್ಶನ ಮಾಡಿ ಗಮನ ಸೆಳೆದರು.

ಮೆಜೆಸ್ಟಿಕ್ ಸೇರಿ ಪ್ರಮುಖ ಬಸ್ ನಿಲ್ದಾಣ, ಡಿಪೊಗಳು ಹಾಗೂ ಪ್ರಮುಖ ಸ್ಥಳಗಳಲ್ಲಿ ‘ಸಾರ್ವಜನಿಕರೇ ಕ್ಷಮಿಸಿ, ಸರ್ಕಾರ ನಮಗೆ ನೀಡಿದ ಭರವಸೆ ಮರೆತಿದೆ’, ‘6ನೇ ವೇತನ ಆಯೋಗದ ಆದೇಶ– ಸಾರಿಗೆ ನೌಕರರಿಗೆ ವಿಕಾಸ’, ‘ವೇತನ ಮತ್ತು ಸವಲತ್ತುಗಳಲ್ಲಿ ತಾರತಮ್ಯ ಆಗುತ್ತಿದೆ’, ‘ಸಾರಿಗೆ ನೌಕರರ ಸಮರಕ್ಕೂ ಸಿದ್ಧ, ಸಾವಿಗೂ ಸಿದ್ಧ’ ಎಂಬ ಭಿತ್ತಿಪತ್ರಗಳನ್ನು ನೌಕರರು ಪ್ರದರ್ಶಿಸಿದರು. ನಿಲ್ದಾಣಕ್ಕೆ ಬರುವ ಪ್ರಯಾಣಿಕರಿಗೆ ಕರಪತ್ರಗಳನ್ನು ಹಂಚಿ, ಹೋರಾಟ ಬೆಂಬಲಿಸುವಂತೆ ಮನವಿ ಮಾಡಿದರು.

‘ಸಿಬ್ಬಂದಿ ಸಾರಿಗೆ ನಿಗಮಗಳ ಎಲ್ಲಾ ಡಿಪೊಗಳಲ್ಲಿ ಭಾನುವಾರ ಧರಣಿ ನಡೆಸಲಿದ್ದಾರೆ. ಏ. 6ರಂದು ನೌಕರರು ಹಾಗೂ ಕುಟುಂಬದ ಸದಸ್ಯರೊಂದಿಗೆ ಸಾಮೂಹಿಕ ಉಪವಾಸ ಸತ್ಯಾಗ್ರಹ ಮಾಡಲಿದ್ದಾರೆ. 7ರಿಂದ ಬಸ್ ಸಂಚಾರ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತದೆ’ ಎಂದು ಸಾರಿಗೆ ನೌಕರರ ಕೂಟ ತಿಳಿಸಿದೆ.

## ‘ಸಕಾಲ, ಭೂ ದಾಖಲಾತಿ ಜವಾಬ್ದಾರಿ ಖಾಸಗಿಯವರಿಗೆ’

ಪ್ರಜಾವಾಣಿ ವಾರ್ತೆ

ಮಾಗಡಿ: ಜನಸಾಮಾನ್ಯರಿಗೆ ಸುಲಭ ಮತ್ತು ಶೀಘ್ರವಾಗಿ ಭೂಮಿ ಮತ್ತು ಇತರ ದಾಖಲಾತಿಗಳು ದೊರೆಯಲಿ ಎಂಬ ಉದ್ದೇಶದಿಂದ ಸಕಾಲ ನಿರ್ವಹಣೆ ಮತ್ತು ಭೂದಾಖಲಾತಿಗಳ ವಿತರಣೆ ಜವಾಬ್ದಾರಿಯನ್ನು ಖಾಸಗಿಯವರಿಗೆ ವಹಿಸುವ ಆಲೋಚನೆ ಇದೆ ಎಂದು ರಾಜ್ಯ ಆಡಳಿತ ಸುಧಾರಣಾ ಸಮಿತಿ ಅಧ್ಯಕ್ಷ ಟಿ.ಎಂ.ವಿಜಯ ಭಾಸ್ಕರ್ ತಿಳಿಸಿದರು.

ಸೋಲೂರು ರಾಜಸ್ವ ನಿರೀಕ್ಷರ ಕಾರ್ಯಾಲಯ, ಪಂಚಾಯಿತಿ ಕೇಂದ್ರ, ಸೈಬರ್ ಕೇಂದ್ರಗಳಿಗೆ ಶನಿವಾರ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರಿಗೆ ಅವರು ಈ ವಿಷಯ ತಿಳಿಸಿದರು.

ಪಹಣಿ, ಜನನ, ಮರಣ ಪ್ರಮಾಣ ಪತ್ರ ಸೇರಿದಂತೆ ಕಂದಾಯ, ಭೂಮಾಪನಾ, ಗ್ರಾಮ ಪಂಚಾಯಿತಿ ಮತ್ತು ಇತರ ಸರ್ಕಾರಿ ಇಲಾಖೆಗಳ ದಾಖಲೆಗಳನ್ನು ಖಾಸಗಿ ಸೈಬರ್ ಸೆಂಟರ್‌ಗಳಲ್ಲಿ ಹಣ ನೀಡಿ ಸುಲಭವಾಗಿ ಪಡೆಯುವಂತೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಆಲೋಚನೆ ಇದೆ ಎಂದು ಅವರು ತಿಳಿಸಿದರು.

ಧರ್ಮದರ್ಶಿ ಕೆ.ಎಂ. ಹಾಲಪ್ಪ ಹೇಳಿಕೆ

# ‘ಹಕ್ಕಬುಕ್ಕರು ಕುರುಬರು ಎಂಬುದಕ್ಕೆ ದಾಖಲೆಗಳಿವೆ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕುರುಬ ಸಮಾಜದವರು ‘ಹಕ್ಕಬುಕ್ಕರ ಜಯಂತಿ’ ಆಚರಿಸುವುದು ಪರಿಶಿಷ್ಟ ಪಂಗಡದ ಮೀಸಲಾತಿ ಪಡೆಯಲು ನಡೆಸುವ ಹುನ್ನಾರ ಎಂದು ವಾಲ್ಮೀಕಿ ಪೀಠದ ಧರ್ಮದರ್ಶಿ ಜಂಬಯ್ಯನಾಯಕ ಅವರ ಹೇಳಿಕೆ ಸಂವಿಧಾನ ವಿರೋಧಿ ಎಂದು ಕಾಗಿನೆಲೆ ಕನಕ ಗುರುಪೀಠದ ಬಳ್ಳಾರಿ ಜಿಲ್ಲಾ ಧರ್ಮದರ್ಶಿ ಕೆ.ಎಂ. ಹಾಲಪ್ಪ ತಿಳಿಸಿದರು.

ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಹಕ್ಕಬುಕ್ಕರು ವಾಲ್ಮೀಕಿ ಸಮುದಾಯದವರು. ಕುರುಬ ಸಮಾಜದವರು ವಿಜಯನಗರ ಸಂಸ್ಥಾಪನಾ ದಿನ ಆಚರಣೆ ಮಾಡಬಾರದು’ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಹಕ್ಕಬುಕ್ಕರು ಕುರುಬ ಜನಾಂಗದವರು ಎಂಬುದನ್ನು ವಿದೇಶಿ ವಿದ್ವಾಂಸರ ಹೇಳಿಕೆಗಳು, ಗೆಜೆಟಿಯರ್‌ಗಳು, ಕೃತಿಗಳು, ಶಾಸನಗಳು, ತ್ರಿಪದಿಗಳು ಸೇರಿದಂತೆ ನೂರಾರು ದಾಖಲೆಗಳು ಹೇಳುತ್ತವೆ’ ಎಂದರು.

‘ಸಂಶೋಧಕರಾದ ರಾಬರ್ಟ್ ಸಿವೆಲ್, ಎಚ್.ವಿಲ್ಸ್ನ, ಮಿ.ಕೌಟೋ, ಜಾನ್ ಕಲ್ಸೆಲ್ ಮುಂತಾದ ವಿದೇಶಿ ವಿದ್ವಾಂಸರು ಹಾಗೂ ಇತಿಹಾಸ ತಜ್ಞರು ಹಕ್ಕಬುಕ್ಕರು ಕುರುಬರೆಂದು ಹೇಳಿದ್ದಾರೆ. ಸಂಶೋಧಕರಾಗಿದ್ದ ಎಂ.ಎಂ. ಕಲಬುರ್ಗಿ, ಡಾ. ಸಾಲೆತೊರೆ, ವಸುಂಧರಾ ಫಿಲಿಯಾಜ, ಎಸ್. ಶ್ರೀಕಂಠಯ್ಯ, ಸೂರ್ಯನಾಥ ಕಾಮತ್, ಎಂ.ಎಚ್. ರಾಮಾಶರ್ಮಾ ಮೊದಲಾದವರು ಹಕ್ಕಬುಕ್ಕರನ್ನು ಕುರುಬರೆಂದು ದಾಖಲಿಸಿದ್ದಾರೆ. ಹೀಗಿರುವಾಗ ಜಂಬಯ್ಯನಾಯಕ ಅವರ ಹೇಳಿಕೆ ಬೇಜವಾಬ್ದಾರಿಯಿಂದ ಕೂಡಿದ್ದು’ ಎಂದಿದ್ದಾರೆ.

‘ಕುರುಬರು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಪಂಗಡದಲ್ಲಿದ್ದಾರೆ ಎನ್ನುವುದಕ್ಕೆ ಅನೇಕ ದಾಖಲೆಗಳಿವೆ. ಹೊಸದಾಗಿ ಸೇರ್ಪಡೆಗೊಳ್ಳುವ ಪ್ರಮೇಯವೇ ಇಲ್ಲ. ಯಾರ ಹಕ್ಕನ್ನೂ ಕಸಿಯುತ್ತಿಲ್ಲ’ ಎಂದು ಕೆ.ಎಂ. ಹಾಲಪ್ಪ ಸೇರಿದಂತೆ ಮುಖಂಡರಾದ ಅಯ್ಯಾಳಿ ತಿಮ್ಮಪ್ಪ, ಎಲ್.ಸಿದ್ದನಗೌಡ, ಭರಮನಗೌಡ, ಆರ್.ಕೊಟ್ರೇಶ್, ಟಿ.ಚಿದಾನಂದಪ್ಪ, ರಾಮಚಂದ್ರಗೌಡ ತಿಳಿಸಿದ್ದಾರೆ.

# ಅಧೀಕ್ಷಕರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ವರ್ಗಾವಣೆಯಾದ ಇಲ್ಲಿನ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಡಾ.ಪಿ. ರಂಗನಾಥ್ ಅವರಿಗೆ ಕಾರಾಗೃಹದ ಸಿಬ್ಬಂದಿ, ಕೈದಿಗಳು ಕಂಬನಿ ಸುರಿಸಿ, ಕಾಲಿಗೆ ನಮಸ್ಕರಿಸಿ ಶನಿವಾರ ಬೀಳ್ಕೊಟ್ಟರು.

ಕಾರಾಗೃಹದ ಆವರಣದಲ್ಲಿ ನಡೆದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಕೈದಿಗಳು ರಂಗನಾಥ್ ಅವರ ಕುರಿತು ಮಾತನಾಡುತ್ತಾ ಭಾವುಕರಾದರು. ಕಾರಾಗೃಹದಲ್ಲಿ ಕೈಗೊಂಡ ಸುಧಾರಣೆಗಳು, ತಮ್ಮೊಂದಿಗೆ ನಡೆದುಕೊಂಡ ಮಾನವೀಯ ಕ್ಷಣಗಳನ್ನು ನೆನೆದು ಕಣ್ಣೀರು ಸುರಿಸಿದರು.

ಕೈದಿ ಜಗದೀಶ್ ದೀಪ ಬೆಳಗಿ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿದರು. ಉಳಿದ ಕೈದಿಗಳು ಚಪ್ಪಾಳೆ ತಟ್ಟಿ, ಸೀಟಿ ಹೊಡೆದು ಸಂಭ್ರಮಿಸಿದರು.

ಸನ್ಮಾನ ಸ್ವೀಕರಿಸಿದ ರಂಗನಾಥ್, ‘ದೀಪ ಬೆಳಗಿಸಿದ ಕೈದಿ ಜಗದೀಶ್ ಹುಲ್ಲಿನ ಮೆದೆಗಳಿಗೆ ಬೆಂಕಿ ಹಚ್ಚುತ್ತಿದ್ದ. ಈಗ ದೀಪ ಬೆಳಗಿಸಿದ್ದಾನೆ. ಬೆಂಕಿಯನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವುದು ಈಗ ಅವನಿಗೆ ಅರ್ಥವಾಗಿದೆ. ತಪ್ಪು ಕೆಲಸ ಮಾಡಿ ಜೈಲಿಗೆ ಬಂದಿದ್ದ ಅಬು ಸಲೇಹಾ ಈಗ ಗ್ರಂಥಾಲಯದ ಹುಳವಾಗಿದ್ದಾನೆ. ತನ್ನನ್ನು ಓದುವುದರಲ್ಲಿ ತೊಡಗಿಸಿಕೊಂಡ ಆತ, ಸುಮಾರು ಐವತ್ತಕ್ಕೂ ಹೆಚ್ಚು ಹಾಡುಗಳನ್ನು ಬರೆದಿದ್ದಾನೆ. ಹಲವು ವಿಷಯಗಳ ಬಗ್ಗೆ ಹಾಡು ಬರೆಯುತ್ತಾ ಬದಲಾಗಿರುವ ಈ ಕೈದಿಯ ಮನಪರಿವರ್ತನೆಯಾಗಿದೆ. ಕೇವಲ 2 ನಿಮಿಷದ ಸಮಾಧಾನದ ಮಾತು ಅವರಲ್ಲಿ ಸಮಾಧಾನ ತಂದಿದೆ’ ಎಂದರು.

## ಬಿಜೆಪಿ ಬ್ಯಾನರ್ ತೆರವುಗೊಳಿಸಿ: ಶಾಸಕಿ ಸೌಮ್ಯ ರೆಡ್ಡಿ ಆಗ್ರಹ

ಬೆಂಗಳೂರು: ‘ಜನಸಾಮಾನ್ಯರಿಗೆ ಕೋವಿಡ್ ಲಸಿಕೆ ನೀಡಬೇಕಿರುವುದು ಸರ್ಕಾರದ ಆದ್ಯ ಕರ್ತವ್ಯ. ಇದನ್ನು ಬಿಜೆಪಿಯ ಸಾಧನೆ ಎಂಬಂತೆ ಬಿಂಬಿಸಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳ ಬಳಿ ಬಿಜೆಪಿ ನಾಯಕರು, ಶಾಸಕರ ಚಿತ್ರಗಳನ್ನೊಳಗೊಂಡ ಬ್ಯಾನರ್‌ಗಳನ್ನು ಹಾಕಲಾಗಿದೆ. ಇವುಗಳನ್ನು ಕೂಡಲೇ ತೆರವುಗೊಳಿಸಬೇಕು’ ಎಂದು ಜಯನಗರ ಕ್ಷೇತ್ರದ ಶಾಸಕಿ ಸೌಮ್ಯ ರೆಡ್ಡಿ ಒತ್ತಾಯಿಸಿದ್ದಾರೆ.

ಬ್ಯಾನರ್ ತೆರವಿಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ಕೋವಿಡ್ ಕುರಿತು ಜಾಗೃತಿ ಮೂಡಿಸಲು ಸಹಾಯಕವಾಗಲಿ ಎಂಬ ಕಾರಣದಿಂದ ಬೆಂಗಳೂರಿನಲ್ಲಿ ಹೋರ್ಡಿಂಗ್‌ಗಳನ್ನು ಪ್ರದರ್ಶಿಸಲು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನ್ಯಾಯಾಲಯವು 2020ರ ಜುಲೈನಲ್ಲಿ ಅನುಮತಿ ನೀಡಿತ್ತು. ಸರ್ಕಾರದ ವತಿಯಿಂದ ನಡೆಯುತ್ತಿರುವ ಲಸಿಕಾ ಕಾರ್ಯಕ್ರಮವು ಪಕ್ಷದ ಸಾಧನೆ ಎಂಬಂತೆ ಬಿಂಬಿಸುವುದು ಎಷ್ಟು ಸರಿ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಜಯನಗರ ಸಾರ್ವಜನಿಕ ಆಸ್ಪತ್ರೆ, ಸಾರಕ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರ, ಬೃಂದಾವನ ನಗರ ಹಾಗೂ ಬೆಂಗಳೂರಿನ ಇತರ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡಲಾಗುತ್ತಿದೆ. ಆ ಜಾಗಗಳಲ್ಲಿ ಬಿಜೆಪಿಯ ಬ್ಯಾನರ್‌ಗಳನ್ನು ಹಾಕಲಾಗಿದೆ. ಸರ್ಕಾರಿ ಆರೋಗ್ಯ ಕೇಂದ್ರಗಳ ಬಳಿ ಬ್ಯಾನರ್ ಹಾಕುವುದು ಸರಿಯೇ. ಅದಕ್ಕೆ ಅವಕಾಶ ಕೊಟ್ಟವರು ಯಾರು. ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪಕ್ಷದ ಬ್ಯಾನರ್ ಮತ್ತು ಫ್ಲೆಕ್ಸ್‌ಗಳನ್ನು ಹಾಕಬಾರದೆಂದು ಹೈಕೋರ್ಟ್ ಎರಡು ವರ್ಷದ ಹಿಂದೆಯೇ ಆದೇಶಿಸಿದೆ. ಹಾಗಿದ್ದರೂ ಬಿಜೆಪಿಯು ಬ್ಯಾನರ್ ಹಾಕುವುದನ್ನು ಬಿಟ್ಟಿಲ್ಲ. ನ್ಯಾಯಾಲಯದ ಆದೇಶವನ್ನೇ ಆ ಪಕ್ಷ ಧಿಕ್ಕರಿಸಿದೆ’ ಎಂದು ಅವರು ಆರೋಪಿಸಿದ್ದಾರೆ.

## ಬಾಲಕನ ಸಾವು: ವಿದ್ಯಾರ್ಥಿಯಿಂದ ಹತ್ಯೆ

ಚಾಮರಾಜನಗರ: ತಾಲ್ಲೂಕಿನ ಕೋಳಿಪಾಳ್ಯ ಸರ್ಕಾರಿ ಶಾಲೆಯಲ್ಲಿ ಇತ್ತೀಚೆಗೆ ಮೃತಪಟ್ಟ 7ನೇ ತರಗತಿ ವಿದ್ಯಾರ್ಥಿ ಲಕ್ಷ್ಮೀಕಾಂತ ಸಾವು ಆಕಸ್ಮಿಕವಾದುದಲ್ಲ; ಅದು ಕೊಲೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ವಿದ್ಯಾರ್ಥಿಯು ಕಾಂಪೌಂಡ್‌ನಿಂದ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾಗಿ ಹೇಳಲಾಗಿತ್ತು. ಆದರೆ, ಅದೇ ಶಾಲೆಯ ವಿದ್ಯಾರ್ಥಿಯೊಬ್ಬ, ಆತನ ಕುತ್ತಿಗೆಗೆ ಕೈವಾರದಿಂದ ಚುಚ್ಚಿದ್ದರಿಂದ ಮೃತಪಟ್ಟಿದ್ದಾನೆ. ಕ್ಷುಲ್ಲಕ ಕಾರಣಕ್ಕಾಗಿ ಈ ಅನಾಹುತ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಚಾಮರಾಜನಗರ ಪೂರ್ವ ಠಾಣೆ ಪೊಲೀಸರು, ಬಾಲಕನನ್ನು ಬಂಧಿಸಿ ನಿರೀಕ್ಷಣಾ ಕೇಂದ್ರದಲ್ಲಿ ಇಟ್ಟಿದ್ದರು. ಶುಕ್ರವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು. ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದ್ದಾರೆ. ‘ಬಾಲ ನ್ಯಾಯಕಾಯ್ದೆ ಅಡಿಯಲ್ಲಿ ಈ ಪ್ರಕರಣ ಬರುವುದರಿಂದ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ಪ್ರಕರಣದ ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

## ಪಿಎಫ್‌ಐ ಪ್ರಕರಣ: 8 ಜನರ ವಿರುದ್ಧ ದೇಶದ್ರೋಹ ಪ್ರಕರಣ

ಮಥುರಾ (ಪಿಟಿಐ): ಪಿಎಫ್‌ಐಗೆ ಸಂಬಂಧಿಸಿದ ಪ್ರಕರಣದಲ್ಲಿ ಉತ್ತರ ಪ್ರದೇಶ ಪೊಲೀಸರು ಎಂಟು ಜನರ ವಿರುದ್ಧ ಮಥುರಾದ ಜಿಲ್ಲಾ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಪಿಎಫ್‌ಐ ವಿದ್ಯಾರ್ಥಿ ಘಟಕದ ಮುಖಂಡ ಕೆ.ಎ.ರೌಫ್ ಶೆರೀಫ, ಕೇರಳ ಮೂಲದ ಪತ್ರಕರ್ತ ಸಿದ್ದಿಕ್ ಕಾಪ್ಪನ್ ಸೇರಿದಂತೆ ಎಂಟು ಜನರ ವಿರುದ್ಧ ದೇಶದ್ರೋಹ, ಕ್ರಿಮಿನಲ್ ಪಿತೂರಿ, ಉಗ್ರ ಚಟುವಟಿಕೆಗಳಿಗೆ ಹಣಕಾಸು ನೆರವು ಆರೋಪ ಹೊರಿಸಲಾಗಿದೆ.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಅನಿಲ್‌ಕುಮಾರ್ ಪಾಂಡೆ ಅವರಿಗೆ ಚಾರ್ಜ್‌ಶೀಟ್ ಸಲ್ಲಿಸಲಾಯಿತು.

## ನಗರದಲ್ಲಿ ಇಂದು


ಗಂಗಾವತಿ ಪ್ರಾಣೇಶ್


**ಪುಸ್ತಕಗಳ ಬಿಡುಗಡೆ:**ಗಂಗಾವತಿ ಪ್ರಾಣೇಶ್, ಪುಸ್ತಕಗಳು–ಮಾಗಿಯ ಚಳಿಯಲಿ ಮೊಗ್ಗನು ಅರಸುತ, ಅಯ್ದು ರೂಪಾಯಿ, ರೈಲು ಹನಿ, ಸಂಸಾರ ಗೀತೆ, ಅತಿಥಿಗಳು–ರಾಜಶೇಖರ ಮಠಪತಿ, ಎಚ್.ಎಸ್. ಸತ್ಯನಾರಾಯಣ, ಮಹಾದೇವ ಕಾನತ್ತಿಲ, ಆಯೋಜನೆ–ಕಟ್ಟುಕತೆ ಕ್ರಿಯೇಷನ್ಸ್, ವಿಶ್ವಋಷಿ ಪ್ರಕಾಶನ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10

**ಅಂಧರ ಸಾಹಿತ್ಯೋತ್ಸವ ಹಾಗೂ ಕವಿಗೋಷ್ಠಿ:**ಉದ್ಘಾಟನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಅಧ್ಯಕ್ಷತೆ–ಜಾಣಗೆರೆ ವೆಂಕಟರಾಮಯ್ಯ, ಮುದಿಗೆರೆ ರಮೇಶ್ ಕುಮಾರ್ ಅವರ ‘ಬಟಾಬಯಲು’ ಪುಸ್ತಕ ಬಿಡುಗಡೆ–ಸಿದ್ದಲಿಂಗಯ್ಯ, ಕೃತಿ ಕುರಿತು–ಎಲ್.ಹನುಮಂತಯ್ಯ, ಹೆಲೆನ್ ಕೆಲರ್ ಹಾಗೂ ಪುಟ್ಟರಾಜ ಗವಾಯಿ ಪ್ರಶಸ್ತಿ ಪುರಸ್ಕೃತರು–ವೀರಾಸ್ವಾಮಿರೆಡ್ಡಿ, ಎಚ್.ಜನಾರ್ದನ್, ಅತಿಥಿಗಳು–ಚಿಂತಕ ಬಂಜಗೆರೆ ಜಯಪ್ರಕಾಶ್, ಸಾರ್ವಜನಿಕರ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಹೊಸಮನಿ, ಕರ್ನಾಟಕ ಅಂಧರ ವಿಮೋಚನಾ ವೇದಿಕೆ ಅಧ್ಯಕ್ಷ ಲಕ್ಷ್ಮೀನಾರಾಯಣ ನಾಗವಾರ, ಕವಿಗೋಷ್ಠಿ ಅಧ್ಯಕ್ಷತೆ–ಕವಿ ಜರಗನಹಳ್ಳಿ ಶಿವಶಂಕರ್, ಆಯೋಜನೆ–ಕರ್ನಾಟಕ ಅಂಧ ವಿಮೋಚನಾ ವೇದಿಕೆ, ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಕಲ್ಯಾಣ ಸಂಸ್ಥೆ, ಸ್ಥಳ–ಕಸ್ತೂರಬಾ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

**‘ರೂಪ–ವಿರೂಪ’ ನೃತ್ಯ ರೂಪಕ ಪ್ರದರ್ಶನ:**ಆಯೋಜನೆ–ಮಾತೃಶ್ರೀ ಮನೋವಿಕಾಸ ಕೇಂದ್ರ, ಶಿವಪ್ರಿಯನೃತ್ಯಸಂಸ್ಥೆಯಿಂದ ‘ಕಾರುಣ್ಯಸಿದ್ಧಿ’ ಹಾಗೂ ಆರ್ಟಿಕ್ಯುಲೇಟ್ ನೃತ್ಯ ಶಾಲೆಯಿಂದ ‘ಶಿವೋಹಂ-ಜಗತ್ಕಾರಣ’ ನೃತ್ಯರೂಪಕ ಪ್ರದರ್ಶನ:ಸ್ಥಳ–ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5


‘ರೂಪ–ವಿರೂಪ’ ನೃತ್ಯ ರೂಪಕ ಪ್ರದರ್ಶನ


**‘ಹೆಡ್ಮಾಸ್ತರ್ ಕೆಂಗರಾಮಯ್ಯ’ ಪುಸ್ತಕ ಬಿಡುಗಡೆ:**ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉದ್ಘಾಟನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಅಧ್ಯಕ್ಷತೆ–ಸಾಹಿತಿ ಬರಗೂರು ರಾಮಚಂದ್ರಪ್ಪ, ಅತಿಥಿಗಳು–ವಿಧಾನಸಭಾ ಸದಸ್ಯ ಕೆ.ಆರ್. ರಮೇಶ್ ಕುಮಾರ್, ನಂದೀಶ್ವರ್, ವಿವೇಕಾನಂದ, ಆಯೋಜನೆ–ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ–ಗಾಂಧಿಭವನ, ಕುಮಾರಪಾರ್ಕ್ ರಸ್ತೆ, ಬೆಳಿಗ್ಗೆ 11


ಸಿದ್ದರಾಮಯ್ಯ

**ಕನ್ನಡ ಅನುವಾದ ಕಮ್ಮಟ:**ಸಮಾರೋಪ ಭಾಷಣ–ಟಿ.ಎಸ್. ನಾಗಾಭರಣ, ಅಧ್ಯಕ್ಷತೆ–ಆರ್. ಲಕ್ಷ್ಮೀನಾರಾಯಣ, ಅತಿಥಿಗಳು–ಎಂ.ಅಬ್ದುಲ್ ರೆಹಮಾನ್ ಪಾಷ, ಎಚ್.ಎಸ್.ಎಂ.ಪ್ರಕಾಶ್, ಬಿ.ಸಿ. ರಾಜಕುಮಾರ್, ಆಯೋಜನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 4


ಟಿ.ಎಸ್. ನಾಗಾಭರಣ

**‘ಜೀವನ್ಮುಖಿ ವಾರ್ಷಿಕ ಪ್ರಶಸ್ತಿ’ ಪ್ರದಾನ:**ಉದ್ಘಾಟನೆ–ನಿವೃತ್ತ ನ್ಯಾ.ಎ.ಜೆ. ಸದಾಶಿವ, ಪ್ರಶಸ್ತಿ ಪ್ರದಾನ–ಸಾಹಿತಿ ಹಂಪ ನಾಗರಾಜಯ್ಯ, ಪುರಸ್ಕೃತರು–ಬರಗೂರು ರಾಮಚಂದ್ರಪ್ಪ, ಆರ್.ಭಾಗ್ಯದೇವಿ, ಸಂಜೀವ್ ಪಾಟೀಲ್, ಬಿ.ಕೃಷ್ಣಪ್ಪ, ವಿಶೇಷ ಸಂಚಿಕೆ ಬಿಡುಗಡೆ–ಐಪಿಎಸ್ ಅಧಿಕಾರಿ ಎಸ್.ಡಿ.ಶರಣಪ್ಪ, ಅಧ್ಯಕ್ಷತೆ–ಎಚ್.ಕೆ.ರಾಮು, ಆಯೋಜನೆ–ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 4


ಎ.ಜೆ.ಸದಾಶಿವ

**ಹವ್ಯಕ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಹಾಗೂ ಪಲ್ಲವ ಪುರಸ್ಕಾರ ಪ್ರದಾನ:**ಅಧ್ಯಕ್ಷತೆ–ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ, ಅತಿಥಿಗಳು–ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಗುರುಮೂರ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್, ವೇದ ವಿದ್ವಾಂಸ ಎಸ್.ಶಂಭು ಶೆಟ್ಟಿ, ಆಯೋಜನೆ–ಅಖಿಲ ಹವ್ಯಕ ಮಹಾಸಭಾ, ಸ್ಥಳ–ಹವ್ಯಕ ಭವನ, ಮಲ್ಲೇಶ್ವರ, ಸಂಜೆ 4

## ಮುಂಬೈ ರೇಸ್

### ಐರನ್ ಏಜ್ ಗೆಲ್ಲುವ ನಿರೀಕ್ಷೆ

ರಾಮ್‌ನಾಥ್ ಥಾಗಾ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಐರನ್ ಏಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 3ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಲ್ಟಿಮೊಮೆಂಟ್ 3, ಸುಫಿಯಾ 2, ಗಸ್ಟಿ ಗರ್ಲ್ 1
2ನೇ ರೇಸ್: ಮೆಮೊರಬಲ್ ಮೊಮೆಂಟ್ಸ್ 3, ಮರ್ರಾಕೇಶ್ 2, ಹಿಯಾಕ್ತೇನ್ 1
3ನೇ ರೇಸ್: ಐರನ್ ಏಜ್ 1, ಮಿಸ್ಟಿಕ್ ಬೇ 3, ಸಿಲ್ವರ್ ಫ್ಲೇಮ್ಸ್ 2
4ನೇ ರೇಸ್: ಶಮ್ಶೀರ್ ಸ್ವೋರ್ಡ್ 2, ರಾಮ್‌ಬಂಕ್ಷಿಯಸ್ 1. ಮಿಷಿಕಾಸ್ ಪ್ರೈಡ್ 3
5ನೇ ರೇಸ್: ದಿ ಅವೇಕನಿಂಗ್ 4, ಲವ್ ವಾರಿಯರ್ 8, ರೆಡ್ ಮರ್ಲಾಟ್ 1
6ನೇ ರೇಸ್: ಮಾರ್ವೆಲಸ್ 13, ಇಂಪರ್ಮನೆನ್ಸ್ 12, ನಿಶ್ಕ್ 4
7ನೇ ರೇಸ್: ವಿಕ್ಟೋರಿಯ ಪೀಕ್ 2, ಆನ್ ವಾ ಡ್ಯಾನ್ಸರ್ 5, ಸ್ಟಿಕ್ ಟು ದಿ ಪ್ಲಾನ್ 4
8ನೇ ರೇಸ್: ಸೆಲ್ಲಿನಿ 1, ಒಯ್ ಸಾವೇಜ್ 3, ಆರ್ಕ್ ಶೈನ್ 5

**ಉತ್ತಮ ಬೆಟ್: ಸೆಲ್ಲಿನಿ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 5,6,7 | 6,7,8 |

### ಪರಿಸರಪ್ರಿಯರಿಂದ ಟೀಕಾಪ್ರಹಾರ, ದರ ಇಳಿಕೆಗೆ ಒತ್ತಾಯ; ಜಾಲತಾಣಗಳಲ್ಲಿ ನೆಟ್ಟಿಗರ ತರಾಟೆ

# ಸಫಾರಿ ದರ ಏರಿಕೆಗೆ ಭಾರಿ ಆಕ್ರೋಶ

ಪ್ರಜಾವಾಣಿ ವಾರ್ತೆ

**ಮೈಸೂರು/ಚಾಮರಾಜನಗರ:** ನಾಗರಹೊಳೆ ಮತ್ತು ಬಂಡೀಪುರದ ಹುಲಿ ರಕ್ಷಿತಾರಣ್ಯದಲ್ಲಿನ ದಮ್ಮನಕಟ್ಟೆ, ವೀರನಹೊಸಹಳ್ಳಿ, ನಾಗರಹೊಳೆ ಹಾಗೂ ಬಂಡೀಪುರದ ಸಫಾರಿ ಟಿಕೆಟ್ ದರ ಹೆಚ್ಚಿಸಿರುವುದಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಟೀಕೆಗಳ ಮಹಾಪೂರವೇ ಹರಿದು ಬರುತ್ತಿದೆ. ಅರಣ್ಯಾಧಿಕಾರಿಗಳ ಈ ಕ್ರಮವನ್ನು ನೆಟ್ಟಿಗರು, ಪರಿಸರವಾದಿಗಳು 'ಮೀಮ್ಸ್'ಗಳ ಮೂಲಕ ತೀವ್ರವಾಗಿ ಟೀಕಿಸಿದ್ದಾರೆ.

'ಸಫಾರಿ ಎಂಬುದು ಉಳ್ಳವರ ಸ್ವತ್ತು' ಎಂಬ ಮಾತು ನಿಜ ಮಾಡಲು ಅಧಿಕಾರಿಗಳು ದರ ಹೆಚ್ಚಿಸಿದ್ದಾರೆ. ಕೊರೊನಾ ಸಂಕಷ್ಟದಲ್ಲಿ ಇಂತಹ ಕ್ರಮ ಬೇಕಿರಲಿಲ್ಲ ಎಂದಿದ್ದಾರೆ.

'ನಾಗರಹೊಳೆ ಸಫಾರಿಗಾಗಿ ನಾನು ನನ್ನ ಒಂದು ಮೂತ್ರಪಿಂಡವನ್ನು ಮಾರಾಟ ಮಾಡಲು ನಿರ್ಧರಿಸಿದ್ದೇನೆ' ಎಂದು ಕೆಲವರು ಚಾಟಿ ಬೀಸಿದ್ದಾರೆ.

'ಹೆಚ್ಚಿನ ಹಣದೊಂದಿಗೆ ಬರುತ್ತಿದ್ದ ನನ್ನನ್ನು ತಮಿಳುನಾಡಿನ ಗಡಿಯಲ್ಲಿ ಚುನಾವಣಾ ಆಯೋಗದವರು ತಡೆದು ಪ್ರಶ್ನಿಸಿದರು. ಆಗ ನಾನು ನಾಗರಹೊಳೆಗೆ ಸಫಾರಿಗಾಗಿ ಹೋಗುತ್ತಿದ್ದೇನೆ ಎಂದು ಹೇಳಿದಾಕ್ಷಣ ಬಿಟ್ಟು ಕಳುಹಿಸಿದರು!' ಎಂದು ಹಾಸ್ಯದ ಮೊನೆಯಿಂದ ಚುಚ್ಚಿದ್ದಾರೆ.

'ನಾಗರಹೊಳೆಯ 2 ಸಫಾರಿ ಕ್ಯಾಮೆರಾ ಟಿಕೆಟ್ ದರದಲ್ಲಿ, ಮಧ್ಯ ಪ್ರದೇಶದ ಪೆಂಚ್ ರಾಷ್ಟ್ರೀಯ ಉದ್ಯಾನದಲ್ಲಿ ಒಂದು ರಾತ್ರಿಯನ್ನೇ ಕಳೆಯಬಹುದು' ಎಂದು ಕೆಲವರು ಕುಟುಕಿದ್ದಾರೆ.

'ಸಫಾರಿ ಕೇಂದ್ರಗಳಲ್ಲಿ ಮೂಲ ಸೌಕರ್ಯವೂ ಇಲ್ಲ. ವಸತಿ ಗೃಹಗಳು ಯಾವುದೇ ಐಷಾರಾಮಿ ಸೌಲಭ್ಯ ಹೊಂದಿಲ್ಲ. ಹೀಗಿದ್ದರೂ, ಪಂಚತಾರಾ ಹೋಟೆಲ್ ದರವನ್ನು ನಿಗದಿಪಡಿಸಿರುವುದು ಎಷ್ಟರಮಟ್ಟಿಗೆ ಸರಿ' ಎಂಬುದು ಹಲವರ ಪ್ರಶ್ನೆ.

ಏ.2ರಿಂದ ಹೊಸ ದರ ಜಾರಿಗೆ ಬಂದಿದ್ದು, ಪ್ರವೇಶ, ಸಫಾರಿ, ವಸತಿಗೃಹ, ಕ್ಯಾಮೆರಾ ದರದಲ್ಲಿಯೂ ಹೆಚ್ಚಳ ಮಾಡಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ವಿಜಯಕುಮಾರ್ ಗೋಗಿ, 'ದರ ಪರಿಷ್ಕರಣೆ ಸಹಜ ಪ್ರಕ್ರಿಯೆ' ಎಂದರು.

'ಎಲ್ಲ ದರಗಳೂ ಪರಿಷ್ಕರಣೆಯಾಗುತ್ತಿವೆ. ಒಂದೇ ದರವನ್ನು 10 ವರ್ಷ ಇಟ್ಟುಕೊಂಡು, ನಂತರ ಒಮ್ಮೆಗೆ ಹೆಚ್ಚಿಸಿದರೆ ಎಲ್ಲರಿಗೂ ಹೊರೆ. ಪ್ರತಿ ವರ್ಷ ದರ ಪರಿಷ್ಕರಣೆಯಾಗಬೇಕಿತ್ತು. ಈಗ 4 ವರ್ಷಗಳ ನಂತರ ಪರಿಷ್ಕರಿಸಲಾಗಿದೆ. ಏನೇ ಮಾಡಿದರೂ ಪರ ಮತ್ತು ವಿರೋಧದ ಅಭಿಪ್ರಾಯಗಳು ಇದ್ದೇ ಇರುತ್ತವೆ' ಎಂದರು.

**ಬಂಡೀಪುರ ಹುಲಿ ರಕ್ಷಿತಾರಣ್ಯ**

| ಹಳೆಯ ದರ | ಹೊಸ ದರ |
|---|---|
| ₹350 | ₹600 |
| ಕ್ಯಾಮೆರಾ 70 ಎಂ.ಎಂ. ನಿಂದ 200 ಎಂ.ಎಂ (ಹಿಂದೆ ಶುಲ್ಕ ಇರಲಿಲ್ಲ) | ₹150 |
| 200 ಎಂ.ಎಂ.ನಿಂದ ಮೇಲ್ ₹590 | ₹750 |
| 500 ಎಂಎಂಗಿಂತ ಮಿಗಿಲಾದ ಲೆನ್ಸ್ | ₹1,500 |
| ಸಾಮಾನ್ಯ ವಸತಿಗೃಹ ₹1,500 | ₹2,000 |
| ಗಜೇಂದ್ರ ವಸತಿಗೃಹ ₹2,500 | ₹3,000 |
| ಡಾರ್ಮಿಟರಿ (10 ಮಂದಿಗೆ) ₹1,500 | ₹2,500 |



ಎಚ್‌.ಡಿ.ಕೋಟೆ ತಾಲ್ಲೂಕಿನ ದಮ್ಮನಕಟ್ಟೆ (ಕಾಕನಕೋಟೆ) ಸಫಾರಿ ಕೇಂದ್ರ

**ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಸಫಾರಿ ದರ**

| ಹಳೆಯ ದರ | ಹೊಸ ದರ |
|---|---|
| ₹500 | ₹600 (ಸಾಮಾನ್ಯ ದಿನಗಳಲ್ಲಿ) |
| ₹350 | ₹450 (ರಜಾ ದಿನಗಳಲ್ಲಿ) |
| ಕ್ಯಾಮೆರಾ 0–200 ಎಂಎಂ ಲೆನ್ಸ್ ₹100 | 0–70 ಎಂಎಂ ಲೆನ್ಸ್ ₹250 ಮತ್ತು 70–200 ಎಂಎಂ ಲೆನ್ಸ್ ₹750 |
| 200 ರಿಂದ 500 ಎಂಎಂ ಲೆನ್ಸ್ ₹400 | ₹1,000 |
| 500 ಎಂಎಂಗಿಂತ ಮಿಗಿಲಾದ ಲೆನ್ಸ್ ₹1,000 | ₹1,500 |
| ನಾಗರಹೊಳೆ ವಸತಿ ದರ ₹1,600 | ₹2,200 |



## 'ಸ್ಥಳೀಯರಿಗಾದರೂ ರಿಯಾಯಿತಿ ನೀಡಲಿ'

'ಸಫಾರಿ ಇರುವುದು ಆದಾಯದ ಉದ್ದೇಶಕ್ಕಲ್ಲ; ಜನರಿಗೆ ಕಾಡು, ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸುವುದಕ್ಕಾಗಿ. ಸ್ಥಳೀಯರು, ಬಡವರು, ಮಧ್ಯಮ ವರ್ಗದವರು ದುಬಾರಿ ಶುಲ್ಕ ನೀಡಿ ಸಫಾರಿ ಹೋಗುವುದಕ್ಕೆ ಸಾಧ್ಯವಿಲ್ಲ. ಅರಣ್ಯ ಇಲಾಖೆಯು ತನ್ನ ನಿರ್ಧಾರ ಮರುಪರಿಶೀಲಿಸಬೇಕು. ಕನಿಷ್ಠ ಪಕ್ಷ ಸ್ಥಳೀಯರಿಗೆ, ಬಿಪಿಎಲ್ ಪಡಿತರ ಚೀಟಿ ಹೊಂದಿದವರಿಗೆ ರಿಯಾಯಿತಿ ನೀಡಬೇಕು' ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಜಿ. ಮಲ್ಲೇಶಪ್ಪ ತಿಳಿಸಿದರು.



ಜಿ. ಮಲ್ಲೇಶಪ್ಪ

## ಸುದ್ದಿ 2 ನಿಮಿಷ

### ₹1.18 ಕೋಟಿ ಮೌಲ್ಯದ ಚಿನ್ನ ವಶ

**ಮಂಗಳೂರು:** ವಿಶೇಷವಾಗಿ ವಿನ್ಯಾಸ ಮಾಡಿದ ಒಳ ಉಡುಪು, ಮೊಣಕಾಲು ಪಟ್ಟಿ, ಬೂಟಿನಲ್ಲಿ ಅಡಗಿಸಿಟ್ಟು ಸಾಗಿಸುತ್ತಿದ್ದ ₹1.18 ಕೋಟಿ ಮೌಲ್ಯದ ಚಿನ್ನವನ್ನು ಇಲ್ಲಿನ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಶನಿವಾರ ದುಬೈನಿಂದ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದಿಳಿದ ಉಳ್ಳಾಲದ ಮೊಹಮ್ಮದ್ ಆಸೀಫ್ ಅವರನ್ನು ತಪಾಸಣೆಗೆ ಒಳಪಡಿಸಲಾಗಿದ್ದು, ಒಳ ಉಡುಪು, ಜೀನ್ಸ್ ಟ್ರೌಸರ್, ಮೊಣಕಾಲು ಪಟ್ಟಿಯಲ್ಲಿ ಬಚ್ಚಿಟ್ಟಿದ್ದ ₹92.27 ಲಕ್ಷ ಮೌಲ್ಯದ 1.993 ಕೆ.ಜಿ. ಚಿನ್ನ ಪತ್ತೆಯಾಗಿದೆ.

ಶುಕ್ರವಾರ ದುಬೈನಿಂದ ಬಂದಿಳಿದ ಕಾಸರಗೋಡಿನ ಅಬ್ದುಲ್ ಸಲಾಂ ಮಣಿಪರಂಬು ಹಾಗೂ ಮೊಹಮ್ಮದ್ ಅಶ್ರಫ್‌ರನ್ನು ತಪಾಸಣೆ ಒಳಪಡಿಸಲಾಗಿತ್ತು. ಈ ಇಬ್ಬರು ಜೀನ್ಸ್ ಶರ್ಟ್‌ನ ಬಟನ್ ಹಾಗೂ ಬೂಟಿನಲ್ಲಿ ಚಿನ್ನವನ್ನು ಅಡಗಿಸಿಟ್ಟಿದ್ದು ಪತ್ತೆಯಾಗಿದೆ. ಇವರಿಂದ ₹26.43 ಲಕ್ಷ ಮೌಲ್ಯದ 576 ಗ್ರಾಂ ಚಿನ್ನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಕಸ್ಟಮ್ಸ್ ಜಂಟಿ ಆಯುಕ್ತ ಜೋನಸ್ ಜಾರ್ಜ್ ತಿಳಿಸಿದ್ದಾರೆ.



### ನಾ. ಮೊಗಸಾಲೆ, ಬಂದಗದ್ದೆ ನಾಗರಾಜಗೆ 'ಹವ್ಯಕ ವಿಭೂಷಣ' ಪ್ರಶಸ್ತಿ

**ಬೆಂಗಳೂರು:** ಅಖಿಲ ಹವ್ಯಕ ಮಹಾಸಭಾವು 2020 ಮತ್ತು 2021ನೇ ಸಾಲಿನ ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿವಮೊಗ್ಗದ ಡಾ. ವಿದ್ವಾನ್ ಬಂದಗದ್ದೆ ನಾಗರಾಜ ಹಾಗೂ ಕಾಸರಗೋಡಿನ ಡಾ.ನಾ. ಮೊಗಸಾಲೆ ಅವರು 'ಹವ್ಯಕ ವಿಭೂಷಣ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ಹವ್ಯಕ ಭೂಷಣ' ಪ್ರಶಸ್ತಿಗೆ ಉತ್ತರ ಕನ್ನಡದ ರಾಮಚಂದ್ರ ಹೆಗಡೆ ಕೊಂಡದಕುಳಿ (ಯಕ್ಷಗಾನ), ದಕ್ಷಿಣ ಕನ್ನಡದ ಡಾ. ಶ್ಯಾಮ್ ಸಿ. ಭಟ್ (ಸಂಶೋಧನೆ), ಶಿವಮೊಗ್ಗದ ಡಾ.ಎಚ್.ಎಲ್. ಸುಬ್ಬರಾವ್ (ವೈದ್ಯಕೀಯ) ಹಾಗೂ ಉತ್ತರ ಕನ್ನಡದ ಡಾ. ನಾಗರಾಜ ಹೆಗಡೆ ಗೊರನಮನೆ (ಕೃಷಿ ಉಪಕರಣ/ ಔಷಧಿ) ಭಾಜನರಾಗಿದ್ದಾರೆ.

'ಹವ್ಯಕ ಶ್ರೀ' ಪ್ರಶಸ್ತಿಗೆ ಶಿವಮೊಗ್ಗದ ಗಜಾನನ ಘನಪಾಠಿ (ವೇದ), ದಕ್ಷಿಣ ಕನ್ನಡದ ತೇಜಸ್ವಿ ಶಂಕರ್ (ಮನೋರಂಜನೆ), ಉತ್ತರ ಕನ್ನಡದ ಗುರುಮೂರ್ತಿ ವೈದ್ಯ (ಸಂಗೀತ), ಚಂದ್ರಕಲಾ ವಿ. ಭಟ್ (ಸಮಾಜಸೇವೆ/ತಾಳಮದ್ದಳೆ), ಲಕ್ಷ್ಮೀನಾರಾಯಣ ಹೆಗಡೆ (ಪರಿಸರ) ಹಾಗೂ ದಕ್ಷಿಣ ಕನ್ನಡದ ಈಶಾ ಶರ್ಮ ಕಾಂತಜೆ (ಕ್ರೀಡೆ) ಅವರು ಆಯ್ಕೆಯಾಗಿದ್ದಾರೆ.

ಮಹಾಸಭೆಯು ಭಾನುವಾರ (ಏ.4) ಸಂಜೆ 4 ಗಂಟೆಗೆ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಹವ್ಯಕ ಭವನದಲ್ಲಿ ಹವ್ಯಕ ಸಂಸ್ಥಾಪನೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದೇ ವೇಳೆ ಹವ್ಯಕ ವಿಶೇಷ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳಿಗೆ 'ಪಲ್ಲವ ಪುರಸ್ಕಾರ' ಪ್ರದಾನ ಮಾಡಲಾಗುತ್ತದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಗುರುಮೂರ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಅಜಕ್ಕಳ ಗಿರೀಶ್ ಭಟ್, ವೇದ ವಿದ್ವಾಂಸ ವಿದ್ವಾನ್ ಎಸ್. ಶಂಭು ಭಟ್ಟ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಹಾಸಭೆಯ ಅಧ್ಯಕ್ಷ ಡಾ. ಗಿರಿಧರ ಕಜೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## 1ರಿಂದ 9ನೇ ತರಗತಿ: ಲಿಖಿತ ಪರೀಕ್ಷೆ ಇಲ್ಲ ?

**ಬೆಂಗಳೂರು:** ರಾಜ್ಯದಲ್ಲಿ 1ರಿಂದ 9ನೇ ತರಗತಿಯ ಮಕ್ಕಳಿಗೆ ಪರೀಕ್ಷೆ ನಡೆಸಬೇಕೆ, ಬೇಡವೇ ಎಂಬ ಬಗ್ಗೆ ಚರ್ಚಿಸಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಸೋಮವಾರ ಮಹತ್ವದ ಸಭೆ ಕರೆದಿದ್ದಾರೆ.

ಶಿಕ್ಷಣ ತಜ್ಞರು, ಖಾಸಗಿ ಶಾಲಾ ಸಂಘಟನೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ತರಗತಿಗಳಿಗೆ ಲಿಖಿತ ಪರೀಕ್ಷೆ ನಡೆಸದಿರುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ.

ಲಿಖಿತ ಪರೀಕ್ಷೆ ಬದಲು ಮೌಲ್ಯಾಂಕನ ಪರೀಕ್ಷೆ ನಡೆಸಿ ಮುಂದಿನ ತರಗತಿಗೆ ತೇರ್ಗಡೆ ನೀಡುವ ಬಗ್ಗೆ ಸೋಮವಾರದ ಸಭೆಯಲ್ಲಿ ಚರ್ಚೆಯಾಗಲಿದೆ.

ಮೌಲ್ಯಾಂಕನ ಯಾವ ರೀತಿ ಮಾಡಬೇಕು? ಒಂದೆರಡು ದಿನ ಮಕ್ಕಳನ್ನು ಶಾಲೆಗೆ ಕರೆಸಿ ಅವರಿಗೆ ಪ್ರಶ್ನೆಗಳನ್ನು ಕೇಳಿ ಅವರ ಕಲಿಕಾ ಸಾಮರ್ಥ್ಯ ಅಳೆಯಬೇಕಾ ಎಂಬ ವಿಚಾರಗಳು ಚರ್ಚೆಯಾಗಲಿವೆ.

ಸರ್ಕಾರಿ ಶಾಲೆಗಳಲ್ಲಿ 1ರಿಂದ 5ನೇ ತರಗತಿ ಮಕ್ಕಳಿಗೆ ಶಾಲೆಯೇ ಆರಂಭವಾಗದ ಕಾರಣ ಮೌಲ್ಯಾಂಕನವು ಅಗತ್ಯವಿಲ್ಲ ಎಂಬ ಅಭಿಪ್ರಾಯವೂ ಸರ್ಕಾರದ ಮುಂದಿದೆ.

### ವಿಷ್ಣುಗುಪ್ತ ವಿವಿ: ಗುರುಕುಲ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ರಾಮಚಂದ್ರಾಪುರ ಮಠವು ಗೋಕರ್ಣದಲ್ಲಿ ಆರಂಭಿಸಿರುವ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಗುರುಕುಲಗಳು ಮುಂದಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಿವೆ.

ಸಾರ್ವಭೌಮ ಗುರುಕುಲ (ಬಾಲಕರಿಗೆ) ಮತ್ತು ರಾಜರಾಜೇಶ್ವರಿ ಗುರುಕುಲಗಳಲ್ಲಿ (ಬಾಲಕಿಯರಿಗೆ) ಪ್ರವೇಶ ಕಲ್ಪಿಸಲಾಗುತ್ತದೆ. ಎನ್‌ಐಒಎಸ್ ಪಠ್ಯಕ್ರಮದಂತೆ 4 ರಿಂದ 8ನೇ ತರಗತಿವರೆಗಿನ ಬಿ ಮತ್ತು ಸಿ ಹಂತದ ತರಗತಿಗಳಿಗೆ, ಸೆಕೆಂಡರಿ ಹಾಗೂ ಸೀನಿಯರ್ ಸೆಕೆಂಡರಿ ತರಗತಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತದೆ.

ನಿಗದಿತ ಪಠ್ಯದ ಜತೆಗೆ ವೇದಪಥ, ಯೋಗ, ಜ್ಯೋತಿಷ, ವಾಸ್ತು, ಆಯುರ್ವೇದ, ಭಗವದ್ಗೀತೆ, ಮಹಾಪುರುಷರ ಚರಿತೆಗಳ ಬೋಧನೆ, ವ್ಯಾಯಾಮಕೀ ಸದಾಚಾರ ಮತ್ತು ವಿವಿಧ ಸ್ತೋತ್ರಗಳು, ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತ, ಭಾವ ಸಂಗೀತ, ನೃತ್ಯ, ಯಕ್ಷಗಾನ, ಕರಕುಶಲ ಕಲೆ, ರಂಗೋಲಿ, ಕಸೂತಿ, ಪಾರಂಪರಿಕ ಪಾಕಶಾಸ್ತ್ರ ಹಾಗೂ ಗೃಹನಿರ್ವಾಹ ವಿಷಯಗಳನ್ನೂ ಬೋಧಿಸಲಾಗುತ್ತದೆ.

ವಿದ್ಯಾರ್ಥಿಗಳು https://forms.gle/Sk4atmZkcynC6FCm7 ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ಸಂದರ್ಶನದಲ್ಲಿ ಆಯ್ಕೆಯಾದವರು ಆನ್‌ಲೈನ್ ಮೂಲಕ ಪ್ರವೇಶಪತ್ರ ತುಂಬಿ, ಪ್ರವೇಶ ಪಡೆದುಕೊಳ್ಳಬೇಕಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

**ಇ ಮೇಲ್ ವಿಳಾಸ:** office@vishnuguptavv.org
**ಸಂಪರ್ಕ ಸಂಖ್ಯೆ:** 9449595207 ಅಥವಾ 9449595248

ಕೋವಿಡ್–19 ನಿಯಂತ್ರಣ: ರಾಜ್ಯದ ಎಂಟು ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಗರಿಷ್ಠ ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ

# 'ಪ್ರೇಕ್ಷಕರ ಸಂಖ್ಯೆ ನಿರ್ಬಂಧ ರದ್ದುಪಡಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್–19 ನಿಯಂತ್ರಣಕ್ಕಾಗಿ ರಾಜ್ಯದ ಎಂಟು ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಗರಿಷ್ಠ ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ ನೀಡುವ ಬಗ್ಗೆ ರಾಜ್ಯ ಸರ್ಕಾರದ ನಿರ್ಧಾರ ರದ್ದುಗೊಳಿಸಲು ಚಿತ್ರರಂಗ ಒಕ್ಕೊರಲಿನಿಂದ ಆಗ್ರಹಿಸಿದೆ.

ಈ ಕುರಿತು ಟ್ವಿಟರ್‌ನಲ್ಲಿ ಶುಕ್ರವಾರ ಹಲವು ನಟ, ನಟಿಯರು ಟ್ವೀಟ್ ಮಾಡಿದ್ದು, ಸರ್ಕಾರದ ಈ ದಿಢೀರ್ ನಿರ್ಧಾರವನ್ನು ಖಂಡಿಸಿದ್ದಾರೆ. ಟ್ವಿಟರ್‌ನಲ್ಲಿ #WeWant 100PercentOccupency ಎಂಬ ಅಭಿಯಾನ ಆರಂಭವಾಗಿದೆ. ರಾಜಕೀಯ ಚಟುವಟಿಕೆಗಳಿಗೆ ಇಲ್ಲದ ಕೊರೊನಾ ನಿರ್ಬಂಧ ಸಿನಿಮಾಗಳ ಮೇಲೇಕೆ ಎಂದು ಕೂಗು ಕೇಳಿ ಬಂದಿದೆ.

ಸರ್ಕಾರದ ಈ ದಿಢೀರ್ ನಿರ್ಧಾರದಿಂದಾಗಿ ಶುಕ್ರವಾರ ಹಲವೆಡೆ ಪ್ರೇಕ್ಷಕರಿಗೆ ಗೊಂದಲ ಉಂಟಾಗಿತ್ತು. ಮೈಸೂರು ಸೇರಿದಂತೆ ಇನ್ನೂ ಕೆಲವೆಡೆ ಬೆಳಿಗ್ಗಿನ ಚಿತ್ರ ಪ್ರದರ್ಶನಗಳು ಹೌಸ್‌ಫುಲ್‌ನಲ್ಲೇ ನಡೆದಿದೆ. ಸರ್ಕಾರದ ಈ ನಿರ್ಧಾರ ಗುರುವಾರವಷ್ಟೇ ಬಿಡುಗಡೆಯಾಗಿ, ಯಶಸ್ವಿ ಪ್ರದರ್ಶನ ಕಾಣುತ್ತಿರುವ ನಟ ಪುನೀತ್ ರಾಜ್‌ಕುಮಾರ್ ಅಭಿನಯದ 'ಯುವರತ್ನ' ಚಿತ್ರಕ್ಕೆ ಭಾರಿ ಹೊಡೆತ ನೀಡಿದೆ. ಶನಿವಾರ ಬೆಳಗ್ಗೆ ಪುನೀತ್ ಅಭಿಮಾನಿಗಳು ಚಲನಚಿತ್ರ ವಾಣಿಜ್ಯ ಮಂಡಳಿ ಮುಂದೆ ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 'ಸರ್ಕಾರ ಉದ್ದೇಶಪೂರ್ವಕವಾಗಿ ಚಲನಚಿತ್ರವನ್ನೇ ಗುರಿಯಾಗಿಸಿಕೊಂಡು, ವ್ಯವಸ್ಥಿತವಾಗಿ ಸಂಚುರೂಪಿಸಿ ತುಳಿಯುತ್ತಿದೆ' ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಶನಿವಾರ ರಾತ್ರಿ ನಟ ಪುನೀತ್ ರಾಜ್‌ಕುಮಾರ್ ಹಾಗೂ ನಿರ್ದೇಶಕ ಸಂತೋಷ್ ಆನಂದರಾಮ್ ಕೂಡಾ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ, ನಿರ್ಬಂಧ ತೆರವಿಗೆ ಮನವಿ ಮಾಡಿದ್ದಾರೆ. ಸರ್ಕಾರದ ನಿರ್ಧಾರದ ವಿರುದ್ಧ ನಟ, ನಟಿಯರ ಪ್ರತಿಕ್ರಿಯೆ ಹೀಗಿದೆ.

## 'ನಮ್ಮ ಮಾತಿಗೆ ಗೌರವ ಕೊಟ್ಟ ಮುಖ್ಯಮಂತ್ರಿಗೆ ಧನ್ಯವಾದ'

**ಬೆಂಗಳೂರು:** ರಾಜ್ಯದ ಎಂಟು ಜಿಲ್ಲೆಗಳಲ್ಲಿನ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಆದೇಶದ ಅನುಷ್ಠಾನವನ್ನು ಏ.7ರವರೆಗೆ ಮುಂದೂಡಿರುವ ಸರ್ಕಾರದ ಆದೇಶವನ್ನು ನಟ ಪುನೀತ್ ರಾಜ್‌ಕುಮಾರ್ ಸ್ವಾಗತಿಸಿದ್ದಾರೆ.



ಫೇಸ್‌ಬುಕ್ ಲೈವ್‌ನಲ್ಲಿ ಮಾತನಾಡಿದ ಪುನೀತ್, 'ಶನಿವಾರ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ನಾವು ಮಾತುಕತೆ ನಡೆಸಿದೆವು. ನಮ್ಮ ಸಮಸ್ಯೆಯನ್ನು ಮುಖ್ಯಮಂತ್ರಿಗಳ ಮುಂದೆ ಹೇಳಿದೆವು. ಮುಂಗಡ ಟಿಕೆಟ್ ಬುಕ್ಕಿಂಗ್ ಆಗಿದ್ದ ಕಾರಣ ಹೆಚ್ಚಿನ ಗೊಂದಲ ಹಾಗೂ ಸಮಸ್ಯೆಯಾಗಿದೆ ಎಂದು ನಾವು ವಿವರಿಸಿದೆವು. ನಮ್ಮ ಮಾತಿಗೆ ಗೌರವ ಕೊಟ್ಟು, ಕಾಲಾವಕಾಶ ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಎಲ್ಲ ನಟರೂ ನಮ್ಮ ಬೆನ್ನಿಗೆ ನಿಂತರು. ಎಲ್ಲರಿಗೂ ಧನ್ಯವಾದ' ಎಂದರು.

'ಚಿತ್ರ ಬಿಡುಗಡೆಯಾದ ಎರಡೇ ದಿನಕ್ಕೆ ಸರ್ಕಾರ ಪ್ರೇಕ್ಷಕರ ಸಂಖ್ಯೆ ನಿರ್ಬಂಧಗೊಳಿಸಿ ಆದೇಶ ಹೊರಡಿಸಿದ್ದು ಆಘಾತವಾಗಿತ್ತು. ಇದರಿಂದ ನಮಗೆ ಎಷ್ಟು ನೋವಾಗಿತ್ತೋ ಅಷ್ಟೇ ನೋವು, ಸಂಕಟ ಅಭಿಮಾನಿಗಳಿಗೆ ಆಗಿತ್ತು. 'ಚಿತ್ರರಂಗಕ್ಕೆ ತೊಂದರೆ ಕೊಡುವ ಯಾವುದೇ ಉದ್ದೇಶ ಇಲ್ಲ. ಮುಂಗಡ ಟಿಕೆಟ್ ಬುಕ್ಕಿಂಗ್ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಹೀಗಾಗಿ ಈ ಸಮಸ್ಯೆಯಾಗಿದೆ' ಎಂದು ಮುಖ್ಯಮಂತ್ರಿ ಅವರು ತಿಳಿಸಿದರು.

'ಪ್ರಕರಣಗಳು ಕಡಿಮೆಯಾದರೆ ಶೇ 100 ಪ್ರೇಕ್ಷಕರಿಗೆ ಅವಕಾಶ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಯುವರತ್ನ ಚಿತ್ರದ ನಿರ್ದೇಶಕ ಸಂತೋಷ್ ಆನಂದರಾಮ್ ಹೇಳಿದರು.

'ಎಷ್ಟೋ ಚಿತ್ರಗಳು ಮುಂದೆ ಬಿಡುಗಡೆಯಾಗುವುದಿವೆ. ನಮ್ಮ ಉದ್ದೇಶ ಕೇವಲ ಯುವರತ್ನ ಆಗಿರಲಿಲ್ಲ. ಇಡೀ ಉದ್ಯಮದ ಹಿತದೃಷ್ಟಿಯಿಂದ ನಾವು ಒತ್ತಡ ಹಾಕಿದೆವು. ಕಷ್ಟಕಾಲ ಬಂದಾಗ ಹೇಗೆ ಕುಟುಂಬ ಜೊತೆಯಾಗಿ ನಿಲ್ಲುತ್ತದೆಯೋ, ಅದೇ ರೀತಿ ಇಡೀ ಚಿತ್ರರಂಗ ನಮ್ಮ ಜೊತೆ ನಿಂತುಕೊಂಡಿತು. ಇದಕ್ಕೆ ನಾನು ಚಿರಋಣಿ' ಎಂದರು.



ಯಾವುದೇ ತೊಂದರೆಯಾದರೆ ಮೊದಲು ತೊಂದರೆ ಅನುಭವಿಸುವುದು ಕನ್ನಡ ಚಿತ್ರರಂಗ! ಶತದಿನ ಕಾಣುವ 'ಯುವರತ್ನ' ಚಿತ್ರ ಇಂದು ಶೇ 50 ಕೋವಿಡ್ ಮಾನದಂಡಕ್ಕೆ ಬಲಿಯಾಯಿತು! ಆರೋಗ್ಯ ಇಲಾಖೆ ಈ ವಿಷಯ 3 ದಿನ ಮುಂಚೆ ಪ್ರಕಟಿಸಿದ್ದರೆ ನಿರ್ಮಾಪಕರು ಚಿತ್ರ ಬಿಡುಗಡೆ ಮುಂದೂಡುತ್ತಿದ್ದರು! ಯಾರು ನಮ್ಮ ಚಿತ್ರರಂಗಕ್ಕೆ ಆಗುವವರು? ಅನ್ಯಭಾಷಾ ಚಿತ್ರಗಳು ಮಹಾರಾಜರಂತೆ ನಮ್ಮ ಊಟ ಕಿತ್ತುಕೊಳ್ಳುತ್ತಿವೆ!

**-ಜಗ್ಗೇಶ್**, ನಟ



ಈಗಷ್ಟೇ ಬಿಡುಗಡೆಯಾಗಿರುವ ಚಿತ್ರಗಳಿಗೆ ಸರ್ಕಾರದ ಈ ನಿರ್ಧಾರವು ಆಘಾತ ತಂದಿದೆ. ಈ ನಿರ್ಧಾರದ ಹಿಂದೆ ಸೂಕ್ತವಾದ ಕಾರಣವಿರುವುದರಿಂದಾಗಿ, 'ಇದನ್ನು ಗೌರವಿಸುವುದು ನಮ್ಮ ಕರ್ತವ್ಯ. ಈ ಪರಿಸ್ಥಿತಿಯಲ್ಲೂ ಗೆದ್ದುಬರುವ ಶಕ್ತಿಯು ಯುವರತ್ನ ಚಿತ್ರತಂಡಕ್ಕೆ ಸಿಗಲಿ ಎಂದು ನಾನು ಆಶಿಸುತ್ತೇನೆ.

**-ಸುದೀಪ್**, ನಟ




ಹಲವು ಕುಟುಂಬಗಳು ಈ ವೃತ್ತಿಯನ್ನೇ ನಂಬಿಕೊಂಡು ಬದುಕುತ್ತಿವೆ. ಚಿತ್ರ ಬಿಡುಗಡೆ ಮಾಡಿದವರ ಗತಿ ಏನು? ದಯವಿಟ್ಟು ನಿರ್ಬಂಧ ರದ್ದುಗೊಳಿಸಿ. ಲಸಿಕೆ ಬಂದ ಮೇಲೂ ಸರ್ಕಾರ ಯಾಕೆ ಇಂತಹ ನಿರ್ಧಾರ ಕೈಗೊಳ್ಳುತ್ತಿದೆ ಎನ್ನುವ ಪ್ರಶ್ನೆ ಮೂಡಿದೆ.

**-ಶ್ರೀಮುರಳಿ**, ನಟ



ನಮ್ಮಲ್ಲಿ ಜಾಗೃತಿ ಮೂಡಿದೆ. ಜವಾಬ್ದಾರಿಯೂ ಇದೆ. ಹಸಿವಿಗಿಂತ ದೊಡ್ಡ ಕಾಯಿಲೆ ಇಲ್ಲ. ನಿರ್ಬಂಧಗಳು ನಮ್ಮ ಬದುಕಿಗೆ ಸಹಾಯವಾಗಬೇಕೇ ಹೊರತು ಮುಳುವಾಗಬಾರದು. ಎಲ್ಲರೂ ಬದುಕುವ ಅವಕಾಶವಿದೆ, ಚಿತ್ರರಂಗಕ್ಕೆ ಯಾಕಿಲ್ಲ?

**-ಯಶ್**, ನಟ



ಸರ್ಕಾರವು ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಈ ನಿರ್ಬಂಧ ತಂದಿರುವುದು ಸರಿಯಲ್ಲ. ನಿಮಗೆ ಸಿಕ್ಕುವ ಮನರಂಜನೆ ಮತ್ತೆ ಕೆಲವರ ಜೀವನೋಪಾಯವಾಗಿರುತ್ತದೆ. ಚಿತ್ರಮಂದಿರಗಳಲ್ಲಿ ಶೇ 100 ಪ್ರೇಕ್ಷಕರ ಪ್ರವೇಶಕ್ಕೆ ಅನುಮತಿ ನೀಡಿ.

**-ರಕ್ಷಿತ್ ಶೆಟ್ಟಿ**, ನಟ



ಸಿನಿಮಾ ಲಕ್ಷಾಂತರ ಜನರಿಗೆ ಮನರಂಜನೆಯ ಮೂಲ. ಆದರೆ, ಅದರ ಮೇಲೆ ಅವಲಂಬಿತರಾಗಿರುವ ಸಾವಿರಾರು ಜನರಿಗೆ ಅದು ಜೀವನೋಪಾಯ. ಸರ್ಕಾರ ಈ ನಿರ್ಧಾರವನ್ನು ಹಿಂಪಡೆಯಲಿ ಎಂದು ಮನವಿ ಮಾಡುತ್ತೇನೆ.

**-ಧನಂಜಯ್**, ನಟ

ಎಲ್ಲ ವರ್ಗದ ಪ್ರೇಕ್ಷಕರಿಂದ ಪ್ರಶಂಸೆ ಪಡೆದು, ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಸಾರುವ ಸಿನಿಮಾ 'ಯುವರತ್ನ'ಗೆ ಶೇಕಡ 100ರಷ್ಟು ಆಸನ ಭರ್ತಿಗೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಡಬೇಕು.

**-ದಿನಕರ್ ತೂಗುದೀಪ,** ನಿರ್ದೇಶಕ

## ಸಿ.ಡಿ: ಸಂತ್ರಸ್ತೆ ಪರ ವಕೀಲ ಅಮಾನತು

**ಬೆಂಗಳೂರು:** ಸಿ.ಡಿ ಪ್ರಕರಣದಲ್ಲಿ ಸಂತ್ರಸ್ತೆ ಪರ ವಕಾಲತ್ತು ವಹಿಸಿದ್ದ ಆರ್. ಮಂಜುನಾಥ್ ಅವರನ್ನು ವಕೀಲರ ಪರಿಷತ್ತು ಅಮಾನತುಗೊಳಿಸಿದೆ.

ವಕೀಲರ ಪರಿಷತ್ತಿನ ವಿರುದ್ಧ ಏಪ್ರಿಲ್ 1ರಂದು ಮಾಡಿದ ಆರೋಪಗಳ ಕುರಿತು ಹತ್ತು ದಿನಗಳಲ್ಲಿ ಉತ್ತರಿಸುವಂತೆ ಶೋಕಾಸ್ ನೋಟಿಸ್ ನೀಡಲಾಗಿದೆ. ಈ ವಿಚಾರದ ತನಿಖೆ ಮುಗಿಯುವ ತನಕ ವಕೀಲ ವೃತ್ತಿಯ ಪರವಾನಗಿ ತಡೆ ಹಿಡಿಯಲಾಗಿದೆ.

ಯಾವುದೇ ಪ್ರಕರಣದ ಪರವಾಗಿ ವಕೀಲರು ವಕಾಲತ್ತು ವಹಿಸುವಾಗ ವಕೀಲರ ಕ್ಷೇಮಾಭಿವೃದ್ಧಿ ಸ್ಟ್ಯಾಂಪ್‌ಗಳನ್ನು ಲಗತ್ತಿಸಬೇಕು. ಈ ಸ್ಟ್ಯಾಂಪ್‌ನಲ್ಲಿ ಅಕ್ರಮ ನಡೆದಿರುವುದಾಗಿ ಮಂಜುನಾಥ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಮೂಲಕ ಆರೋಪ ಮಾಡಿದ್ದರು.

'ವಕೀಲರ ಪರಿಷತ್ತಿನ ಸದಸ್ಯರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಆರೋಪ ಮಾಡಿದ್ದೀರಿ. ಕ್ಷೇಮಾಭಿವೃದ್ಧಿ ನಿಧಿಯ ಸ್ಟ್ಯಾಂಪ್‌ಗಳಲ್ಲಿ ಅಕ್ರಮ ನಡೆದಿದೆ ಎಂದು ಹೇಳಿದ್ದೀರಿ. ನಕಲಿ ಸ್ಟ್ಯಾಂಪ್‌ಗಳ ಬಳಕೆಯಾಗುತ್ತಿದೆ ಎಂದು ತಿಳಿಸಿದ್ದೀರಿ. ಈ ಪ್ರಕರಣದೊಂದಿಗೆ ತಳಕು ಹಾಕಿದ್ದೀರಿ. ಸಾಮಾಜಿಕ ಜಾಲತಾಣಗಳನ್ನು ಬಳಸಿ ಪರಿಷತ್ತಿನ ತೇಜೋವಧೆಗೆ ಪ್ರಯತ್ನಿಸುತ್ತಿದ್ದೀರಿ' ಎಂದು ಹೇಳಿದೆ.

'ಪರಿಷತ್ತು ಸರ್ವಾನುಮತದಿಂದ ತೆಗೆದುಕೊಂಡ ನಿರ್ಣಯದ ಪ್ರಕಾರ ಪರಿಷತ್ತಿನ ಎಲ್ಲ ಸ್ಥಾನಗಳಿಂದ ನಿಮ್ಮನ್ನು ಏಕೆ ತೆಗೆದುಹಾಕಬಾರದು, ಮುಂದಿನ ಹತ್ತು ದಿನಗಳಲ್ಲಿ ಉತ್ತರ ನೀಡಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಿದೆ.

# ಸಹಿ ಸಂಗ್ರಹಕ್ಕೆ ಬಗ್ಗುವುದಿಲ್ಲ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** 'ನನ್ನ ವಿರುದ್ಧ ಯಾರೇ ಸಹಿ ಸಂಗ್ರಹ ಮಾಡಿದರೂ ಬಗ್ಗುವುದಿಲ್ಲ. ರಾಜೀನಾಮೆ, ಖಾತೆ ಬದಲಾವಣೆಗೆ ಜಗ್ಗುವುದಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಕುರಿತು ಸಾಕಷ್ಟು ಚರ್ಚೆಯಾಗಿದೆ. ನನ್ನ ನಿಲುವು ಸ್ಪಷ್ಟಪಡಿಸಿದ್ದೇನೆ. ಪಕ್ಷದ ವರಿಷ್ಠರು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ. ಗೊಂದಲಕ್ಕೆ ತೆರೆ ಎಳೆಯಲು ಸೂಚಿಸಿದ್ದಾರೆ. ಈ ಕುರಿತು ಬಹಿರಂಗವಾಗಿ ಯಾರೂ ಹೇಳಿಕೆ ನೀಡುವುದಿಲ್ಲ ಎಂದಿದ್ದಾರೆ. ಈಗ ಎಲ್ಲವೂ ಮುಗಿದುಹೋಗಿರುವ ಕಥೆ' ಎಂದರು.



ಕೆ.ಎಸ್.ಈಶ್ವರಪ್ಪ

'ಪ್ರತಿಪಕ್ಷಗಳಿಗೆ ಸಂಘಟಿತ ಬಿಜೆಪಿ ಎದುರಿಸಲು ಯಾವುದೇ ಅಸ್ತ್ರಗಳಿಲ್ಲ. ಕೇಂದ್ರ, ರಾಜ್ಯ ಸರ್ಕಾರಗಳು ಉತ್ತಮ ಕೆಲಸ ಮಾಡುತ್ತಿವೆ. ಬೇರೇನೂ ವಿಷಯಗಳು ಇಲ್ಲದ ಕಾರಣ ರಾಜ್ಯಪಾಲರಿಗೆ ಬರೆದ ಪತ್ರ ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ನಮ್ಮ ಮಧ್ಯೆ ಇರುವುದು ಸಣ್ಣಪುಟ್ಟ ಆಡಳಿತಾತ್ಮಕ ವಿಚಾರಗಳಲ್ಲಿನ ವ್ಯತ್ಯಾಸ' ಎಂದು ಸಮರ್ಥಿಸಿಕೊಂಡರು.

**ಯಡಿಯೂರಪ್ಪ ರಾಜೀನಾಮೆ ಪ್ರಶ್ನೆಯೇ ಇಲ್ಲ:** 'ವಿಧಾನಸಭಾ ಚುನಾವಣೆಯಲ್ಲಿ ಸೋತು ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡಿದ್ದ ಸಿದ್ದರಾಮಯ್ಯ ಮತ್ತೆ ಕನಸು ಕಾಣುತ್ತಿದ್ದಾರೆ. ಯಡಿಯೂರಪ್ಪ ಅವರು ರಾಜೀನಾಮೆ ಕೊಡುವ ಪ್ರಶ್ನೆಯೇ ಉದ್ಭವಿಸದು. ನಾನು ರಾಜ್ಯಪಾಲರಿಗೆ ಬರೆದ ಪತ್ರದ ಕಾರಣಕ್ಕೆ ಮುಖ್ಯಮಂತ್ರಿ ರಾಜೀನಾಮೆ ನೀಡುತ್ತಾರೆ ಎಂಬ ಭ್ರಮೆಯಲ್ಲಿ ಸಿದ್ದರಾಮಯ್ಯ ಇದ್ದಾರೆ' ಎಂದು ಕುಟುಕಿದರು.

**ಯತ್ನಾಳ್ ಪ್ರಖರ ಹಿಂದುತ್ವವಾದಿ:** 'ಬಸನಗೌಡ ಪಾಟೀಲ ಯತ್ನಾಳ್ ಪ್ರಖರ ಹಿಂದುತ್ವವಾದಿ. ಸಾವಿರಾರು ಗೋವುಗಳನ್ನು ಸಾಕಿದ್ದಾರೆ. ಮುಖ್ಯಮಂತ್ರಿ ವಿಷಯದಲ್ಲಿ ಏಕೆ ಹೀಗೆ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. ಅವರ ಮಾತು ಸತ್ಯವೋ, ಸುಳ್ಳೋ ಗೊತ್ತಿಲ್ಲ. ಅವರಿಗೆ ಯಾವ ಭಾಷೆಯಲ್ಲಿ ಹೇಳಬೇಕೋ ಹೇಳಿದ್ದೇನೆ. ಪಕ್ಷದ ವರಿಷ್ಠರು ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತಾರೆ' ಎಂದರು.

## 'ಈಶ್ವರಪ್ಪ ನಡೆ ಸರಿಯಲ್ಲ'



**ಕಲಬುರ್ಗಿ:** 'ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ, ಸಚಿವ ಕೆ.ಎಸ್. ಈಶ್ವರಪ್ಪ ಬಹಿರಂಗ ಹೇಳಿಕೆ ನೀಡುವುದು ಸರಿಯಲ್ಲ. ಬಹಿರಂಗ ಹೇಳಿಕೆಗಳಿಂದಾಗಿ ಈ ಜಗಳ ಈಗ ಒಂದು ಹೆಜ್ಜೆ ಮುಂದೆ ಹೋಗಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ಬೇಸರ ವ್ಯಕ್ತಪಡಿಸಿದರು.

'ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡುವುದಕ್ಕಾಗಿ ಈಶ್ವರಪ್ಪ ಅವರೇ ನನ್ನನ್ನು ಬಿಜೆಪಿಗೆ ಕರೆದುಕೊಂಡು ಬಂದಿದ್ದಾರೆ. ಇಬ್ಬರ ಮಧ್ಯೆ ಈಗ ಅಂಥದ್ದು ಏನಾಗಿದೆ ಎಂದು ಅರ್ಥವಾಗುತ್ತಿಲ್ಲ. ಇಬ್ಬರೂ ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬಹುದಿತ್ತು. ಹಿಂದೆ ಹತ್ತಾರು ಸಾರಿ ಕುಳಿತು ಮಾತನಾಡಿದ್ದಾರೆ. ಆದರೆ, ಈ ಬಾರಿ ಯಾಕೋ ದುಡುಕಿದ್ದಾರೆ. ಪಕ್ಷದ ರಾಜ್ಯ ಘಟಕದ ಮುಖಂಡರು ಈ ಸಮಸ್ಯೆ ಬಗೆಹರಿಸುತ್ತಾರೆ' ಎಂದು ಶನಿವಾರ ಇಲ್ಲಿ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

## 'ಈಶ್ವರಪ್ಪ ವಜಾಗೊಳಿಸಿ, ಇಲ್ಲವೇ ಸಿ.ಎಂ ರಾಜೀನಾಮೆ ಸಲ್ಲಿಸಲಿ'



**ಮಂಗಳೂರು:** 'ಸಿ.ಎಂ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿರುವ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ವಜಾ ಮಾಡಬೇಕು. ಇಲ್ಲವೇ ಹೊಣೆ ಹೊತ್ತು ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು. ನಗರದಲ್ಲಿ ಮಾತನಾಡಿದ ಅವರು, 'ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಈಶ್ವರಪ್ಪ ಅವರು ಸಾಂವಿಧಾನಿಕ ಮುಖ್ಯಸ್ಥರಿಗೆ ತಿಳಿಸಿದ್ದಾರೆ. ಇದು ಗಂಭೀರ ವಿಚಾರ. ಇದುವರೆಗೆ ಯಾವ ಸಚಿವರೂ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವ ಉದಾಹರಣೆ ಇಲ್ಲ' ಎಂದರು.

'ಮುಖ್ಯಮಂತ್ರಿ ಉತ್ತಮ ಆಡಳಿತ ನೀಡುತ್ತಿದ್ದರೆ, ಸಂಜೆಯೊಳಗೆ ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಬೇಕು. ಇಲ್ಲವೇ ತಾವೇ ರಾಜೀನಾಮೆ ಕೊಡಬೇಕು' ಎಂದರು.

**'ಈಶ್ವರಪ್ಪ ಎತ್ತಿದ ಪ್ರಶ್ನೆ ಸಮಂಜಸ' (ಹುಣಸೂರು ವರದಿ):** 'ಪ್ರತಿ ಇಲಾಖೆಯಲ್ಲಿನ ಅನುದಾನ ಹಂಚಿಕೆಯ ಪರಮಾಧಿಕಾರವು ಸಂಬಂಧಿಸಿದ ಸಚಿವರಿಗೆ ಇರುತ್ತದೆಯೇ ಹೊರತು ಮುಖ್ಯಮಂತ್ರಿ ಅಥವಾ ಹಣಕಾಸು ಸಚಿವರಿಗೆ ಅಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಶನಿವಾರ ಇಲ್ಲಿ ಹೇಳಿದರು.

'ಮುಖ್ಯಮಂತ್ರಿಯು ಬಜೆಟ್‌ನಲ್ಲಿ ನೀಡಿದ ಅನುದಾನದ ಮೇಲೆ ಎರಡೂ ಸದನಗಳಲ್ಲಿ ಅನುಮೋದನೆ ಪಡೆದ ಬಳಿಕ, ಸಂಬಂಧಿಸಿದ ಸಚಿವರು ಅನುದಾನ ಬಳಸುವ ಸಾಂವಿಧಾನಿಕ ಸರ್ವಾಧಿಕಾರ ಹೊಂದಿರುವರು. ಈ ನಿಟ್ಟಿನಲ್ಲಿ ಸಚಿವ ಈಶ್ವರಪ್ಪ ಎತ್ತಿರುವ ಪ್ರಶ್ನೆ ಸಮಂಜಸವಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಈಶ್ವರಪ್ಪ ಸಂಘರ್ಷಕ್ಕೆ ಮುಂದಾಗಿಲ್ಲ. ಬದಲಾಗಿ ಹಣಕಾಸು ಖಾತೆ ಹೊಂದಿರುವ ಯಡಿಯೂರಪ್ಪ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ. ಆದರೆ, ಇದನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ' ಎಂದರು.

## 'ಬಾಯಿ ಮುಚ್ಚಿಕೊಂಡಿರಬೇಕು'

**ಬೆಳಗಾವಿ:** 'ನಾಲಾಯಕ್ ಇದ್ದರೆ ಅದು ವಿಜಯಪುರದವ. ಪಕ್ಷದವರನ್ನು ಟೀಕಿಸಲೇಬೇಕು ಎಂದಿದ್ದರೆ ರಾಜೀನಾಮೆ ಕೊಟ್ಟು ಹೊರಗಡೆ ಹೋಗಿ ಏನಾದರೂ ಮಾತನಾಡಿಕೊಳ್ಳಲಿ...'

– ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಅವರು ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೆಸರು ಪ್ರಸ್ತಾಪಿಸದೆ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ಶನಿವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಯತ್ನಾಳ ಹೆಸರು ಪ್ರಸ್ತಾಪಿಸುತ್ತಿದ್ದಂತೆಯೇ ಕೆಂಡಾಮಂಡಲವಾದರು.

'ಆತ ಬಹಳ ಹಿರಿಯ. ಎಲ್ಲಾ ಮೂಲಗಳಿಂದ ಏನೇನೋ ಸಿಗುತ್ತಿದೆ. ಪಕ್ಷದಲ್ಲಿದ್ದುಕೊಂಡು ನಮ್ಮ ಪಕ್ಷದವರನ್ನೇ ಟೀಕಿಸುವುದು ಎಷ್ಟು ಸರಿ? ಪಕ್ಷದ ಚಿಹ್ನೆ ಮತ್ತು ನಮ್ಮ ನಾಯಕರ ಫೋಟೊಗಳನ್ನು ಹಾಕಿಕೊಂಡು ಆಯ್ಕೆಯಾಗಿ ಬಂದಿದ್ದಾರೆ. ಈಗ ಪಕ್ಷಕ್ಕೆ ಅನ್ಯಾಯ ಮಾಡುವುದು ಉಂಡ ಮನೆಗೆ ದ್ರೋಹ ಬಗೆದಂತಾಗುತ್ತದೆ. ಇನ್ಮುಂದೆ ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕು' ಎಂದು ಎಚ್ಚರಿಕೆ ನೀಡಿದರು.

# ನಾಳೆ ರಮೇಶ ಹಾಜರಿ ಕಡ್ಡಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯಿಂದ ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆ ಹಾಗೂ ಮಹಜರು ಮುಗಿಸಿರುವ ಎಸ್‌ಐಟಿ ಅಧಿಕಾರಿಗಳು, ಪ್ರಕರಣದ ಆರೋಪಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿಚಾರಣೆಗೆ ಸಿದ್ಧರಾಗಿದ್ದಾರೆ. 'ಏ. 5ರಂದು ಬೆಳಿಗ್ಗೆ 10.30ಕ್ಕೆ ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗಬೇಕು' ಎಂದು ರಮೇಶಗೆ ನೋಟಿಸ್ ನೀಡಿದ್ದಾರೆ.

ಶುಕ್ರವಾರವೇ (ಏ. 2) ರಮೇಶ ವಿಚಾರಣೆಗೆ ಬರಬೇಕಿತ್ತು. ಆದರೆ, ಜ್ವರದ ಕಾರಣ ನೀಡಿ ವಿಚಾರಣೆಗೆ ಗೈರಾಗಿದ್ದರು. ವಿನಾಯಿತಿ ನೀಡಿದ್ದ ಅಧಿಕಾರಿಗಳು, ಈಗ ಮತ್ತೊಂದು ನೋಟಿಸ್ ಕೊಟ್ಟು ವಿಚಾರಣೆಗೆ ಕಡ್ಡಾಯವಾಗಿ ಹಾಜರಿರಬೇಕೆಂದು ಸೂಚಿಸಿದ್ದಾರೆ. ತಪ್ಪಿದರೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿರುವುದಾಗಿ ಮೂಲಗಳು ಹೇಳಿವೆ.

'ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿ, ಜೀವ ಬೆದರಿಕೆವೊಡ್ಡಿದ್ದಾರೆ' ಎಂದು ಆರೋಪಿಸಿ ಸಂತ್ರಸ್ತೆ ಹೇಳಿಕೆ ದಾಖಲಿಸಿದ್ದಾರೆ. ಅದರನ್ವಯ ಪ್ರಕರಣದ ತನಿಖೆ ಮುಂದುವರಿದಿದ್ದು, ಹೇಳಿಕೆಯಲ್ಲಿರುವ ಪ್ರತಿಯೊಂದು ಅಂಶಗಳಿಗೂ ಸಂತ್ರಸ್ತೆ ಪುರಾವೆಗಳನ್ನು ಒದಗಿಸಿದ್ದಾರೆ.

ಬೌರಿಂಗ್ ಆಸ್ಪತ್ರೆಯಲ್ಲಿ ಸಂತ್ರಸ್ತೆ ವೈದ್ಯಕೀಯ ಪರೀಕ್ಷೆಯನ್ನೂ ನಡೆಸಿ, ಅದರ ವರದಿಗಾಗಿ ತನಿಖಾಧಿಕಾರಿ ಕಾಯುತ್ತಿದ್ದಾರೆ. ಸಂತ್ರಸ್ತೆ ನೀಡಿರುವ ಪುರಾವೆ ಆಧರಿಸಿ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡಿರುವ ತನಿಖಾಧಿಕಾರಿ, ಅವುಗಳಿಗೆ ರಮೇಶ ಜಾರಕಿಹೊಳಿ ಅವರಿಂದ ಉತ್ತರ ಪಡೆಯಲು ಕಾಯುತ್ತಿದ್ದಾರೆ. 'ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆ ರೀತಿಯಲ್ಲೇ ಆರೋಪಿಯನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು. ಧ್ವನಿ ಮಾದರಿಯನ್ನೂ ಸಂಗ್ರಹಿಸಬೇಕು. ಆದರೆ, ಸದ್ಯಕ್ಕೆ ಅದು ಯಾವುದು ಆಗಿಲ್ಲ. ರಮೇಶ ವಿಚಾರಣೆಗೆ ಬಂದರೆ, ಹಲವು ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಅವುಗಳನ್ನು ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

**ನಾಲ್ಕುವರೆ ಗಂಟೆ ವಿಚಾರಣೆ:** ಸಂತ್ರಸ್ತೆಯನ್ನು ಶನಿವಾರವೂ ತನಿಖಾಧಿಕಾರಿ ಎಂ.ಸಿ. ಕವಿತಾ ನೇತೃತ್ವದ ತಂಡ ವಿಚಾರಣೆಗೆ ಒಳಪಡಿಸಿತು. ಆಡುಗೋಡಿಯಲ್ಲಿರುವ ಸಿಸಿಬಿ ತಾಂತ್ರಿಕ ವಿಭಾಗದ ಕೊಠಡಿಗೆ ಬೆಳಿಗ್ಗೆ 10.30ಕ್ಕೆ ಬಂದಿದ್ದ ಸಂತ್ರಸ್ತೆ, ಮಧ್ಯಾಹ್ನ 3 ಗಂಟೆಯವರೆಗೆ ವಿಚಾರಣೆ ಎದುರಿಸಿದರು.

ಐದು ದಿನಗಳಿಂದ ಸಂತ್ರಸ್ತೆಯನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದಿದ್ದ ತನಿಖಾಧಿಕಾರಿ, ಪೂರಕ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ವಿಚಾರಣೆ ಮುಂದುರಿಸಿದ್ದಾರೆ. ವಿಚಾರಣೆ ಮುಗಿದ ನಂತರ ಪೊಲೀಸರೇ ಯುವತಿಯನ್ನು ಅಜ್ಞಾತ ಸ್ಥಳಕ್ಕೆ ಕರೆದೊಯ್ದು ಸುರಕ್ಷಿತವಾಗಿರಿಸಿದ್ದಾರೆ. ಸಂತ್ರಸ್ತೆ ಇರುವ ಸ್ಥಳದಲ್ಲಿ ಪೊಲೀಸರು ಬಿಗಿ ಭದ್ರತೆಯನ್ನೂ ಒದಗಿಸಿದ್ದಾರೆ.

## ಯುವತಿ ಜೊತೆ ಮಾಜಿ ಸಚಿವರ ಒಡನಾಟ?

ರಮೇಶ ಜಾರಕಿಹೊಳಿ ಅವರ ವಿರುದ್ಧ ಅತ್ಯಾಚಾರ ಆರೋಪದಡಿ ದೂರು ನೀಡಿರುವ ಯುವತಿ, ಮಾಜಿ ಸಚಿವರಿಬ್ಬರ ಜೊತೆ ಒಡನಾಟ ಹೊಂದಿದ್ದರೆಂಬ ಮಾಹಿತಿ ತನಿಖೆಯಿಂದ ಹೊರಬಿದ್ದಿರುವುದಾಗಿ ಗೊತ್ತಾಗಿದೆ.

'ಕಳೆದ 10 ವರ್ಷಗಳಿಂದ ಯುವತಿ ಉಪಯೋಗಿಸಿದ್ದ ಮೊಬೈಲ್ ನಂಬರ್ ಕರೆಗಳ ವಿವರಗಳನ್ನು ಎಸ್‌ಐಟಿ ಅಧಿಕಾರಿಗಳು ಸಂಗ್ರಹಿಸಿದ್ದು, ಅದರಲ್ಲಿ ಎರಡು ಮೊಬೈಲ್ ನಂಬರ್‌ಗಳು, ಮಾಜಿ ಸಚಿವರದ್ದು' ಎಂದು ಮೂಲಗಳು ಹೇಳಿವೆ. ಆದರೆ, ಎಸ್‌ಐಟಿ ಅಧಿಕಾರಿಗಳು ಈ ಮಾಹಿತಿಯನ್ನು ಖಚಿತಪಡಿಸಿಲ್ಲ.

'ಚಿತ್ರದುರ್ಗ ಜಿಲ್ಲೆಯ ವಿಧಾನಸಭಾ ಕ್ಷೇತ್ರವೊಂದರಿಂದ ಹಾಗೂ ಹಾವೇರಿ ಜಿಲ್ಲೆಯ ವಿಧಾನಸಭಾ ಕ್ಷೇತ್ರವೊಂದರಿಂದ ಚುನಾಯಿತರಾಗಿದ್ದ ಇಬ್ಬರು, ಸಚಿವರಾಗಿಯೂ ಕೆಲಸ ಮಾಡಿದ್ದರು. ಕೆಲ ತಿಂಗಳ ಹಿಂದಷ್ಟೇ ಅವರು ಯುವತಿ ಜೊತೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ಆದರೆ, ಅದರ ಉದ್ದೇಶವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದೂ ಮೂಲಗಳು ಹೇಳಿವೆ.

# ಪೆಟ್ರೋಲ್ ಸುರಿದು ಮನೆಗೆ ಬೆಂಕಿ: ಆರು ಮಂದಿ ಸಾವು

ಒಂದನೇ ಪುಟದಿಂದ

ಮನೆಯಲ್ಲಿ ಒಟ್ಟು ಎಂಟು ಮಂದಿ ನಿದ್ರಿಸುತ್ತಿದ್ದರು. ಆರೋಪಿಯ ಪತ್ನಿ ಬೇಬಿ (40), ಪಣಿ ಎರವರ ಸೀತೆ (45) ಹಾಗೂ ತೋಲ ಎಂಬುವರ ಪುತ್ರಿ ಪ್ರಾರ್ಥನಾ (6) ಸ್ಥಳದಲ್ಲೇ ಸಜೀವ ದಹನವಾಗಿದ್ದು, ದೇಹಗಳು ಗುರುತಿಸಲಾರದಷ್ಟು ಕರಕಲಾಗಿದ್ದವು. ಅವರ ಸಂಬಂಧಿಕರಾದ ಮಂಜು ಹಾಗೂ ತೋಲ ಅಪಾಯದಿಂದ ಪಾರಾಗಿದ್ದಾರೆ. ಆದರೆ, ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದ ಮಂಜು ಅವರ ಮಕ್ಕಳಾದ ಪ್ರಕಾಶ್ (6), ವಿಶ್ವಾಸ್ (3) ಹಾಗೂ ತೋಲ ಅವರ ಮಗ ವಿಶ್ವಾಸ್ (7) ಮೈಸೂರಿನ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ಆರೋಪಿ, ಎರವರ ಬೋಜ (45) ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಪೊಲೀಸರು ತಂಡ ರಚಿಸಿದ್ದಾರೆ. ಪತಿ ಬೋಜ ನೀಡುತ್ತಿದ್ದ ಕಿರುಕುಳಕ್ಕೆ ಬೇಸತ್ತಿದ್ದ ಬೇಬಿ, ಆತನ ಊರಾದ ಸೊಡ್ಲೂರು ಗ್ರಾಮಕ್ಕೆ ತೆರಳಲು ನಿರಾಕರಿಸಿದ್ದರು. ಹೀಗಾಗಿ, ಮುಗುಟಗೇರಿ ಗ್ರಾಮದಲ್ಲಿರುವ ಕಾಫಿ ಬೆಳೆಗಾರ ಕೋಳೆರ ಚಿಟ್ಯಪ್ಪ ಲೈನ್‌ಮನೆಯಲ್ಲಿ ತಮ್ಮ ಸಹೋದರರ ಜೊತೆಗೆ ವಾಸವಿದ್ದರು. ಇದೇ ಕೋಪದಲ್ಲಿ, ಪತ್ನಿಯನ್ನು ಕೊಲ್ಲುವ ಬೆದರಿಕೆ ಹಾಕಿದ್ದ ಬೋಜ, ಶನಿವಾರ ನಸುಕಿನಲ್ಲಿ ಈ ಕೃತ್ಯವೆಸಗಿ ಪರಾರಿಯಾಗಿದ್ದಾನೆ.



ಕೃತ್ಯ ಎಸಗಲು ಮನೆಯ ಹೆಂಚು ತೆಗೆದಿದ್ದ ಆರೋಪಿ

ಮದ್ಯ ಸೇವಿಸಿದ್ದ ಆರೋಪಿಯು, ನಸುಕಿನ ಮೂರು ಗಂಟೆಯ ಹೊತ್ತಿಗೆ ಲೈನ್‌ಮನೆ ಮನೆಯ ಬಳಿ ಬಂದು, ಕಿಟಕಿ ಬಾಗಿಲು ಮುಚ್ಚಿದ್ದಾನೆ. ಏಣಿ ಸಹಾಯದಿಂದ ಮನೆಯ ಮೇಲೆ ಹತ್ತಿ, ಹೆಂಚು ತೆಗೆದಿದ್ದಾನೆ. ಪತ್ನಿ ಮಲಗಿದ್ದ ಕೋಣೆಯನ್ನೇ ಗುರಿಯಾಗಿಸಿಕೊಂಡು ಪೆಟ್ರೋಲ್ ಸುರಿದು ಬೆಂಕಿ ಹಾಕಿದ್ದಾನೆ. ಬೆಂಕಿಯು ಕ್ಷಣಾರ್ಧದಲ್ಲಿ ವ್ಯಾಪಿಸಿದ್ದರಿಂದ, ಮನೆಯೊಳಗಿದ್ದವರು ಹೊರಗೆ ಬರಲು ಸಾಧ್ಯವಾಗಿಲ್ಲ.

ಪಾರಾಗಿ ಬಂದಿರುವ ಮಂಜು, ಆರೋಪಿಯ ಅಳಿಯ. ತೋಲ, ಮೃತಪಟ್ಟ ಸೀತೆಯ ಸಂಬಂಧಿ. ಇವರಿಬ್ಬರೂ ಬೇರೊಂದು ಕೋಣೆಯಲ್ಲಿ ಮಲಗಿದ್ದರು ಎಂದು ತಿಳಿದುಬಂದಿದೆ. ಜೀವನ್ಮರಣ ಸ್ಥಿತಿಯಲ್ಲಿದ್ದ ಮೂವರು ಮಕ್ಕಳನ್ನು ಗೋಣಿಕೊಪ್ಪಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ, ಅಲ್ಲಿಂದ ಮೈಸೂರಿಗೆ ಕಳುಹಿಕೊಡಲಾಗಿತ್ತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ.

**ಆರೋಪಿ ವಿರುದ್ಧ ಆಕ್ರೋಶ:** ಆರೋಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಸ್ಥಳೀಯರು, ಆತನನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿದ್ದಾರೆ.

'ಅನಕ್ಷರಸ್ಥರಾಗಿರುವ ಬೋಜ, ಮದ್ಯ ಸೇವಿಸಿ ನಡೆಸಿದ ಗಲಾಟೆಯಿಂದ ಆರು ಜೀವಗಳು ಬಲಿಯಾಗಿವೆ. ಪತಿ ಹಾಗೂ ಪತ್ನಿ ಇಬ್ಬರು ಒಟ್ಟಿಗೇ ಜೀವನ ನಡೆಸುತ್ತಿರಲಿಲ್ಲ. ಫೋನ್ ಮಾಡಿದಾಗಲೂ ಇಬ್ಬರು ಜಗಳವಾಡುತ್ತಿದ್ದರು' ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

# ಬಾಲಕ ಸಹಿತ ಇಬ್ಬರ ಸಜೀವ ದಹನ: ಕೊಲೆ ಶಂಕೆ

ಪ್ರಜಾವಾಣಿ ವಾರ್ತೆ

**ನಾಗಮಂಗಲ (ಮಂಡ್ಯ):** ತಾಲ್ಲೂಕಿನ ಅಗಚಹಳ್ಳಿ ಗ್ರಾಮದ ಮನೆಯೊಂದರಲ್ಲಿ ಮಲಗಿದ್ದ 4 ವರ್ಷದ ಬಾಲಕ ಸೇರಿದಂತೆ ಇಬ್ಬರು ಶುಕ್ರವಾರ ರಾತ್ರಿ ಸಜೀವ ದಹನವಾಗಿದ್ದಾರೆ. ದುಷ್ಕರ್ಮಿಗಳು ಬೆಂಕಿ ಹಚ್ಚಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಹಾಸನ ಜಿಲ್ಲೆಯವರಾದ ದೀಪಕ್ (33), ಅವರ ಸಂಬಂಧಿ ಭರತ್‌ರಾಜ್ ಅವರ ಪುತ್ರ ತನ್ವೀಕ್ (4) ಮೃತಪಟ್ಟವರು. ಭರತ್‌ರಾಜ್ ಗಂಭೀರವಾಗಿ ಗಾಯಗೊಂಡಿದ್ದು, ಬೆಳ್ಳೂರು ಕ್ರಾಸ್‌ನ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯವರಾದ ಭರತ್‌ರಾಜ್, ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದು, ಅಗಚಹಳ್ಳಿ ಗ್ರಾಮದಲ್ಲಿ ಮನೆಯೊಂದನ್ನು ಬಾಡಿಗೆ ಪಡೆದು ಪುತ್ರ ತನ್ವೀಕ್‌ನೊಂದಿಗೆ ವಾಸಿಸುತ್ತಿದ್ದರು. ಇವರ ಮನೆಗೆ, ದೀಪಕ್ ಬಂದಿದ್ದರು.

ಶುಕ್ರವಾರ ರಾತ್ರಿ ಮೂವರೂ ಹೋಟೆಲ್‌ನಲ್ಲಿ ಊಟ ಮಾಡಿ, ಮನೆಗೆ ಬಂದು ಮಲಗಿದ್ದರು. ಮಧ್ಯರಾತ್ರಿ ಬೆಂಕಿ ಹೊತ್ತಿಕೊಂಡಾಗ, ಒಳಗಿನಿಂದ 'ಕಾಪಾಡಿ' ಎಂದು ಕಿರುಚುತ್ತಿದ್ದುದು ಕೇಳಿಬಂದಿದೆ. ಅದನ್ನು ಕೇಳಿ, ಮನೆ ಮಾಲೀಕರು ಹಾಗೂ ಸ್ಥಳೀಯರು ನೆರವಿಗೆ ಧಾವಿಸುವಷ್ಟರಲ್ಲಿ ದೀಪಕ್ ಹಾಗೂ ತನ್ವೀಕ್ ಮೃತಪಟ್ಟಿದ್ದರು. ಮನೆಯ ಬಾಗಿಲನ್ನು ಹೊರಗಿನಿಂದ ಹಾಕಿಕೊಂಡಿದ್ದು ಅನುಮಾನಕ್ಕೆ ಕಾರಣವಾಗಿದೆ.

**ಬೆಂಕಿ ಹಚ್ಚಿರುವ ಆರೋಪ:** ದೂರು ಸಲ್ಲಿಸಿರುವ ಮನೆ ಮಾಲೀಕ ದಿನೇಶ್, 'ಸುಟ್ಟ ಗಾಯಗಳಿಂದ ನರಳುತ್ತಿದ್ದ ಭರತ್ ರಾಜ್ ಅವರನ್ನು ವಿಚಾರಿಸಿದಾಗ, ಇಬ್ಬರು ಅಪರಿಚಿತರು ಹಸಿರು ಸ್ಕಾರ್ಪಿಯೊ ಕಾರ್‌ನಲ್ಲಿ ಬಂದು ದೀಪಕ್ ಜೊತೆ ಜಗಳವಾಡಿದರು. ನಂತರ ಬಕೆಟ್‌ನಿಂದ ನಮ್ಮ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾಗಿ ಹೇಳಿದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು' ಎಂದು ತಿಳಿಸಿದ್ದಾರೆ.

'ಪ್ರಕರಣ ಅನುಮಾನಾಸ್ಪದವಾಗಿದ್ದು, ತನಿಖೆ ನಡೆಯುತ್ತಿದೆ. ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದರೆ, ಅವರನ್ನು ಶೀಘ್ರ ಬಂಧಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ. ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೆಂಗಳೂರಲ್ಲಿ ಗಣಿ ಅದಾಲತ್ ಏ.30ರಂದು

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಬೆಂಗಳೂರಿನ ಅರಮನೆ ಮೈದಾನದಲ್ಲಿ ಏ. 30ರಂದು ಬೃಹತ್ ಗಣಿ ಅದಾಲತ್ ನಡೆಸಲಾಗುವುದು' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಶನಿವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಮೇ 15ರಂದು ಮೈಸೂರು, ಮೇ 29ರಂದು ಬೆಳಗಾವಿ, ಜೂನ್ 11ರಂದು ಕಲಬುರ್ಗಿ, ಜೂನ್ 25ರಂದು ಮಂಗಳೂರಿನಲ್ಲಿ ವಿಭಾಗವಾರು ಗಣಿ ಅದಾಲತ್ ಹಮ್ಮಿಕೊಂಡಿದ್ದೇವೆ. ಗಣಿಗಾರಿಕೆಗೆ ಸಂಬಂಧಿಸಿದಂತೆ ಸಮಸ್ಯೆ ಇದ್ದವರು ಮನವಿ ಸಲ್ಲಿಸಿದರೆ ಸಂಬಂಧಿಸಿದ ಅಧಿಕಾರಿಗಳು ಸ್ಥಳದಲ್ಲೇ ಇತ್ಯರ್ಥಪಡಿಸುತ್ತಾರೆ' ಎಂದು ಹೇಳಿದರು.

'ಖನಿಜ ಭವನಗಳಿಲ್ಲದ ಜಿಲ್ಲೆಗಳಲ್ಲಿ ನಿರ್ಮಾಣ ಮಾಡಲಾಗುವುದು. ₹ 10 ಲಕ್ಷ ವೆಚ್ಚದೊಳಗೆ ಮನೆ ನಿರ್ಮಾಣ ಮಾಡುವವರಿಗೆ ಉಚಿತವಾಗಿ ಮರಳು ವಿತರಿಸುವ ನೀತಿ ಜಾರಿಗೆ ತರುತ್ತೇವೆ. ₹10 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಕಟ್ಟಡ ಕಟ್ಟುವವರಿಗೆ ಸರ್ಕಾರ ನಿಗದಿಪಡಿಸಿದ ತೆರಿಗೆ ವಿಧಿಸಲಾಗುತ್ತದೆ. ಎಷ್ಟು ಮರಳು ಬೇಕಾಗುತ್ತದೆಯೋ ಅಷ್ಟಕ್ಕೆ ತೆರಿಗೆ ವಿಧಿಸಲಾಗುವುದು' ಎಂದರು.

ಕಾಸರಗೋಡಿನ ಅಸ್ಮತ್‌ಗೆ 13 ಚಿನ್ನದ ಪದಕ ಪ್ರದಾನ

# ರೈತನ ಪುತ್ರಿಯ 'ಅಪೂರ್ವ' ಸಾಧನೆ

• ಎಂ. ಮಹೇಶ

**ಬೆಳಗಾವಿ:** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕೆ. ಹೊನ್ನಲಗೆರೆಯ ರೈತನ ಪುತ್ರಿ ಎಚ್.ಆರ್. ಅಪೂರ್ವಾ ಬಿಇ (ಎಲೆಕ್ಟ್ರಿಕಲ್ ಎಂಜಿನಿಯರಿಂಗ್) ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಗಳಿಸಿ 7 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಅವರಿಗೆ, ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) 'ಜ್ಞಾನಸಂಗಮ' ಕ್ಯಾಂಪಸ್‌ನಲ್ಲಿ ಶನಿವಾರ ನಡೆದ 20ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಕ್ಷಣಾ ಇಲಾಖೆಯ ಮಾಜಿ ವೈಜ್ಞಾನಿಕ ಸಲಹೆಗಾರ ಡಾ.ವಿ.ಕೆ. ಆತ್ರೆ ಪದಕಗಳನ್ನು ಪ್ರದಾನ ಮಾಡಿ ಬೆನ್ನು ತಟ್ಟಿದರು. ನೆರೆದಿದ್ದವರು ಚಪ್ಪಾಳೆಯ ಸುರಿಮಳೆಗೈದು ಅಭಿನಂದಿಸಿದರು.

ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿಯಾದ ಅವರು ಎಚ್.ಸಿ. ರಮೇಶ್–ಗೀತಾ ದಂಪತಿಯ ಪುತ್ರಿ. 'ನಮಗೆ ಎಕರೆ ಜಮೀನಷ್ಟೆ ಇದೆ. ಕೃಷಿಯೇ ಆಧಾರ. ತಂದೆ–ತಾಯಿ ಕಷ್ಟಪಟ್ಟು ನನ್ನನ್ನು ಓದಿಸಿದ್ದಾರೆ. ಚಿನ್ನದ ಪದಕಗಳನ್ನು ಪಡೆಯುವುದನ್ನು ಅಪ್ಪ ನೋಡಲಾಗಲಿಲ್ಲ. ಡಿಸೆಂಬರ್‌ನಲ್ಲಿ ಅವರಿಗೆ ಪಾರ್ಶ್ವವಾಯು ಆಗಿದ್ದು, ಹಾಸಿಗೆ ಹಿಡಿದಿದ್ದಾರೆ' ಎನ್ನುವಾಗ ಅವರ ಕಣ್ಣಾಲಿಗಳು ತುಂಬಿಹೋದವು.



ಬೆಳಗಾವಿಯ ವಿಟಿಯುನಲ್ಲಿ ಶನಿವಾರ ನಡೆದ 20ನೇ ವಾರ್ಷಿಕ ಘಟಿಕೋತ್ಸವದಲ್ಲಿ ಎಚ್.ಆರ್. ಅಪೂರ್ವಾ, ಅಸ್ಮತ್ ಶರ್ಮೀನ್, ಗಗನಾ ರೆಡ್ಡಿ ಮತ್ತು ಡಿ.ಅರುಣ್ ಚಿನ್ನದ ಪದಕಗಳೊಂದಿಗೆ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

'ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತಿದ್ದೇನೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ 96ರಷ್ಟು ಹಾಗೂ ಪಿಯುಸಿಯಲ್ಲಿ ಶೇ 93ರಷ್ಟು ಅಂಕ ಗಳಿಸಿದ್ದೆ. ಎಂಜಿನಿಯರಿಂಗ್ ಸೇರಿದಾಗ, ಚಿನ್ನದ ಪದಕಗಳನ್ನು ಪಡೆಯುತ್ತೇನೆ ಎಂಬ ಭರವಸೆ ಇರಲಿಲ್ಲ. ಕಲಿಯುತ್ತಾ ಕಲಿಯುತ್ತಾ ಆತ್ಮವಿಶ್ವಾಸ ಹೆಚ್ಚಾಯ್ತು. ಪೋಷಕರ ತ್ಯಾಗದಿಂದಾಗಿ ಈ ಸಾಧನೆ ಸಾಧ್ಯವಾಯಿತು. ಕೋವಿಡ್‌ನಿಂದಾಗಿ ಕೊನೆಯ ಸೆಮಿಸ್ಟರ್ ಆನ್‌ಲೈನ್ ತರಗತಿ ಇತ್ತು. ಊರಲ್ಲಿ ನೆಟ್‌ವರ್ಕ್ ಸಮಸ್ಯೆ ಇತ್ತು. ಈ ನಡುವೆಯೂ ಉತ್ತಮ ಅಂಕ ಗಳಿಸಿದೆ' ಎಂದು ತಿಳಿಸಿದರು.

'ಆರ್ಥಿಕ ಪರಿಸ್ಥಿತಿ ಸರಿ ಇಲ್ಲದಿರುವುದರಿಂದಾಗಿ, ಉನ್ನತ ಶಿಕ್ಷಣಕ್ಕೆ ಹೋಗುತ್ತಿಲ್ಲ. ಉದ್ಯೋಗ ಆಯ್ಕೆ ಮಾಡಿಕೊಂಡಿದ್ದೇನೆ. ಎಲ್ ಅಂಡ್ ಟಿ ಕಂಪನಿಯಲ್ಲಿ ಅಸೋಸಿಯೇಟ್ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ್ದೇನೆ. ಒಂದೆರಡು ವರ್ಷಗಳ ನಂತರ, ಉನ್ನತ ಶಿಕ್ಷಣದತ್ತ ಗಮನಹರಿಸುವೆ' ಎಂದು ತಮ್ಮ ಯೋಜನೆ ಹೇಳಿದರು.

**ಅಮೆರಿಕದಲ್ಲಿ ಸೀಟು:** ಬಿಇ ಎಲೆಕ್ಟ್ರಾನಿಕ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್‌ನಲ್ಲಿ 7 ಚಿನ್ನದ ಪದಕ ಬಾಚಿಕೊಂಡ ಬೆಂಗಳೂರಿನ ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಸಂಸ್ಥೆಯ ಗಗನಾ ರೆಡ್ಡಿ ಅಮೆರಿಕದ ನಾರ್ಥ್ ಕೆರೊಲಿನಾ ಸ್ಟೇಟ್ ಯೂನಿವರ್ಸಿಟಿಯಲ್ಲಿ ವಿಎಲ್‌ಎಸ್‌ಐ ಡಿಸೈನ್ ಸ್ನಾತಕೋತ್ತರ ಪದವಿಗೆ ಸೀಟು ಗಿಟ್ಟಿಸಿದ್ದಾರೆ. ಪ್ರಸ್ತುತ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಅಸೋಸಿಯೇಟ್ ಆಗಿ ಕೆಲಸ ಮಾಡುತ್ತಿದ್ದಾರೆ. ವಕೀಲ ತಿಮ್ಮಾರೆಡ್ಡಿ–ಗೃಹಿಣಿ ಚಂದ್ರಕಲಾ ದಂಪತಿಯ ಪುತ್ರಿ ಅವರು.

'10ನೇ ಸ್ಥಾನದೊಳಗೆ ಬರುತ್ತೇನೆ ಎಂದುಕೊಂಡಿದ್ದೆ. ಮೊದಲ ರ್‍ಯಾಂಕ್ ಸಿಕ್ಕಿದ್ದು ಖುಷಿಯಾಗಿದೆ. ಪೋಷಕರು, ಬೋಧಕರ ಸಹಕಾರ ದೊಡ್ಡದು. ಮುಂಜಾನೆ ಹೆಚ್ಚು ಓದುತ್ತಿದ್ದೆ. ಕೊನೆಯ ಸೆಮಿಸ್ಟರ್ ಆನ್‌ಲೈನ್ ತರಗತಿ ಇತ್ತು. ಮೊಬೈಲ್ ಫೋನ್ ಸ್ಕ್ರೀನ್ ನೋಡಿ ಆಯಾಸ ಆಗುತ್ತಿತ್ತು' ಎಂದು ಪ್ರತಿಕ್ರಿಯಿಸಿದರು.

'ಕೋರ್ಸ್ ಮುಗಿದ ಬಳಿಕ ಒಂದಷ್ಟು ವರ್ಷ ಅಲ್ಲೇ ದುಡಿದು ನಂತರ ಭಾರತಕ್ಕೆ ಮರಳುತ್ತೇನೆ' ಎಂದು ತಿಳಿಸಿದರು.

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಪ್ರೊ. ಅಶುತೋಷ್ ಶರ್ಮಾ ಅವರಿಗೆ ಕುಲಪತಿ ಪ್ರೊ.ಕರಿಸಿದ್ದಪ್ಪ 'ಡಾಕ್ಟರ್ ಆಫ್ ಸೈನ್ಸ್' ಗೌರವ ಪದವಿ ಪ್ರದಾನ ಮಾಡಿದರು.

## ಬೆಂಗಳೂರಿನ ಅರುಣ್ ಸಾಧನೆ

ಬೆಂಗಳೂರಿನ ಬಿಎಂಎಸ್ ತಾಂತ್ರಿಕ ಸಂಸ್ಥೆಯ ಡಿ. ಅರುಣ್ ಬಿಇ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಮೊದಲ ರ್‍ಯಾಂಕ್ ಪಡೆದು 7 ಚಿನ್ನದ ಪದಕಗಳಿಗೆ ಕೊರಳೊಡ್ಡಿದರು. ಅವರು ಕಾಂಡಿಮೆಂಟ್ಸ್ ಅಂಗಡಿ ನಡೆಸುತ್ತಿರುವ ದಿನಕರನ್–ಜ್ಯೋತಿಲಕ್ಷ್ಮಿ ಪುತ್ರ. ಪ್ರಸ್ತುತ ಸಾಫ್ಟ್‌ವೇರ್ ಕಂಪನಿಯಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದಾರೆ.

'ತಂದೆ–ತಾಯಿ ಕಷ್ಟಪಟ್ಟು ನನ್ನನ್ನು ಎಂಜಿನಿಯರಿಂಗ್ ಓದಿಸಿದ್ದಾರೆ. ರಜೆ ಇದ್ದಾಗ ನಾನೂ ನಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಿತ್ಯವೂ ಸರಾಸರಿ 3 ತಾಸು ಓದಿಕೊಳ್ಳುತ್ತಿದ್ದೆ. ಕ್ಯಾಂಪಸ್ ಸಂದರ್ಶನದಲ್ಲಿ ಕೆಲಸದ ಆಫರ್ ಬಂದಿತ್ತು. ಕೋವಿಡ್ ಕಾರಣದಿಂದ ತಡೆ ಹಿಡಿದಿದ್ದಾರೆ. ಹೀಗಾಗಿ, ಕೆಲಸ ಹುಡುಕುತ್ತಿದ್ದೇನೆ. ಆರ್ಥಿಕವಾಗಿ ಶಕ್ತನಾದ ನಂತರ ಸ್ನಾತಕೋತ್ತರ ಪದವಿ ಬಗ್ಗೆ ಯೋಚಿಸುತ್ತೇನೆ' ಎಂದು ತಿಳಿಸಿದರು.

## 'ಹೊನ್ನಿನ ಬೇಟೆ'

ಕಾಸರಗೋಡಿನವರಾದ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಅಸ್ಮತ್ ಶರ್ಮೀನ್ ಟಿ.ಎಸ್. ಬಿಇ ಸಿವಿಲ್ ಎಂಜಿನಿಯರಿಂಗ್‌ನಲ್ಲಿ 13 ಚಿನ್ನದ ಪದಕಗಳಿಗೆ ಮುತ್ತಿಟ್ಟರು. ವ್ಯಾಪಾರಿ ಶರೀಫ್ ಟಿ.ಎ.–ಗೃಹಿಣಿ ಶಹೀದಾ ಕೆ.ಎಚ್. ದಂಪತಿಯ ಪುತ್ರಿ.

'ಮೊದಲ ರ್‍ಯಾಂಕ್ ನಿರೀಕ್ಷೆ ಮಾಡಿದ್ದೆ. ಈ ಸಾಧನೆಯನ್ನು ಪೋಷಕರು, ಗುರುಗಳು ಹಾಗೂ ಸ್ನೇಹಿತರಿಗೆ ಅರ್ಪಿಸುತ್ತೇನೆ. ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಿದ್ದು ನೆರವಾಯಿತು. ಕೆಲಸ ಹುಡುಕುತ್ತಿದ್ದೇನೆ. ನನ್ನ ಹಣದಲ್ಲೇ ಉನ್ನತ ಶಿಕ್ಷಣ ಪಡೆಯಬೇಕು ಎಂದುಕೊಂಡಿದ್ದೇನೆ' ಎಂದು ತಿಳಿಸಿದರು.



ದಾವಣಗೆರೆಯ ಸಿ ಜಿ ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಊಟ ಸವಿಯುತ್ತಿರುವುದು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

# ಉತ್ತರ ಕರ್ನಾಟಕದ 17 ಕಡೆ ಇನ್ನೂ ಆರಂಭವಾಗಿಲ್ಲ ಸೇವೆ

**ಹುಬ್ಬಳ್ಳಿ:** ಉತ್ತರ ಕರ್ನಾಟಕ ಭಾಗದ 8 ಜಿಲ್ಲೆಗಳಿಗೆ 56 ಇಂದಿರಾ ಕ್ಯಾಂಟೀನ್‌ಗಳು ಮಂಜೂರಾಗಿವೆ. ಈ ಪೈಕಿ 17 ಆರಂಭವಾಗಿಲ್ಲ. ಕೆಲವು ಕ್ಯಾಂಟೀನ್‌ಗಳ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದ್ದರೆ, ಉಳಿದವು ಉದ್ಘಾಟನೆಯಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ಸುಮಾರು ಎರಡು ತಿಂಗಳು ಮುಚ್ಚಿದ್ದ ಕ್ಯಾಂಟೀನ್‌ಗಳು ಪುನರಾರಂಭಗೊಂಡಿವೆ.

ಧಾರವಾಡದ 15ರ ಪೈಕಿ 6 ಕ್ಯಾಂಟೀನ್‌ಗಳು ಇನ್ನೂ ಆರಂಭಗೊಂಡಿಲ್ಲ. ಹುಬ್ಬಳ್ಳಿ–ಧಾರವಾಡದಲ್ಲಿ 3 ಹಾಗೂ ಕುಂದಗೋಳ, ಕಲಘಟಗಿ, ನವಲಗುಂದ ತಾಲ್ಲೂಕುಗಳಿಗೆ ಮಂಜೂರಾಗಿದ್ದ ಒಂದೊಂದು ಕ್ಯಾಂಟೀನ್‌ಗಳ ನಿರ್ಮಾಣಕಾರ್ಯ ಪೂರ್ಣಗೊಂಡಿಲ್ಲ. ಬಾಗಲಕೋಟೆಯ 7 ಕ್ಯಾಂಟೀನ್‌ಗಳ ಪೈಕಿ ಬೀಳಗಿ, ಮುಧೋಳ ಹಾಗೂ ಹುನಗುಂದದ ಕ್ಯಾಂಟೀನ್‌ಗಳು ಉದ್ಘಾಟನೆಯಾಗಬೇಕಿದೆ.

ವಿಜಯಪುರದ 6 ಕ್ಯಾಂಟೀನ್‌ಗಳ ಪೈಕಿ ಸಿಂದಗಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳಲ್ಲಿ ತೆರೆದಿಲ್ಲ. ಗದಗದಲ್ಲಿ 6ರ ಪೈಕಿ ಜಿಲ್ಲಾ ಕೇಂದ್ರದಲ್ಲಿ 2 ಕ್ಯಾಂಟೀನ್ ಜಾಗದ ಸಮಸ್ಯೆಯಿಂದ ನಿರ್ಮಾಣವಾಗಿಲ್ಲ. ನರಗುಂದ ತಾಲ್ಲೂಕಿನಲ್ಲಿ ಕಟ್ಟಡ ಸಿದ್ಧವಾಗಿದ್ದರೂ ಕ್ಯಾಂಟೀನ್ ಆರಂಭಗೊಂಡಿಲ್ಲ. ಹಾವೇರಿಗೆ ಮಂಜೂರಾದ ಮೂರರ ಪೈಕಿ ಜಿಲ್ಲಾ ಕೇಂದ್ರದಲ್ಲಿ ಒಂದು ಚಾಲ್ತಿಯಲ್ಲಿದೆ. ರಾಣೆಬೆನ್ನೂರು ತಾಲ್ಲೂಕಿನ 2 ಕ್ಯಾಂಟೀನ್‌ಗಳ ಉದ್ಘಾಟನೆಗೆ ಕಾಲ ಕೂಡಿ ಬಂದಿಲ್ಲ.

‘ನಿರ್ಮಾಣಗೊಳ್ಳದ ಕ್ಯಾಂಟೀನ್‌ಗಳಿಗೆ ಅನುದಾನದ ಕೊರತೆಯಾದರೆ, ನಿರ್ಮಾಣವಾಗಿರುವ ಕ್ಯಾಂಟೀನ್‌ಗಳ ಉದ್ಘಾಟನೆಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಕಾರಣವಾಗಿದೆ’ ಎಂದು ಸ್ಥಳೀಯರು ದೂರುತ್ತಾರೆ.

**ಗ್ರಾಹಕರ ಇಳಿಕೆ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬಹುತೇಕ ವಲಸೆ ಕಾರ್ಮಿಕರು ಕೋವಿಡ್ ಲಾಕ್‌ಡೌನ್ ಪರಿಣಾಮ ತವರಿಗೆ ತೆರಳಿದ್ದು, ಇಂದಿರಾ ಕ್ಯಾಂಟೀನ್‌ಗಳಲ್ಲೂ ಗ್ರಾಹಕರ ಸಂಖ್ಯೆ ಇಳಿಮುಖವಾಗಿದೆ. ನಗರದಲ್ಲಿ ಐದು ಕ್ಯಾಂಟೀನ್‌ಗಳು ತೆರೆದಿವೆ. ಪುತ್ತೂರು, ಬೆಳ್ತಂಗಡಿ, ಸುಳ್ಯದಲ್ಲಿ ಬಂದ್ ಆಗಿದ್ದ ಕ್ಯಾಂಟೀನ್‌ಗಳು ಆರಂಭಗೊಂಡಿವೆ.

ಚಿಕ್ಕಮಗಳೂರಿನಲ್ಲಿ ಏಳು ಕ್ಯಾಂಟೀನ್‌ಗಳು ನಡೆಯುತ್ತಿವೆ. ಆದರೆ, ‘ಕಳೆದ ಆಗಸ್ಟ್‌ನಿಂದ ಸುಮಾರು ₹1 ಕೋಟಿ ಅನುದಾನ ಬಿಡುಗಡೆಯಾಗಿಲ್ಲ’ ಎಂದು ಜಿಲ್ಲೆಯ ಇಂದಿರಾ ಕ್ಯಾಂಟೀನ್‌ಗಳ ವ್ಯವಸ್ಥಾಪಕ ಸುಹಾಸ್ ಗೌಡ ಹೇಳಿದರು.

## ‘ದರ್ಶಿನಿ ನಡೆಸಲು ಅವಕಾಶ ಕೊಡಬಹುದು’

**ಮೈಸೂರು:** ‘ದುಡಿಯುವ ವರ್ಗಕ್ಕೆ ಕಡಿಮೆ ದರದಲ್ಲಿ ಗುಣಮಟ್ಟದ ಊಟ–ಉಪಾಹಾರ ನೀಡಲಿಕ್ಕಾಗಿಯೇ ಇಂದಿರಾ ಕ್ಯಾಂಟೀನ್ ಆರಂಭವಾಗಿದ್ದವು. ಒಂದು ವೇಳೆ, ನಿರ್ವಹಣೆಯ ಸಮಸ್ಯೆಯಿಂದ ಕ್ಯಾಂಟೀನ್ ಸೇವೆ ಸ್ಥಗಿತಗೊಳಿಸುವುದಾದರೆ ಅವುಗಳನ್ನು ಖಾಸಗಿಯವರಿಗೆ ಕೊಟ್ಟು, ಅಲ್ಲಿ ದರ್ಶಿನಿ ನಡೆಸಲಷ್ಟೇ ಅವಕಾಶ ಕೊಡಬಹುದು’ ಎನ್ನುತ್ತಾರೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಗರ ಯೋಜನಾ ಸದಸ್ಯ ಜಿ.ಎಸ್. ಜಯಸಿಂಹ.

ದುಡಿಯುವ ವರ್ಗಕ್ಕೆ ಕೈಗೆಟುಕುವ ದರದಲ್ಲೇ ಗುಣಮಟ್ಟದ ಶುಚಿ–ರುಚಿಯಾದ ಊಟ ಮತ್ತು ಉಪಾಹಾರ ಒದಗಿಸಬೇಕು ಎಂಬ ಕರಾರು ಹಾಕಿಯೇ ಕ್ಯಾಂಟೀನ್ ಗುತ್ತಿಗೆ ನೀಡಬೇಕು. ಇದರಿಂದ ಉದ್ಯೋಗ ಸೃಷ್ಟಿಸಿದಂತಾಗುತ್ತದೆ. ಸರ್ಕಾರದ ಆಶಯವೂ ಈಡೇರಲಿದೆ. ಜೊತೆಗೆ, ಈಗಾಗಲೇ ನಿರ್ಮಿಸಿರುವ ಕಟ್ಟಡಗಳು ಪಾಳು ಬೀಳದೆ ಬಳಕೆಯಾಗಲಿವೆ’ ಎಂದು ಅವರು ಸಲಹೆ ನೀಡಿದರು.

## ಅನುದಾನ ಬರದಿದ್ದರೂ ನಿಲ್ಲದ ಕೈಂಕರ್ಯ

**ದಾವಣಗೆರೆ:** ಜಿಲ್ಲೆಯಲ್ಲಿ ಒಟ್ಟು 11 ಇಂದಿರಾ ಕ್ಯಾಂಟೀನ್‌ಗಳಿದ್ದು, ನಗರದಲ್ಲಿಯೇ ಎಂಟು ಇವೆ. ಎಲ್ಲವೂ ಕಾರ್ಯನಿರ್ವಹಿಸುತ್ತಿವೆ.

‘ನಗರದ ಎಂಟು ಕ್ಯಾಂಟೀನ್‌ಗಳ ನಿರ್ವಹಣೆಗೆ ಪಾಲಿಕೆ ಶೇ 70 ಹಾಗೂ ಜಿಲ್ಲಾಡಳಿತ ಶೇ 30ರಷ್ಟು ಅನುದಾನ ನೀಡುತ್ತಿವೆ. ಜಿಲ್ಲಾಡಳಿತದಿಂದ ₹ 2 ಕೋಟಿ ಅನುದಾನ ಬರುವುದು ಬಾಕಿ ಇದೆ’ ಎನ್ನುತ್ತಾರೆ ಕ್ಯಾಂಟೀನ್‌ಗಳ ನಿರ್ವಹಣೆ ಹೊಣೆ ಹೊತ್ತಿರುವ ಉಮೇಶ್ ಶೆಟ್ಟಿ.

ಚಿತ್ರದುರ್ಗ ಜಿಲ್ಲೆಗೆ ಒಟ್ಟು ಏಳು ಇಂದಿರಾ ಕ್ಯಾಂಟೀನ್‌ಗಳು ಮಂಜೂರಾಗಿವೆ. ಮೊಳಕಾಲ್ಮುರಿನಲ್ಲಿ ಮಾತ್ರ ಇನ್ನೂ ಆರಂಭಗೊಂಡಿಲ್ಲ. ಶಿವಮೊಗ್ಗ ನಗರದಲ್ಲಿ ನಾಲ್ಕು, ಭದ್ರಾವತಿ ನಗರದಲ್ಲಿ ಎರಡು ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ.

ಶಿವಮೊಗ್ಗದ ಪ್ರತಿ ಕ್ಯಾಂಟೀನ್‌ಗೆ ದಿನಕ್ಕೆ 1,500 ಜನರಿಗೆ ಊಟ ನೀಡಲು ಅವಕಾಶವಿದ್ದರೂ ಕೋವಿಡ್ ಕಾರಣಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಜನರು ಬರುತ್ತಿಲ್ಲ. ಸಾಗರದಲ್ಲಿ ಒಂದು ವರ್ಷದ ಹಿಂದೆಯೇ ಇಂದಿರಾ ಕ್ಯಾಂಟೀನ್ ನಿರ್ಮಿಸಲಾಗಿದ್ದರೂ ಇನ್ನೂ ಕಾರ್ಯಾರಂಭ ಮಾಡಿಲ್ಲ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಒಟ್ಟು 36 ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ಎರಡು ಕ್ಯಾಂಟೀನ್‌ಗಳ ಪೈಕಿ ಒಂದು ಸ್ಥಗಿತಗೊಂಡಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಲಾಕ್‌ಡೌನ್ ತೆರವಿನ ಬಳಿಕ ವಹಿವಾಟು ಚೇತರಿಸಿಕೊಂಡಿದೆ. ನಗರದಲ್ಲಿ ಏಳು, ತಾಲ್ಲೂಕು ಕೇಂದ್ರಗಳಾದ ಚಿಂಚೋಳಿ ಮತ್ತು ಚಿತ್ತಾಪುರದಲ್ಲಿ ತಲಾ ಒಂದೊಂದು ಕ್ಯಾಂಟೀನ್‌ಗಳಿವೆ. ಇನ್ನುಳಿದ ತಾಲ್ಲೂಕುಗಳಲ್ಲಿ ಆರಂಭವಾಗಿಲ್ಲ.

ಒಂದು ದಿನಕ್ಕೆ ಎರಡು ಊಟ, ಒಂದು ಉಪಾಹಾರ ಸೇರಿ ಪಾಲಿಕೆಯಿಂದ ₹ 27 ನೆರವು ಕೊಡಬೇಕು ಎಂಬುದು ನಿಯಮ. ಆದರೆ, ಮಾಸಿಕ ಟೆಂಡರ್‌ನಲ್ಲಿ ಗರಿಷ್ಠ ₹ 500ರಿಂದ ಕನಿಷ್ಠ ₹ 250ರವರೆಗೆ ನೀಡುವುದಾಗಿ ಒಪ್ಪಂದವಾಗಿದೆ. ಸರ್ಕಾರದಿಂದ ಹಣ ನೀಡದ ಕಾರಣ 12 ತಿಂಗಳಿಂದ ಅದು ಕೂಡ ನಿಂತುಹೋಗಿದೆ. ಆದರೂ ಗುತ್ತಿಗೆದಾರರು ಕ್ಯಾಂಟೀನ್ ಬಂದ್ ಮಾಡಿಲ್ಲ.

‘ಪ್ರತಿದಿನ ಬೆಳಿಗ್ಗೆ 6ರಿಂದಲೇ ತರಕಾರಿ ಮಾರಲು ಬರುತ್ತೇನೆ. ಬೆಳಿಗ್ಗೆಯ ನಾಷ್ಟಾ ಹಾಗೂ ಮಧ್ಯಾಹ್ನ ಊಟವನ್ನು ಇಂದಿರಾ ಕ್ಯಾಂಟೀನ್‌ನಲ್ಲಿ ಮಾಡುತ್ತೇನೆ. ₹ 25ರಲ್ಲಿ ಹೊಟ್ಟೆ ತುಂಬುತ್ತದೆ. ಆದರೆ, ಬಹಳಷ್ಟು ದಿನ ಅನ್ನ–ಬೇಳೆ ಸಾರು ಮಾತ್ರ ಇರುತ್ತದೆ. ದಿನಾಲೂ ರೊಟ್ಟಿ ಕೊಟ್ಟರೆ ಅನುಕೂಲ’ ಎನ್ನುತ್ತಾರೆ ಕಲಬುರ್ಗಿಯ ರೈಲುನಿಲ್ದಾಣ ರಸ್ತೆಯ ತರಕಾರಿ ವ್ಯಾಪಾರಿ ಮಹಾಂತಮ್ಮ ಗಡದಿ.

# ನಿತ್ಯ 1.60 ಲಕ್ಷ ಮಂದಿಯ ಹಸಿವು ತಣಿಸುತ್ತಿದೆ ಇಂದಿರಾ ಕ್ಯಾಂಟೀನ್

**ಬೆಂಗಳೂರು:** ಕೋವಿಡ್ ಕಾಣಿಸಿಕೊಂಡ ಬಳಿಕ ನಗರದಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಗ್ರಾಹಕರ ಸಂಖ್ಯೆ ಕಡಿಮೆಯಾಗಿದ್ದರೂ ಈಗಲೂ ನಿತ್ಯ 1.60 ಲಕ್ಷ ಮಂದಿಯ ಹಸಿವನ್ನು ಇವು ತಣಿಸುತ್ತಿವೆ.

ನಗರದಲ್ಲಿ 2018ರ ಆಗಸ್ಟ್ ವೇಳೆಗೆ ಈ ಕ್ಯಾಂಟೀನ್‌ಗಳಲ್ಲಿ ನಿತ್ಯ ಆಹಾರ ಸೇವಿಸುವವರ ಸಂಖ್ಯೆ 2.28 ಲಕ್ಷದವರೆಗೆ ಏರಿಕೆಯಾಗಿತ್ತು. ಕ್ರಮೇಣ ಈ ಸಂಖ್ಯೆ ಇಳಿಮುಖವಾಗುತ್ತಾ ಸಾಗಿತ್ತು. ಕೋವಿಡ್ ಸಂದರ್ಭದಲ್ಲಿ 2020ರ ಮಾರ್ಚ್ ತಿಂಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಚಿತ ಆಹಾರ ಪೂರೈಕೆ ಆರಂಭಿಸಿದಾಗ ದಿನವೊಂದಕ್ಕೆ 3.10 ಲಕ್ಷ ಜನರು ಊಟ ಪಡೆದ ಉದಾಹರಣೆಗಳಿವೆ.

‘ಕೋವಿಡ್ ಕಾಣಿಸಿಕೊಂಡ ಬಳಿಕ ಬಹುತೇಕ ವಲಸೆ ಕಾರ್ಮಿಕರು ಊರಿಗೆ ಮರಳಿದರು. ಶಾಲಾ ಕಾಲೇಜುಗಳು ತಿಂಗಳಾನುಗಟ್ಟಲೆ ಪುನರಾರಂಭವಾಗಿರಲಿಲ್ಲ. ಹಾಗಾಗಿ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಚಿತ ಆಹಾರ ನೀಡುವುದು ಸ್ಥಗಿತಗೊಳಿಸಿದ ಬಳಿಕ ನಿತ್ಯ ಆಹಾರದ ಬೇಡಿಕೆ ಕಡಿಮೆ ಆಗಿತ್ತು. ಜನಜೀವನ ಸಹಜಸ್ಥಿತಿಗೆ ಮರಳಿದ ಬಳಿಕ ನಿತ್ಯವೂ ಸರಾಸರಿ 1.60 ಲಕ್ಷ ಮಂದಿ ಕ್ಯಾಂಟೀನ್‌ಗಳಲ್ಲಿ ಆಹಾರ ಸೇವಿಸುತ್ತಿದ್ದಾರೆ’ ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

## ಬಿಬಿಎಂಪಿಗೆ ₹ 221 ಕೋಟಿ ಬಾಕಿ

ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯ ಸಂಪೂರ್ಣ ವೆಚ್ಚವನ್ನು ಭರಿಸುವುದಾಗಿ ವಾಗ್ದಾನ ನೀಡಿದ್ದ ಸರ್ಕಾರ, ಆ ಮಾತನ್ನು ಉಳಿಸಿಕೊಂಡಿಲ್ಲ. 2017ರಿಂದ 2021ರ ಜನವರಿ ವರೆಗೆ ಬಿಬಿಎಂಪಿಗೆ ₹221 ಕೋಟಿಯನ್ನು ಬಾಕಿ ಉಳಿಸಿಕೊಂಡಿದೆ.

ಕ್ಯಾಂಟೀನ್‌ಗಳನ್ನು ಆರಂಭಿಸಿದ ಮೊದಲ ವರ್ಷ ಬಿಬಿಎಂಪಿಯು ಕಟ್ಟಡ ಕಾಮಗಾರಿಗಳಿಗೆ ₹ 108 ಕೋಟಿ ವೆಚ್ಚ ಮಾಡಿತ್ತು (ಭದ್ರತಾ ವ್ಯವಸ್ಥೆ ಹಾಗೂ ಆವರಣ ಗೋಡೆಗಳಿಗೆ ಮಾಡಿದ್ದ ₹ 24.37 ಕೋಟಿ ಖರ್ಚು ಸೇರಿದೆ). ಆಹಾರ ಪೂರೈಕೆಗೆ ₹ 46.58 ಕೋಟಿ ಖರ್ಚಾಗಿತ್ತು. ಆದರೆ, ಬಿಬಿಎಂಪಿಗೆ ಸರ್ಕಾರ ಮೊದಲ ವರ್ಷ ಬಿಡುಗಡೆ ಮಾಡಿದ್ದು ₹ 100 ಕೋಟಿ ಮಾತ್ರ. 2018–19ನೇ ಸಾಲಿನಲ್ಲಿ ಆಹಾರ ಪೂರೈಕೆಗೆ ಬಿಬಿಎಂಪಿ ₹ 95.20 ಕೋಟಿ ವೆಚ್ಚ ಮಾಡಿತ್ತು. ಆ ಸಾಲಿನಲ್ಲಿ ಇಂದಿರಾ ಕ್ಯಾಂಟೀನ್ ನಿರ್ವಹಣೆಗೆ ಸರ್ಕಾರ ಬಜೆಟ್‌ನಲ್ಲಿ ₹ 145 ಕೋಟಿ ಕಾಯ್ದಿರಿಸಿದ್ದರೂ ಬಿಡುಗಡೆ ಮಾಡಿದ್ದು ₹ 115.38 ಕೋಟಿಯನ್ನು ಮಾತ್ರ.

‘ಕ್ಯಾಂಟೀನ್‌ಗಳ ನಿರ್ವಹಣೆಗಾಗಿ ಬಿಬಿಎಂಪಿಗೆ ನೀಡಬೇಕಾದ ₹ 220.96 ಕೋಟಿಯನ್ನು ಸರ್ಕಾರ ಬಾಕಿ ಉಳಿಸಿಕೊಂಡಿದೆ. ಕೋವಿಡ್‌ನಿಂದಾಗಿ ಬಿಬಿಎಂಪಿ ಸಂಪನ್ಮೂಲ ಕ್ರೋಡೀಕರಣಕ್ಕೆ ಹಿನ್ನಡೆಯಾಗಿದೆ. ಹಾಗಾಗಿ ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕು’ ಎಂದು ಕೋರಿ ಪಾಲಿಕೆಯ ಈ ಹಿಂದಿನ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ (ಪಾಲಿಕೆಯ ಈಗಿನ ಆಡಳಿತಾಧಿಕಾರಿ) ಅವರಿಗೆ 2021ರ ಜ.12ರಂದು ಪತ್ರ ಬರೆದಿದ್ದರು.

## 4 ಅಡುಗೆಮನೆ, 4 ಕ್ಯಾಂಟೀನ್; 6 ಸಂಚಾರ ಕ್ಯಾಂಟೀನ್ ಸ್ಥಗಿತ

ಬಿಬಿಎಂಪಿ ವ್ಯಾಪ್ತಿಯ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಸಲು ಒಟ್ಟು 18 ಅಡುಗೆಮನೆಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ನಾಲ್ಕು ಅಡುಗೆಮನೆಗಳು ಕಾರ್ಯ ನಿರ್ವಹಿಸುತ್ತಿಲ್ಲ. ನಗರದಲ್ಲಿ ನಾಲ್ಕು ಕ್ಯಾಂಟೀನ್‌ಗಳನ್ನೂ ಮುಚ್ಚಲಾಗಿದೆ. ಒಟ್ಟು 24 ಸಂಚಾರ ಕ್ಯಾಂಟೀನ್‌ಗಳ ಪೈಕಿ 6 ಕ್ಯಾಂಟೀನ್‌ಗಳು ಸ್ಥಗಿತಗೊಂಡಿವೆ.

‘ಕ್ಯಾಂಟೀನ್‌ಗಳನ್ನು ಮುಚ್ಚಲು ಗ್ರಾಹಕರ ಸಂಖ್ಯೆ ಕುಸಿತದ ಜೊತೆ ಬೇರೆ ಕಾರಣಗಳೂ ಇವೆ. ಕೆಲವು ಕಡೆ ಅಕ್ಕಪಕ್ಕದಲ್ಲಿ ಕ್ಯಾಂಟೀನ್‌ಗಳು ಇದ್ದಿದ್ದರಿಂದ ಒಂದನ್ನು ಸ್ಥಗಿತಗೊಳಿಸಲಾಗಿದೆ. ಕೆಲವು ಸ್ಥಳಗಳು ಕ್ಯಾಂಟೀನ್ ನಿರ್ಮಾಣಕ್ಕೆ ಸೂಕ್ತವಾಗಿರಲಿಲ್ಲ. ಬೇಡಿಕೆ ಕುಸಿತದ ಕಾರಣ 6 ಸಂಚಾರ ಕ್ಯಾಂಟೀನ್‌ಗಳನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಕುಡಿಯುವ ನೀರಿನ ಬಿಲ್ ಪಾವತಿಸಿಲ್ಲ ಎಂಬ ಕಾರಣಕ್ಕೆ 12 ಅಡುಗೆ ಮನೆಗಳಿಗೆ ಇತ್ತೀಚೆಗೆ ನೀರಿನ ಸಂಪರ್ಕ ಕಡಿತಗೊಳಿಸಲಾಗಿತ್ತು. ‘ಈ ಅಡುಗೆಮನೆಗಳಿಗೆ ಜಲಮಂಡಳಿ ವಾಣಿಜ್ಯ ದರವನ್ನು ವಿಧಿಸುತ್ತಿತ್ತು. ಇದು ದುಬಾರಿ ಎಂಬ ಕಾರಣಕ್ಕೆ ಗುತ್ತಿಗೆದಾರರೇ ಜಲಮಂಡಳಿಯ ನೀರನ್ನು ನಿರಾಕರಿಸಿದ್ದರು’ ಎನ್ನುತ್ತಾರೆ ಅಧಿಕಾರಿಗಳು.

## ಬಿಸಿಯೂಟಕ್ಕಿಂತ ವೆಚ್ಚ ತುಸು ದುಬಾರಿ

ಶಾಲೆಗಳಲ್ಲಿ ನೀಡುವ ಬಿಸಿಯೂಟ ಹಾಗೂ ಹಾಸ್ಟೆಲ್‌ಗಳಲ್ಲಿ ನೀಡುವ ಊಟಗಳಿಗೆ ಹೋಲಿಸಿದರೆ ಇಂದಿರಾ ಕ್ಯಾಂಟೀನ್‌ಗೆ ಸರ್ಕಾರ ಖರ್ಚು ಮಾಡುವ ಮೊತ್ತ ತುಸು ಹೆಚ್ಚೇ ಇದೆ. ಶಾಲಾ ಬಿಸಿಯೂಟ ತಯಾರಿಸುವುದಕ್ಕೆ ಸರ್ಕಾರ ಪ್ರತಿ ವಿದ್ಯಾರ್ಥಿಗೆ ಒಂದು ಹೊತ್ತಿಗೆ ₹7.45 ನೀಡುತ್ತದೆ. ಜೊತೆಗೆ ಪ್ರತಿ ವಿದ್ಯಾರ್ಥಿಗೆ ತಲಾ 150 ಗ್ರಾಂ ಅಕ್ಕಿ ಪೂರೈಸುತ್ತದೆ. ಹಾಸ್ಟೆಲ್‌ಗಳಲ್ಲಿ ಸರ್ಕಾರ ಒಬ್ಬ ವಿದ್ಯಾರ್ಥಿಗೆ ಒಂದು ದಿನಕ್ಕೆ (ಮೂರು ಹೊತ್ತಿನ ಊಟೋಪಹಾರ) ತಲಾ ₹ 50 ವೆಚ್ಚ ಮಾಡುತ್ತದೆ. ಇಂದಿರಾ ಕ್ಯಾಂಟೀನ್‌ನಲ್ಲಿ ಒಬ್ಬ ವ್ಯಕ್ತಿಯ ಎರಡು ಹೊತ್ತಿನ ಊಟ ಹಾಗೂ ಒಂದು ಹೊತ್ತಿನ ಉಪಾಹಾರಕ್ಕೆ ಸರ್ಕಾರ ₹ 30.30 ಪೈಸೆ ನೀಡುತ್ತಿದೆ. ಇದರ ಜೊತೆಗೆ ₹ 25 (ಎರಡು ಹೊತ್ತಿನ ಊಟಕ್ಕೆ ತಲಾ ₹ 10 ಹಾಗೂ ಉಪಾಹಾರಕ್ಕೆ ₹ 5ರಂತೆ) ಅನ್ನು ಗ್ರಾಹಕರಿಂದ ವಸೂಲಿ ಮಾಡಲಾಗುತ್ತದೆ. ಅಂದರೆ ಎರಡು ಹೊತ್ತಿನ ಊಟ ಹಾಗೂ ಒಪ್ಪೊತ್ತಿನ ಉಪಾಹಾರಕ್ಕೆ ₹ 55.30 ವೆಚ್ಚವಾಗುತ್ತಿದೆ. ಇದರಲ್ಲಿ ಕ್ಯಾಂಟೀನ್ ನಿರ್ವಹಣೆ, ಆಹಾರ ಪೂರೈಕೆ, ಸಿಬ್ಬಂದಿಯ ಸಂಬಳಗಳೆಲ್ಲವೂ ಸೇರಿವೆ.

## ಸಬ್ಸಿಡಿ ಕಡಿತ: ಇಕ್ಕಟ್ಟಿನಲ್ಲಿ ಗುತ್ತಿಗೆದಾರರು

ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಎಂದು ಸರ್ಕಾರ ಆರಂಭದಲ್ಲಿ ಪ್ರತಿ ಊಟಕ್ಕೆ ₹ 32 ನಿಗದಿ ಮಾಡಿತ್ತು. ಅದರಲ್ಲಿ ಗ್ರಾಹಕರಿಂದ ₹10 ಪಡೆಯುತ್ತಿದ್ದ ಕ್ಯಾಂಟೀನ್ ಗುತ್ತಿಗೆದಾರರಿಗೆ ಸರ್ಕಾರವು ಸಬ್ಸಿಡಿ ರೂಪದಲ್ಲಿ ₹ 22 ನೀಡುತ್ತಿತ್ತು. ಇದರಲ್ಲಿ ಸಿಬ್ಬಂದಿ ವೆಚ್ಚ, ಆಹಾರ ಸಾಮಗ್ರಿ ಖರೀದಿ, ಪೂರೈಕೆ ವೆಚ್ಚಗಳೆಲ್ಲವನ್ನು ಗುತ್ತಿಗೆದಾರರು ಸರಿದೂಗಿಸಿಕೊಳ್ಳಬೇಕಾಗುತ್ತಿತ್ತು. 2020ರ ಆಗಸ್ಟ್‌ನಿಂದ ಪ್ರತಿ ಊಟದ ದರವನ್ನು ₹ 30.30ಕ್ಕೆ ಇಳಿಸಲಾಗಿದೆ. ಗ್ರಾಹಕರಿಂದ ಪಡೆಯುವ ಮೊತ್ತವನ್ನು ಕಳೆದರೆ ಪ್ರತಿ ಊಟಕ್ಕೆ ಸರ್ಕಾರದಿಂದ ಸಿಗುವ ಸಬ್ಸಿಡಿ ಮೊತ್ತ ₹ 20.30ಕ್ಕೆ ಇಳಿಕೆಯಾಗಿದೆ. ₹ 45 ಕೋಟಿಗೂ ಅಧಿಕ ಮೊತ್ತವನ್ನು ಪಾಲಿಕೆಯು ಗುತ್ತಿಗೆದಾರರಿಗೆ ಕೊಡಬೇಕಿದೆ.

‘ಊಟಕ್ಕೆ ನೀಡುವ ಸಬ್ಸಿಡಿ ಮೊತ್ತವನ್ನು ಕಡಿಮೆ ಮಾಡಲಾಗಿದೆ. ಇನ್ನೊಂದೆಡೆ, 10 ತಿಂಗಳುಗಳಿಂದ ಬಿಲ್‌ಗಳನ್ನು ಬಿಬಿಎಂಪಿ ಬಾಕಿ ಇರಿಸಿಕೊಂಡಿದೆ. ಗಾಯದ ಮೇಲೆ ಬರೆ ಎಳೆದಂತೆ ಬೆಲೆ ಏರಿಕೆ ಬಿಸಿ ತಟ್ಟುತ್ತಿದೆ. ಇವೆಲ್ಲದರ ನಡುವೆ ಕ್ಯಾಂಟೀನ್‌ಗಳನ್ನು ನಿರ್ವಹಿಸುವುದೇ ದುಸ್ತರವಾಗಿದೆ’ ಎಂದು ಅಳಲು ತೋಡಿಕೊಳ್ಳುತ್ತಾರೆ ಗುತ್ತಿಗೆದಾರರು.

'ನಮಗೆ 2020ರ ಮೇ ತಿಂಗಳಿನಿಂದ ಹಣ ಬಾಕಿ ಇದೆ. ಕಾಲ ಕಾಲಕ್ಕೆ ಹಣ ಬಿಡುಗಡೆಯಾದರೆ ನಷ್ಟವಾಗದಂತೆ ಕ್ಯಾಂಟೀನ್‌ಗಳನ್ನು ಹೇಗೋ ನಿರ್ವಹಿಸಿಕೊಂಡು ಹೋಗಬಹುದು. ತಿಂಗಳಾನುಗಟ್ಟಲೆ ಹಣ ಬಿಡುಗಡೆ ಮಾಡದಿದ್ದರೆ ಕ್ಯಾಂಟೀನ್‌ಗಳನ್ನು ನಡೆಸುವುದಾದರೂ ಹೇಗೆ’ ಎಂದು ಪ್ರಶ್ನಿಸುತ್ತಾರೆ ಷೆಫ್‌ಟಾಕ್ ಸಂಸ್ಥೆಯ ಗೋವಿಂದ ಪೂಜಾರಿ.

## ಅಗ್ಗದ ಆಹಾರಕ್ಕೆ ಅನುದಾನ ಬರ

**ಒಂದನೇ ಪುಟದಿಂದ...**

ಗುತ್ತಿಗೆದಾರರಿಗೆ 10 ತಿಂಗಳುಗಳಿಂದ ನಯಾಪೈಸೆ ಪಾವತಿ ಆಗಿಲ್ಲ.

‘ಬಾಕಿ ಹಣ ಬಿಡುಗಡೆ ಮಾಡದಿದ್ದರೆ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಕೆ ಸ್ಥಗಿತಗೊಳಿಸುತ್ತೇವೆ’ ಎಂದು ಗುತ್ತಿಗೆದಾರರು 15 ದಿನಗಳ ಹಿಂದೆ ಬಿಬಿಎಂಪಿ ಆಯುಕ್ತರಿಗೆ ಸಲ್ಲಿಸಿದ ಮನವಿಯಲ್ಲಿ ಎಚ್ಚರಿಸಿದ್ದಾರೆ.

ನಗರದಲ್ಲಿ ಬೀದಿಬದಿ ಆಹಾರ ಮಾರುವ ತಳ್ಳುಗಾಡಿಗಳಲ್ಲೂ ₹ 25ಕ್ಕಿಂತ ಕಡಿಮೆಗೆ ಒಪ್ಪೊತ್ತಿನ ಊಟ ಸಿಗುವುದಿಲ್ಲ. ಇಂದಿರಾ ಕ್ಯಾಂಟೀನ್‌ಗಳಲ್ಲಿ ಸ್ವಚ್ಛ ಹಾಗೂ ಗುಣಮಟ್ಟದ ಊಟ ಕೇವಲ ₹ 10ಕ್ಕೆ ಸಿಗುತ್ತದೆ. ಹಾಗಾಗಿ ಆಟೊರಿಕ್ಷಾ ಚಾಲಕರು, ವಿದ್ಯಾರ್ಥಿಗಳು, ವಲಸೆ ಕಾರ್ಮಿಕರು ಈಗಲೂ ಇಂದಿರಾ ಕ್ಯಾಂಟೀನ್‌ಗಳ ಕಾಯಂ ಗಿರಾಕಿ ಗಳು. ಆಹಾರದಲ್ಲಿ ವೈವಿಧ್ಯ ಕಡಿಮೆ ಆಗಿರುವ ಬಗ್ಗೆ ಬೇಸರ ವ್ಯಕ್ತಪಡಿಸುವ ಇವರು, ‘ಹಿಂದಿನಂತೆಯೇ ಆಹಾರ ವೈವಿಧ್ಯ ಹೆಚ್ಚಿಸಬೇಕು. ಯಾವುದೇ ಕಾರಣಕ್ಕೂ ಕ್ಯಾಂಟೀನ್‌ಗಳನ್ನು ಮುಚ್ಚಬಾರದು’ ಎಂದು ಒತ್ತಾಯಿಸುತ್ತಾರೆ.

### ಅವ್ಯವಹಾರ– ದೂರು ವಜಾ

ಇಂದಿರಾ ಕ್ಯಾಂಟೀನ್‌ಗಳ ಸ್ಥಾಪನೆ ಹಾಗೂ ಆಹಾರ ಪೂರೈಕೆಯಲ್ಲಿ ನಡೆದಿದೆ ಎನ್ನಲಾಗಿದ್ದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲೂ ದೂರು ದಾಖಲಾಗಿತ್ತು. ದೂರಿಗೆ ಸಂಬಂಧಿಸಿದಂತೆ ಖಚಿತ ಸಾಕ್ಷಿಗಳಿಲ್ಲ. ರಾಜಕೀಯ ದುರುದ್ದೇಶದಿಂದ ದೂರು ಸಲ್ಲಿಸಲಾಗಿದೆ ಎಂದು ಅದನ್ನು 2020ರ ಜೂನ್‌ನಲ್ಲಿ ವಜಾಗೊಳಿಸಲಾಗಿತ್ತು.

## ಗುಂಡಣ್ಣ





## 25 ವರ್ಷಗಳ ಹಿಂದೆ — ಗುರುವಾರ, 4-4-1996

**● ಕಾಂಗ್ರೆ: 13 ಹೊಸಬರು; ಕೃಷ್ಣರಾವ್, ಪ್ರಸಾದ್‌ಗೆ ಕೊಕ್**

**ನವದೆಹಲಿ, ಏ. 3–** ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷವು ನಿನ್ನೆ ರಾತ್ರಿ ಎರಡೂವರೆಯ ಹೊತ್ತಿಗೆ ಬಿಡುಗಡೆ ಮಾಡಿದ ತನ್ನ ಎರಡನೇ ಪಟ್ಟಿಯಲ್ಲಿ ಬಸವರಾಜೇಶ್ವರಿ, ವಿ. ಕೃಷ್ಣರಾವ್, ವಿ. ಶ್ರೀನಿವಾಸ ಪ್ರಸಾದ್, ಎಸ್.ಬಿ. ಸಿದ್ನಾಳ್, ಚಂದ್ರಪ್ರಭಾ ಅರಸ್ ಅವರಿಗೆ ಟಿಕೆಟ್ ನಿರಾಕರಿಸಿದ್ದು ಈ ಬಾರಿ ಹದಿಮೂರು ಮಂದಿ ಹೊಸಬರಿಗೆ ಅವಕಾಶ ಕಲ್ಪಿಸಲಾಗಿದೆ.

ಮಂಡ್ಯ ಕ್ಷೇತ್ರಕ್ಕೆ ಅಂಬರೀಷ್ ಬದಲು ಮತ್ತೆ ಜಿ. ಮಾದೇಗೌಡ ಮತ್ತು ಹಾಸನ ಕ್ಷೇತ್ರಕ್ಕೆ ಶ್ರೀಕಂಠಯ್ಯ ಅವರ ಬದಲು ಎ. ಆನಂದ್ ಎಂಬುವವರಿಗೆ ಟಿಕೆಟ್ ನೀಡಲಾಗಿದೆ.

## 50 ವರ್ಷಗಳ ಹಿಂದೆ — ಭಾನುವಾರ, 4-4-1971

**● ಚುನಾವಣೆ ಭರವಸೆ ಈಡೇರಿಕೆಗೆ ಆಡಳಿತ ಕಾಂಗ್ರೆಸ್ ಪ್ರತಿಜ್ಞೆ**

**ನವದೆಹಲಿ, ಏ. 3–** ದಾರಿದ್ರ್ಯ ನಿವಾರಿಸುವುದಾಗಿ ನೀಡಿರುವ ಪ್ರಮಾಣ ಪೂರೈಸಲು ‘ಸಂವಿಧಾನ, ಶಾಸನ ಮತ್ತು ಆಡಳಿತ ಕ್ಷೇತ್ರಗಳಲ್ಲಿ ವಿವಿಧ ಕ್ರಮಗಳನ್ನು ಕೈಗೊಳ್ಳುವುದಾಗಿ ವ್ಯಾಪಕ ಯೋಜನೆಗಳನ್ನು ಸಿದ್ಧಪಡಿಸುವಂತೆ’ ಅಖಿಲ ಭಾರತ ಆಡಳಿತ ಕಾಂಗ್ರೆಸ್ ಸಮಿತಿಯು ಇಂದು ಸರ್ಕಾರಕ್ಕೆ ನಿರ್ದೇಶನ ಕೊಟ್ಟಿದೆ.

‘ಜನತೆಗೆ ಪ್ರಮಾಣ’ ನೀಡುವ ತನ್ನ ನಿರ್ಣಯವೊಂದರಲ್ಲಿ ಸಮಿತಿಯು ಈಚಿನ ಚುನಾವಣೆ ಪ್ರಣಾಳಿಕೆ ಒಳಗೊಂಡಿದ್ದ ಕಾರ್ಯಕ್ರಮಗಳನ್ನು ಈಡೇರಿಸುವುದಾಗಿ ತಿಳಿಸಿದೆ.

## ದಿನ ಭವಿಷ್ಯ — ಭಾನುವಾರ 4 ಏಪ್ರಿಲ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಸಪ್ತಮೀ ಗಂ. 6-47 (ಬೆ. 9-04) ಭಾನುವಾರ ನಿತ್ಯ ನಕ್ಷತ್ರ ಮೂಲ ಗಂ. 2-20 (ಬೆ. 7-17) ಉಪರಿ ಪೂರ್ವಾಷಾಢ ಗಂ. 57-29 (ಬೆ.ಝಾ. 6-17) ಪರಿಘ ನಾಮ ಯೋಗ ಗಂ 41-24 ಬವ ಕರಣ ಗಂ. 6-47 ವಿಷ ಶೇಷ ಗಂ. 2-20 ವಿಷ ಗಂ. 25-19 ಅಮೃತ ಗಂ. 48-18 ರಾಹುಕಾಲ:** ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-18 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 3 7

**ಮೇಷ:** ಹೊಸ ಯೋಜನೆಯೊಂದಕ್ಕೆ ಚಾಲನೆ ನೀಡಲಿದ್ದೀರಿ. ನಿಮ್ಮ ಮಾನಸಿಕ ಇಷ್ಟಾರ್ಥಗಳು ಸಿದ್ಧಿಸಲಿದೆ. ಪಿತ್ರಾರ್ಜಿತ ಆಸ್ತಿ ನಿಮ್ಮದಾಗಲಿದೆ. ಗೃಹ ಕಾರ್ಯದಲ್ಲಿ ಪ್ರಗತಿ.

**ವೃಷಭ:** ಹೊಸ ವಸ್ತುಗಳ ಖರೀದಿ ಸಾಧ್ಯತೆ. ಮಾತೃವರ್ಗದವರಿಂದ ಸಹಕಾರ ನಿರೀಕ್ಷಿಸಬಹುದು. ಆಧ್ಯಾತ್ಮಿಕ ವಿಚಾರಗಳ ಚಿಂತನೆಯಿಂದ ಆತ್ಮತೃಪ್ತಿ. ಗುರು ದೇವತಾ ದರ್ಶನ ಭಾಗ್ಯ ಕಂಡುಬರುವುದು.

**ಮಿಥುನ:** ಆಸ್ತಿ ಅಭಿವೃದ್ಧಿಗಾಗಿ ಹೊಸ ಯೋಜನೆಗೆ ಚಾಲನೆ. ಬರವಣಿಗೆಯಲ್ಲಿ ತೊಡಗಿರುವವರಿಗೆ ಕೀರ್ತಿ ಲಾಭವಾಗಲಿದೆ. ಸಾಂಸಾರಿಕ ಜೀವನದಲ್ಲಿ ಸುಖಾನುಭವವನ್ನು ಹೊಂದುವಿರಿ.

**ಕರ್ಕಾಟಕ:** ಕೃಷಿ ಭೂಮಿ ಖರೀದಿ ಸಾಧ್ಯತೆ. ಮಾತಿನಿಂದ ಗೌರವ ಪ್ರಾಪ್ತ. ಪ್ರಿಯ ವ್ಯಕ್ತಿಗಳ ಆಗಮನದಿಂದಾಗಿ ಮನೆಯಲ್ಲಿ ಸಂತಸ. ಮಕ್ಕಳಿಂದ ನೆಮ್ಮದಿ. ವೃತ್ತಿಯಲ್ಲಿ ಸಂತೃಪ್ತಿ.

**ಸಿಂಹ:** ವಿದ್ವಾಂಸರಿಗೆ ಗೌರವಾದರಗಳು ದೊರಕಲಿವೆ. ಭೂಮಿ ವ್ಯವಹಾರದಲ್ಲಿ ಧನಲಾಭ. ಚಿನ್ನಾಭರಣಗಳ ಖರೀದಿ ಮಾಡಲಿದ್ದೀರಿ. ಹೊಸ ಹೊಸ ವ್ಯಾಪಾರಗಳತ್ತ ಮನಸ್ಸು. ಋಣ ಪರಿಹಾರದಿಂದ ಸಂತೃಪ್ತಿ.

**ಕನ್ಯಾ:** ಮಹಿಳೆಯರು ತಮ್ಮ ಕ್ಷೇತ್ರಗಳಲ್ಲಿ ಯಶಸ್ಸು ಕೀರ್ತಿಗಳನ್ನು ಸಾಧಿಸಲಿದ್ದೀರಿ. ವ್ಯಾಪಾರದಲ್ಲಿ ಅಧಿಕ ಲಾಭ. ಪ್ರಯಾಣ/ ವಾಹನ ಚಾಲನೆಗಳಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳಿತು.

**ತುಲಾ:** ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಧಾರ್ಮಿಕ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿದ್ದೀರಿ. ಸಾಮಾಜಿಕ ಗೌರವಾದರಗಳಿಗೆ ಭಾಜನ. ನಿವೇಶನ ಖರೀದಿ ವಿಚಾರವಾಗಿ ಚರ್ಚೆ.

**ವೃಶ್ಚಿಕ:** ಮಹಿಳೆಯರ ಮನೋಭಿಲಾಷೆ ಈಡೇರಲಿದೆ. ವಿವಾದಾತ್ಮಕ ವಿಷಯಗಳ ಬಗ್ಗೆ ಅಭಿಪ್ರಾಯ ನೀಡದಿರುವುದೇ ಉತ್ತಮ. ಮಾಧ್ಯಮ ಕ್ಷೇತ್ರದಲ್ಲಿ ತೊಡಗಿರುವವರಿಗೆ ವಿಶೇಷ ಅನುಕೂಲ.

**ಧನು:** ವೃತ್ತಿ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಶತ್ರುಬಾಧೆ ನಿವಾರಣೆಯಾಗುವ ಎಲ್ಲ ಲಕ್ಷಣಗಳು ಕಂಡುಬರುತ್ತಿವೆ. ಸಂಗಾತಿಯಿಂದ ದೊರೆಯುವ ಸಲಹೆಗಳನ್ನು ಗೌರವಿಸುವುದು ಸೂಕ್ತ.

**ಮಕರ:** ಹೊಸದಾಗಿ ಆರಂಭಿಸಲಿರುವ ಉದ್ಯಮ/ ಯೋಜನೆಗಳಲ್ಲಿ ಯಶಸ್ಸು. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಿ ಹೊಗಳಿಕೆಗೆ ಪಾತ್ರರಾಗಲಿದ್ದೀರಿ. ಯಂತ್ರೋಪಕರಣ ವಾಹನ ಖರೀದಿ ಸಾಧ್ಯತೆ.

**ಕುಂಭ:** ನಿಮ್ಮ ವೈಯುಕ್ತಿಕ ಆಶೋತ್ತರಗಳು ಈಡೇರಲಿವೆ. ಮನೆಯಲ್ಲಿ ದೇವತಾ ಕಾರ್ಯಗಳು ಜರುಗಲಿವೆ. ಉದ್ದೇಶಿತ ಕೆಲಸಗಳಿಗೆ ಸೋದರರಿಂದ ಸಹಕಾರವನ್ನು ಪಡೆದುಕೊಳ್ಳುವಿರಿ.

**ಮೀನ:** ಆಸ್ತಿ ಖರೀದಿ ಮಾಡುವ ಸಾಧ್ಯತೆ. ಸರ್ಕಾರಿ ಅಧಿಕಾರಿಗಳು ಮೇಲಾಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಅಪರಿಚಿತ ವ್ಯಕ್ತಿಯಿಂದ ಸಹಾಯ ದೊರಕಲಿದೆ.

**ನಿಮ್ಮ ಜನ್ಮದಿನ 4-ಏಪ್ರಿಲ್** ಈ ದಿನವು ಅತ್ಯಂತ ಶುಭಕರವಾಗಿದ್ದು, ನ್ಯಾಯಾಲಯಗಳಲ್ಲಿನ ಕಟ್ಲೆಗಳು ನಿಮ್ಮ ಪರವಾಗಿ ತೀರ್ಮಾನವಾಗುವ ಸ್ಪಷ್ಟ ಸೂಚನೆ ಕಂಡುಬರುತ್ತಿದೆ. ವಿವಾಹಾಕಾಂಕ್ಷಿಗಳಿಗೆ ಸಾಮಾನ್ಯ ದಿನಗಳು. ಮಹಿಳಾ ಉದ್ಯಮಿಗಳಿಗೆ ರಾಜಕಾರಣಿಗಳಿಗೆ, ಸ್ವಯಂ ಉದ್ಯೋಗದಲ್ಲಿ ನಿರತರಾದವರಿಗೆ ಉತ್ತಮ ಲಾಭ.


## ಪದಬಂಧ 4557 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಶ್ರೇಷ್ಠವಾದುದು ಇದು (3)
3.ಇಂಪಾದ ಧ್ವನಿ (3)
5.ಜನಪ್ರಿಯನಾದವ ರಾಗಿ ಹಿಡಿದಿದ್ದಾನಲ್ಲಾ? (5)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ನೆನಪಿನಿಂದ ಮಾಸದ ಆ ತಿಂಗಳು (2)
9.ಲಗ್ನವಾಗುತ್ತಿರುವವನಿಗೆ ದೊರೆತ ದೇವರ ಅನುಗ್ರಹ (2)
10.ಕನಸು ಕಾಣುತ್ತಾ ತೋರಿದ ಬಲ (2)
14.ಅಂತರಂಗಸ್ಪರ್ಶಿಯಾದುದು (5)
15.ಸಾಗಿಸುವಿಕೆಗೊಂದು ಪರ್ಯಾಯ ಪದ (3)
16.ಅನೇಕ ಚಿಕ್ಕ ಚಿಕ್ಕ ಮನೆಗಳಿರುವ ಆವಾರ (3)

**ಮೇಲಿಂದ ಕೆಳಕ್ಕೆ**

1. ಯೋಗವಿದ್ದಾಗಲೇ ಇದು ಪ್ರಯೋಜನ! (4)
2.ಮಜವಾಗಿ ಕಾಣುತ್ತಿರುವ ಹಂತ (3)
3.ಅಭಿಪ್ರಾಯವನ್ನು ಹೀಗೂ ಹೇಳಬಹುದು! (3)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
7.ಹೆಂಡತಿಯನ್ನು ಕಳೆದುಕೊಂಡವನು (3)
8.ಅಳೆಯುವ ಸಾಧನವಿದು (3)
9.ವನದ ಹತ್ತಿರವಿರುವ ಬೇಡ (4)
11.ಕೋಮಲವಾದ ಶರೀರವುಳ್ಳವನು (4)
12.ಮನ್ಮಥನಿಂದ ಮೂಡಿರುವ ಆಸೆ (3)
13.ಈತ ಬಲು ಪೆದ್ದ (3)



### 4556ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 3.ಸರ್ವನಾಶ 5.ಸಮಯ 6.ವರ್ತಮಾನ 8.ಯಮಭಾರ 12.ಅಂತರಿಕ್ಷ 14.ಅನುರಾಗ 15.ಪಗಾರ 16.ಸಭಾತ್ಯಾಗ

**ಮೇಲಿಂದ ಕೆಳಕ್ಕೆ:** 1.ಅಸಭ್ಯತನ 2.ಆಯವ್ಯಯ 3.ಸರೋವರ 4.ಶಮನ 7.ಮಾಫಿ 9.ಭಾರತ 10.ಗೊಡ್ಡುಹರಟೆ 11.ಜೇನು 12.ಅಂಗರಾಗ 13.ಕ್ಷಮಾಪಣೆ 14.ಅಗಸ

## ಸುಡೊಕು 4943


| | | | | | | | | |
|---|---|---|---|---|---|---|---|---|
| | | | | 9 | | 7 | | |
| | | | 4 | | 7 | | 5 | 2 |
| | 3 | 9 | | 5 | | | 6 | |
| | 9 | | | 2 | | 8 | | 6 |
| 3 | | 7 | 1 | | 6 | | | |
| | 2 | | | 7 | | 1 | | 4 |
| 1 | | | 9 | 8 | | | 4 | |
| | 7 | | | | | 2 | | 8 |
| 8 | | 2 | | 1 | | | | |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4942 ಸುಡೊಕು

| | | | | | | | | |
|---|---|---|---|---|---|---|---|---|
| 9 | 6 | 4 | 1 | 3 | 8 | 7 | 2 | 5 |
| 1 | 5 | 3 | 7 | 6 | 2 | 8 | 9 | 4 |
| 2 | 8 | 7 | 5 | 4 | 9 | 1 | 6 | 3 |
| 3 | 9 | 1 | 2 | 7 | 4 | 6 | 5 | 8 |
| 6 | 2 | 5 | 9 | 8 | 3 | 4 | 7 | 1 |
| 7 | 4 | 8 | 6 | 1 | 5 | 2 | 3 | 9 |
| 5 | 7 | 2 | 8 | 9 | 1 | 3 | 4 | 6 |
| 4 | 1 | 9 | 3 | 2 | 6 | 5 | 8 | 7 |
| 8 | 3 | 6 | 4 | 5 | 7 | 9 | 1 | 2 |

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.






ಟಿಎಂಸಿಯಿಂದ ಅಭಿವೃದ್ಧಿಗೆ ತಡೆ – ಪ್ರಧಾನಿ • ಕೋಮು ಗಲಭೆಗೆ ಬಿಜೆಪಿ ಚಿತಾವಣೆ – ಟಿಎಂಸಿ

# ಮೋದಿ – ಮಮತಾ ಇನ್ನೊಂದು ಸುತ್ತಿನ ವಾಕ್ಸಮರ

**ಹರಿಪಾಲ್ (ಪಶ್ಚಿಮ ಬಂಗಾಳ) (ಪಿಟಿಐ):** ರಾಜ್ಯದಲ್ಲಿ ಮೂರನೇ ಹಂತದ ಚುನಾವಣೆಗೆ ಎರಡು ದಿನಗಳು ಉಳಿದಿರುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪರಸ್ಪರರ ವಿರುದ್ಧ ಇನ್ನೊಂದು ಸುತ್ತಿನ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿಯನ್ನು 'ಹೊರಗಿನವರು' ಎಂದು ಮಮತಾ ಬಣ್ಣಿಸಿದರೆ, ನಾವೆಲ್ಲರೂ ಭಾರತ ಮಾತೆಯ ಮಕ್ಕಳೇ, ಯಾವ ಭಾರತೀಯನೂ ಪಶ್ಚಿಮ ಬಂಗಾಳಕ್ಕೆ ಹೊರಗಿನವನಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಈ 'ಭೂಮಿಯ ಪುತ್ರ'ನೇ ಮುಖ್ಯಮಂತ್ರಿಯಗುತ್ತಾರೆ ಎಂದು ಮೋದಿ ಘೋಷಿಸಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ಮಮತಾ ಅವರು ವಾರಣಾಸಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಟಿಎಂಸಿಯ ನಾಯಕರ ಹೇಳಿಕೆಯನ್ನು ಉಲ್ಲೇಖಿಸಿದ ಮೋದಿ, 'ದೀದಿ ಸೋಲನ್ನು ಒಪ್ಪಿಕೊಂಡಿದ್ದಾರೆ ಎಂಬುದರ ಸೂಚನೆ ಇದು. ಅವರು ಹೊರರಾಜ್ಯದಲ್ಲಿ ಕ್ಷೇತ್ರವೊಂದನ್ನು ಹುಡುಕುತ್ತಿದ್ದಾರೆ' ಎಂದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯೇ ಮುಂದಿನ ಸರ್ಕಾರ ರಚಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಮೋದಿ, 'ಹೊಸ ಮುಖ್ಯಮಂತ್ರಿಯ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ನಾನು ಪಾಲ್ಗೊಳ್ಳುತ್ತೇನೆ. ಅಷ್ಟೇ ಅಲ್ಲ, ಮಮತಾ ಅವರು ತಡೆಹಿಡಿದಿರುವ ಪಿಎಂ ಕಿಸಾನ್‌ನಿಧಿ ಯೋಜನೆಯನ್ನು ಶೀಘ್ರದಲ್ಲೇ ಜಾರಿ ಮಾಡುವಂತೆ ಹೊಸ ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದರು.


ಪಶ್ಚಿಮ ಬಂಗಾಳದ ಹೂಗ್ಲಿಯಲ್ಲಿ ನಡೆದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

### 23 ರ‍್ಯಾಲಿಗಳಲ್ಲಿ ಮೋದಿ

ವಿಧಾನಸಭಾ ಚುನಾವಣೆಗಳನ್ನು ಎದುರಿಸುತ್ತಿರುವ ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದ ಒಟ್ಟಾರೆ 23 ಚುನಾವಣಾ ರ‍್ಯಾಲಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈವರೆಗೆ ಪಾಲ್ಗೊಂಡಿದ್ದಾರೆ. ಅದರಲ್ಲಿ 10 ರ‍್ಯಾಲಿಗಳು ಕಳೆದ ಮೂರು ದಿನಗಳಲ್ಲಿ ನಡೆದಿವೆ.

ಅಸ್ಸಾಂ ಹಾಗೂ ಪಶ್ಚಿಮ ಬಂಗಾಳದಲ್ಲಿ ಮೋದಿ ಅವರು ಹೆಚ್ಚಿನ ಗಮನ ಕೇಂದ್ರೀಕರಿಸಿದ್ದಾರೆ. ಪಶ್ಚಿಮ ಬಂಗಾಳವೊಂದನ್ನು ಬಿಟ್ಟರೆ ಉಳಿದೆಲ್ಲಾ ಕಡೆಗಳಲ್ಲಿ ಏ.6ರಂದು ಮತದಾನ ಮುಕ್ತಾಯವಾಗಲಿದೆ. ಇದಾದ ನಂತರವೂ ಪಶ್ಚಿಮ ಬಂಗಾಳದಲ್ಲಿ ಐದು ಹಂತಗಳ ಮತದಾನ ನಡೆಯಲಿದೆ. ಈ ಅವಧಿಯಲ್ಲಿ ಮೋದಿ ಅವರು ಇನ್ನಷ್ಟು ರ‍್ಯಾಲಿಗಳಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

### 'ಬಲೆಗೆ ಬೀಳಬೇಡಿ'

'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರಾಯೋಜಿತ ಪಕ್ಷಗಳು ರಾಜ್ಯದಲ್ಲಿ ಅಲ್ಪಸಂಖ್ಯಾತರ ಮತಗಳ ಧ್ರುವೀಕರಣದ ಪ್ರಯತ್ನ ಮಾಡುತ್ತಿದೆ. ಮುಸ್ಲಿಮರು ಇವರ ಬಲೆಗೆ ಬೀಳಬಾರದು' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕರೆನೀಡಿದರು.

ಪರೋಕ್ಷವಾಗಿ ಅವರು ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಹಾಗೂ ಅಬ್ಬಾಸ್ ಸಿದ್ದಿಕಿ ಅವರ ಐಎಸ್‌ಎಫ್ ಪಕ್ಷಕ್ಕೆ ಮತ ನೀಡದಂತೆ ಮುಸ್ಲಿಮರಲ್ಲಿ ಮನವಿ ಮಾಡಿದರು.

### ಮೋದಿ ಹೇಳಿದ್ದು...

- ಎಲ್ಲದಕ್ಕೂ ತಡೆಯೊಡ್ಡುವ ಮಮತಾ ಅವರ ಮನಸ್ಥಿತಿಯಿಂದಾಗಿ ಪಶ್ಚಿಮ ಬಂಗಾಳವು ಕೈಗಾರಿಕೆಗಳು ಮತ್ತು ಉದ್ಯೋಗ ಸೃಷ್ಟಿಯಿಂದ ವಂಚಿತವಾಗಿದೆ
- ರಾಜಕೀಯ ಉದ್ದೇಶ ಸಾಧನೆಗೆ ಸಿಂಗೂರನ್ನು ಬಳಸಿಕೊಂಡ ಮಮತಾ, ಆ ನಂತರ ಅಲ್ಲಿಯ ಜನರನ್ನು ಅವರ ಪಾಡಿಗೆ ಬಿಟ್ಟುಬಿಟ್ಟರು. ಆ ಜನರು ಈಗ ಸಂಕಷ್ಟದಲ್ಲಿದ್ದಾರೆ
- ಟಿಎಂಸಿಯನ್ನು ಬಿಟ್ಟರೆ, ಕೈಗಾರಿಕೀಕರಣ ಹಾಗೂ ಅಭಿವೃದ್ಧಿಯನ್ನು ತಡೆಯುವುದರಲ್ಲೇ ಹೆಮ್ಮೆಪಡುವ ಇನ್ನೊಂದು ಪಕ್ಷವನ್ನು ನಾನು ನೋಡಿಲ್ಲ
- 'ಜನರು ಹಣ ಪಡೆದು ಬಿಜೆಪಿ ರ‍್ಯಾಲಿಗೆ ಹೋಗುತ್ತಿದ್ದಾರೆ' ಎನ್ನುವ ಮೂಲಕ ಮಮತಾ ಅವರು ಬಂಗಾಳದ ಜನರನ್ನು ಅಪಮಾನಿಸಿದ್ದಾರೆ
- ಮಮತಾ ಚುನಾವಣಾ ಆಯೋಗ ಹಾಗೂ ಮತಯಂತ್ರಗಳನ್ನು ದೂಷಿಸುತ್ತಾರೆ. ಯಾರೇ ಆದರೂ ತೀರ್ಪುಗಾರರನ್ನೇ ದೂಷಿಸುತ್ತಾರೆ ಎಂದರೆ ಅವರ 'ಆಟ ಮುಗಿಯಿತು' ಎಂದರ್ಥ
- ಚುನಾವಣೆಯಲ್ಲಿ ಸೋಲನ್ನು ಗ್ರಹಿಸಿರುವ ದೀದಿ, ಈಗ ಭಯಭೀತರಾಗಿ ಎಲ್ಲರನ್ನೂ ದೂಷಿಸಲು ಆರಂಭಿಸಿದ್ದಾರೆ. ಆ ಮೂಲಕ ಅವರು ರಾಜ್ಯದ ಜನರ ಆತ್ಮಗೌರವಕ್ಕೆ ಧಕ್ಕೆ ಉಂಟುಮಾಡಿದ್ದಾರೆ
- ಮಮತಾ ಅವರು ತನ್ನ 'ಅಹಂ' ಅನ್ನು ತೃಪ್ತಿಪಡಿಸುವ ಉದ್ದೇಶದಿಂದ ಕೇಂದ್ರದ ಅನೇಕ ಯೋಜನೆಗಳನ್ನು ಪಶ್ಚಿಮ ಬಂಗಾಳದಲ್ಲಿ ತಡೆದಿದ್ದಾರೆ.

### ಮಮತಾ ಹೇಳಿದ್ದು...

- ಚುನಾವಣೆ ಗೆಲ್ಲಲು ಬಿಜೆಪಿಯು ಪಶ್ಚಿಮ ಬಂಗಾಳದಲ್ಲಿ ಕೋಮು ಕಲಹವನ್ನು ಉತ್ತೇಜಿಸುತ್ತಿದೆ
- ಗಲಭೆ ಸೃಷ್ಟಿಸಲು ಹೊರಗಿನಿಂದ ಬಂದಿರುವ ವ್ಯಕ್ತಿಗಳನ್ನು ಜನರೇ ಗುರುತಿಸಿ, ಅವರನ್ನು ತಮ್ಮ ಕ್ಷೇತ್ರದಿಂದ ಹೊರಗೆ ಓಡಿಸಬೇಕು
- ನಾನು ಹಿಂದೂ ವಿರೋಧಿಯಲ್ಲ, ಪ್ರತಿನಿತ್ಯ ಮನೆಯಿಂದ ಹೊರಗೆ ಅಡಿ ಇಡುವ ಮೊದಲು ಚಂಡಿ ಮಂತ್ರವನ್ನು ಪಠಿಸುವವಳು. ಆದರೆ, ಪ್ರತಿಯೊಂದು ಧರ್ಮವನ್ನೂ ಗೌರವಿಸಬೇಕೆಂಬ ನಮ್ಮ ಸಂಪ್ರದಾಯದಲ್ಲಿ ನಂಬಿಕೆ ಇರುವವಳು
- ನಾನೊಬ್ಬ ಬ್ರಾಹ್ಮಣ ಮಹಿಳೆ, ದೀರ್ಘ ಕಾಲದಿಂದ ನನ್ನ ಜತೆಗಿರುವ ಮಹಿಳೆ ಪರಿಶಿಷ್ಟ ಜಾತಿಯವರು. ಅವರೇ ನನಗಾಗಿ ಆಹಾರವನ್ನೂ ತಯಾರಿಸುತ್ತಾರೆ. ಇದನ್ನು ಪ್ರಚಾರ ಮಾಡಬೇಕಾದ ಅಗತ್ಯ ನನಗಿಲ್ಲ
- ಬಿಜೆಪಿ ಅಧಿಕಾರಕ್ಕೆ ಬಂದರೆ ಸಿಎಎ ಹಾಗೂ ಎನ್‌ಆರ್‌ಸಿ ಜಾರಿ ಮಾಡಲಾಗುತ್ತದೆ. ಅನೇಕ ನಾಗರಿಕರು ರಾಜ್ಯವನ್ನು ಬಿಟ್ಟು ಹೋಗಬೇಕಾಗಬಹುದು
- ಕೇಂದ್ರದ ಭದ್ರತಾ ಪಡೆಗಳು ಚುನಾವಣೆಗೂ 48 ಗಂಟೆ ಮೊದಲು ಮನೆಮನೆಗೆ ಹೋಗಿ ಜನರನ್ನು ಬೆದರಿಸಿ ಬಿಜೆಪಿಗೆ ಮತ ಚಲಾಯಿಸಲು ಒತ್ತಾಯಿಸುತ್ತಿವೆ
- ನಂದಿಗ್ರಾಮದಲ್ಲಿ ಚುನಾವಣಾ ಅಕ್ರಮ ನಡೆಸುವ ಪ್ರಯತ್ನಗಳು ನಡೆದಿವೆ. ಆದರೂ ಅಲ್ಲಿ ನಾನೇ ಗೆಲ್ಲುತ್ತೇನೆ

## ಮುಖ್ಯವಾಹಿನಿಗೆ ಬನ್ನಿ ಮಾವೊವಾದಿಗಳಿಗೆ ಸಲಹೆ

**ತಾಮುಲಪುರ (ಅಸ್ಸಾಂ) (ಪಿಟಿಐ):** 'ಸರ್ಕಾರದ ಮುಂದೆ ಇನ್ನೂ ಶರಣಾಗತರಾಗದಿರುವ ಮಾವೊವಾದಿಗಳು, ಹೋರಾಟದ ಹಾದಿಯನ್ನು ಬಿಟ್ಟು ಮುಖ್ಯವಾಹಿನಿಗೆ ಬಂದು 'ಆತ್ಮನಿರ್ಭರ ಅಸ್ಸಾಂ' ನಿರ್ಮಾಣಕ್ಕೆ ನೆರವಾಗಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು.

ಬೊಡೊಲ್ಯಾಂಡ್ ಪ್ರಾಬಲ್ಯದ ಬಕ್ಸಾರ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಶಾಂತಿ ಹಾಗೂ ಅಭಿವೃದ್ಧಿಯ ಉದ್ದೇಶದಿಂದ ಇಲ್ಲಿನ ಜನರು ಹಿಂಸೆಯನ್ನು ತ್ಯಜಿಸಿದ್ದಾರೆ. ಮುಖ್ಯವಾಹಿನಿಗೆ ಬಂದವರಿಗೆ ಪುನರ್ವಸತಿ ಕಲ್ಪಿಸುವುದು ಸರ್ಕಾರದ ಹೊಣೆ ಎಂದರು.

'ಕೊಕ್ರಝಾರ್‌ನಲ್ಲಿ ಗುರುವಾರ ಆಯೋಜಿಸಿದ್ದ ಸಭೆಗೆ ಭಾರಿ ಸಂಖ್ಯೆಯಲ್ಲಿ ಮಹಿಳೆಯರು ಬಂದಿದ್ದರು. ಅದರಿಂದ ಅಚ್ಚರಿಗೊಂಡಿದ್ದ ನಾನು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರಲು ಕಾರಣವೇನು ಎಂದು ರಾಜಕೀಯ ವಿಶ್ಲೇಷಕರನ್ನು ಕೇಳಿದ್ದೆ. 'ನಮ್ಮ ಮಕ್ಕಳು ಇನ್ನು ಶಸ್ತ್ರವನ್ನು ಎತ್ತಿಕೊಂಡು ಕಾಡಿಗೆ ಹೋಗುವುದಿಲ್ಲ ಎಂಬ ಭರವಸೆ ಈ ಮಹಿಳೆಯರಲ್ಲಿ ಮೂಡಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ' ಎಂದು ಅವರು ಹೇಳಿರುವುದಾಗಿ ಮೋದಿ ವಿವರಿಸಿದರು.

'ಅಭಿವೃದ್ಧಿಯ ಫಲವು ಎಲ್ಲರಿಗೂ ಲಭಿಸಬೇಕು ಎಂಬುದು ನಮ್ಮ ಧೋರಣೆ. ಆದರೆ, ಸಮಾಜವನ್ನು ಒಡೆದು, ಮತಬ್ಯಾಂಕ್‌ಗಾಗಿ ಒಂದು ವರ್ಗದತ್ತ ಅಭಿವೃದ್ಧಿಯ ತುಣುಕುಗಳನ್ನು ಎಸೆಯುವವರು, 'ನಾವು ಮಾತ್ರ ಜಾತ್ಯತೀತರು' ಎಂದು ವಾದಿಸುತ್ತಿರುವುದು ದುರ್ದೈವದ ವಿಚಾರ ಎಂದು ಪರೋಕ್ಷವಾಗಿ ಕಾಂಗ್ರೆಸ್‌ಅನ್ನು ಟೀಕಿಸಿದರು.

'ಗಡ್ಡ, ಟೋಪಿ ಹಾಗೂ ಲುಂಗಿಧಾರಿಗಳೇ ಮುಂದಿನ ಸರ್ಕಾರ ರಚಿಸಲಿದ್ದಾರೆ' ಎಂದು ಎಐಯುಡಿಎಫ್‌ನ ಮುಖಂಡ ಮದ್ರುದ್ದೀನ್ ಅಜ್ಮಲ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ಮೋದಿ, 'ಅಸ್ಸಾಂಗೆ ಇದಕ್ಕಿಂತ ದೊಡ್ಡ ಅಪಮಾನ ಇನ್ನೊಂದಿಲ್ಲ. ಈ ಅಪಮಾನವನ್ನು ಅಸ್ಸಾಂನ ಜನರು ಕ್ಷಮಿಸಲಾರರು' ಎಂದರು.

# ಡಿಎಂಕೆ ಮುಂದಿನ ಸರ್ಕಾರ ರಚಿಸುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

**ಚೆನ್ನೈ:** ಡಿಎಂಕೆ ನೇತೃತ್ವದ ಮೈತ್ರಿಕೂಟವು ತಮಿಳುನಾಡಿನಲ್ಲಿ ಮುಂದಿನ ಸರ್ಕಾರ ರಚಿಸುವ ಸಾಧ್ಯತೆಯಿದೆ ಎಂದು ತಂತಿ ಟಿ.ವಿ ಸಮೀಕ್ಷೆ ಅಭಿಪ್ರಾಯಪಟ್ಟಿದೆ.

ತಂತಿ ಟಿವಿ ಸಮೀಕ್ಷೆ

ಡಿಎಂಕೆ ಮೈತ್ರಿಕೂಟಕ್ಕೆ 124 ಸ್ಥಾನ ಹಾಗೂ ಎಐಎಡಿಎಂಕೆ ಮೈತ್ರಿಕೂಟಕ್ಕೆ 52 ಸ್ಥಾನಗಳು ಸಿಗಲಿವೆ ಎಂದು ಸಮೀಕ್ಷೆ ಹೇಳಿದೆ. ಆದರೆ, ತೀವ್ರ ಸ್ಪರ್ಧೆ ಇರುವ 58 ಕ್ಷೇತ್ರಗಳಲ್ಲಿ ಯಾರಿಗೆ ಜ ಯ ಲಭಿಸಲಿದೆ ಎಂಬುದನ್ನು ತಿಳಿಸಿಲ್ಲ.

ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು ಮುಖ್ಯಮಂತ್ರಿ ಹುದ್ದೆಗೆ ನೆಚ್ಚಿನ ಆಯ್ಕೆಯಾಗಿದ್ದು, ಅವರು ಶೇ 45ರಷ್ಟು ಮತ್ತು ಹಾಲಿ ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ಶೇ 40ರಷ್ಟು ಮತ ಪಡೆದಿದ್ದಾರೆ.

ಚೆನ್ನೈನ ದಕ್ಷಿಣ ಹಾಗೂ ಕೇಂದ್ರೀಯ ಭಾಗಗಳಲ್ಲಿ ಡಿಎಂಕೆ ಬಹುಮತ ಪಡೆಯುವ ಸಾಧ್ಯತೆಯಿದ್ದರೆ, ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ಡಿಎಂಕೆ–ಎಐಎಡಿಎಂಕೆ ನಡುವೆ ಕಠಿಣ ಸ್ಪರ್ಧೆ ಇರಲಿದೆ. ಮುಖಂಡರಾದ ಪನ್ನೀರಸೆಲ್ವಂ, ಪಳನಿಸ್ವಾಮಿ, ಸ್ಟಾಲಿನ್, ಕಮಲಹಾಸನ್ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗೆಲ್ಲಲಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

ಡಿಎಂಕೆ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಹಲವು ಸಮೀಕ್ಷೆಗಳು ಈಗಾಗಲೇ ಅಭಿಪ್ರಾಯಪಟ್ಟಿವೆ.

## 'ಕಾಂಗ್ರೆಸ್ 4ಜಿ, ಡಿಎಂಕೆ 3ಜಿ'

**ತಿರುನಲ್ವೇಲಿ:** ಕಾಂಗ್ರೆಸ್ ಹಾಗೂ ಡಿಎಂಕೆ ಪಕ್ಷಗಳ ವಂಶಾಡಳಿತವನ್ನು ಲೇವಡಿ ಮಾಡಿರುವ ಗೃಹಸಚಿವ ಅಮಿತ್ ಶಾ ಅವರು 'ಕಾಂಗ್ರೆಸ್ 4ಜಿ, ಡಿಎಂಕೆ 3ಜಿ' ಎಂದು ವ್ಯಾಖ್ಯಾನಿಸಿದ್ದಾರೆ.

ಕಾಂಗ್ರೆಸ್‌ನ ನಾಲ್ಕನೇ ತಲೆಮಾರಿನ ಮುಖಂಡರು (ನೆಹರೂ, ಇಂದಿರಾ, ರಾಜೀವ್, ರಾಹುಲ್) ಈಗ ರಾಜಕೀಯದಲ್ಲಿದ್ದಾರೆ. ಹಾಗೆಯೇ ಡಿಎಂಕೆಯ ಮೂರನೇ ತಲೆಮಾರಿನ ಮುಖಂಡರು (ಕರುಣಾನಿಧಿ, ಸ್ಟಾಲಿನ್, ಉದಯನಿಧಿ) ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ ಎಂದರು.

ಸ್ಟಾಲಿನ್‌ಅವರುತಮ್ಮಪುತ್ರಉದಯನಿಧಿಅವರನ್ನು ಮುಖ್ಯಮಂತ್ರಿ ಮಾಡುವ ಆಲೋಚನೆಯಲ್ಲಿದ್ದಾರೆ ಎಂಬ ವರದಿಗೆ ಪ್ರತಿಕ್ರಿಯಿಸುತ್ತಾ, 'ಉದಯನಿಧಿ ಅವರನ್ನು ಮುಖ್ಯಮಂತ್ರಿ ಮಾಡುವ ಒಂದೇ ಉದ್ದೇಶದಿಂದ ಸ್ಟಾಲಿನ್ ಅವರು ತಮಿಳುನಾಡಿನ ಭವಿಷ್ಯವನ್ನು ಸಂಕಷ್ಟಕ್ಕೆ ಸಿಲುಕಿಸಲಿದ್ದಾರೆ' ಎಂದರು.

ಬಿಜೆಪಿ–ಎಐಎಡಿಎಂಕೆ ಮೈತ್ರಿಕೂಟ ಮಾತ್ರವೇ ತಮಿಳುನಾಡಿನ ಸಂಸ್ಕೃತಿಯನ್ನು ರಕ್ಷಿಸಬಲ್ಲದು. ನರೇಂದ್ರ ಮೋದಿ, ಎಐಎಡಿಎಂಕೆ ಪಕ್ಷದ ಪಳನಿಸ್ವಾಮಿ ಅವರು ಕಷ್ಟದಿಂದ ಮೇಲೆ ಬಂದವರು. ಆದರೆ ಡಿಎಂಕೆ ಹಾಗೂ ಕಾಂಗ್ರೆಸ್ ನಾಯಕರು ವಂಶಾಡಳಿತದ ಮೂಲಕ ಪ್ರವರ್ಧಮಾನಕ್ಕೆ ಬಂದವರು. ಆ ಪಕ್ಷಗಳು ಭ್ರಷ್ಟಾಚಾರ ಹಾಗೂ ವಂಶಾಡಳಿತದಲ್ಲಿ ಮುಳುಗಿವೆ' ಎಂದು ಶಾ ಟೀಕಿಸಿದರು.

## ಸಿಪಿಎಂ ಬಗ್ಗೆ ಯಾಕೆ ಪ್ರಶ್ನಿಸಲ್ಲ: ರಾಹುಲ್

**ಕೊಯಿಲಾಂಡಿ (ಕೇರಳ) (ಪಿಟಿಐ):** 'ಕಾಂಗ್ರೆಸ್ ಮುಕ್ತ ಭಾರತ ಎಂದು ಪದೇ ಪದೇ ಘೋಷಿಸುವ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಮುಖಂಡರು, ಸಿಪಿಎಂ ವಿಚಾರದಲ್ಲಿ ಹಾಗೆ ಹೇಳುವುದಿಲ್ಲವೇಕೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.


ರಾಹುಲ್ ಗಾಂಧಿ

ಚುನಾವಣಾ ಪ್ರಚಾರಕ್ಕಾಗಿ ಇಲ್ಲಿಗೆ ಬಂದಿರುವ ರಾಹುಲ್, 'ಪ್ರಧಾನಿ ಬೆಳಿಗ್ಗೆ ಎದ್ದ ಕೂಡಲೇ ಕಾಂಗ್ರೆಸ್ ಮುಕ್ತ ಭಾರತ ಎನ್ನುತ್ತಾರೆ. ರಾತ್ರಿ ಮಲಗುವ ಮುನ್ನ ಕಾಂಗ್ರೆಸ್ ಮುಕ್ತ ಭಾರತ ಎನ್ನುತ್ತಾರೆ. ಆದರೆ, ಸಿಪಿಎಂ ಮುಕ್ತ ಭಾರತ ಎಂದು ಯಾಕೆ ಹೇಳುವುದಿಲ್ಲ? ಎಡಪಕ್ಷಗಳಿಂದ ಅವರಿಗೆ ಸಮಸ್ಯೆ ಇಲ್ಲ. ಸಮಸ್ಯೆ ಇರುವುದು ಕಾಂಗ್ರೆಸ್‌ನಿಂದ ಮಾತ್ರ' ಎಂದರು.

'ಕಾಂಗ್ರೆಸ್ ಒಂದುಗೂಡಿಸುವ ಶಕ್ತಿಯೇ ಹೊರತು ಎಡಪಕ್ಷಗಳಂತೆ ವಿಭಜಕ ಶಕ್ತಿಯಲ್ಲ. ನಾವು ಹೋದಲ್ಲೆಲ್ಲಾ ಜನರನ್ನು ಒಂದುಗೂಡಿಸಿ ಬಲಪಡಿಸುತ್ತೇವೆ. ಯಾರು ಎಲ್ಲರನ್ನೂ ಒಗ್ಗೂಡಿಸುತ್ತಾರೆಯೋ ಅವರಿಂದ ಬೆದರಿಕೆ ಇದೆ ಎಂದು ಆರ್‌ಎಸ್‌ಎಸ್‌ನವರು ಭಾವಿಸಿದ್ದಾರೆ. ಎಡಪಕ್ಷಗಳು ಕೂಡಾ ಹಿಂಸೆಯ ಸಿದ್ಧಾಂತ ಹೊಂದಿವೆ' ಎಂದು ಟೀಕಿಸಿದರು.

**ಪಿಣರಾಯಿ ವಾಗ್ದಾಳಿ:** 'ಕಳೆದ ಐದು ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿಯನ್ನು ಹಾಳುಮಾಡಲು ಪ್ರಯತ್ನಿಸಿದವರು ಈಗ ಅಭಿವೃದ್ಧಿಯ ಕುರಿತು ಭಾಷಣ ಮಾಡುತ್ತಿದ್ದಾರೆ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡರು.

ಎರಡೂ ಪಕ್ಷಗಳ ವರ್ತನೆಯು ಕೇರಳ ಜನರನ್ನು ಅಪಹಾಸ್ಯ ಮಾಡುವಂತಿದೆ ಎಂದು ಆರೋಪಿಸಿದರು.

ಕಣ್ಣೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತು ಬಿಜೆಪಿಯ ರಾಷ್ಟ್ರೀಯ ನಾಯಕರು ಕೇರಳದ ಬಗ್ಗೆ ಕೆಟ್ಟ ಚಿತ್ರಣ ಕಟ್ಟಿಕೊಡಲು ಪ್ರಯತ್ನಿಸುತ್ತಿದ್ದಾರೆ' ಎಂದರು. 'ಕೇರಳದಲ್ಲಿ ಅರಾಜಕತೆ ಇದೆ' ಎಂದು ತಿರುವಂತಪುರಂನಲ್ಲಿ ನಡೆದ ರ‍್ಯಾಲಿಯಲ್ಲಿ ಪ್ರಧಾನಿ ಆರೋಪಿಸಿದ ಮರುದಿನ ಪಿಣರಾಯಿ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಜಾತ್ಯತೀತತೆಯ ಭದ್ರಕೋಟೆಯಾದ ಕೇರಳದಲ್ಲಿ ಕೋಮು ದ್ವೇಷ ಹರಡಲು ಆರ್‌ಎಸ್‌ಎಸ್ ನಡೆಸುವ ಪ್ರಯತ್ನ ಯಶಸ್ವಿಯಾಗುವುದಿಲ್ಲ. ಸಂಘ ಪರಿವಾರದ ಕಾರ್ಯಸೂಚಿಗೆ ರಾಜ್ಯವು ಶರಣಾಗುವುದಿಲ್ಲ' ಎಂದು ಮುಖ್ಯಮಂತ್ರಿ ಹೇಳಿದರು.

**ಜನಸಂದಣಿಯ ಪ್ರಚಾರಕ್ಕೆ ತಡೆ:** ಕೋವಿಡ್ ಪ್ರಕರಣಗಳು ಭಾರಿ ಪ್ರಮಾಣದಲ್ಲಿ ಏರುತ್ತಿರುವ ಕಾರಣ, ಕೊನೆಯ ದಿನದ ಬಹಿರಂಗ ಪ್ರಚಾರದಲ್ಲಿ ಭಾರಿ ಸಂಖ್ಯೆಯ ಜನರು ಸೇರುವುದರ ಮೇಲೆ ಚುನಾವಣಾ ಆಯೋಗ ನಿರ್ಬಂಧ ಹೇರಿದೆ.

ಕೇರಳದಲ್ಲಿ ಏಪ್ರಿಲ್ 6ರಂದು ಚುನಾವಣೆ ನಿಗದಿಯಾಗಿದೆ. ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ಭಾನುವಾರದಂದು ಜನರು ಹೆಚ್ಚಾಗಿ ಸೇರುವ ಸಾಧ್ಯತೆಯಿದೆ. ಬೃಹತ್ ಜನಸಾಗರದ ನಡುವೆ ಬಹಿರಂಗ ಪ್ರಚಾರ ಅಂತ್ಯಗೊಳಿಸುವ ಸಾಂಪ್ರದಾಯಿಕ ಪದ್ಧತಿಗೆ ಆಯೋಗ ತಡೆ ನೀಡಿದೆ. ಕೋವಿಡ್ ಪ್ರಸರಣ ತಡೆ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ.

### ಚುನಾವಣಾ ಕಣದಲ್ಲಿ...


ಗೃಹಸಚಿವ ಅಮಿತ್ ಶಾ ಹಾಗೂ ಖುಷ್ಬೂ ಅವರು ಚೆನ್ನೈನಲ್ಲಿ ಶನಿವಾರ ರೋಡ್‌ಶೋ ನಡೆಸಿದರು –ಪಿಟಿಐ ಚಿತ್ರ

- **ಬಂಧನ:** ತಮಿಳುನಾಡಿಯ ಕೊಯಮತ್ತೂರಿನ ಎರಡು ಪ್ರದೇಶಗಳಲ್ಲಿ ಮತದಾರರಿಗೆ ನಗದು ವಿತರಿಸಿದ ಆರೋಪದಡಿ ಬಿಜೆಪಿ ಹಾಗೂ ಎಐಎಡಿಎಂಕೆ ಪಕ್ಷಗಳಿಗೆ ಸೇರಿದ 14 ಜನರನ್ನು ಶನಿವಾರ ಬಂಧಿಸಲಾಗಿದೆ. ಬಂಧಿತರಿಂದ ₹46,000, ಆರು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.
- **ಸ್ಟಾಲಿನ್ ಆರೋಪ:** 'ಪುದುಚೇರಿಗೆ ರಾಜ್ಯದ ಸ್ಥಾನಮಾನ ನೀಡುವ ಬಗ್ಗೆ ಪ್ರಧಾನಮಂತ್ರಿ ಯಾವುದೇ ಘೋಷಣೆ ಮಾಡಿಲ್ಲ. ಕೇಂದ್ರದಿಂದ ಬರಬೇಕಾದ ಒಟ್ಟು ₹8,600 ಕೋಟಿ ಸಾಲ ಮನ್ನಾ ಹಣ ಬಾಕಿ ಇದೆ' ಎಂದು ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ಆರೋಪಿಸಿದ್ದಾರೆ.
- **ಗಡಿ ಬಂದ್:** ತಮಿಳುನಾಡಿನ ಜೊತೆ ಗಡಿ ಹಂಚಿಕೊಂಡಿರುವ ಕೇರಳದ ಇಡುಕ್ಕಿ ಜಿಲ್ಲೆಯ ಉಡುಂಬನ್‌ಚೋಲ, ಪೀರುಮೇಡ್, ದೇವಿಕುಳಂ ವಿಧಾನಸಭಾ ಕ್ಷೇತ್ರಗಳ ಗಡಿಗಳನ್ನು ಚುನಾವಣೆ ನಡೆಯುವ ಏಪ್ರಿಲ್ 6ರಂದು ಬಂದ್ ಮಾಡುವುದಾಗಿ ಚುನಾವಣಾ ಆಯೋಗವು ಕೇರಳ ಹೈಕೋರ್ಟ್‌ಗೆ ತಿಳಿಸಿದೆ. ಕೇರಳ ಹಾಗೂ ತಮಿಳುನಾಡು ಎರಡೂ ರಾಜ್ಯಗಳಲ್ಲಿ ಮತದಾನದ ಹಕ್ಕು ಹೊಂದಿರುವ ಜನರು ರಾಜ್ಯ ಪ್ರವೇಶಿಸುವ ಸಾಧ್ಯತೆ ಇರುವ ಬಗ್ಗೆ ಯುಡಿಎಫ್ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು.

## ಮಸ್ಕಿ: ಇಬ್ಬರು 'ಬಸನಗೌಡ'ರು ಕಣದಲ್ಲಿ

**ಮಸ್ಕಿ (ರಾಯಚೂರು):** ಮಸ್ಕಿ ವಿಧಾನಸಭೆ ಉಪಚುನಾವಣೆ ಕಣದಲ್ಲಿ ಬಸನಗೌಡ ಹೆಸರಿನ ಇಬ್ಬರು ಅಭ್ಯರ್ಥಿಗಳಿರುವುದು ಚರ್ಚೆಗೆ ಗ್ರಾಸವಾಗಿದೆ.

ಕಾಂಗ್ರೆಸ್ ಅಭ್ಯರ್ಥಿಯ ಹೆಸರು ಬಸನಗೌಡ ತುರ್ವಿಹಾಳ. ಇವರಲ್ಲದೇ ಮಸ್ಕಿ ತಾಲ್ಲೂಕು ತೀರ್ಥಭಾವಿ ಗ್ರಾಮದ ಬಸನಗೌಡ ಪಕ್ಷೇತರರಾಗಿ ಕಣದಲ್ಲಿ ಉಳಿದಿದ್ದಾರೆ. 'ಮತದಾರರಲ್ಲಿ ಗೊಂದಲ ಮೂಡಿಸುವ ತಂತ್ರ' ಇದು ಎಂದು ಹೇಳಲಾಗುತ್ತಿದೆ.

ಸಿದ್ಧಲಿಂಗಪ್ಪ ಮತ್ತು ಟಿ.ಚಕ್ರವರ್ತಿ ನಾಮಪತ್ರ ವಾಪಸ್ ಪಡೆದಿದ್ದು, ಬಿಜೆಪಿಯ ಪ್ರತಾಪಗೌಡ ಪಾಟೀಲ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಓಬಳೇಶಪ್ಪ, ಪಕ್ಷೇತರರಾದ ದೀಪಿಕಾ ಎಸ್., ಶ್ರೀನಿವಾಸ ನಾಯಕ, ಅಮರೇಶ, ಈಶಪ್ಪ ಕಣದಲ್ಲಿದ್ದಾರೆ.



# ಬಸವಕಲ್ಯಾಣ: ಮುಳೆ ಬಿಜೆಪಿ ತೆಕ್ಕೆಗೆ, ಖೂಬಾ ಬಂಡಾಯ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ (ಬೀದರ್ ಜಿಲ್ಲೆ):** ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಎನ್‌ಸಿಪಿಯಿಂದ ಸ್ಪರ್ಧಿಸಿ ಬಿಜೆಪಿಗೆ ನಡುಕ ಹುಟ್ಟಿಸಿದ್ದ ಮರಾಠ ಸಮಾಜದ ಮುಖಂಡ, ಮಾಜಿ ಶಾಸಕ ಮಾರುತಿರಾವ್ ಮುಳೆ ಅವರನ್ನು ಕಣದಿಂದ ಹಿಂದೆ ಸರಿಸಿ ಪಕ್ಷಕ್ಕೆ ಸೆಳೆಯುವಲ್ಲಿ ಬಿಜೆಪಿ ಮುಖಂಡರು ಯಶಸ್ವಿಯಾದರು.

ಬಿಜೆಪಿ ನಾಯಕರ ಮನವೊಲಿಕೆಗೆ ಜಗ್ಗದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಪಕ್ಷೇತರರಾಗಿ ಕಣದಲ್ಲಿ ಉಳಿದಿದ್ದಾರೆ.

ಮುಳೆ ಮತ್ತು ಖೂಬಾ ಅವರ ಮನವೊಲಿಕೆಗಾಗಿಯೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸಚಿವರಾದ ಬಸವರಾಜ ಬೊಮ್ಮಾಯಿ, ವಿ.ಸೋಮಣ್ಣ ಇಲ್ಲಿಗೆ ಧಾವಿಸಿದ್ದರು.

ಮುಳೆ ಅವರನ್ನು ಭೇಟಿ ಮಾಡಿದ ಈ ನಾಯಕರು ಸುದೀರ್ಘ ಮಾತುಕತೆ ನಡೆಸಿದರು. ಕಟೀಲ್ ಅವರು ನೇರವಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಮಾತನಾಡಿಸಿದರು.

'ಮರಾಠ ಅಭಿವೃದ್ಧಿ ನಿಗಮಕ್ಕೆ ಎರಡು ತಿಂಗಳಲ್ಲಿ ಅಧ್ಯಕ್ಷರ ನೇಮಕ, ಮರಾಠ ಸಮಾಜ 2ಎ ಪ್ರವರ್ಗಕ್ಕೆ ಸೇರ್ಪಡೆಗೆ ಕೇಂದ್ರಕ್ಕೆ ಶಿಫಾರಸು ಮಾಡುವುದು, ದಾವಣಗೆರೆ ಜಿಲ್ಲೆ ಹೊದಿಗೆರೆಯಲ್ಲಿರುವ ಷಹಾಜಿರಾಜೆ ಭೋಸಲೆ, ಕನಕಗಿರಿಯಲ್ಲಿರುವ ಸಂಭಾಜಿರಾಜೆ ಭೋಸಲೆ ಸ್ಮಾರಕ ಅಭಿವೃದ್ಧಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶಾಹು ಮಹಾರಾಜ್ ಮರಾಠಿ ಅಧ್ಯಯನ ಕೇಂದ್ರ ಪುನರಾರಂಭ ಮಾಡುವ ಭರವಸೆಯನ್ನು ಯಡಿಯೂರಪ್ಪ ನೀಡಿದರು. ಆಗ ಮುಳೆ ನಾಮಪತ್ರ ವಾಪಸ್‌ಗೆ ಸಮ್ಮತಿಸಿದರು' ಎಂದು ಬಿಜೆಪಿ ಮುಖಂಡರು ತಿಳಿಸಿದರು.

> ಮುಳೆ ಅವರು ಎನ್‌ಸಿಪಿಯಿಂದ ನಾಮಪತ್ರ ಸಲ್ಲಿಸಿ ವಾಪಸ್ ಪಡೆದಿರುವುದು ಅಚ್ಚರಿಗೆ ಕಾರಣವಾಗಿದೆ. ಅವರು ಬಿಜೆಪಿ ಮುಖಂಡರೊಂದಿಗೆ ಡೀಲ್ ಮಾಡಿಕೊಂಡಿರುವ ಅನುಮಾನ ಇದೆ.
> **ಮಲ್ಲಿಕಾರ್ಜುನ ಖೂಬಾ,** ಬಿಜೆಪಿ ಬಂಡಾಯ ಅಭ್ಯರ್ಥಿ

> ಎನ್‌ಸಿಪಿಗೆ ಮುಳೆ ದ್ರೋಹ ಬಗೆದಿದ್ದಾರೆ. ಸಂಸದರು ಹಾಗೂ ಬಿಜೆಪಿ ಅಭ್ಯರ್ಥಿಯನ್ನು ಮರಾಠ ಸಮಾಜದ ಸಭೆಗೆ ಬಿಟ್ಟುಕೊಳ್ಳದವರು ಈಗ ಅದೇ ಪಕ್ಷಕ್ಕೆ ಬೆಂಬಲ ನೀಡುವುದು ಸರಿಯೇ?
> **ರಾಮಭಾವು ಜಾಧವ,** ಎನ್ಸಿಪಿ ಜಿಲ್ಲಾ ಘಟಕದ ಅಧ್ಯಕ್ಷ

ಹಡಪದ ಸಮಾಜದ ಅಭಿವೃದ್ಧಿಗೆ ಒತ್ತು ಕೊಡುವ ಮತ್ತು ನಿಗಮ/ ಮಂಡಳಿ ಅಧ್ಯಕ್ಷ ಸ್ಥಾನದ ಭರವಸೆ ನೀಡಿದ ನಂತರ ಈರಣ್ಣ ಹಡಪದ ಸಹ ನಾಮಪತ್ರ ವಾಪಸ್ ಪಡೆದರು. ಕಾಂಗ್ರೆಸ್‌ನ ಮಾಲಾ ನಾರಾಯಣರಾವ್, ಬಿಜೆಪಿಯ ಶರಣು ಸಲಗರ, ಜೆಡಿಎಸ್‌ನ ಸಯ್ಯದ್ ಯಸ್ರಬ್ ಅಲಿ ಖಾದ್ರಿ ಸೇರಿದಂತೆ 12 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

**'ಬಿಜೆಪಿ ವರಿಷ್ಠರಿಗೆ ಪ್ರವೇಶ ಇಲ್ಲ':** ಬಿಜೆಪಿ ಟಿಕೆಟ್ ಸಿಗದ ಕಾರಣ ಮುನಿಸಿಕೊಂಡಿರುವ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಬಿಜೆಪಿ ಮುಖಂಡರು ಮನವೊಲಿಸಲು ಮನೆಗೆ ಬರಲಿದ್ದಾರೆ ಎನ್ನುವ ಸುಳಿವು ಸಿಗುತ್ತಿದ್ದಂತೆಯೇ ತಮ್ಮ ಮನೆಯ ಮುಂದೆ 'ಭಾರತೀಯ ಜನತಾ ಪಾರ್ಟಿ ವರಿಷ್ಠರಾರಿಗೂ ಪ್ರವೇಶ ಇಲ್ಲ' ಎಂದು ಫಲಕ ತೂಗು ಹಾಕಿದ್ದಾರೆ.

ಕಟೀಲ್ ಹಾಗೂ ಸಚಿವರು ಮಧ್ಯಾಹ್ನದ ವರೆಗೆ ಸಂಪರ್ಕಿಸಲು ಪ್ರಯತ್ನಿಸಿದರೂ ಖೂಬಾ ಸಂಪರ್ಕ ಸಾಧ್ಯವಾಗಲಿಲ್ಲ.

**ಸಮಾಜದ ಹಿತಕ್ಕಾಗಿ ಬಿಜೆಪಿಗೆ ಬೆಂಬಲ:** ಮುಳೆ: 'ಸಮಾಜದ ಬೇಡಿಕೆ ಈಡೇರಿಸಲು ಬಿಜೆಪಿ ಒಪ್ಪಿದ ಕಾರಣ ನಾನು ನಾಮಪತ್ರ ಹಿಂದಕ್ಕೆ ಪಡೆದು ಬಿಜೆಪಿ ಬೆಂಬಲಿಸಲು ನಿರ್ಧರಿಸಿದ್ದೇನೆ' ಎಂದು ಮಾಜಿ ಶಾಸಕ ಮಾರುತಿರಾವ್ ಮುಳೆ ತಿಳಿಸಿದರು.

'ನನ್ನೊಂದಿಗೆ ಖುದ್ದು ಚರ್ಚೆ ನಡೆಸಿದ ಮುಖಂಡರಲ್ಲದೇ, ಮುಖ್ಯಮಂತ್ರಿ ಯಡಿಯೂರಪ್ಪ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣಸಿಂಗ್ ಅವರೂ ನಮ್ಮ ಬೇಡಿಕೆಗೆ ಒಪ್ಪಿಗೆ ಸೂಚಿಸಿದ್ದಾರೆ. ಇದಕ್ಕೂ ಮೊದಲು ಕಲಬುರ್ಗಿಯ ಶಶೀಲ್ ನಮೋಶಿ ಹಾಗೂ ಸುನೀಲ್ ವಲ್ಲ್ಯಾಪುರ ಮಧ್ಯಸ್ಥಿಕೆ ವಹಿಸಿದ್ದರು' ಎಂದು ಹೇಳಿದರು.


'ಮರಾಠ ಸಮಾಜದ 200ಕ್ಕೂ ಹೆಚ್ಚು ಮುಖಂಡರು ಸಭೆ ಸೇರಿ ಎರಡು ತಾಸು ಚರ್ಚೆ ನಡೆಸಿದೆವು. ಅವರೆಲ್ಲ ಒಪ್ಪಿಗೆ ನೀಡಿದ ನಂತರವೇ ಬಿಜೆಪಿಗೆ ಬೆಂಬಲ ನೀಡಿದ್ದೇನೆ' ಎಂದರು.




ಬಸವಕಲ್ಯಾಣದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಅವರ ಮನೆಯ ಮುಂದೆ 'ಭಾರತೀಯ ಜನತಾ ಪಾರ್ಟಿ ವರಿಷ್ಠರಾರಿಗೂ ಪ್ರವೇಶ ಇಲ್ಲ' ಎಂದು ಫಲಕ ತೂಗು ಹಾಕಿರುವುದು

# ಸಿದ್ದರಾಮಯ್ಯ ಟೀಕೆ: ಪಾಟೀಲ, ನಾರಾಯಣಗೌಡ ಆಕ್ಷೇಪ

ಪ್ರಜಾವಾಣಿ ವಾರ್ತೆ


ಬಿ.ಸಿ. ಪಾಟೀಲ


ಎಸ್.ಟಿ. ಸೋಮಶೇಖರ್


ನಾರಾಯಣಗೌಡ


ಎಸ್.ಆರ್. ವಿಶ್ವನಾಥ್


ಬೈರತಿ ಬಸವರಾಜ

**ಬೆಂಗಳೂರು:** ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಕೀಳುಮಟ್ಟದ ಹಾಗೂ ಏಕವಚನ ಪದಪ್ರಯೋಗ ಮಾಡುವುದನ್ನು ಬಿಡಬೇಕು ಎಂದು ಸಚಿವರಾದ ಬಿ.ಸಿ. ಪಾಟೀಲ, ಬೈರತಿ ಬಸವರಾಜ, ನಾರಾಯಣಗೌಡ ಆಗ್ರಹಿಸಿದ್ದಾರೆ.

'ಯಡಿಯೂರಪ್ಪ ಅವರಪ್ಪನ ಮನೆಯಿಂದ ತಂದು ಕೊಡ್ತಾನಾ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಯಾರೊಬ್ಬರೂ ಅಪ್ಪನ ಮನೆಯಿಂದ ಕೊಡುವುದಿಲ್ಲ; ಎಲ್ಲರೂ ಸರ್ಕಾರದ ದುಡ್ಡನ್ನೇ ಕೊಡುವುದು ಎಂಬುದು ಅವರ ಗಮನದಲ್ಲಿರಲಿ. ನಿಮ್ಮ ಟೀಕೆಗಳು ಕ್ರಿಯಾತ್ಮಕವಾಗಿರಬೇಕೇ ಹೊರತು ಕೀಳುಮಟ್ಟದಲ್ಲಿ ಅಲ್ಲ.ಕೀಳುಮಟ್ಟದ ಭಾಷೆ ಬಳಸುವುದರಿಂದ ಜನಾನುರಾಗಿ ಆಗುತ್ತೇನೆ ಎಂದು ನೀವು ಭಾವಿಸಿದ್ದರೆ ಅದು ತಪ್ಪು' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದ್ದಾರೆ.

'ನಿಮ್ಮ ಕಾಲದಲ್ಲಿ ಕೊಡುತ್ತಿದ್ದಂತೆಯೇ ಈಗಲೂ ಪಡಿತರ ವ್ಯವಸ್ಥೆ ಮುಂದುವರಿದಿದ್ದು, 2 ಕೆ.ಜಿ ಅಕ್ಕಿ ಮಾತ್ರ ಕಡಿಮೆಯಾಗಿದೆ. ಕೋವಿಡ್ ಮತ್ತು ನೆರೆ ಪರಿಸ್ಥಿತಿಯಲ್ಲಿಯೂ ಕಿಸಾನ್ ಸಮ್ಮಾನ್ ಯೋಜನೆಯಡಿ ನೆರವು, ಮೆಕ್ಕೆಜೋಳಕ್ಕೆ ಪರಿಹಾರ ಕೊಟ್ಟಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ? ಈ ರೀತಿ ಕೀಳು ಮಟ್ಟದ ಪ್ರಚಾರವನ್ನು ನಿಲ್ಲಿಸುವುದು ಒಳ್ಳೆಯದು' ಎಂದು ಅವರು ಹೇಳಿದ್ದಾರೆ.

ಇದಕ್ಕೆ ಧ್ವನಿಗೂಡಿಸಿರುವ ಯುವಜನ ಸೇವಾ ಮತ್ತು ಕ್ರೀಡಾ ಸಚಿವ ನಾರಾಯಣಗೌಡ, '7 ಕೆ.ಜಿ ಅಕ್ಕಿ ಕೊಟ್ಟರೂ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನೀವು ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸೋತಿದ್ದಕ್ಕೆ ನೀವು ಆತ್ಮಾವಲೋಕನ ಮಾಡಿಕೊಳ್ಳಿ' ಎಂದು ಕುಟುಕಿದ್ದಾರೆ.

'ಸಿದ್ದರಾಮಯ್ಯನವರು ಯಡಿಯೂರಪ್ಪ ಅವರ ಜವಾಬ್ದಾರಿಯುತ ಸ್ಥಾನ ಮರೆತು ಏಕವಚನದಲ್ಲೇ ಬಾಯಿಗೆ ಬಂದಂತೆ ಮಾತನಾಡಿದಲ್ಲಿ ನಾವು ಕೂಡ ಏಕವಚನದಲ್ಲೇ ಉತ್ತರಿಸಬೇಕಾಗುತ್ತದೆ. ಆದ್ದರಿಂದ ತಮ್ಮ ಮಾತಿನ ಮೇಲೆ ಹಿಡಿತವಿರಲಿ' ಎಂದು ಎಚ್ಚರಿಸಿದ್ದಾರೆ.

**ಸಿಎಂ ಬಡವರ ಪರ:** 'ಯಡಿಯೂರಪ್ಪ ಕುರಿತು ಸಿದ್ದರಾಮಯ್ಯಲಘುವಾಗಿ ಮಾತನಾಡಬಾರದು. ಮುಖ್ಯಮಂತ್ರಿಯವರು ಬಡವರ ಪರವಾಗಿ ಇದ್ದಾರೆ. ಈಗಲೂ ರಾಜ್ಯದಲ್ಲಿ 1.16 ಕೋಟಿ ಕುಟುಂಬಗಳಿಗೆ ಉಚಿತವಾಗಿ ಪಡಿತರ ಧಾನ್ಯ ವಿತರಿಸಲಾಗುತ್ತಿದೆ' ಎಂದು ಬೈರತಿ ಬಸವರಾಜ ಹೇಳಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹೆಚ್ಚು ಸಮಸ್ಯೆಗಳಿರಲಿಲ್ಲ. ಯಡಿಯೂರಪ್ಪ ಅಧಿಕಾರಕ್ಕೆ ಬರುತ್ತಿದ್ದಂತೆ ಪ್ರವಾಹ ಸ್ಥಿತಿ ತಲೆದೋರಿತು. ನಂತರ ಕೋವಿಡ್‌ನಿಂದ ಸಂಕಷ್ಟ ಎದುರಾಯಿತು. ಆರ್ಥಿಕ ಸ್ಥಿತಿ ಚೇತರಿಕೆ ಆದ ಬಳಿಕ ಪಡಿತರ ಧಾನ್ಯ ವಿತರಣೆಯಲ್ಲಿ ಹೆಚ್ಚಳ ಮಾಡುವಂತೆ ಮನವೊಲಿಸಲಾಗುವುದು ಎಂದು ಹೇಳಿದರು.

### 'ಸಿದ್ದರಾಮಯ್ಯಗೆ ಹತಾಶೆ'

'ಈಗ ನಡೆಯುತ್ತಿರುವ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿನ ಭೀತಿ ಕಾಣಿಸಿಕೊಂಡಿರುವುದರಿಂದ ಹತಾಶರಾಗಿರುವ ಸಿದ್ದರಾಮಯ್ಯ, ಮುಖ್ಯಮಂತ್ರಿ ವಿರುದ್ಧ ಕೀಳು ಮಟ್ಟದ ಟೀಕೆ ಮಾಡಲು ಆರಂಭಿಸಿದ್ದಾರೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಉತ್ತಮ ಆಡಳಿತ ಕೊಟ್ಟಿದ್ದರೆ ಮತ್ತೆ ಅಧಿಕಾರಕ್ಕೆ ಬರಬೇಕಿತ್ತು. ಯಾಕೆ ಜನ ಅವರನ್ನು ತಿರಸ್ಕರಿಸಿದರು ಎಂದು ಪ್ರಶ್ನಿಸಿರುವ ಸೋಮಶೇಖರ್, ನಮ್ಮ ಸರ್ಕಾರ ಹಾಗೂ ಯಡಿಯೂರಪ್ಪ ಸಾಧನೆ ಸಹಿಸಲಾಗದೇ, ಟೀಕೆಗೆ ಏನೂ ಕಾರಣ ಸಿಗದೆ ವೃಥಾ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಪಕ್ಷದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಬೆಳವಣಿಗೆ ವೇಗವನ್ನು ಸಿದ್ದರಾಮಯ್ಯ ಅವರಿಗೆ ಸಹಿಸಲಾಗುತ್ತಿಲ್ಲ. ವರುಣಾದಲ್ಲಿಯೇ ಅವರ ಮುಂದಿನ ಸ್ಪರ್ಧೆ ಎಂಬ ಹೇಳಿಕೆ ಇತ್ತೀಚೆಗೆ ಹೊರಬಿದ್ದಿದ್ದರಿಂದ ಗಾಬರಿಯಾಗಿರುವ ಅವರು ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ತಮ್ಮ ಅಸ್ತಿತ್ವಕ್ಕಾಗಿ ಪಕ್ಷದಲ್ಲಿ ಹೋರಾಡುತ್ತಿದ್ದು, ಒಬ್ಬರ ಕಾಲನ್ನು ಒಬ್ಬರು ಎಳೆದುಕೊಳ್ಳುತ್ತಾ, ಕಿತ್ತಾಡುತ್ತಿದ್ದಾರೆ. ಸುಮ್ಮನೆ ಆ ತಪ್ಪುಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ಮೇಲೆ ವೃಥಾ ಆರೋಪ ಮಾಡುತ್ತಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

### 'ಗೌರವಕ್ಕೆ ಚ್ಯುತಿ ತಂದುಕೊಳ್ಳಬೇಡಿ'

ಗೌರವಯುತ ಸ್ಥಾನದಲ್ಲಿರುವ ಯಡಿಯೂರಪ್ಪನವರ ಬಗ್ಗೆ ಸಿದ್ಧರಾಮಯ್ಯನವರು ತಮ್ಮ ನಾಲಿಗೆ ಹರಿಬಿಡಲಾರಂಭಿಸಿರುವುದು ಅವರ ಗೌರವಕ್ಕೇ ಚ್ಯುತಿ ತಂದುಕೊಂಡಂತೆ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದ್ದಾರೆ.

ಹೀಗೆ ಮಾತನಾಡುವುದು ನನಗೆ ರೂಢಿ ಎಂದು ಮಾತು ಮಾತಿಗೆ ಹೇಳುವ ಸಿದ್ದರಾಮಯ್ಯ ಎಂತಹ ಉನ್ನತ ಹುದ್ದೆಯಲ್ಲಿರುವವರನ್ನೂ ಏಕವಚನದಲ್ಲಿ ಸಂಭೋದಿಸುವುದು ತಪ್ಪು. ಇದು ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡುತ್ತದೆ ಎಂಬ ಸಾಮಾನ್ಯ ಜ್ಞಾನವನ್ನು ಅವರು ಮೊದಲು ಅರಿತುಕೊಳ್ಳಲಿ ಎಂದು ಸಲಹೆ ನೀಡಿದ್ದಾರೆ.

ಈ ಹಿಂದೆ ಹಲವು ಬಾರಿ ಕೆ.ಎಸ್.ಈಶ್ವರಪ್ಪ ತಲೆಯಲ್ಲಿ ಮೆದುಳಿಲ್ಲ. ಅವರೊಬ್ಬ ದಡ್ಡ ಎಂದು ಸಿದ್ದರಾಮಯ್ಯ ಟೀಕಿಸಿದ್ದರು. ಆದರೆ, ಈಗ ಈಶ್ವರಪ್ಪ ಮೇಲೆ ಎಲ್ಲಿಲ್ಲದ ಪ್ರೀತಿ ತೋರಿಸುತ್ತಿರುವ ಸಿದ್ದರಾಮಯ್ಯ ನಮ್ಮ ಪಕ್ಷದ ಆಂತರಿಕ ವಿಚಾರದಲ್ಲಿ ರಾಜಕಾರಣ ಮಾಡಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಅವರ ರಾಜಕಾರಣವನ್ನು ರಾಜ್ಯದ ಜನರು ಗಂಭೀರವಾಗಿ ನೋಡುತ್ತಿದ್ದು, ಜನರೇ ಅವರಿಗೆ ಪಾಠ ಕಲಿಸಲಿದ್ದಾರೆ ಎಂದು ವಿಶ್ವನಾಥ್ ಹೇಳಿದ್ದಾರೆ.





ಲಾರಾಳ 'ಲಿಟಲ್ ಹೌಸ್' 10




# ಕಡಲ್ಗಾಲುವೆ ನೋಡ ಕೂಡಿದ್ದವು ದಡ!

**ಸೂಯಜ್ ಕಾಲುವೆ ಬಿಕ್ಕಟ್ಟು ಜಗತ್ತಿನ ಆರ್ಥಿಕತೆಗೆ ಪೆಟ್ಟು**

**ಏಷ್ಯಾ ಹಾಗೂ ಯುರೋಪ್ ಖಂಡಗಳ ನಡುವಿನ ಶಾರ್ಟ್‌ಕಟ್ ಎನಿಸಿದ ಸೂಯಜ್ ಕಾಲುವೆಯಲ್ಲಿ 'ಎವರ್ ಗಿವನ್' ಎಂಬ ದೈತ್ಯ ಹಡಗು ಸಿಕ್ಕಿಬಿದ್ದಿದ್ದು ಗೊತ್ತು ತಾನೇ? ಜಗತ್ತಿನ ಅರ್ಥ ವ್ಯವಸ್ಥೆಯೂ ಆಗ ಉಸಿರು ಬಿಗಿಹಿಡಿದು ಒದ್ದಾಡಿತು. ಕೊಳ್ಳುಬಾಕತನ ಮಿತಿಮೀರಿರುವ ಈ ದಿನಗಳಲ್ಲಿ 'ಎವರ್ ಗಿವನ್' ಪ್ರಸಂಗ ನಮಗೆ ಮರೆಯಲಾಗದ ಪಾಠವೊಂದನ್ನು ಕಲಿಸಿದೆ. ಆ ಪಾಠ ಯಾವುದು ಗೊತ್ತೆ?**

ಬಿ.ಆರ್. ಗುರುಪ್ರಸಾದ್

ಕೊರೊನಾದಿಂದ ತತ್ತರಿಸಿರುವ ಜಗತ್ತು ಸ್ವಲ್ಪ ಚೇತರಿಸಿಕೊಳ್ಳಲು ಪ್ರಾರಂಭಿಸಿದ ವೇಳೆಯಲ್ಲೇ ಮತ್ತೆ ಚಿಂತೆಗೀಡುಮಾಡಿದ ಪ್ರಸಂಗವೊಂದು ಜಗತ್ತಿನ ಮಾಧ್ಯಮಗಳ ಗಮನವನ್ನು ಸೆಳೆಯಿತು. ಸೂಯಜ್ ಕಾಲುವೆಯಲ್ಲಿ ಸಿಕ್ಕಿಕೊಂಡ ದೈತ್ಯ ಹಡಗೊಂದು ಆ ಪ್ರಮುಖ ಜಲಮಾರ್ಗಕ್ಕೆ ಅಡಚಣೆ ತಂದು ಜಗತ್ತಿನ ಆರ್ಥಿಕ ಕ್ಷೇತ್ರಕ್ಕೆ ದೊಡ್ಡ ಪ್ರಮಾಣದ ಹಾನಿಯನ್ನು ಉಂಟುಮಾಡಿದ್ದೇ ಆ ಪ್ರಸಂಗ. ಜಾಗತೀಕರಣದ ಈ ದಿನಗಳಲ್ಲಿ ಜಲ ಸಾರಿಗೆ ಜಾಲವು ಜಗತ್ತಿನ ಆರ್ಥಿಕ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸುವಲ್ಲಿ ಎಂತಹ ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ ಎಂಬುದನ್ನು ಇಡೀ ಜಗತ್ತಿಗೆ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿದ ಪ್ರಸಂಗವೂ ಇದಾಗಿದೆ.

ಜೊತೆಗೇ ಅದರ ಅಸ್ತಿತ್ವದ ಬಗ್ಗೆ ತಿಳಿದಿದ್ದರೂ ಶಾಲೆಯ ನಂತರ ನಾವು ಮರೆತಿದ್ದ ಸೂಯಜ್ ಕಾಲುವೆಯನ್ನು ಮತ್ತೆ ನೆನಪಿಸಿಕೊಳ್ಳುವಂತೆ ಮಾಡಿದೆ. ಇಷ್ಟೇ ಅಲ್ಲದೆ ಮಾನವ ಪ್ರಯತ್ನಕ್ಕೆ ನಿಸರ್ಗದ ನೆರವೂ ದೊರೆತರೆ ಎಲ್ಲವೂ ಸುಗಮವಾಗುತ್ತದೆ ಎಂಬುದನ್ನೂ ಈ ಪ್ರಸಂಗ ಜ್ಞಾಪಿಸಿದೆ.

200 ಕಿಲೊಮೀಟರ್ ಉದ್ದವಿದ್ದು ಕೇವಲ 300 ಮೀಟರ್ ಅಗಲವಿರುವ ಸೂಯಜ್ ಕಾಲುವೆ ಕೆಂಪು ಸಮುದ್ರ ಹಾಗೂ ಮೆಡಿಟರೇನಿಯನ್ ಸಮುದ್ರಗಳನ್ನು ಜೋಡಿಸುತ್ತದೆ. ಹೀಗಾಗಿ ಏಷ್ಯಾ ಹಾಗೂ ಯುರೋಪ್ ಖಂಡಗಳ ನಡುವೆ ಇದು ಒಂದು 'ಕಿರು ದಾರಿ (ಶಾರ್ಟ್ ಕಟ್)' ಅನ್ನು ನಿರ್ಮಿಸಿದೆ. ಸಾಗರಗಳ ಮೂಲಕ ಸಾಗುವ ಜಗತ್ತಿನ ವಾಣಿಜ್ಯ ವಹಿವಾಟಿನ ಶೇಕಡ 13ರಷ್ಟು ಭಾಗ ಸೂಯಜ್ ಕಾಲುವೆಯ ಮೂಲಕ ಸಾಗುತ್ತದೆ.

1869ರಲ್ಲಿ ಈ ಕೃತಕ ಜಲಮಾರ್ಗವು ಯಾನಕ್ಕೆ ಸಿದ್ಧವಾಗುವ ಮೊದಲು ಹಡಗೊಂದು ಏಷ್ಯಾದಿಂದ ಯುರೋಪ್‌ಗೆ ತೆರಳಲು ಆಫ್ರಿಕಾದ ದಕ್ಷಿಣ ತುದಿಗೆ ಸಾಗಿ ಅಲ್ಲಿಂದ ಉತ್ತರಕ್ಕೆ ತಿರುಗಿ ನಂತರ ಯುರೋಪಿನತ್ತ ಸಾಗಬೇಕಿತ್ತು. ಕ್ರಿ.ಶ. 1498ರಲ್ಲಿ ವಾಸ್ಕೊ ಡ ಗಾಮಾ ಯುರೋಪಿನ ಪೋರ್ಚುಗಲ್‌ನಿಂದ ದೂರದ ಭಾರತಕ್ಕೆ ಬಂದದ್ದು ಆಫ್ರಿಕಾದ ದಕ್ಷಿಣ ಭಾಗದ ಮಾರ್ಗವಾಗಿಯೇ. ಆದರೆ, ಸೂಯಜ್ ಕಾಲುವೆಯನ್ನು ತೋಡಿದ ಬಳಿಕ ಅರಬ್ಬಿ ಸಮುದ್ರ ಹಾಗೂ ಯುರೋಪ್ ಖಂಡ, ಇವುಗಳ ನಡುವಿನ ದೂರ ಕ್ರಾಂತಿಕಾರಕವಾಗಿ ಸುಮಾರು ಒಂಬತ್ತು ಸಾವಿರ ಕಿಲೊಮೀಟರ್‌ಗಳಷ್ಟು ಕಡಿಮೆಯಾಯಿತು. ಇದರಿಂದ ಹಡಗುಗಳ ಯಾನದಲ್ಲಿ ಎಂಟರಿಂದ ಹತ್ತು ದಿನಗಳಷ್ಟು ಕಡಿತವಾಯಿತು.

1859ರಲ್ಲಿ ಪ್ರಾರಂಭವಾಗಿ ಒಂದು ದಶಕದ ಆವಧಿಯಲ್ಲಿ ಪೂರ್ಣಗೊಂಡ ಸೂಯಜ್ ಕಾಲುವೆಯ ಇತಿಹಾಸ ಕುತೂಹಲಕಾರಿ. ಅದು ನಿರ್ಮಾಣವಾದ 19ನೇ ಶತಮಾನದಲ್ಲಿ ಯುರೋಪಿನ ದೇಶಗಳದ್ದೇ ಜಗತ್ತಿನಲ್ಲಿ ದರ್ಬಾರು. ಹೀಗಾಗಿ ಫರ್ಡಿನೆಂಡ್ ಡಿ ಲಿಸೆಪ್ಸ್ ಎಂಬ ಫ್ರಾನ್ಸ್‌ನ ರಾಜತಾಂತ್ರಿಕ ಅಂದು ಈಜಿಪ್ಟನ್ನು ಆಳುತ್ತಿದ್ದ ಆಟೋಮನ್ (ಟರ್ಕ್) ಅರಸನ ಪ್ರತಿನಿಧಿಯ ಮನವೊಲಿಸಿ ಸೂಯಜ್ ಕಾಲುವೆಯ ನಿರ್ಮಾಣಕ್ಕಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿದ. ಆ ಬಳಿಕ ಕಾಲುವೆಯಲ್ಲಿ ಸಂಚರಿಸುತ್ತಿದ್ದ ಹಡಗುಗಳು ತೆರುತ್ತಿದ್ದ ಸುಂಕ ಬ್ರಿಟನ್ ಹಾಗೂ ಫ್ರಾನ್ಸ್ ನಿಯಂತ್ರಣಕ್ಕೆ ಒಳಪಟ್ಟ ಆ ಸಂಸ್ಥೆಗೇ ಸೇರುತ್ತಿತ್ತು.

1952ರಲ್ಲಿ ನಡೆದ ಕ್ಷಿಪ್ರಕ್ರಾಂತಿಯ ನಂತರ ಅಧಿಕಾರ ವಹಿಸಿಕೊಂಡ ಈಜಿಪ್ಟ್‌ನ ಜನಪ್ರಿಯ ರಾಷ್ಟ್ರೀಯವಾದಿ ನಾಯಕ ಗೆಮಾಲ್ ಅಬ್ದುಲ್ ನಾಸರ್ 1956ರಲ್ಲಿ ಸೂಯಜ್ ಕಾಲುವೆಯನ್ನು ರಾಷ್ಟ್ರೀಕರಣ ಮಾಡಿದ. ಇದರಿಂದ ರೊಚ್ಚಿಗೆದ್ದ ಬ್ರಿಟನ್ ಮತ್ತು ಫ್ರಾನ್ಸ್ ಇವೆರಡೂ ಇಸ್ರೇಲ್‌ನ ಸಹಕಾರದೊಂದಿಗೆ ಈಜಿಪ್ಟ್‌ನ ಮೇಲೆ ದಾಳಿ ಮಾಡಿದವು.

ಆಗ ಈಜಿಪ್ಶಿಯನ್ನರು ಸೂಯಜ್ ಕಾಲುವೆಯೊಳಗೆ ಬೇಕಾಗಿಯೇ ತಮ್ಮ ಹಡಗುಗಳನ್ನು ಮುಳುಗಿಸಿ ಅದು ಕೆಲವು ತಿಂಗಳುಗಳ ಕಾಲ ಉಪಯೋಗಕ್ಕೆ ಬಾರದಂತೆ ಮಾಡಿದರು. ನಂತರ 1967ರಲ್ಲಿ ನಡೆದ ಅರಬ್-ಇಸ್ರೇಲಿ ಯುದ್ಧದ ವೇಳೆಯಲ್ಲಿ ಮುಚ್ಚಲಾದ ಕಾಲುವೆ ಸುಮಾರು ಎಂಟು ವರ್ಷಗಳ ಕಾಲ ಮತ್ತೆ ಯಾನಕ್ಕೆ ತೆರೆಯಲಿಲ್ಲ. ಇದರಿಂದಾಗಿ ಹಡಗುಗಳು ಕಾಲ ಹಾಗೂ ಹಣ, ಈ ಎರಡು ದೃಷ್ಟಿಯಿಂದಲೂ ದುಬಾರಿಯಾದ ದಕ್ಷಿಣ ಆಫ್ರಿಕಾದ ಮಾರ್ಗದಲ್ಲಿ ಸಂಚರಿಸಬೇಕಾಯಿತು. ಸರಕು ಸಾಗಣೆಯ ವೆಚ್ಚವನ್ನು ಕಡಿಮೆಮಾಡಲು ಬೃಹತ್ ಹಡಗುಗಳನ್ನು ನಿರ್ಮಿಸುವ ಕಾರ್ಯ ಆರಂಭವಾಯಿತು. ಇಂದು ಸೂಯಜ್ ಕಾಲುವೆಯಲ್ಲಿ ಸಂಚರಿಸುವ ಹಡಗುಗಳ ಪೈಕಿ ಕೆಲವು ತುಂಬಾ ದೊಡ್ಡ ಹಡಗುಗಳಾಗಿರುತ್ತವೆ. 2020ರಲ್ಲಿ ಸುಮಾರು 20 ಸಾವಿರ ಹಡಗುಗಳು ಸೂಯಜ್ ಕಾಲುವೆಯಲ್ಲಿ ಸಂಚರಿಸಿವೆ. ಇದು ಸೂಯಜ್ ಕಾಲುವೆಯ ಪೀಠಿಕೆಯಾಯಿತು. ಆದರೆ ಜಗತ್ತಿನಾದ್ಯಂತ ಹಾಹಾಕಾರವನ್ನು ಇತ್ತೀಚೆಗೆ ಉಂಟುಮಾಡಿದ ಸೂಯಜ್ ಕಾಲುವೆಯಲ್ಲಿ ನಡೆದ ಪ್ರಸಂಗದ ಸ್ವರೂಪವಾದರೂ ಎಂತಹದು?

## ಎವರ್ ಗಿವನ್‌ನ ನತದೃಷ್ಟ

ಚೀನಾದಿಂದ ಹಾಲೆಂಡ್‌ಗೆ ಸಾಗುತ್ತಿದ್ದ 'ಎವರ್ ಗಿವನ್' ಎಂಬ ಹೆಸರಿನ ಒಂದು ದೈತ್ಯ ಹಡಗು ಮಾರ್ಚ್ 23ರಂದು ಸೂಯಜ್ ಕಾಲುವೆಯನ್ನು ಪ್ರವೇಶಿಸಿತು. ಆ ಹಡಗಿನಲ್ಲಿ ವಿವಿಧ ಬಗೆಯ ಸರಕುಗಳಿದ್ದ ಇಪ್ಪತ್ತು ಸಾವಿರ ಕಂಟೈನರ್‌ಗಳನ್ನು (20 ಇಲ್ಲವೆ 40 ಅಡಿ ಉದ್ದ, ಎಂಟು ಅಡಿ ಅಗಲ ಹಾಗೂ ಎಂಟೂವರೆ ಅಡಿ ಅಗಲ ಆಯತಾಕಾರದ ದೊಡ್ಡ ಲೋಹದ ಬಾಕ್ಸ್‌ಗಳು) ಇಟ್ಟಿಗೆಗಳಂತೆ ಒಂದರ ಮೇಲೊಂದು ಪೇರಿಸಿ ಇಡಲಾಗಿತ್ತೆನ್ನುವುದು ಆ ಹಡಗಿನ ದೈತ್ಯತೆಯನ್ನು ಹೇಳುತ್ತದೆ! ಅದರಲ್ಲಿದ್ದ ಸರಕು ಸರಂಜಾಮುಗಳನ್ನೂ ಸೇರಿಸಿದರೆ ಆ ಹಡಗಿನ ತೂಕ ಎರಡು ಲಕ್ಷ ಟನ್!

ಇನ್ನು ಆ ಹಡಗಿನ ಉದ್ದ 400 ಮೀಟರ್‌ಗಳಷ್ಟು (ಅಂದರೆ ಬೆಂಗಳೂರಿನ ಎಂ.ಜಿ ರಸ್ತೆಯಲ್ಲಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಬಹುಮಹಡಿ ಕಟ್ಟಡದ ಸುಮಾರು ಆರು ಪಟ್ಟು ಎತ್ತರಕ್ಕೆ ಸರಿಸಮವಾದ ಉದ್ದ) ಇದ್ದು, ಅಗಲ 59 ಮೀಟರ್. ಎವರ್ ಗಿವನ್, ಕೆಂಪು ಸಮುದ್ರದ ಕಡೆಯಿಂದ ಸೂಯಜ್ ಕಾಲುವೆಯನ್ನು ಪ್ರವೇಶಿಸಿದಾಗ ಎಲ್ಲವೂ ಸರಿಯಾಗಿಯೇ ಇತ್ತು. ಆ ದೈತ್ಯ ಹಡಗನ್ನು ಬೀಸುವ ಗಾಳಿ ಅತ್ತಿತ್ತ ತಿರುಗಿಸುತ್ತಿತ್ತು. ಅದನ್ನು ತಡೆಯಲು ಹಡಗು ಸ್ವಲ್ಪ ವೇಗವಾಗಿ (!) ಅಂದರೆ 13 ನಾಟ್ಸ್ (ಗಂಟೆಗೆ 24 ಕಿಲೊಮೀಟರ್ ) ವೇಗದಲ್ಲಿ ಚಲಿಸುತ್ತಿತ್ತು.

ಆದರೆ ಆ ನಡುವೆ ಅದರ ಯಂತ್ರ ವ್ಯವಸ್ಥೆ ವಿಫಲವಾಗಿ ಅದು ಮುಂದೆ ಚಲಿಸುವ ಹಾಗೂ ಅತ್ತಿತ್ತ ತಿರುಗುವ ಸಾಮರ್ಥ್ಯವನ್ನು ಕಳೆದುಕೊಂಡಿತು. ಈ ಕಾರಣದಿಂದಾಗಿ ಎವರ್ ಗಿವನ್ ಅಡ್ಡಡ್ಡವಾಗಿ ತಿರುಗಿ ಅದರ ಮುಂಭಾಗ ಹಾಗೂ ಹಿಂಭಾಗಗಳೆರಡೂ ಕಾಲುವೆಯ ದಡದ ಮರಳಿನಲ್ಲಿ ಸಿಲುಕಿಕೊಂಡವು. ಕುತೂಹಲವೆಂದರೆ 'ಎವರ್ ಗಿವನ್' ಹಡಗು ಜಪಾನಿನ ಒಂದು ಸಂಸ್ಥೆಗೆ ಸೇರಿದ್ದು ಅದರ ಯಾನದ ವಹಿವಾಟನ್ನು ತೈವಾನಿನ 'ಎವರ್ ಗ್ರೀನ್' ಸಂಸ್ಥೆ ನಡೆಸುತ್ತಿದೆ. ಮಧ್ಯ ಅಮೆರಿಕದ ಪನಾಮಾ ದೇಶದಲ್ಲಿ ನೋಂದಾಯಿಸಲ್ಪಟ್ಟ ಆ ಹಡಗಿನಲ್ಲಿದ್ದ ಸಿಬ್ಬಂದಿ ಭಾರತೀಯರು! ಆದರೆ, ಅವರೊಂದಿಗೆ ಸೂಯಜ್ ಕಾಲುವೆಯಲ್ಲಿ ಎವರ್ ಗಿವನ್ ಅನ್ನು ಜಾಗರೂಕತೆಯಿಂದ ನಡೆಸಿಕೊಂಡು ಹೋಗಲು ಈಜಿಪ್ಟ್‌ನ ಇಬ್ಬರು ಪೈಲಟ್‌ಗಳು ಸಹ ಅವರೊಂದಿಗೆ ಇದ್ದರು.

9ನೇ ಪುಟಕ್ಕೆ...

# ರಾಜ್ಯದ ಸ್ವಾಯತ್ತತೆಗೆ ಕುತ್ತು?

**ಕೇಂದ್ರ ಸರ್ಕಾರವು ರಾಜ್ಯಗಳ ಹಕ್ಕಿನ ಮೇಲೆ ದಾಳಿ ಮಾಡುತ್ತಿದೆ ಎಂಬ ಪುಕಾರು ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಹೌದುss, ಈಗೇಕೆ ಇಷ್ಟೊಂದು ಹುಯಿಲು? ಕರ್ನಾಟಕದ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ದಾರಿ ಯಾವುದು?**

ವಾಸು ಎಚ್.ವಿ.



**ಕರ್ನಾಟಕ** ಸರ್ಕಾರದ ಹಿರಿಯ ಸಚಿವರೊಬ್ಬರು ಈಚೆಗೆ ರಾಜ್ಯಗಳ ಸ್ವಾಯತ್ತತೆಯ ಮೇಲೆ ಒಕ್ಕೂಟ ಸರ್ಕಾರದ ಹಸ್ತಕ್ಷೇಪವು ಮಿತಿ ಮೀರುತ್ತಿರುವುದರ ಕುರಿತು ಸಾರ್ವಜನಿಕವಾಗಿಯೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪಶ್ಚಿಮ ಬಂಗಾಳದ ಚುನಾವಣೆಯ ಅಗಾಧ ಬಿಸಿಯ ನಡುವೆಯೇ ಅಲ್ಲಿನ ಮುಖ್ಯಮಂತ್ರಿಯು ದೇಶದ ಹಲವಾರು ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷಗಳ ನಾಯಕರಿಗೆ ಪತ್ರವೊಂದನ್ನು ಬರೆದು ಇದನ್ನೇ ಪ್ರಸ್ತಾಪಿಸಿದ್ದಾರೆ. 'ದೇಶದ ಇತಿಹಾಸದಲ್ಲಿ ಹಿಂದೆಂದೂ ಇರದ ಪ್ರಮಾಣಕ್ಕೆ ದೆಹಲಿಯಲ್ಲಿನ ಒಕ್ಕೂಟ ಸರ್ಕಾರವು ರಾಜ್ಯಗಳ ಹಕ್ಕುಗಳ ಮೇಲೆ ದಾಳಿ ಮಾಡುತ್ತಿದೆ' ಎಂದು ಅವರು ಹೇಳಿರುವುದು ವರದಿಯಾಗಿದೆ.

ದೆಹಲಿಯಲ್ಲಿ ಆಳುತ್ತಿರುವ ಪಕ್ಷವೇ ಕರ್ನಾಟಕದಲ್ಲೂ ಸರ್ಕಾರ ನಡೆಸುತ್ತಿರುವಾಗ ಇನ್ನೂ ಗಂಭೀರವಾದ ಹಲವು ಪ್ರಶ್ನೆಗಳು ಏಳುತ್ತಿವೆ. ಎರಡೂ ಕಡೆ ಒಂದೇ ಪಕ್ಷವಿದ್ದರೆ ಅನುಕೂಲ ಎಂಬ ಪ್ರತಿಪಾದನೆಯನ್ನು ಅಂಕಿ-ಅಂಶಗಳು ಮತ್ತು ವಾಸ್ತವ ಸಂಗತಿಗಳು ಸಮರ್ಥಿಸುತ್ತಿಲ್ಲ. ದೇಶದಲ್ಲಿ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ರಾಜ್ಯಗಳ ಪಟ್ಟಿಯಲ್ಲಿದ್ದ ಕರ್ನಾಟಕವು, ಹಿನ್ನಡೆ ಅನುಭವಿಸುವ ಕಡೆಗೆ ಹೋಗಲಿದೆಯೇ ಎಂಬ ಅನುಮಾನ ಮೂಡುತ್ತಿದೆ.

ಬೆಂಗಳೂರು ಮತ್ತು ದೆಹಲಿ ಎರಡೂ ಕಡೆ ಒಂದೇ ಪಕ್ಷದ ಸರ್ಕಾರ ಇರುವುದು ಒಳ್ಳೆಯದೋ ಅಲ್ಲವೋ ಎಂಬುದನ್ನು ಎರಡು ಸಂಗತಿಗಳು ನಿರ್ಧರಿಸುತ್ತವೆ. ಒಂದು, ದೆಹಲಿಯ ಒಕ್ಕೂಟ ಸರ್ಕಾರದ ಆದ್ಯತೆಗಳು, ಎರಡನೆಯದು ರಾಜ್ಯ ಸರ್ಕಾರಗಳ ಚೌಕಾಶಿ ಸಾಮರ್ಥ್ಯ. ಈ ವಿಚಾರದಲ್ಲಿ ಎಲ್ಲಾ ರಾಜ್ಯಗಳ ಹಿತಾಸಕ್ತಿಯನ್ನು ಕಾಪಾಡುವ ಆಲೋಚನೆಯುಳ್ಳ ಯಾವ ಸರ್ಕಾರವೂ ದೆಹಲಿಯಲ್ಲಿ ಇದುವರೆಗೆ ಬಂದಿಲ್ಲವೆಂದೇ ಹೇಳಬೇಕು. ಆದರೆ ಈಗಿನ ಸರ್ಕಾರವು, ರಾಜ್ಯಗಳ ಹಿತಾಸಕ್ತಿಯನ್ನು ಕಾಪಾಡುವುದು ಹೋಗಲಿ, ಮತ್ತಷ್ಟು ಅಪಾಯಕ್ಕೆ ದೂಡುತ್ತಿದೆ. ಈಗ ಅಧಿಕಾರ ನಡೆಸುತ್ತಿರುವ ದೆಹಲಿಯ ಒಕ್ಕೂಟ ಸರ್ಕಾರದ ಆದ್ಯತೆಯು ಮತ್ತಷ್ಟು ಕೇಂದ್ರೀಕರಣದ ಕಡೆಗಿದೆ.

ಇದಕ್ಕಿಂತ ಸಾಪೇಕ್ಷವಾಗಿ ಉತ್ತಮವಾಗಿದ್ದ ಕೆಲವು ಸರ್ಕಾರಗಳು ಹಿಂದೆ ಇದ್ದವು; ಅದರಲ್ಲೂ ಪ್ರಾದೇಶಿಕ ಪಕ್ಷಗಳ ಮೇಲೆ ಅವಲಂಬಿತವಾಗಬೇಕಿದ್ದ ಸರ್ಕಾರಗಳೇ ಹೆಚ್ಚಿನ ಅಭಿವೃದ್ಧಿ ಸಾಧಿಸಿದವು. ಹಲವಾರು ಅಂಕಿ-ಅಂಶಗಳು ಅದನ್ನು ಸಾಬೀತುಪಡಿಸುತ್ತವೆ. ಜಿಡಿಪಿಯ ಬೆಳವಣಿಗೆ ಮೂಲಕ ಅಭಿವೃದ್ಧಿಯನ್ನು ಅಳೆಯುವುದಿರಲಿ ಅಥವಾ ಮಾನವ ಅಭಿವೃದ್ಧಿ ಸೂಚ್ಯಂಕಗಳ ಮೇಲೆ ಅಳೆಯುವುದಿರಲಿ, ಎರಡೂ ಸಂದರ್ಭಗಳಲ್ಲಿ ಕಿಚಡಿ ಸರ್ಕಾರಗಳ ಸಾಧನೆಯೇ ಉತ್ತಮವಾಗಿತ್ತು. ರಾಜ್ಯ ಸರ್ಕಾರಗಳ ಚೌಕಾಶಿ ಸಾಮರ್ಥ್ಯಕ್ಕೂ ಇದಕ್ಕೂ ನೇರ ಸಂಬಂಧವಿದೆ. ದೆಹಲಿಯ ಒಕ್ಕೂಟ ಸರ್ಕಾರವು ಘಾತುಕ ಬಹುಮತವನ್ನು ಹೊಂದಿರುವ ಎಲ್ಲಾ ಸಂದರ್ಭಗಳಲ್ಲೂ ರಾಜ್ಯಗಳ ಹಿತಾಸಕ್ತಿಯನ್ನು ಕಡೆಗಣಿಸಲಾಗಿದೆ. ಅದು ರಾಜೀವ್‌ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರವಿರಲಿ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವಿರಲಿ ಈ ವಿಚಾರ ಸ್ಪಷ್ಟ. ಅಂತಹ ಸಂದರ್ಭಗಳಲ್ಲಿ ಎರಡೂ ಕಡೆ ಒಂದೇ ಪಕ್ಷದ ಸರ್ಕಾರವಿದ್ದರಂತೂ ಕನಿಷ್ಠ ಬಾಯಿಮಾತಿನ ವಿರೋಧವೂ, ಹಕ್ಕಿನ ಪ್ರತಿಪಾದನೆಯೂ ನಡೆದಿಲ್ಲ ಎಂಬುದೇ ಇದುವರೆಗಿನ ಇತಿಹಾಸ.

ರಾಜ್ಯಗಳಿಗೆ ರಾಚನಿಕವಾಗಿ ಮಹತ್ವವಿಲ್ಲದಂತೆ ಆಗುತ್ತಿರುವ ಸಂದರ್ಭದಲ್ಲಿ ನಾವಿದ್ದೇವೆ. ದೆಹಲಿಯಲ್ಲಿ ಆಳುತ್ತಿರುವ ಪಕ್ಷದ ಪ್ರಭುಗಳ ಎದುರು ದನಿಯೆತ್ತುವ ಸಾಮರ್ಥ್ಯ ಆ ಪಕ್ಷದ ಯಾವ ಸ್ಥಳೀಯ ನಾಯಕರಲ್ಲೂ ಇಲ್ಲವಾಗಿದೆ. ಹೀಗಾಗಿ ಬಯಸಿದರೂ ಪರಿಸ್ಥಿತಿಯನ್ನು ಗಣನೀಯವಾಗಿ ಬದಲಿಸುವ ಸಾಧ್ಯತೆಯೇ ಇಲ್ಲದಿರುವ ದುರಂತ ಎದುರಾಗಿದೆ.

ಒಕ್ಕೂಟ ಸರ್ಕಾರವು ಸಂಗ್ರಹಿಸುವ ತೆರಿಗೆಗಳಲ್ಲಿ ರಾಜ್ಯದ ಪಾಲಿನ ಕುರಿತು ಹಣಕಾಸು ಆಯೋಗಗಳು ಶಿಫಾರಸು ಮಾಡುತ್ತವೆ. ಅಪರೂಪದ ಸಂದರ್ಭಗಳನ್ನು ಬಿಟ್ಟರೆ ಉಳಿದಂತೆ ಈ ಶಿಫಾರಸುಗಳು ಸಂಪೂರ್ಣ ಜಾರಿಗೆ ಬರುತ್ತವೆ. ಆದರೆ, ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ಅದನ್ನು ಜಾರಿ ಮಾಡುವುದೇ ಅಪರೂಪವಾಗಿದೆ. ಅಂದರೆ ರಾಜ್ಯಗಳ ಪಾಲಿಗೆ ಶಿಫಾರಸಾದ ಅನುದಾನದ ಪ್ರಮಾಣವನ್ನು ಒಕ್ಕೂಟ ಸರ್ಕಾರ ನೀಡದೇ, ರಾಜ್ಯಗಳಿಗೆ ಕೊರತೆ ಹೆಚ್ಚಾಗುತ್ತಲೇ ಇದೆ.

ಯುಪಿಎ ಸರ್ಕಾರದ ಕಡೆಯ ವರ್ಷದಲ್ಲೇ ಈ ಛಾಯೆ ಕಂಡಿತಾದರೂ ಅದು ಕೇವಲ ಶೇ -4ರಷ್ಟಿತ್ತು. ಆದರೆ, 2014-15ರಲ್ಲಿ ಅದು ಶೇ -14ರಷ್ಟಾಯಿತು. ಅಲ್ಲಿಂದ ಹಿಗ್ಗುತ್ತಾ ಹೋಗಿ ಕಳೆದ ವರ್ಷ ಅದು ಶೇ -37 ಆಗಿದೆ. ಕೇವಲ ಆರು ವರ್ಷಗಳಲ್ಲಿ ರಾಜ್ಯಗಳು ಈ ಬಾಬ್ತಿನಲ್ಲಿ ಕಳೆದುಕೊಂಡ ಒಟ್ಟು ಹಣ ಹತ್ತಿರತ್ತಿರ ₹ 8 ಲಕ್ಷ ಕೋಟಿ. ಹಣಕಾಸು ಆಯೋಗದ ಶಿಫಾರಸಿನಲ್ಲೇ ಕರ್ನಾಟಕದಂತಹ ರಾಜ್ಯಗಳಿಗೆ ಅನ್ಯಾಯವಾಗಿರುತ್ತದೆ. ಉದಾಹರಣೆಗೆ ಈ ಹಿಂದೆ ಕರ್ನಾಟಕಕ್ಕೆ ಈ ರಾಜ್ಯದ ಕಡೆಯಿಂದ ಹೋಗುವ ₹ 100 ತೆರಿಗೆಯಲ್ಲಿ ₹ 53 ವಾಪಸ್ ಸಿಗುತ್ತಿತ್ತು. ಈಗ (15ನೇ ಹಣಕಾಸು ಆಯೋಗದ ಶಿಫಾರಸಿನ ನಂತರ) ನಮ್ಮ ರಾಜ್ಯದಿಂದ ಹೋಗುವ ₹ 100 ತೆರಿಗೆ ಹಣದಲ್ಲಿ ₹ 40 ಮಾತ್ರ ಸಿಗುತ್ತಿದೆ. ಹಾಗಾಗಿಯೇ ಈ ಸಾರಿ ಯಡಿಯೂರಪ್ಪನವರು ಮಂಡಿಸಿದ ಬಜೆಟ್ಟಿನಲ್ಲಿ ಒಕ್ಕೂಟ ಸರ್ಕಾರದಿಂದ ಬರುವ ತೆರಿಗೆಯ ಪಾಲು ರೂಪಾಯಿಗೆ 12 ಪೈಸೆಯಿಂದ 10 ಪೈಸೆಗೆ ಇಳಿದಿದೆಯೆಂದು ಹೇಳಿದ್ದಾರೆ. ಒಕ್ಕೂಟ ಸರ್ಕಾರದ ಅನುದಾನದ ಬಾಬ್ತೂ ರೂಪಾಯಿಗೆ 7 ಪೈಸೆಯಿಂದ 6 ಪೈಸೆಗೆ ಇಳಿದಿದೆ. ದೆಹಲಿಯ ಒಕ್ಕೂಟ ಸರ್ಕಾರದಿಂದ ಬರುತ್ತದೆಂದು ಅಂದಾಜಿಸಲಾಗುವ ಈ ಪ್ರಮಾಣದ ಹಣವೂ ಅಂತಿಮವಾಗಿ ಬಾರದೇ ಹೋದರೆ ಏನಾಗಬಹುದು?

ಮೇಲಿನವು ಒಕ್ಕೂಟ ಸರ್ಕಾರವು ರಾಜ್ಯಗಳಿಂದಲೇ ಸಂಗ್ರಹಿಸಿ ಅವುಗಳೊಂದಿಗೆ ಹಂಚಿಕೊಳ್ಳಲೇಬೇಕಾದ ತೆರಿಗೆಯ ಪಾಲಾದರೆ, ಹಂಚಿಕೊಳ್ಳುವ ಅಗತ್ಯವಿರದ ಸೆಸ್ ಮತ್ತು ಸರ್‌ಚಾರ್ಜ್‌ಗಳೆಂಬ ಅಡ್ಡಹಾದಿಗಳೂ ದೆಹಲಿಗಿವೆ. ಅದನ್ನು ಹೆಚ್ಚಳ ಮಾಡುತ್ತಾ ಬಂದಿರುವ ಒಕ್ಕೂಟ ಸರ್ಕಾರವು ರಾಜ್ಯಗಳನ್ನು ಆ ರೀತಿಯೂ ವಂಚಿಸಲು ಶುರು ಮಾಡಿದೆ. 2014-15ರಲ್ಲಿ ಒಕ್ಕೂಟ ಸರ್ಕಾರದ ತೆರಿಗೆ ಆದಾಯದ ಶೇ 9.3ರಷ್ಟಿದ್ದ ಸೆಸ್ ಮತ್ತು ಸರ್‌ಚಾರ್ಜ್‌ಗಳ ಬಾಬ್ತು ಕಳೆದ ವರ್ಷದ ಹೊತ್ತಿಗೆ ಶೇ 15ಕ್ಕೇರಿತ್ತು.

ತನ್ನ ರಾಜ್ಯದೊಳಗೆ ತಾನು ವಿಧಿಸಿಕೊಳ್ಳುತ್ತಿದ್ದ ವಿವಿಧ ಬಗೆಯ ತೆರಿಗೆ ವಿಧಾನಗಳನ್ನು ಜಿಎಸ್‌ಟಿಯ ಹೆಸರಿನಲ್ಲಿ ಒಕ್ಕೂಟ ಸರ್ಕಾರದ ಅಧೀನಕ್ಕೆ ಅರ್ಪಿಸಿದ ನಂತರ ಸ್ವಂತ ತೆರಿಗೆ ಹೆಚ್ಚಿಸಿಕೊಳ್ಳುವ ಸಾಧ್ಯತೆಯೂ ರಾಜ್ಯಗಳಿಗೆ ಕಡಿಮೆಯಾಗಿದೆ. ಇದರಿಂದ ಉಂಟಾಗುವ ಕೊರತೆಯನ್ನು 2022ರವರೆಗೆ ತುಂಬಿಕೊಡುವುದಾಗಿ ಹೇಳಿದ್ದ ಒಕ್ಕೂಟ ಸರ್ಕಾರವು ಕರ್ನಾಟಕಕ್ಕೆ ಇದುವರೆಗೆ ಒಂದು ವರ್ಷವೂ ಅದನ್ನು ಪೂರ್ಣ ತುಂಬಿಕೊಟ್ಟಿಲ್ಲ. ಇದನ್ನು ಆಯಾ ಅವಧಿಯ ಮುಖ್ಯಮಂತ್ರಿಗಳೇ ವಿಧಾನ ಮಂಡಲದಲ್ಲಿ ಹೇಳಿದ್ದಾರೆ. ಗಮನಿಸಿ: ನಾಲ್ಕಾರು ಬಗೆಗಳಲ್ಲಿ ರಾಜ್ಯ ಸರ್ಕಾರವು ಅನ್ಯಾಯವನ್ನು ಅನುಭವಿಸುತ್ತಿದೆ.

ರಾಜ್ಯಗಳ ವಿತ್ತೀಯ ಸ್ವಾಯತ್ತತೆಯ ಪರಿಸ್ಥಿತಿ ಹೀಗಾದಾಗ, ರಾಜ್ಯ ಸರ್ಕಾರಗಳೆಂಬುವು ಒಕ್ಕೂಟ ಸರ್ಕಾರದ ಯೋಜನೆಗಳನ್ನು ಅನುಷ್ಠಾನ ಮಾಡುವ ಶಾಖೆಗಳಾಗಿಬಿಡುತ್ತವೆ. ಇದರಾಚೆಗೆ ಸಾಲ ಮಾಡಲೂ ಒಕ್ಕೂಟ ಸರ್ಕಾರದ ಅನುಮತಿ ಬೇಕು. ಈ ಹಿಂದೆ ರಾಜ್ಯಗಳು ಜಿಎಸ್‌ಡಿಪಿಯ (ರಾಜ್ಯಗಳ ಒಟ್ಟು ಆಂತರಿಕ ಉತ್ಪನ್ನದ) ಶೇ 3ರಷ್ಟು ಸಾಲ ಮಾಡಬಹುದಿತ್ತು, ಈಗ ಅದನ್ನು ಶೇ 5ಕ್ಕೆ ಹೆಚ್ಚಿಸಲು ಅನುಮತಿ ನೀಡಲಾಗಿದೆ. ಈ ಅನುಮತಿ ಸಿಕ್ಕಿದ್ದು ಸಹ ಅವರು ಹಾಕಿದ ರಾಜ್ಯಗಳ ಹಿತಾಸಕ್ತಿ ವಿರೋಧಿ ಷರತ್ತುಗಳನ್ನು (ಜಿಎಸ್‌ಟಿ ನಷ್ಟವನ್ನು ಪ್ರಶ್ನಿಸದೇ ಇರುವುದು ಮತ್ತು ಜನರಿಂದ ಕಟ್ಟುನಿಟ್ಟಾದ ತೆರಿಗೆ ವಸೂಲಿ ಮಾಡುವುದು) ರಾಜ್ಯ ಸರ್ಕಾರವು ಒಪ್ಪಿದ್ದರಿಂದ. ಈ ಸಾಲ ಮಾಡುವ ಸ್ವಾತಂತ್ರ್ಯವನ್ನು ಬಳಸಿಕೊಂಡ ನಮ್ಮ ರಾಜ್ಯ ಸರ್ಕಾರವು ಈ ವರ್ಷ ಸಾಲದ ಬಾಬ್ತನ್ನು ರೂಪಾಯಿಯಲ್ಲಿ 22 ಪೈಸೆಯಿಂದ 29 ಪೈಸೆಗೆ ಹೆಚ್ಚಿಸಿಕೊಂಡಿದೆ.

ಇವೆಲ್ಲ ಕೊರತೆಗಳ ನಂತರ ರಾಜ್ಯ ಸರ್ಕಾರದ ಆದ್ಯತೆಯೇನು ಎಂದು ನೋಡಿದರೆ ಅದರಲ್ಲೂ ದೆಹಲಿ ಸಿಂಹಾಸನವನ್ನಾಳುತ್ತಿರುವ ಪಕ್ಷದ ಆದ್ಯತೆಯು ಎದ್ದು ಕಾಣುತ್ತದೆಯೇ ಹೊರತು, ಸಮಸ್ತ ಕರ್ನಾಟಕದ ಆದ್ಯತೆಗಳಲ್ಲ. ಅಯೋಧ್ಯೆಯಲ್ಲಿ ಯಾತ್ರಿ ನಿವಾಸ, ಆಗಸ್ಟ್ 2021ರೊಳಗೆ ಒಂದು ರಾಷ್ಟ್ರ ಒಂದು ಕಾರ್ಡ್ ಯೋಜನೆ ಜಾರಿ, ಮಠಮಾನ್ಯಗಳಿಗೆ ಅನುದಾನ, ಬಲಾಢ್ಯ ಜಾತಿಗಳೆರಡಕ್ಕೂ ತಲಾ ₹ 500 ಕೋಟಿ ಅನುದಾನವಿರುವ ನಿಗಮಗಳು ಇತ್ಯಾದಿ ಇತ್ಯಾದಿಗಳೆಲ್ಲವೂ ಯಾರ ಆದ್ಯತೆ ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಇದು ಅರ್ಥವಾಗುತ್ತದೆ.

11ನೇ ಪುಟಕ್ಕೆ...

# 'ಧರ್ಮಗುರುಗಳಿಗೆ ಬೇಕು ಸಾಮರಸ್ಯದ ತರಬೇತಿ...

ರವೀಂದ್ರ ಭಟ್ಟ

**ಕನ್ನಡದ ಕಬೀರ ಎಂದೇ ಖ್ಯಾತರಾದ ಇಬ್ರಾಹಿಂ ಸುತಾರ ಅವರು ಮೊನ್ನೆ ಮಾತಿಗೆ ಸಿಕ್ಕರು. ನಾಡಿನ ಕೋಮು ಸಾಮರಸ್ಯ ಪರಂಪರೆಗೆ ಕನ್ನಡಿ ಹಿಡಿದರು. ಸಾಮರಸ್ಯದ ಎಳೆಗಳು ಈಗ ತುಂಡರಿಸಿ ಹೋರಟಿರುವುದಕ್ಕೆ ಮರುಗಿದರು. ಧರ್ಮದ ಬಾವುಟ ಹಿಡಿದು ಹೊರಟವರ ಕಿವಿಯನ್ನೂ ಹಿಂಡಿದರು...**

'ನೀವು ಒಂದು ಶಾಲೆಗೆ ಹೋಗ್ತೀರಿ. ಅಲ್ಲಿನ ಮಕ್ಕಳಿಗೆ ಯಾವ ಧರ್ಮ ಶ್ರೇಷ್ಠ ಎಂದು ಕೇಳಿ. ಮಕ್ಕಳು ತಮಗೆ ತಿಳಿದ ಏನೇನೋ ಉತ್ತರ ನೀಡುತ್ತಾರೆ. ಆದರೆ ನೀವು ಮಾತ್ರ 'ಮಾನವ ಧರ್ಮವೇ ಶ್ರೇಷ್ಠ' ಎಂದು ಹೇಳಬೇಕು. ಮಕ್ಕಳಿಗೆ ನೀವು ಯಾರು ಅಂತ ಕೇಳಿ. ಅವರ ಉತ್ತರ ಏನಾದರೂ ಇರಲಿ. ನೀವು ಮಾತ್ರ 'ನಾವು ಭಾರತೀಯರು, ನಾವು ಕನ್ನಡಿಗರು' ಅಂತಲೇ ಹೇಳಿಕೊಡಿ. ನಮ್ಮ ರಾಷ್ಟ್ರ ಧರ್ಮ ಯಾವುದು ಎಂದು ಕೇಳಿದರೆ ಭಾವೈಕ್ಯತೆಯೇ, ಸಾಮರಸ್ಯವೇ, ಪ್ರಜಾಪ್ರಭುತ್ವವೇ ನಮ್ಮ ರಾಷ್ಟ್ರ ಧರ್ಮ ಎಂದು ಹೇಳಿ. ಸಂವಿಧಾನವೇ ರಾಷ್ಟ್ರೀಯ ಗ್ರಂಥ ಎಂದು ನಮ್ಮ ಮಕ್ಕಳಿಗೆ ಹೇಳಿ ಕೊಡಿ'.

ಹೀಗೆಂದು ಖಡಾಖಂಡಿತವಾಗಿ ಹೇಳುತ್ತಾರೆ ಇಬ್ರಾಹಿಂ ಸುತಾರ. ಕನ್ನಡದ ಕಬೀರ ಎಂದೇ ಖ್ಯಾತರಾದ ಸುತಾರ 'ಅಲ್ಲಾ ಮತ್ತು ಅಲ್ಲಮ ಎರಡೂ ಒಂದೇ' ಎಂದು ನಂಬಿದವರು. ಸಮಾಜದಲ್ಲಿ ಸಾಮರಸ್ಯದ ಬೀಜ ಬಿತ್ತಲು ಹೆಣಗಿದವರು. ಉತ್ತರ ಕರ್ನಾಟಕದ ನೆಲದಲ್ಲಿ ಸೂಫೀ ಸಂತರ ಪರಂಪರೆಯನ್ನು ಮುಂದುವರಿಸಿದವರು. ಕುರಾನ್ ಅಲ್ಲದೆ ಭಗವದ್ಗೀತೆ, ಶರಣ ತತ್ವ, ಬಸವ ತತ್ವ, ವೇದ ಉಪನಿಷತ್‌ಗಳನ್ನು ಅಧ್ಯಯನ ಮಾಡಿ ಎಲ್ಲ ಧರ್ಮಗಳ ಸಾರವೂ ಒಂದೇ ಎಂದು ತಿಳಿದವರು ಮತ್ತು ಅದರ ಪ್ರಚಾರಕ್ಕೆ ಟೊಂಕ ಕಟ್ಟಿ ನಿಂತವರು. ಹೀಗಿರ್ಪ ಇಬ್ರಾಹಿಂ ಸುತಾರ ಅವರು ಇತ್ತೀಚೆಗೆ ಮಹಾಲಿಂಗಪುರದಲ್ಲಿ ಪ್ರಜಾವಾಣಿ **'ಭಾನುವಾರದ ಪುರವಣಿ'**ಗೆ ಮಾತಿಗೆ ಸಿಕ್ಕರು. ಅವರ ಜೊತೆ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.


'ಇಸ್ಲಾಂ ಧರ್ಮದ ಬಗ್ಗೆ ಮಾತನಾಡಲು ನನ್ನನ್ನು ಕರೆಯಬೇಡಿ. ನನಗೆ ಹಿಂದೂ ಧರ್ಮ ಅಥವಾ ಜೈನ ಧರ್ಮದ ಬಗ್ಗೆ ಮಾತನಾಡಲು ಹೇಳಿ. ನನ್ನ ಧರ್ಮದ ಬಗ್ಗೆಯೇ ನನಗೆ ಉಪನ್ಯಾಸ ನೀಡಲು ಹೇಳಿದರೆ ನಾನು ನನ್ನ ಧರ್ಮವೇ ಶ್ರೇಷ್ಠ ಎಂದು ಹೇಳುವ ಸಾಧ್ಯತೆ ಇರುತ್ತದೆ. ಉಪನ್ಯಾಸ ಮಾಡುವುದಕ್ಕಾದರೂ ನಾನು ಇನ್ನೊಂದು ಧರ್ಮವನ್ನು ಅಭ್ಯಾಸ ಮಾಡುವಂತಾಗಲಿ. ಅದೇ ರೀತಿ ಹಿಂದೂ ವಿದ್ವಾಂಸರಿಗೆ ಬೇರೆ ಧರ್ಮದ ಬಗ್ಗೆ ಉಪನ್ಯಾಸ ನೀಡಲು ಹೇಳಿ. ಆಗ ಒಂದಿಷ್ಟು ಪರಿವರ್ತನೆ ಆಗುತ್ತದೆ. ಧರ್ಮ ಗುರುಗಳಿಗೆ ಸಾಮರಸ್ಯದ ತರಬೇತಿ ಅಗತ್ಯ. ಇಲ್ಲವಾದರೆ ಅವರು ಕೋಮುವಾದದ ವಿಷಬೀಜ ಬಿತ್ತುತ್ತಾರೆ'.

'ಶಿಶುನಾಳ ಷರೀಫರನ್ನು ಎಲ್ಲರೂ ಹೊಗಳುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಶಿಶುನಾಳ ಷರೀಫರಿಗಿಂತ ಅವರ ತಂದೆ ಇಮಾಂ ಸಾಬ್ ಶ್ರೇಷ್ಠ. ಯಾಕೆಂದರೆ ಅವರು ತಮ್ಮ ಮಗನನ್ನು ಮಠಕ್ಕೆ ಕರೆದುಕೊಂಡು ಹೋಗಿ ಬಸವತತ್ವ, ಶರಣ ತತ್ವ ಕಲಿಸಲು ವಿನಂತಿಸಿಕೊಂಡರು. ಗೋವಿಂದ ಭಟ್ಟರ ಬಳಿಗೆ ಹೋಗಿ ಯೋಗ, ಉಪನಿಷತ್, ಅದ್ವೈತ ಕಲಿಸಲು ಕೋರಿದರು. ಇಮಾಂ ಸಾಬ್ ಹೀಗೆ ಮಾಡದೇ ಇದ್ದರೆ ಷರೀಫರು ಕೂಡ ಒಬ್ಬ ಕೋಮುವಾದಿ ಆಗುತ್ತಿದ್ದರು'.

'ಒಮ್ಮೆ ಮಹಮ್ಮದ ಪೈಗಂಬರರಿಗೆ ಒಬ್ಬ ಶಿಷ್ಯ ಕೇಳಿದ. 'ನಾನು ನನ್ನ ಧರ್ಮದ ಜನರನ್ನು ಪ್ರೀತಿಸುವುದು ಕೋಮುವಾದವಾಗುತ್ತದೆಯೇ?' ಎಂದು. ಅದಕ್ಕೆ ಪೈಗಂಬರರು 'ನೀನು ನಿನ್ನ ಧರ್ಮವನ್ನು ನಂಬುವುದು, ನಿನ್ನ ಜನರನ್ನು ಪ್ರೀತಿಸುವುದು ಕೋಮುವಾದವಲ್ಲ.

10ನೇ ಪುಟಕ್ಕೆ..

ಪ್ರಜಾವಾಣಿ ನೋಡಿಯೊ
ಸಂದರ್ಶನದ ವಿಡಿಯೊ ನೋಡಲು ಇಲ್ಲಿ ಸ್ಕ್ಯಾನ್ ಮಾಡಿ


ಇಬ್ರಾಹಿಂ ಸುತಾರ

## ಮುನ್ನೋಟ 04-04-2021 ರಿಂದ 10-04-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — **ಅಶ್ವಿನಿ, ಭರಣಿ, ಕೃತ್ತಿಕಾ 1**
ಸಂಪನ್ಮೂಲ ಕ್ರೋಡೀಕರಣದಲ್ಲಿ ಯಶಸ್ಸನ್ನು ಸಾಧಿಸುವಿರಿ. ಸ್ನೇಹಿತರ ಸಹಕಾರದಿಂದ ಸ್ಥಿರಾಸ್ತಿ ಖರೀದಿಸಲು ಪ್ರಯತ್ನ ಪಡುವಿರಿ. ವಾಹನ ಚಾಲನೆ ವೇಳೆ ಎಚ್ಚರಿಕೆಯನ್ನು ವಹಿಸುವುದು ಅತಿ ಮುಖ್ಯ. ಪ್ರಕೃತಿದತ್ತ ವಸ್ತುಗಳನ್ನು ಸಂಗ್ರಹಿಸಿ ಮಾರುವವರಿಗೆ ಬೇಡಿಕೆ ಹೆಚ್ಚುತ್ತದೆ. ಉದ್ಯೋಗ ನಿಮಿತ್ತ ದೂರದ ಊರಿಗೆ ಹೋಗಿ ಬರುವ ಸಾಧ್ಯತೆಗಳು ಕಂಡುಬರುತ್ತವೆ. ಸಂಬಂಧಿಕರಿಂದ ಇದ್ದ ಆಸ್ತಿ ಕಿರಿಕಿರಿಯು ತಪ್ಪುತ್ತದೆ.

**ವೃಷಭ** — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ನಿಮ್ಮ ಕುಟುಂಬಕ್ಕೆ ಎದುರಾಗಬಹುದಾಗಿದ್ದ ಸಂಕಷ್ಟಗಳನ್ನು ಸ್ನೇಹಿತರ ಸಹಾಯದಿಂದ ನಿವಾರಣೆ ಮಾಡಿಕೊಳ್ಳುವಿರಿ. ಬಂಧುಗಳ ನಡುವೆ ನಡೆಯುತ್ತಿದ್ದ ವ್ಯಾಜ್ಯವನ್ನು ಪರಿಹರಿಸಿ ಗೌರವ ಪಡೆದುಕೊಳ್ಳುವಿರಿ. ಜೀವನದಲ್ಲಿ ಹೊಸ ಉತ್ಸಾಹವನ್ನು ಪಡೆಯುವಿರಿ. ಆಸ್ತಿ ಸಂಬಂಧದ ಹಳೆಯ ದಾಖಲೆಗಳನ್ನು ಸರಿಯಾಗಿ ನೋಡಿಕೊಳ್ಳಿರಿ ಇಲ್ಲವಾದಲ್ಲಿ ದಾಖಲೆಗಳು ವ್ಯತ್ಯಾಸವಾಗಬಹುದು.

**ಮಿಥುನ** — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಕಚೇರಿ ಕೆಲಸಗಳಲ್ಲಿ ಇದ್ದ ಗೋಜಲುಗಳು ಪರಿಹಾರವಾಗುತ್ತವೆ. ಮುದ್ರಣಕಾರರಿಗೆ ಹೆಚ್ಚಿನ ಅವಕಾಶಗಳು ಒದಗಿಬರುತ್ತವೆ. ಸಂಕಷ್ಟದ ಮಧ್ಯೆಯೂ ವ್ಯವಹಾರದಲ್ಲಿ ಲಾಭವನ್ನು ಕಾಣಬಹುದು. ನಿಮ್ಮ ಮಕ್ಕಳೊಂದಿಗೆ ತಾಳ್ಮೆಯಿಂದ ಮಾತನಾಡಿ ಸೌಹಾರ್ದತೆಯನ್ನು ಕಾಯ್ದುಕೊಳ್ಳುವುದು ಬಹಳ ಉತ್ತಮ. ಸಾರ್ವಜನಿಕವಾಗಿ ಮಾತನಾಡುವಾಗ ಮಾತಿನ ಬಗ್ಗೆ ಸರಿಯಾದ ಗಮನವಿರಲಿ.

**ಕಟಕ** — **ಪುನರ್ವಸು 4 ಪುಷ್ಯ, ಆಶ್ಲೇಷ**
ಕೃಷಿ ಕ್ಷೇತ್ರದಲ್ಲಿ ಹೊಸ ಯೋಜನೆಗಳನ್ನು ಕೈಗೊಂಡವರಿಗೆ ಸರ್ಕಾರದಿಂದ ಅನುದಾನ ದೊರೆಯುತ್ತದೆ. ಬಹಳ ದಿನಗಳಿಂದ ಸತಾಯಿಸುತ್ತಿದ್ದ ಆಸ್ತಿ ಖರೀದಿಯ ವಿಷಯವು ಈಗ ಒಂದು ರೂಪಕ್ಕೆ ಬರುತ್ತದೆ. ಧನದ ಕ್ರೋಡೀಕರಣ ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ತಲುಪುತ್ತದೆ. ಕೆಲಸ ಮಾಡುವ ಜಾಗದಲ್ಲಿ ವಾದವಿವಾದಗಳಿಂದ ದೂರ ಇರುವುದು ಒಳ್ಳೆಯದು.

**ಸಿಂಹ** — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಸ್ನೇಹಿತರ ಸಹಕಾರದಿಂದ ಸಂಗೀತ ಕಾರ್ಯಕ್ರಮಗಳಲ್ಲಿ ಯಶಸ್ಸು ದೊರೆಯುತ್ತದೆ. ಅನಿರೀಕ್ಷಿತ ಧನಲಾಭಗಳು ಒದಗುವ ಸಾಧ್ಯತೆಗಳಿವೆ. ಹೊಸ ಆಸ್ತಿಯ ಖರೀದಿಗೆ ಇದು ಸಕಾಲವಲ್ಲ. ನಿಮ್ಮ ನೇರ ಮಾತುಗಳು ಕೆಲವರಿಗೆ ಕಿರಿಕಿರಿ ಎನಿಸಿದರೂ ನಂತರ ಸತ್ಯ ತಿಳಿದು ಮೆಚ್ಚುಗೆ ಸೂಚಿಸುವರು. ಕುಟುಂಬದವರಿಂದ ಉತ್ತಮ ಪ್ರೀತಿ ಸಹಕಾರ ದೊರೆಯುತ್ತದೆ.

**ಕನ್ಯಾ** — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಅನ್ಯ ವಿಚಾರಗಳನ್ನು ಯೋಚನೆ ಮಾಡದೆ ಹಿಡಿದ ಕಾರ್ಯವನ್ನು ಮಾಡಿದಲ್ಲಿ ವಿಜಯ ನಿಮ್ಮದಾಗಿರುತ್ತದೆ. ಸರಕು ಸಾಗಣೆ ಮಾಡುವ ವಾಹನ ಮಾಲೀಕರಿಗೆ ಲಾಭವಿರುತ್ತದೆ. ಬೇರೆಯವರ ಬಗ್ಗೆ ಅಸೂಯೆ ಪಡುವುದು ಅಷ್ಟು ಒಳಿತಾಗಲಾರದು. ಹಲವು ದಿನಗಳಿಂದ ಕಾಡಿಸುತ್ತಿದ್ದ ಕೆಲಸವೊಂದು ಮುಗಿದು ಮನಸ್ಸು ಹಗುರವಾಗುತ್ತದೆ. ಸಂಸಾರದಲ್ಲಿ ಸುಖವಿದ್ದರೂ ಸಂಗಾತಿಯ ಕಿರಿಕಿರಿ ಇದ್ದೇ ಇರುತ್ತದೆ.

**ತುಲಾ** — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ನಿಮ್ಮ ಕೆಲವು ಕೆಲಸಗಳು ಅತ್ಯಂತ ನಾಜೂಕಾಗಿ ಯಶಸ್ವಿಯಾಗಿ ನೆರವೇರಲಿವೆ. ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ನಿಮ್ಮ ಕಾರ್ಯದಕ್ಷತೆ ಮತ್ತು ಕಾರ್ಯಕ್ಷಮತೆಯ ಬಗ್ಗೆ ಮೆಚ್ಚುಗೆ ಮಾತುಗಳು ಕೇಳಿಬರಲಿವೆ. ಒಬ್ಬರ ಮೇಲೆ ಚಾಡಿ ಹೇಳುವುದು ಒಳಿತಲ್ಲ ಅದು ನಿಮಗೆ ಕೆಡುಕಾಗಬಹುದು. ಬಾಯಿತಪ್ಪಿ ಆಡಿದ ಮಾತಿಗೆ ಸಂಗಾತಿಯ ಕೋಪವನ್ನು ಎದುರಿಸಬೇಕಾದೀತು.

**ವೃಶ್ಚಿಕ** — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಹೊಸ ಉದ್ಯಮಕ್ಕೆ ಕೈ ಹಾಕುವ ಮುನ್ನ ಸಾಕಷ್ಟು ಆಲೋಚನೆ ಮಾಡಿರಿ. ಮಕ್ಕಳಿಂದ ಧನಸಹಾಯವಾದರೂ ಮನೆಯಲ್ಲಿ ಸ್ವಲ್ಪ ಇಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾದೀತು. ಕೋಪ ತಾಪಗಳನ್ನು ಬಿಟ್ಟು ಸಹನೆಯಿಂದ ಅವರಿಗೆ ತಿಳಿವಳಿಕೆಯನ್ನು ಹೇಳಿ ಸಾಮರಸ್ಯವನ್ನು ಕಾಪಾಡಿಕೊಳ್ಳಿರಿ.


**ಧನುಸ್ಸು** — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಹಣಕಾಸಿನ ವಿಷಯದಲ್ಲಿ ಕಾಣುತ್ತಿದ್ದ ಚೇತರಿಕೆಯು ಸ್ವಲ್ಪ ನಿಧಾನಗತಿ ಆಗಬಹುದು. ಅನೇಕ ತೊಂದರೆಗಳ ನಡುವೆಯೂ ನಿಮ್ಮ ಕಾರ್ಯಕ್ಷಮತೆಯಿಂದ ಹಿರಿಯ ಅಧಿಕಾರಿಗಳ ವಿಶ್ವಾಸವನ್ನು ಗಳಿಸುವಿರಿ. ಮನೆ ಕಟ್ಟುವ ವಿಚಾರದಲ್ಲಿ ಮನೆಯವರೆಲ್ಲರ ಜೊತೆ ಮಾತನಾಡಿ ವಿಶ್ವಾಸವನ್ನು ಪಡೆದುಕೊಂಡು ಮುಂದುವರೆಯಿರಿ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ಏರಿಳಿತವನ್ನು ಕಾಣಬಹುದು.

**ಮಕರ** — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಹಳೆಯ ಸಾಲಗಳಿಂದ ಮುಕ್ತರಾಗಲು ಹೊಸ ಮಾರ್ಗವನ್ನು ಕಂಡುಕೊಳ್ಳುವಿರಿ. ಈ ಮಾರ್ಗದಿಂದ ನಿಮ್ಮ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತದೆ. ಕೆಲವು ಹೆಣ್ಣು ಮಕ್ಕಳು ತಮ್ಮ ಪ್ರೇಮ ಪ್ರಕರಣದಿಂದಾಗಿ ಮನೆಯಲ್ಲಿ ಗೊಂದಲದ ವಾತಾವರಣವನ್ನು ಮೂಡಿಸುವರು. ಒತ್ತಡಗಳ ನಡುವೆಯೂ ಸಹ ಕಾರ್ಯಸಿದ್ಧಿಯಾಗುವುದು. ಆರೋಗ್ಯದ ವಿಚಾರದಲ್ಲಿ ಇದ್ದ ವ್ಯತ್ಯಾಸಗಳು ಸರಿಯಾಗುತ್ತವೆ.

**ಕುಂಭ** — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಯುವಕರು ಹಿರಿಯರನ್ನು ಅವಮಾನಿಸಲು ಹೋಗಿ ತಾವೇ ಅವಮಾನಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಅನೇಕ ದಿನಗಳಿಂದ ನಿಮ್ಮ ಕಾರ್ಯಗಳನ್ನು ವಿರೋಧಿಸುತ್ತಿದ್ದ ವಿರೋಧಿಗಳು ಸಹ ಈಗ ನಿಮಗೆ ಸಹಮತ ವ್ಯಕ್ತಪಡಿಸುವರು. ದೈವತಾ ಆರಾಧನೆಯಿಂದ ಶಾಂತಿ ಪಡೆಯಬಹುದು.

**ಮೀನ** — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಮೊದಲೇ ನಿರ್ಧಾರಿತ ಕಾರ್ಯಕ್ರಮಗಳು ಈಗ ಕೈಗೂಡಲು ಆರಂಭಿಸುತ್ತವೆ. ನಿಮ್ಮ ಜೀವನದ ಕೆಲವೊಂದು ಘಟನೆಗಳು ಸಮೂಹದಲ್ಲಿ ನಿಮ್ಮನ್ನು ವಿಚಲಿತರನ್ನಾಗಿ ಮಾಡಬಹುದು. ಖರ್ಚುವೆಚ್ಚಗಳ ಬಗ್ಗೆ ಹಿಡಿತವನ್ನು ಸಾಧಿಸುವುದು ಅತಿ ಅಗತ್ಯ.

## ಪದಬಂಧ 2681



**ಮೇಲಿನಿಂದ ಕೆಳಕ್ಕೆ**
1. ಸರಸದ ಜೊತೆ ಮಾತುಕತೆ 3
2. ತಲೆಕೆಳಕಾದ ವೃಕ್ಷದಲ್ಲಿ ವಿಷ್ಣುಪತ್ನಿ ಸಿಗುತ್ತಾಳೆ 2
3. ಗುರುತಾಗಿ ಉಳಿಯುವ ಲಾಲಿತ್ಯ 2
4. ಸೀರೆಯ ಇಳಿವ ಪದರು 3
6. ಮಹತ್ಸಾಧನೆಯ ಮಹಾಯತ್ನಕ್ಕೆ ಅಂತ್ಯದಲ್ಲಿ ಸೊನ್ನೆ ಸುತ್ತಿದೆ 3
8. ಲೌಕಿಕದಲ್ಲಿ ಉಂಟಾಗುವ ಹೆದರಿಕೆ 4
9. ಸುಸಂಕೃತ ತಲೆ 2
11. ಸದನದಲ್ಲಿ ನಡೆವ ಚರ್ಚೆ ಇತ್ಯಾದಿ 3
13. ಉಳಿದುಕೊಳ್ಳುವ ವ್ಯವಸ್ಥೆ 3
14. ಪ್ರೀತಿ ಪ್ರೇಮ ವಿವಾಹ ಇತ್ಯಾದಿಗಳಿಂದಾದ ಸೆರೆ 3
16. ಪತಿಭಕ್ತಿಗೆ ಹೆಸರಾದ ಕೋವಲನ್‌ನ ಪತ್ನಿ 3
18. ಪಂಚತಂತ್ರದಲ್ಲಿ ವಿನಾಶದ ಬುದ್ಧಿಯಿರುವ ದುಷ್ಟನರಿ 4
21. ದೊಣ್ಣೆ ಪಟ್ಟಿಗೆ ಬಲಿಯಾಗುವ ಪಶು 2
22. ಕೂಡಿ ಕಳೆಯುವ ನಿಸ್ಸೀಮ 3
23. ಚುನಾವಣೆಗೆ ಮೊದಲು ಮಂದಿಯನ್ನು ಮಾತಿನಿಂದ ಮರಳುಮಾಡುವಿಕೆ 3
25. ಚೆಂದದ ಹುಡುಗಿ 3
26. ಕಣ್ಣು ಕಾಣದವ 2
27. ಬುಡಮೇಲಾಗಿಸುವ ಅಹಂಕಾರ 2

**ಎಡದಿಂದ ಬಲಕ್ಕೆ**
1. ಎಲ್ಲವನ್ನೂ ಮುಷ್ಟಿಯಲ್ಲಿ ಹಿಡಿದುಕೊಳ್ಳ ಬಯಸುವ ಆಳ್ವಿಕೆಯ ದಾಹ 5
3. ಕಾವ್ಯಕಾರನ ಕನಸಿನ ಸೃಷ್ಟಿ 5
5. ಅಡಿಗೆಗೆ ಹಾಕುವ ಪದಾರ್ಥ ಮಾತಿಗೆ ಹಚ್ಚಿದರೆ ರುಚಿ ಹೆಚ್ಚುತ್ತದೆಯೇ? 3
7. ಕಮಲದ ಹೊಕ್ಕಳಿನಿಂದ ಹುಟ್ಟಿದ ಮಹಾವಿಷ್ಣು 4
9. ಶಂಕರನ ಜೊತೆಯಲ್ಲಿ ವಾಸಿಸುವ ನದಿಯ ಹೆಸರಲ್ಲಿ ಐತಿಹಾಸಿಕ ಬೆಟ್ಟ 4
10. ಬಣ್ಣಗಳಂತೆ ಜಾತಿಗಳ ಬೆರಕೆ 5
12. ತಾಯಿಯ ಸೋದರ 2
14. ರಾಮನಿಗೆ ಹನುಮ ಏನಾಗಬೇಕು? 2
15. ಕೆಲಸದಲ್ಲಿ ನೆರವಿನ ಹುದ್ದೆ 4
17. ನೀವು ಇದೀಗ ಬಿಡಿಸುತ್ತಿರುವ ಚೌಕಗಳಲ್ಲಿ ಶಬ್ಧಗಳು ಸೆರೆ 4
19. ಬುದ್ಧಿ, ವಿವೇಕ 2
20. ನಡಿಗೆಯ ರೀತಿ 2
21. ಮಾಮರದಿಂದ ಕೇಳಿ ಬರುವ 'ಕುಹೂ ಕುಹೂ' ಹಾಡು 5
23. ರಣವಾಗುವ ಘಟನೆ 4
24. ಸಾಗರವ ದಾಟಿ 4
26. ರಾಮನಿಗೆ ಸಹಾಯಹಸ್ತ ನೀಡಿದ ವಾಲೀ ಪುತ್ರ 3
28. ನೀರಿನ ಸಂಬಂಧಕ್ಕಿಂತ ಗಟ್ಟಿಯಾದುದು 5
29. ಮತ್ತೊಮ್ಮೆ ಮಾಡಿಕೊಳ್ಳಬಹುದಾದ ವಿವಾಹ 5

## ಪದಬಂಧ ಉತ್ತರ -2680

**ಮೇಲಿಂದ ಕೆಳಕ್ಕೆ**
1.ಬಹುಸ್ವರೂಪಿ 2.ದಲಾಯಿಲಾಮಾ 3.ಪದ 4.ಮಗಾಡು 6.ಣಿರಥ 7.ಮಯಭವನ 8.ಗೆಜ್ಜೆನಿನಾದ 11.ಸುಳ್ಳುವರದಿ 12.ತುರುಗಬಲ 15.ವರಮಾಲಿಕೆ 16.ನಿಧಾನಗತಿ 18.ವಸ್ತ್ರದ 19.ನಲುಗು 20 ತೋರು

**ಎಡದಿಂದ ಬಲಕ್ಕೆ**
1. ಬಲ್ಲಿದ 3.ಪಟ್ಟಾಭಿರಾಮ 5.ಲಾವಣಿಪದ 7.ಮತಿಗೆಡು 9.ಧರ್ಮರಾಯ 10.ಪಿಸುಮಾತು 13.ರುದ್ರತಾಂಡವ 14.ನವದನಿ 17.ಬಲದೇವ 19.ನದಿಮೂಲ 20.ತೋಟದಮಾಲಿ 21.ಗುರುವಾಯೂರು 22.ಕೆಳತಿ

# ಯೇಸು ನೈಜ ಸಮಾಧಿ ಯಾವುದು?



ಜೆರೂಸಲೇಮ್‌ನ ಪವಿತ್ರ ಸಮಾಧಿ ಚರ್ಚ್‌ನ ಒಳಗಿರುವ ಸಮಾಧಿ ಸ್ಥಳದಲ್ಲಿ ಪ್ರಾರ್ಥನಾ ವಿಧಿಗಳು ನಡೆದಾಗ ಕಂಡ ನೋಟ...

**ಎಚ್. ವಿಜಯಭಾಸ್ಕರ**

**2000** ವರ್ಷಗಳ ಹಿಂದೆ ಯೇಸುಕ್ರಿಸ್ತನು ಜೀವಿಸಿದ್ದಾಗ ಇಸ್ರೇಲ್ ದೇಶವನ್ನು ರೋಮನ್ನರು ಆಳುತ್ತಿದ್ದರು. ಇಸ್ರೇಲಿನ ಜನ (ಯಹೂದ್ಯರು) ರೋಮ್ ಸರ್ಕಾರಕ್ಕೆ ತಲೆಗಂದಾಯ ಕೊಡುತ್ತಿದ್ದರು. ಅವರ ಧರ್ಮಗುರುಗಳು, ಶಾಸ್ತ್ರಿಗಳು, ಫರಿಸಾಯರೆಂಬ ಶ್ರೀಮಂತ ಮತ್ತು ವಿದ್ಯಾವಂತ ವರ್ಗದವರು ಬಡವರನ್ನು ಬಹಳವಾಗಿ ಪೀಡಿಸುತ್ತಿದ್ದರು. ಅವರ ಮೇಲೆ ನೇಮಕವಾದ ಪಿಲಾತನೆಂಬ ರೋಮನ್ ಆಡಳಿತಗಾರನನ್ನು ಆ ಶ್ರೀಮಂತರು ಒಲಿಸಿಕೊಂಡು ಯಾರೂ ತಮ್ಮ ವಿರುದ್ಧ ತಿರುಗಿ ಬೀಳದಂತೆ ನೋಡಿಕೊಳ್ಳುತ್ತಿದ್ದರು.

ರೋಮನ್ನರು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ತಮ್ಮ ಜನರ ನ್ಯಾಯವನ್ನು ತೀರ್ಮಾನಿಸುವ ಅಧಿಕಾರವನ್ನೂ ಕೊಟ್ಟಿದ್ದರು. ಆದರೆ, ಮರಣದಂಡನೆಯನ್ನು ಕೊಡುವ ಅಧಿಕಾರ ಮಾತ್ರ ಅವರಿಗೆ ಇರಲಿಲ್ಲ. ಮಹಾಸಭೆ ಅಥವಾ 'ಸನ್ಹೆದ್ರಿಯನ್ ಸಭೆ' ಎಂಬ ಕೋರ್ಟು ಅವರ ನ್ಯಾಯವನ್ನು ತೀರ್ಮಾನಿಸುತ್ತಿತ್ತು. ಅದರಲ್ಲಿ ಶ್ರೀಮಂತರು, ಶಾಸ್ತ್ರ ಪಂಡಿತರು, ವಿದ್ಯಾವಂತರಾದ 70 ಜನ ಸದಸ್ಯರಿರುತ್ತಿದ್ದರು. ಮಹಾಯಾಜಕನು ಅದರ ಅಧ್ಯಕ್ಷನಾಗಿರುತ್ತಿದ್ದ. ಮಿಶ್ನಾ ಎಂಬ ಕಾನೂನಿನ ಚೌಕಟ್ಟು ಕೂಡ ಇತ್ತು. ಮಹಾಯಾಜಕನು ತನಗೆ ಬೇಕಾದವರನ್ನು ಸದಸ್ಯರನ್ನಾಗಿ ಮಾಡಿ ತನ್ನ ಮಾತನ್ನು ಮೀರದಂತೆ ನೋಡಿಕೊಳ್ಳುತ್ತಿದ್ದ.

ಮಹಾಯಾಜಕ ಮತ್ತು ಆತನ ತಂಡದ ಅನ್ಯಾಯಗಳನ್ನು, ದುಷ್ಕೃತ್ಯಗಳನ್ನು ಖಂಡಿಸಿದ ಕಾರಣ ಯೇಸುಕ್ರಿಸ್ತನನ್ನು ಗೊಲ್ಗೊಥಾ ಗುಡ್ಡದ ಮೇಲೆ ಶಿಲುಬೆಗೆ ಹಾಕಿ, ಕೊಲ್ಲುವಂತೆ ನೋಡಿಕೊಳ್ಳಲಾಯಿತು. ಮಹಾಸಭೆಯ ಸದಸ್ಯರಾಗಿದ್ದ ಅರಿಮತ್ತಾಯದ ಯೊಸೇಫನಿಗೂ ನಿಕೋದೇಮನಿಗೂ ಇದು ಸರಿ ಅನಿಸಲಿಲ್ಲ. ಯೊಸೇಫನು, ಪಿಲಾತನ ಬಳಿಗೆ ಹೋಗಿ ಯೇಸುಕ್ರಿಸ್ತನ ದೇಹವನ್ನು ಪಡೆಯಲು ಒಪ್ಪಿಗೆ ಪಡೆದ. ರೋಮ್ ಸೈನಿಕರು ಹಾಗೂ ಅಲ್ಲಿಯೇ ಅಳುತ್ತಾ ನಿಂತಿದ್ದ ಸ್ತ್ರೀಯರ ನೆರವಿನಿಂದ ಯೊಸೇಫ ಹಾಗೂ ನಿಕೋದೇಮ, ಯೇಸುವಿನ ದೇಹವನ್ನು ಶಿಲುಬೆಯಿಂದ ಇಳಿಸಿ ದೇಹಕ್ಕೆ ಸುಗಂಧ ದ್ರವ್ಯವನ್ನು ಲೇಪಿಸಿ ನಾರುಮಡಿಯಲ್ಲಿ ಸುತ್ತಿದರು. ಗೊಲ್ಗೊಥಾ ಗುಡ್ಡದ ಕೆಳಗೆ ಇದ್ದ ತನ್ನ ತೋಟದಲ್ಲಿ ಯೊಸೇಫ ತನಗಾಗಿ ತೋಡಿಸಿಕೊಂಡಿದ್ದ ಸಮಾಧಿಯಲ್ಲಿ ಯೇಸುವಿನ ದೇಹವನ್ನು ಇಟ್ಟು, ಒಂದು ಗೋಲಾಕಾರದ ಬಂಡೆಯನ್ನು ಮುಚ್ಚಿ ರಾಜಮುದ್ರೆಯನ್ನು ಹಾಕಿಸಿದ. ಕಾಯಲು ಸಿಪಾಯಿಗಳನ್ನೂ ನೇಮಿಸಿದ. ಮುಂದೆ, ಮೂರನೆಯ ದಿನ ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡು 40 ದಿನಗಳವರೆಗೂ ಉಪದೇಶ ಮಾಡಿದ ಎಂಬುದು ಪ್ರತೀತಿ.

ಕ್ರಿ.ಶ. 70ರಲ್ಲಿ ಯಹೂದ್ಯರು ರೋಮನ್ನರ ವಿರುದ್ಧ ದಂಗೆ ಎದ್ದರು. ರೋಮನ್ ಸೈನ್ಯಾಧಿಕಾರಿ ಟೈಟಸ್ ಮತ್ತು ಅವನ ಸೈನಿಕರು ಯಹೂದ್ಯರನ್ನು ಸೋಲಿಸಿ ಜೆರೂಸಲೇಮಿನ ಬಹುಭಾಗವನ್ನು ನಾಶ ಮಾಡಿದರು. ಮತ್ತು ಹೆರೂದನು ಕಟ್ಟಿಸಿದ ಸುಂದರವಾದ ದೇವಾಲಯವನ್ನೂ ಕೆಡವಿದರು. ಯಹೂದ್ಯರು ಜೆರೂಸಲೇಮ್ ಬಿಟ್ಟು ಬೇರೆ ಬೇರೆ ಕಡೆ ಓಡಿ ಹೋದರು. ಸುಮಾರು 55-60 ವರ್ಷಗಳ ನಂತರ ನಿಧಾನವಾಗಿ ಜನ ಜೆರೂಸಲೇಮಿಗೆ ಬರತೊಡಗಿದರು. ಊರು ಬಿಟ್ಟು ಹೋದಾಗ ಬಾಲಕರಾಗಿದ್ದವರು ವಾಪಸ್ ಬಂದಾಗ ಮುದುಕರಾಗಿದ್ದರು. ಹಾಳುಬಿದ್ದ ಜೆರೂಸಲೇಮಿನಲ್ಲಿ ತಾವು ಸಣ್ಣವರಿದ್ದಾಗ ಯಾವ ಭಾಗದಲ್ಲಿ ಏನಿತ್ತೆಂಬುವುದನ್ನು ಮರೆತಿದ್ದರು. ಆದ್ದರಿಂದ ಯೇಸುಕ್ರಿಸ್ತನ ಸಮಾಧಿಯಾಗಲೀ ಆತನನ್ನು ಶಿಲುಬೆಗೆ ಹಾಕಿದ ಗೊಲ್ಗೊಥಾ ಗುಡ್ಡವಾಗಲೀ ಅವರ ನೆನಪಿನಲ್ಲಿ ಉಳಿದಿರಲಿಲ್ಲ.

> ಗೊಲ್ಗೊಥಾ ಗುಡ್ಡದ ಮೇಲೆ ಯೇಸು ಕ್ರಿಸ್ತನನ್ನು ಶಿಲುಬೆಗೆ ಏರಿಸಿದ್ದು ಯಾವ ಸ್ಥಳದಲ್ಲಿ ಎಂಬ ಗೊಂದಲ ಮೂಡಿದ್ದು ಏಕೆ? ನಿಜಕ್ಕೂ ಪವಿತ್ರ ಸಮಾಧಿ ಇರುವ ಸ್ಥಳವಾದರೂ ಯಾವುದು?

ಯೇಸುಕ್ರಿಸ್ತನ ಮರಣದೊಂದಿಗೆ ಪ್ರಾರಂಭವಾದ ಕ್ರೈಸ್ತರ ಮೇಲಿನ ಹಿಂಸೆ ಸುಮಾರು 300 ವರ್ಷಗಳವರೆಗೆ ತಡೆಯಿಲ್ಲದೆ ಸಾಗಿತ್ತು. ಸಾವಿರಾರು ಜನ ನಾನಾ ಹಿಂಸೆಯಿಂದ ಕೊಲ್ಲಲ್ಪಟ್ಟರು. ಕ್ರಿ.ಶ. 305ರಲ್ಲಿ ಕಾನ್ಸ್ಟಂಟೈನ್‌ನು ಚಕ್ರವರ್ತಿ ಆಗುವವರೆಗೂ ಹಿಂಸೆ ನಡೆಯುತ್ತಲೇ ಇತ್ತು. ಕಾನ್ಸ್ಟಂಟೈನ್‌ನು ಕ್ರೈಸ್ತ ಧರ್ಮ ಸ್ವೀಕಾರಮಾಡಿ ಕ್ರೈಸ್ತರಿಗೆ ಭದ್ರತೆ ಒದಗಿಸಿದ. ಶಿಲುಬೆಯನ್ನು ತನ್ನ ಸೈನ್ಯದ ಲಾಂಛನವನ್ನಾಗಿ ಮಾಡಿಕೊಂಡ ಕಾನ್ಸ್ಟಂಟೈನ್‌ನು ಕ್ರಿ.ಶ. 312ರಲ್ಲಿ ಯುದ್ಧಕ್ಕೆ ಹೊರಟ. ಹೋದಲ್ಲೆಲ್ಲ ಜಯ ಪಡೆದ ಆತ ಕೆಲವೇ ದಿನಗಳಲ್ಲಿ ಇಡೀ ಯುರೋಪ್ ಮತ್ತು ಪಶ್ಚಿಮ ಏಷ್ಯಾದ ಸಾಮ್ರಾಟನಾದ.

ಕಾನ್ಸ್ಟಂಟೈನ್‌ನು ತನ್ನ ತಾಯಿ ರಾಣಿ ಹೆಲೆನಾಳನ್ನು ಯೇಸುಕ್ರಿಸ್ತನ ಸಮಾಧಿಯನ್ನು ಶೋಧಿಸಲೆಂದು ಜೆರೂಸಲೇಮಿಗೆ ಕಳುಹಿಸಿಕೊಟ್ಟ. ಅಲ್ಲಿ ಆಕೆ ಸೀಜರಿಯದ ಬಿಷಪ್ ಈಸೆಬಿಯಸ್ ಮತ್ತು ಜೆರೂಸಲೇಮಿನ ಬಿಷಪ್ ಮಕರಿಯಸ್ ಇವರ ಸಹಾಯದಿಂದ ಹೆರೂದನ ಅರಮನೆಯ ಗೋಡೆಯ ಹಿಂದೆ ಇದ್ದ ಒಂದು ದಿಣ್ಣೆಯನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಅವರಿಗೆ ಮೂರು ಶಿಲುಬೆಗಳು ಮತ್ತು ಒಂದು ಸಮಾಧಿ ಕಾಣಿಸಿತು. ಅವರು ಅದನ್ನೇ ಗೊಲ್ಗೊಥಾ ಗುಡ್ಡ, ಆ ಸಮಾಧಿ ಯೇಸುಕ್ರಿಸ್ತನ ಸಮಾಧಿಯೆಂದು ತಿಳಿದರು. ಈ ಸಂಗತಿಯನ್ನು ಹೆಲೆನಾ ರಾಣಿಯು ರೋಮ್ ಪಟ್ಟಣಕ್ಕೂ ಮತ್ತು ಎಲ್ಲಾ ಕ್ಯಾಥೋಲಿಕ್ ಕ್ರೈಸ್ತರಿಗೂ ತಿಳಿಸಿದಳು. ಕಾನ್ಸ್ಟಂಟೈನ್ ಚಕ್ರವರ್ತಿಯು ಆ ಸ್ಥಳವನ್ನೆಲ್ಲ ವಶಕ್ಕೆ ಪಡೆದು ಅಲ್ಲೊಂದು ಭವ್ಯವಾದ ಕಟ್ಟಡವನ್ನು ನಿರ್ಮಾಣ ಮಾಡಿದ. ಮತ್ತು ಆ ಸಮಾಧಿಯ ಮೇಲೆ ಸುಂದರವಾದ ಚರ್ಚನ್ನು ಕಟ್ಟಿಸಿ ಕ್ರಿ.ಶ.350ರಲ್ಲಿ ಆ ಚರ್ಚ್‌ಗೆ ಹೋಲಿ ಸಫಲ್‌ಕರ್ (ಪವಿತ್ರ ಸಮಾಧಿ) ಎಂದು ನಾಮಕರಣ ಮಾಡಿದ.

ಕ್ರಿ.ಶ. 614ರಲ್ಲಿ ಎರಡನೇ ಖೋಸರೋಸ್‌ನು ಆ ಕಟ್ಟಡವನ್ನು ಕೆಡವಿ ಸುಟ್ಟುಬಿಟ್ಟ. ಕೆಲವೇ ದಿನಗಳಲ್ಲಿ ಜನರ ದೇಣಿಗೆಯೊಂದಿಗೆ ಅದನ್ನು ತಿರುಗಿ ಕಟ್ಟಲಾಯಿತು. ಕ್ರಿ.ಶ. 1010ರಲ್ಲಿ ಹುಚ್ಚು ಖಲೀಫಾ ಹಕೀಮನೆಂಬವನು ಆ ಕಟ್ಟಡವನ್ನು ನಾಶಮಾಡಿದ. 38 ವರ್ಷಗಳಲ್ಲಿ ಅದನ್ನು ಮತ್ತೆ ತಿರುಗಿ ಕಟ್ಟಲಾಯಿತು. ಮುಂದೆ 1099ರಲ್ಲಿ ಕ್ರೂಸೆಡರ್‌ಗಳು ಜೆರೂಸಲೇಮನ್ನು ಪ್ರವೇಶಿಸಿ ಆ ಕಟ್ಟಡವನ್ನು ವಶಕ್ಕೆ ಪಡೆದರು. ಮತ್ತು ಅದನ್ನು ವಿಸ್ತರಿಸಿ ಸುಂದರಗೊಳಿಸಿದರು. ಕ್ರಿ.ಶ.1808ರ ಸೆಪ್ಟೆಂಬರ್ ತಿಂಗಳಿನಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಅದು ಭಸ್ಮವಾಯಿತು.

30 ಲಕ್ಷ ಡಾಲರ್ ವಂತಿಗೆಯೊಂದಿಗೆ ಎರಡು ವರ್ಷದಲ್ಲಿಯೇ ಮತ್ತೊಂದು ಚರ್ಚನ್ನು ಕಟ್ಟಲಾಯಿತು. ಅದು ಮೊದಲಿನಷ್ಟು ಸುಂದರವಾಗಿ ಭದ್ರವಾಗಿ ಇರದಿದ್ದರೂ ಕ್ರೈಸ್ತರ ಹೆಮ್ಮೆಯ ಗುರುತಾಗಿ ಇಂದಿನವರೆಗೂ ಉಳಿದಿದೆ. ಇದು ಎರಡಂತಸ್ತಿನ ಕಟ್ಟಡವಾಗಿದ್ದು ಕ್ರಿಸ್ತನನ್ನು ಶಿಲುಬೆಗೆ ಹಾಕಿದ ಸ್ಥಳವನ್ನೂ ಸಮಾಧಿಯನ್ನೂ ಒಳಗೊಂಡಿದೆ. ಇಲ್ಲಿ ಕ್ಯಾಥೋಲಿಕರು, ಗ್ರೀಕ್ ಆರ್ಥೊಡಕ್ಸರು, ಜಾರ್ಜಿಯನ್ನರು, ಅರೆಮಿಯರು ಹೀಗೆ ಪ್ರತಿಯೊಂದು ಗುಂಪಿನವರು ಬೇರೆ ಬೇರೆಯಾಗಿ ಆರಾಧನೆ ಮಾಡಲು ಪ್ರತ್ಯೇಕ ಚರ್ಚ್‌ಗಳಿವೆ. ವಿಶೇಷ ದಿನಗಳಲ್ಲಿ ಹೋಲಿ ಸಫಲ್‌ಕರ್ ಚರ್ಚ್‌ನಲ್ಲಿ ಆರಾಧನೆ ಮಾಡಲು ಪ್ರತಿಯೊಂದು ಪಂಗಡದವರಿಗೆ ಸಮಯವನ್ನು ನಿರ್ಧರಿಸಲಾಗುತ್ತದೆ. ಸ್ವಲ್ಪ ದೂರದಲ್ಲಿ ಒಂದು ಎತ್ತರವಾದ ಸ್ಥಳದಲ್ಲಿ ಸಮಾಧಿಯಿಂದ 15 ಅಡಿ ಎತ್ತರದಲ್ಲಿ ಟ್ರೂ ಕ್ರಾಸ್ ಇದೆ. ಏಳೆಂಟು ದಶಲಕ್ಷ ಡಾಲರ್ ಬೆಲೆಯ ವಜ್ರವೈಢೂರ್ಯಗಳನ್ನು ಈ ಶಿಲುಬೆಗೆ ಕೂಡಿಸಲಾಗಿದೆ. ಪಕ್ಕದಲ್ಲೇ ಒಂದು ಸೀಳಿದ ಬಂಡೆಯಿದೆ. ಯೇಸುಕ್ರಿಸ್ತನು ಪ್ರಾಣ ಬಿಟ್ಟಾಗ ಸೀಳಿದ ಬಂಡೆಯೆಂದು ಹೇಳುತ್ತಾರೆ.

ಕ್ರೈಸ್ತರಿಗೆ ಇಷ್ಟು ಪವಿತ್ರವಾದ ಸ್ಥಳ ವಿಶ್ವದಲ್ಲಿ ಮತ್ತೊಂದಿಲ್ಲ. ಈ ಸ್ಥಳವೇ ಗೊಲ್ಗೊಥಾ. ಆ ಸಮಾಧಿಯಲ್ಲಿಯೇ ಯೇಸುಕ್ರಿಸ್ತನ ದೇಹವನ್ನು ಇಡಲಾಗಿತ್ತೆಂದೂ ಅದರಿಂದ ಅದು ಪವಿತ್ರ ಸ್ಥಳವೆಂದೂ ಹೇಳಲಾಗುತ್ತದೆ. ಆದರೆ, ಈ ಸ್ಥಳ ಹೆರೂದನ ಅರಮನೆಯ ಗೋಡೆಯೊಳಗೆ ಇರಬಹುದಲ್ಲವೇ ಎಂದು ಅನೇಕರು ಸಂಶಯ ವ್ಯಕ್ತಪಡಿಸುತ್ತಾರೆ. ಅಂದರೆ ಇದು ನಿಜವಾದ ಗೊಲ್ಗೊಥಾ ಅಲ್ಲ, ಇದು ನಿಜವಾದ ಸಮಾಧಿಯಲ್ಲವೆಂದೇ ಅವರ ಭಾವನೆಯಾಗಿದೆ.

ಜೆರೂಸಲೇಮಿನ ಉತ್ತರಕ್ಕೆ ದಮಸ್ಕದ ಹೆಬ್ಬಾಗಿಲಿನಿಂದ ಸುಮಾರು 700 ಅಡಿಗಳಷ್ಟು ಅಂತರದಲ್ಲಿ ಹಳೆ ಕೋಟೆಯ ಹೊರಗೆ ಒಬ್ಬನು ಕಲ್ಲನ್ನು ಎಸೆಯುವಷ್ಟು ದೂರದಲ್ಲಿ, ಸುತ್ತಮುತ್ತಲಿನ ಪ್ರದೇಶಕ್ಕಿಂತ 40-50 ಅಡಿಗಳಷ್ಟು ಎತ್ತರದ ಒಂದು ಗುಡ್ಡವಿದೆ. ಪಟ್ಟಣದ ಎಲ್ಲಾ ಕಡೆಯಿಂದಲೂ ಇದನ್ನು ನೋಡಬಹುದು. ಪಟ್ಟಣದ ಕಡೆ ಮುಖ ಮಾಡಿರುವ ಇದರ ಭಾಗವು ತಲೆಬುರುಡೆಯಂತೆ ಕಾಣುತ್ತದೆ. ಈ ಸ್ಥಳ ಸುಮಾರು ಮೂರು ಎಕರೆಯಷ್ಟು ವಿಸ್ತಾರವಾಗಿದೆ.

ಒಟ್ಟೋಥೆನಿಯಸ್ ಎಂಬುವವನು ಈ ಗುಡ್ಡವನ್ನು ಕೂಲಂಕಷವಾಗಿ ಪರೀಕ್ಷಿಸಿ ಇದೇ ನಿಜವಾದ ಗೊಲ್ಗೊಥಾ ಎಂದು ಪ್ರತಿಪಾದಿಸಿದ. ಆದರೆ, ಅವನ ಹೇಳಿಕೆಯನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ. ಕ್ಯಾಥೋಲಿಕರು ಅದು ಸುಳ್ಳು ಎಂದರು.

ಕ್ರಿ.ಶ. 1885ರಲ್ಲಿ ಜನರಲ್ ಚಾರ್ಲಸ್ ಜಿ. ಗೋರ್ಡನ್ ಎಂಬ ಪ್ರಸಿದ್ಧ ಕ್ರೈಸ್ತ ಸೈನ್ಯಾಧಿಕಾರಿಯೊಬ್ಬರು ಜೆರೂಸಲೇಮಿನ ಉತ್ತರದ ಗೋಡೆಯ ಹೊರಗೆ ತಿರುಗಾಡಲು ಹೋಗಿದ್ದರು. ಅವರು ನೈಸರ್ಗಿಕವಾಗಿ ತಲೆಬುರುಡೆಯಂತೆ ನಿರ್ಮಿತವಾದ ಗೊಲ್ಗೊಥಾದ ಭಾಗವನ್ನು ಪರೀಕ್ಷಿಸಿ, ಕ್ರಿಸ್ತನನ್ನು ಶಿಲುಬೆಗೆ ಹಾಕಿದ ನಿಜವಾದ ಗೊಲ್ಗೊಥಾ ಅದೇ ಎಂದು ಖಾತ್ರಿ ಮಾಡಿಕೊಂಡು ತಮ್ಮ ಹೋಟೆಲಿನ ಕೋಣೆಗೆ ಬಂದು ತಮ್ಮ ಸಹೋದರರಿಗೂ ಸ್ನೇಹಿತರಿಗೂ ಪತ್ರ ಬರೆದರು. ಅವರು ಅದನ್ನು ನಂಬಿದರು. ಆದರೆ, ಕ್ಯಾಥೋಲಿಕರು ನಂಬಲಿಲ್ಲ.

ಮೂರು ವರ್ಷಗಳ ನಂತರ ಗೋರ್ಡನ್ ಆಫ್ರಿಕಾದ ಕಾರ್ಟೋಮಿನಲ್ಲಿ ಹುತಾತ್ಮರಾದರು. ಕೆಲವು ಸಮಯದ ನಂತರ ಗುಡ್ಡದ ಪಶ್ಚಿಮ ಭಾಗವನ್ನು ಕೊಂಡುಕೊಂಡು ಅಗೆದು ನೋಡಿದಾಗ ಹಳೆಯದಾದ ತೋಟದ ಅವಶೇಷಗಳು ಸಿಕ್ಕವು. ಅದರಲ್ಲಿ ಸಮಾಧಿ ಮತ್ತು ಅದರ ಪಕ್ಕದಲ್ಲಿ ಉರುಳಿರುವ ಗೋಲಾಕಾರದ ಬಂಡೆಯನ್ನು ಅದರ ಮೇಲೆ ಹಾಕಿದ್ದ ಮುದ್ರೆಯನ್ನೂ ಕಂಡುಕೊಂಡರು. ಮುಂದೆ ಅಗೆದು ನೋಡಿದಾಗ ಹಿಂದಿನ ಕ್ರೈಸ್ತರ ಸಮಾಧಿಗಳು ದೊರಕಿದವು. ಆ ಸ್ಥಳವನ್ನು ಗೋರ್ಡನ್‌ನ ಗೊಲ್ಗೊಥಾ ಎಂದು ಕರೆದರು.

ಇಂಗ್ಲೆಂಡಿನ ಪ್ರೊಟೆಸ್ಟಂಟ್ ಕ್ರೈಸ್ತರ ಗುಂಪೊಂದು ಆ ಸ್ಥಳವನ್ನೆಲ್ಲ ಕೊಂಡುಕೊಂಡು ಆ ಸ್ಥಳಕ್ಕೆಲ್ಲ ಬೇಲಿಯನ್ನು ಹಾಕಿತು. ಅಲ್ಲಿ ಯಾವ ಕಟ್ಟಡವನ್ನೂ ನಿರ್ಮಿಸದೆ ನೈಸರ್ಗಿಕವಾಗಿ ಹೇಗಿದೆಯೋ ಹಾಗೆಯೇ ಕಾಯ್ದುಕೊಂಡು ಬರಲಾಗಿದೆ. ಅಲ್ಲಿ ಯಾವ ಆರಾಧನೆಗಳು ನಡೆಯುವುದಿಲ್ಲ. ಪ್ರೊಟೆಸ್ಟಂಟರು ಅದೇ ನಿಜವಾದ ಗೊಲ್ಗೊಥಾ ಎಂದು ದೃಢವಾಗಿ ನಂಬಿದ್ದಾರೆ. ಪ್ರತಿ ಈಸ್ಟರ್ ದಿನದಂದು ಅಲ್ಲಿ ಪ್ರಾರ್ಥನೆ, ಆರಾಧನೆ ನಡೆಸಲಾಗುತ್ತದೆ. ಈ ಆರಾಧನೆಯಲ್ಲಿ ಭಾಗವಹಿಸಲಿಕ್ಕೆಂದೇ ಬೇರೆ ದೇಶಗಳಿಂದ ಲಕ್ಷಾಂತರ ಪ್ರೊಟೆಸ್ಟಂಟ್ ಕ್ರೈಸ್ತರು ಬರುತ್ತಾರೆ. ಆದರೆ, ಕ್ಯಾಥೋಲಿಕ್ ಕ್ರೈಸ್ತರು ರಾಣಿ ಹೆಲೆನಾ ಕಂಡುಹಿಡಿದಿದ್ದೇ ನಿಜವಾದ ಗೊಲ್ಗೊಥಾ ಎಂದು ಪ್ರತಿಪಾದಿಸುತ್ತಾರೆ.

ಈಗ ಈ ಎರಡು ಸಮಾಧಿಗಳಲ್ಲಿ ಯೇಸುಕ್ರಿಸ್ತನ ನಿಜವಾದ ಸಮಾಧಿ ಯಾವುದೆಂದು ಸಂಶೋಧಕರು, ಇತಿಹಾಸಕಾರರು ಒಮ್ಮತದಿಂದ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ❖

# ಕಡಲ್ಗಾಲುವೆ ನೋಡ...



8ನೇ ಪುಟದಿಂದ...
ಕಾರಣಗಳು ಏನೇ ಇರಲಿ, 300 ಮೀಟರ್ ಅಗಲದ ಸೂಯಜ್ ಕಾಲುವೆಯಲ್ಲಿ 400 ಮೀಟರ್ ಉದ್ದವಿರುವ ದೈತ್ಯ ಹಡಗೊಂದು ಅಡ್ಡಡ್ಡ ಸಿಲುಕಿಕೊಂಡು ಆ ಕಾಲುವೆಯ ಸಂಚಾರವನ್ನು ಸ್ಥಗಿತಗೊಳಿಸಿತು.

### ಮುಚ್ಚಿದ ಸೂಯಜ್ ಕಾಲುವೆ

ಸೂಯಜ್ ಕಾಲುವೆಯಲ್ಲಿ ಪ್ರತಿನಿತ್ಯ 50 ಹಡಗುಗಳು ಸಂಚರಿಸಿ ಸುಮಾರು ಹತ್ತು ಬಿಲಿಯನ್ ಡಾಲರ್‌ಗಳಷ್ಟು ಸರಕನ್ನು ಕೊಂಡೊಯ್ಯುತ್ತವೆ. ಕಡಿದಾದ ಆ ಜಲ ಮಾರ್ಗವನ್ನು ದಾಟಲು ಅವಕ್ಕೆ ಸಾಮಾನ್ಯವಾಗಿ 12-16 ಗಂಟೆಗಳು ಬೇಕಾಗುತ್ತವೆ. ಹೀಗಾಗಿ ಆರು ದಿನಗಳ ಅವಧಿಯಲ್ಲಿ ಸೂಯಜ್ ಕಾಲುವೆಯ ಎರಡೂ ಕೊನೆಯಲ್ಲೂ ಒಟ್ಟು 350 ರಿಂದ 400 ಹಡಗುಗಳು ಅಸಹಾಯಕವಾಗಿ ನಿಂತವು.

ಸೂಯಜ್ ಕಾಲುವೆ ಈಗ ಸಂಪೂರ್ಣವಾಗಿ ಈಜಿಪ್ಟ್ ದೇಶಕ್ಕೆ ಸೇರಿದ್ದು, ಆ ಕಾಲುವೆಯಿಂದ ದಿನವೊಂದಕ್ಕೆ 14 ಮಿಲಿಯನ್ ಡಾಲರ್ ಆದಾಯವಿದೆ. ಎವರ್ ಗಿವನ್ ಆ ಕಾಲುವೆಯ ಸಂಚಾರಕ್ಕೆ ತಡೆಹಾಕಿದ್ದು ಆರು ದಿನಗಳಲ್ಲಿ ಆ ದೇಶಕ್ಕೆ ಸಾಕಷ್ಟು ನಷ್ಟವಾಯಿತು. ಆದರೆ, ನಷ್ಟ ಈಜಿಪ್ಟ್ ಒಂದಕ್ಕೇ ಆಗಲಿಲ್ಲ. ಎಲೆಕ್ಟ್ರಾನಿಕ್ ಬಿಡಿಭಾಗಗಳು, ಪೆಟ್ರೋಲಿಯಂ ಉತ್ಪನ್ನಗಳು, ಜಾನುವಾರುಗಳು ಹಾಗೂ ಪೀಠೋಪಕರಣಗಳಿಂದ ಹಿಡಿದು ಕಾಫಿ, ಧಾನ್ಯಗಳು, ಕೊನೆಗೆ ಟಾಯ್ಲೆಟ್ ಪೇಪರ್‌ನಂತಹ ಅಗತ್ಯ ವಸ್ತುಗಳನ್ನು ಹೊತ್ತೊಯ್ಯುತ್ತಿದ್ದ ಹಡಗುಗಳು ಒಂದೆಡೆ ಸುಮ್ಮನೆ ನಿಲ್ಲಲಾಗಿ ಆ ಹಡಗುಗಳ ಸಂಸ್ಥೆಗಳಿಗೆ ನಷ್ಟ ದಿನ ಕಳೆದಂತೆ ಏರಲಾರಂಭಿಸಿತು. ಜಾಗತಿಕ ಸರಬರಾಜು ಸರಪಳಿಗೆ ಬಲವಾದ ಪೆಟ್ಟು ಬಿದ್ದಿತು. ಇದರಿಂದ ಆ ವಸ್ತುಗಳ ಬೆಲೆ ಏರುವುದೇ? ಸೂಪರ್ ಮಾರ್ಕೆಟ್‌ಗಳ ಗೂಡುಗಳು ಖಾಲಿಯಾಗುವವೇ? ಹೀಗೆ ಅನಗತ್ಯವಾದ ಭೀತಿ ಕೊರೊನಾದ ದಾಳಿಯ ಅನುಭವದಿಂದ ಜರ್ಜರಿತವಾಗಿರುವ ಜಗತ್ತಿನ ವಿವಿಧೆಡೆಯಲ್ಲಿ ಉಂಟಾಯಿತು.

ಇದೆಲ್ಲಾ ಚರ್ಚೆಗೆ ಒಳಗಾಗುತ್ತಿದ್ದ ವೇಳೆಯಲ್ಲೇ ಕಾಲುವೆಯ ಅಂಚಿನಲ್ಲಿ ಹೂತುಹೋಗಿದ್ದ ಎವರ್ ಗಿವನ್ ಅನ್ನು 'ಪಾರುಮಾಡುವ' ಕೆಲಸ ಪ್ರಾರಂಭವಾಯಿತು. ಜೆಸಿಬಿ ಯಂತ್ರವನ್ನು ಹೋಲುವ ಯಂತ್ರಗಳು ಆ ಹಡಗಿನ ಚೂಪಾದ ಮುಂಭಾಗದ ಸುತ್ತಲಿನ ಮಣ್ಣು ಮರಳುಗಳನ್ನು ಅಗೆದು ತೆಗೆಯುವ ಕೆಲಸವನ್ನು ಪ್ರಾರಂಭಿಸಿದವು. ಎವರ್ ಗಿವನ್‌ನ ಮುಂಭಾಗದ ದೈತ್ಯತೆಗೆ ಹೋಲಿಸಿದಲ್ಲಿ ಮಕ್ಕಳಾಟಿಗೆಯಂತೆ ಕಾಣುವ ಅಂತಹ ಒಂದು ಯಂತ್ರ ಅಗೆದು ತೆಗೆಯುತ್ತಿದ್ದ ಮರಳಿನ ಪ್ರಮಾಣ ರಾವಣಾಸುರನ ಹೊಟ್ಟೆಗೆ ಆರು ಕಾಸಿನ ಮಜ್ಜಿಗೆ ಸಾಕೇ ಎಂಬಂತಿತ್ತು. ಇದರೊಂದಿಗೇ ಅನೇಕ ಪುಟ್ಟ ಆದರೆ ಶಕ್ತಿಯುತ ಯಾಂತ್ರಿಕ ದೋಣಿಗಳು ಆ ಹಡಗಿನ ಹಿಂಭಾಗವನ್ನು ನಾಲೆಯ ತುದಿಯಿಂದ ನೀರಿಗೆ ತಳ್ಳಿ ಎಳೆಯಲಾರಂಭಿಸಿದವು. ಇದು ಹೆಚ್ಚಿನ ಫಲಿತಾಂಶವನ್ನು ನೀಡಲಿಲ್ಲವಾಗಿ ಹೂಳೆತ್ತುವ ದೊಡ್ಡ ದೋಣಿಗಳು (ಡ್ರೆಡ್ ಜರ್ಸ್) ಬಂದು ಎವರ್ ಗಿವನ್‌ನ ಸುತ್ತಲಿನ ಹೂಳನ್ನು ಎತ್ತಲಾರಂಭಿಸಿದವು.

ಆ ದೈತ್ಯ ಹಡಗನ್ನು ಹೂತುಹೋಗಿದ್ದ ಸ್ಥಳದಿಂದ ಕದಲಿಸಿ ಮತ್ತೆ ಕಾಲುವೆಯ ಮಧ್ಯಭಾಗಕ್ಕೆ ತರುವುದಕ್ಕೆ 'ಕೆಲವು ದಿನ ಅಗತ್ಯ, ಕೆಲವು ವಾರ ಅಗತ್ಯ' ಹೀಗೆ ವಿವಿಧ ಅಭಿಪ್ರಾಯಗಳು ವ್ಯಕ್ತವಾದವು. ಸೂಯಜ್ ಕಾಲುವೆಯನ್ನು ಪ್ರವೇಶಿಸಲು ಕಾದಿದ್ದ ಹಡಗುಗಳ ಸಹನೆ ಮೀರಲಾರಂಭಿಸಿತು. ಆ ಪೈಕಿ ಕೆಲವು ಹಡಗುಗಳು ಅನಿಶ್ಚಿತತೆಯ ಹಾಗೂ ಗೊಂದಲದ ತಾಣವಾದ ಸೂಯಜ್ ಕಾಲುವೆಯನ್ನು ಪ್ರವೇಶಿಸುವ ಗೊಡವೆಗೇ ಹೋಗದೆ ದೂರವಾದರೂ, ದುಬಾರಿಯಾದರೂ ಪರವಾಗಿಲ್ಲ ಯುರೋಪ್‌ಗೆ ಹೋಗಿಯೇ ತೀರುತ್ತೇವೆಂದು ಆಫ್ರಿಕಾ ಖಂಡವನ್ನು ಸುತ್ತುಹಾಕಿ ತಮ್ಮ ತಲುಪುದಾಣಗಳತ್ತ ಹೊರಟವು.

### ಚಂದ್ರನ ಚಮತ್ಕಾರ

ಎವರ್ ಗಿವನ್ ಅನ್ನು ಪಾರುಮಾಡುವ ಪ್ರಯತ್ನಗಳು ಈ ರೀತಿ ನಡೆದಿದ್ದ ವೇಳೆಯಲ್ಲೇ ದೂರದ ಸೂರ್ಯ ಚಂದ್ರರು ಎವರ್ ಗಿವನ್‌ನ ನೆರವಿಗೆ ಬಂದರು. ಸೂಯಜ್‌ನ ಆಗಸದಲ್ಲಿ ಹುಣ್ಣಿಮೆ ಚಂದ್ರ ಮೂಡಿದಂತೆ ಆ ಆಕಾಶಕಾಯವು ಭೂಮಿಯ ಮೇಲೆ ಬೀರುವ ಗುರುತ್ವಾಕರ್ಷಣೆಯ ಫಲವಾಗಿ ಉಬ್ಬರವಿಳಿತಗಳು (ಟೈಡ್ಸ್) ಜನಿತವಾದವು. ಜೊತೆಗೇ ತನ್ನ ಕೋಳಿಮೊಟ್ಟೆಯಾಕಾರದ ಕಕ್ಷೆಯಲ್ಲಿ ಭೂಮಿಯನ್ನು ಸುತ್ತುವ ಚಂದ್ರ ಕಳೆದ ಸೋಮವಾರ (ಮಾರ್ಚ್ 28) ತನ್ನ ಕಕ್ಷೆಯಲ್ಲಿ ಭೂಮಿಗೆ ಬಹುಮಟ್ಟಿಗೆ 'ಅತಿ' ಹತ್ತಿರದಲ್ಲಿತ್ತು. ಅಂದು ಹುಣ್ಣಿಮೆಯಾದ್ದರಿಂದ ಸೂರ್ಯನ ಗುರುತ್ವಾಕರ್ಷಣ ಶಕ್ತಿಯೂ ಇದರೊಂದಿಗೆ ಸೇರಿ ಸಹಕರಿಸಿತು.

ಪರಿಣಾಮವಾಗಿ ಸೂಯಜ್ ಕಾಲುವೆಯ ನೀರಿನಮಟ್ಟ ಮೇಲೇರಿ ಎವರ್ ಗಿವನ್ ಅನ್ನು ಬಿಡಿಸಿಕೊಳ್ಳುವ ಹಾಗೂ ಮತ್ತೆ ತೇಲಿಬಿಡುವ ಕಾರ್ಯ ಸುಲಭವಾಯಿತು. ಈ ಪಾರು ಮಾಡುವ ಕಾರ್ಯದಲ್ಲಿ ಭಾಗವಹಿಸಿದ್ದ ಈಜಿಪ್ಟಿಯನ್ನರ ಸಂತಸಕ್ಕೆ ಪಾರವೇ ಇರಲಿಲ್ಲ. ಕೆಲಕಾಲದ ನಂತರ ಆ ದೈತ್ಯ ಹಡಗು ತನ್ನ ಯಂತ್ರವ್ಯವಸ್ಥೆಯ ನೆರವಿನೊಡನೆಯೇ ಮುಂದೆ ಚಲಿಸಿ 'ಬೃಹತ್ ಕಹಿಯಾದ ಸರೋವರ (ಗ್ರೇಟ್ ಬಿಟ್ಟರ್ ಲೇಕ್) ಎಂಬ ದೊಡ್ಡ ಸರೋವರದಂತಹ ಪ್ರದೇಶವನ್ನು ತಲುಪಿತು. ಅಂತೂ ಕಳೆದ ಸೋಮವಾರ (ಮಾರ್ಚ್ 29) ಸೂಯಜ್ ಕಾಲುವೆ ಹಡಗುಗಳ ಸಂಚಾರಕ್ಕೆ ಮತ್ತೆ ತೆರವಾಯಿತು. ಆದರೆ, ಎವರ್ ಗಿವನ್‌ನ ಪ್ರಕರಣದಿಂದಾಗಿ ಜಾಗತಿಕ ಸರಬರಾಜು ಸರಪಣಿಯಲ್ಲಿ ಉಂಟಾಗಿರುವ ವ್ಯತ್ಯಯವನ್ನು ಸರಿಪಡಿಸಲು ತಿಂಗಳುಗಳೇ ಬೇಕಾಗಬಹುದು ಎನ್ನುವುದು ವಾಣಿಜ್ಯ ತಜ್ಞರ ಅನಿಸಿಕೆ.

ಜಾಗತೀಕರಣದ ಯುಗದಲ್ಲಿ ದೇಶಗಳು ಒಂದನ್ನೊಂದು ಹಾಗೂ ಜಲ ಸಾರಿಗೆಯನ್ನು ಎಷ್ಟರಮಟ್ಟಿಗೆ ಅವಲಂಬಿಸಿವೆ ಎಂಬುದನ್ನು ಲಭ್ಯವಿರುವ ವಸ್ತುಗಳ ಉತ್ಪಾದನೆ ಹಾಗೂ ವಿತರಣೆಯ ಕಷ್ಟವನ್ನೇ ಅರಿಯದೆ ಅವುಗಳನ್ನು ಅಂಗಡಿ, ಸೂಪರ್ ಮಾರ್ಕೆಟ್‌ಗಳಲ್ಲಿ ಕೊಂಡು ಬೇಕಾಬಿಟ್ಟಿಯಾಗಿ ಬಳಸುವ ಬಳಕೆದಾರರಾದ ನಮಗೆ ಈ ಪ್ರಸಂಗ ತಿಳಿಹೇಳಿದೆ. ❖

# ಬದುಕಿನ ದಣಿವು ನೀಗಿ ಶಕ್ತಿ ತುಂಬುವ ಕಥೆಗಳು

ರಘುನಾಥ ಚ.ಹ.

ಮನೆಯ ಚೌಕಟ್ಟಿನೊಳಗೆ ಹೆಣ್ಣೊಬ್ಬಳು ಅನುಭವಿಸುವ ಒಳಗುದಿಯನ್ನು ಶಮನಗೊಳಿಸುವ ಬಾವಿಕಟ್ಟೆಯಂತೆ; ಮನಸ್ಸಿಗೆ ಹೊಸ ಉಲ್ಲಾಸ ತುಂಬುವ ಕಾಡಿನ ಬಣ್ಣಗಳು, ನದಿಯ ಹರಿವು, ಜಲಪಾತದ ನೊರೆಧಾರೆ, ಪಕ್ಷಿಗಳ ಇಂಚರದಂತೆ ಜಯಂತ ಕಾಯ್ಕಿಣಿಯವರ ಕಥೆಗಳಿಗೂ ದಣಿದ ಮನಸ್ಸಿಗೆ ಹೊಸ ಹುರುಪು ತುಂಬುವ ಜೀವಧಾರಣವಿದೆ. ತಮ್ಮ ತೆಕ್ಕೆಗೆ ಬಂದ ಸಹೃದಯರ ಅಂತರಂಗದ ಅಸ್ಪಷ್ಟ ತಲ್ಲಣಗಳನ್ನು ಅವರಿಗೇ ಕಾಣಿಸುತ್ತ, ಎದೆಗೂಡಿನಿಂದ ಆಗಸಕ್ಕೆ ಹಾರಿಬಿಡುವಂತೆ ಅವರ ಕಥೆಗಳು ಕಾಣಿಸುತ್ತವೆ.

'ಅನಾರ್ಕಲಿಯ ಸೇಫ್ಟಿಪಿನ್' ಜಯಂತರ ಏಳನೇ ಕಥಾ ಸಂಕಲನ. ಈ ಕಥಾಗುಚ್ಛದ ಒಂಬತ್ತು ಕಥೆಗಳನ್ನು ಅವರ ಕಥೆಯ ಶೈಲಿಯನ್ನೇ ಅನುಕರಿಸಿ ಹೇಳುವುದಾದರೆ, ಮನುಷ್ಯ ಮನಸ್ಸಿನಲ್ಲಿ ತಾರುಣ್ಯದ ತಂಗಾಳಿ ಚೆಲ್ಲುತ್ತ ನೆರಿಗೆಗಳನ್ನು ನಿಭಾಯಿಸುತ್ತ ಸಾಗಿಬರುವ ಯುವತಿಯರಂತಿವೆ. 'ಕುತನಿ ಕುಲಾವಿ', 'ಭಾಮ ಕೇಳೊಂದು ದಿನ', 'ವಾಯಾ ಚಿನ್ನದ ಕೇರಿ', 'ಅನಾರ್ಕಲಿಯ ಸೇಫ್ಟಿಪಿನ್', 'ಹಲೋ... ಮೈಕ್ ಟೆಸ್ಟಿಂಗ್...' ರೀತಿಯ ಕಥೆಗಳ ಶೀರ್ಷಿಕೆಗಳೇ ಓದುವ ಆಸೆ ಹುಟ್ಟಿಸುವಷ್ಟು ಚೆಲುವಾಗಿವೆ.

ಸಂಕಲನದ ಬಹುತೇಕ ಕಥೆಗಳು ಆರಂಭವಾಗುವುದು ಪಾತ್ರವೊಂದರ ಓಟ, ಪಯಣ ಅಥವಾ ನಿರೀಕ್ಷೆಯಲ್ಲಿ. ಸಂಕಲನದ ಮೊದಲ ಕಥೆ 'ಕುತನಿ ಕುಲಾವಿ', ನಾಪತ್ತೆಯಾದ ಅಕ್ಕನ ಸುಳಿವನ್ನು ಅಮ್ಮನಿಗೆ ತಿಳಿಸಲು ರವ್ವಾ ಓಡಿಬರುವುದರೊಂದಿಗೆ ಆರಂಭವಾಗುತ್ತದೆ. ಹಳ್ಳಿಯಿಂದ ಬರುವ ತನ್ನ ಅಪ್ಪಅಮ್ಮನನ್ನು ಕರೆತರಲು ರೈಲು ನಿಲ್ದಾಣಕ್ಕೆ ಬಸ್ ನಿಲ್ದಾಣಕ್ಕೆ ಹೊರಡುವುದರೊಂದಿಗೆ 'ಭಾಮ ಕೇಳೊಂದು ದಿನ' ಆರಂಭವಾಗುತ್ತದೆ. 'ಚೇತನ ವಿಹಾರ' ಕಥೆ ಆರಂಭವಾಗುವುದು ತನ್ನ ಬಾಲ್ಯದ ಸ್ನೇಹಿತನ ಕರೆಗೆ ಓಗೊಟ್ಟು ಬರುವ ಮುನ್ನಾನ ಹುಡುಕಾಟದೊಂದಿಗೆ. ವಿಹಾರನಿಸುವ ಚಿಗುರುಮೀಸೆಯ ತರುಣ ಮನೆ ಮನೆಗೆ ಪೇಪರ್ ಹಾಕುವ ಸುತ್ತಾಟದೊಂದಿಗೆ 'ವಾಯಾ ಚಿನ್ನದ ಕೇರಿ' ಹಾಗೂ ನಟನೊಬ್ಬಳು ಶೂಟಿಂಗ್ ಸ್ಪಾಟ್‌ಗೆ ಹೋಗಲು ಕಾರು ಹತ್ತುವುದರೊಂದಿಗೆ 'ಕಾಗದದ ಚೂರು' ಕಥೆಗಳು ತೆರೆದುಕೊಳ್ಳುತ್ತವೆ. 'ಅನಾರ್ಕಲಿಯ ಸೇಫ್ಟಿಪಿನ್' ಶಾಲಾಬಸ್ಸಿನ ಪ್ರವಾಸದ ಕಲರವದೊಂದಿಗೆ ಬಿಚ್ಚಿಕೊಳ್ಳುತ್ತದೆ.



**ಅನಾರ್ಕಲಿಯ ಸೇಫ್ಟಿಪಿನ್**
ಲೇ: ಜಯಂತ ಕಾಯ್ಕಿಣಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಫೋನ್: 080-2661 7100, 2661 7755
ಪು: 176 ₹175

ಹೀಗೆ, ಪಯಣ ಅಥವಾ ಹುಡುಕಾಟದ ಪ್ರಸಂಗವೊಂದರ ಮೂಲಕ ಕಥೆ ಆರಂಭಿಸುವ ಜಯಂತ್ ಅವರಿಗೆ ಮುಟ್ಟಬೇಕಾದ ಗುರಿಯ ಬಗ್ಗೆ ಲಕ್ಷ್ಯವಿಲ್ಲ. ಅವರ ಆಸಕ್ತಿಯಿರುವುದು, ದಾರಿಯಲ್ಲಿ ಎದುರಾಗುವ ಬಿಂಬಗಳ ಬಗ್ಗೆ. ಜೀವನದ ಬಗ್ಗೆ ಅಪಾರ ಪ್ರೀತಿಯುಳ್ಳ ವ್ಯಕ್ತಿಯೊಬ್ಬ, ತನ್ನ ದೈನಿಕದ ಪಯಣದಲ್ಲಿ ಎದುರಾಗುವ ಬಿಂಬಗಳೊಂದಿಗೆ ಒಡನಾಡುವುದು ಹಾಗೂ ಆ ಬಿಂಬಗಳ ಅಂತರಂಗವನ್ನು ಕಂಡು ಬೆರಗಾಗುವ ಬೆಚ್ಚಿಬೀಳುವ ಪರಿ ಇಲ್ಲಿನ ಕಥೆಗಳಲ್ಲಿದೆ. ಈ ಪಯಣ ವೈಯಕ್ತಿಕವಾಗಿರದೆ, ಸಾಮೂಹಿಕಪಯಣವಾಗಿ ರೂಪಾಂತರಗೊಳ್ಳುವಲ್ಲಿ ಜಯಂತರ ಕಥೆಗಳ ಯಶಸ್ಸಿದೆ. ಅವರ ಕಥೆಗಳು, ಆರಂಭ ಮತ್ತು ಅಂತ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳದೆ, ದಾರಿಯಲ್ಲಿನ ಅನುಭವವನ್ನೇ ಮುಖ್ಯವಾಗಿಸಿಕೊಂಡಿವೆ.

ಜಯಂತರ ವಿಶಿಷ್ಟ ಕಥನಪ್ರಕ್ರಿಯೆಗೆ ಉದಾಹರಣೆಯಾಗಿ, 'ಕುತನಿ ಕುಲಾವಿ' ಮತ್ತು 'ಭಾಮ ಕೇಳೊಂದು ದಿನ' ಕಥೆಗಳನ್ನು ನೋಡಬಹುದು. ಹೆತ್ತವರ ಸಮ್ಮುಖದಲ್ಲೇ ಮನೆಯನ್ನು ಬಿಟ್ಟು ಪ್ರೇಮಿಯೊಂದಿಗೆ ಓಡಿಹೋದ ಅಕ್ಕ ಚಿತ್ರಿಯ ಸುಳಿವು ಹಿಡಿದ ರವ್ವಾ, ಅಮ್ಮನಿಗೆ ಸುದ್ದಿ ತಿಳಿಸಲು ಮನೆಗೆ ಓಡಿಬರುವುದರೊಂದಿಗೆ ಶುರುವಾಗುವ ಕಥೆ, ಅಕ್ಕನನ್ನು ಮನೆಗೆ ಕರೆದುಕೊಂಡು ಬರಲು ರವ್ವಾ ಹೊರಡುವುದರೊಂದಿಗೆ ಕೊನೆಗೊಳ್ಳುತ್ತದೆ. ಚಿತ್ರಿ ಮತ್ತು ರವ್ವಾರ ಅಕ್ಕನ ಬದುಕು ಕಟ್ಟಿಕೊಳ್ಳುವ ದಿನಗಳಿಗೆ ಹೊರಳುವ ಕಥೆ, ಧಾರವಾಡದ ಸಾಂಸ್ಕೃತಿಕ ಪಲ್ಲಟಗಳ ಬಗ್ಗೆ ಗಮನಸೆಳೆಯುತ್ತದೆ; ಹೆತ್ತವರನ್ನು ಊರುಗಳಲ್ಲಿ ಮನೆ ಕಾಯಲು ಬಿಟ್ಟು ದೂರದೇಶಗಳಲ್ಲಿ ನೆಲೆಸುವ ಮಕ್ಕಳ ಅಸಂಗತ ನಡವಳಿಕೆಯನ್ನು ಗೇಲಿ ಮಾಡುತ್ತದೆ.

ಮಕ್ಕಳ ಕಣ್ಣಲ್ಲಿ ಮತ್ತು ಬದುಕಿನ ಪರಿಪೂರ್ಣತೆಯನ್ನು ಕಾಣಲು ಹಂಬಲಿಸುವ ಅಮ್ಮಅಪ್ಪ ಒಂದೆಡೆ, ಯೌವನದ ಉಮೇದಿನಲ್ಲಿ ಹೆತ್ತವರ ಕಾಳಜಿಯನ್ನು ನಿರ್ಲಕ್ಷಿಸಿ ಪ್ರೇಮಿಯೊಂದಿಗೆ ಬೈಕ್ ಹತ್ತುವ ಚಿತ್ರಿ ಇನ್ನೊಂದೆಡೆ – ಬದುಕಿನ ಬಹು ಆಯಾಮಗಳನ್ನು 'ಕುತನಿ ಕುಲಾವಿ' ಕಟ್ಟಿಕೊಡಲು ಪ್ರಯತ್ನಿಸುತ್ತದೆ. ಯೌವನದ ಕಾವು ಮತ್ತು ಇಳಿವಯಸ್ಸಿನ ಪ್ರೌಢ ಚೆಲುವು ಎರಡನ್ನೂ ಕಥೆ ಬದುಕಿನ ಸಹಜ ವರ್ತನೆಗಳೆನ್ನುವಂತೆ ಚಿತ್ರಿಸುತ್ತದೆ. 'ಭಾಮ ಕೇಳೊಂದು ದಿನ' ಕಥೆಯಲ್ಲೂ ಹೊಸ ತಲೆಮಾರಿನ ಹುಡುಗಹುಡುಗಿಯರ ಲೋಕದೊಂದಿಗೆ, ಇಳಿವಯಸ್ಸಿನ ದಂಪತಿಯ ಆರ್ದ್ರ ಚಿತ್ರಣವಿದೆ.

ನಿರ್ದಿಷ್ಟ ಪ್ರಸಂಗ ಅಥವಾ ಬದುಕಿನ ಯಾವುದೋ ಕ್ಷಣವೊಂದನ್ನು ಉಜ್ಜಿ ಉಜ್ಜಿ, ಅದರ ಹೊಳಪು ಅಪರಂಜಿತನವನ್ನು ಸಹೃದಯರಿಗೆ ಕಾಣಿಸುವ ಉದ್ದೇಶ ವಿಶಿಷ್ಟ. ಇಂಥ ಚೌಕಟ್ಟಿನಲ್ಲಿ ಜಯಂತರ ಕಥೆಗಳಲ್ಲಿ ಕಾಣುವುದು ಕಷ್ಟ. ಬೇಲಿ ಜಿಗಿಯಲಿಕ್ಕೆ ಸದಾ ತುದಿಗಾಲಲ್ಲಿ ನಿಂತಿರುವಂತೆ ಕಾಣಿಸುವ ಅವರ ರಚನೆಗಳಲ್ಲಿ ಕಥೆಯ ಕೇಂದ್ರ ಎನ್ನಬಹುದಾದ ನಿರ್ದಿಷ್ಟ ಕ್ಷಣವೊಂದನ್ನು ಗುರ್ತಿಸಬಹುದಾದರೂ, ಆ ಕ್ಷಣದ ಹಂಗು ತೊರೆದಂತೆ ಕಥೆ ಬೇರೆ ಬೇರೆ ದಿಕ್ಕಿನಲ್ಲಿ ಹರಿದುಬಿಡುತ್ತದೆ ಅಥವಾ ಕಥೆಗಾರರು ಹರಿಯಬಿಡುತ್ತಾರೆ.

ತಗ್ಗು ಸಿಕ್ಕಲ್ಲೆಲ್ಲ ನುಗ್ಗುವ ತೊರೆಯ ಚಲನೆಯಂತಹ ರಚನೆಗಳೊಂದಿಗೆ ಕೂಡಿಕೊಳ್ಳುವ ಹಳ್ಳಗಳು, ಕೆಲವೊಮ್ಮೆ ಹೊಳೆಯ ಉಗಮಸ್ಥಾನವನ್ನೇ ಮರೆಸಿಬಿಡುವಷ್ಟು ಉಜ್ವಲವಾಗಿವೆ. ಇದಕ್ಕೆ ಉದಾಹರಣೆಯಾಗಿ ಜಯಂತರ ಅತ್ಯುತ್ತಮ ಕಥೆಗಳಲ್ಲೊಂದಾದ 'ಮೃಗನಯನಾ' ನೋಡಬಹುದು. ಹಸ್ತಾಕ್ಷರ ಎನ್ನುವ ರಸಿಕ ಪ್ರೇಕ್ಷಕನೊಬ್ಬ ನಾಟಕ ಪ್ರಯೋಗವೊಂದಕ್ಕೆ ಮುಖಾಮುಖಿಯಾಗುವ ಮೂಲಕ ತೆರೆದುಕೊಳ್ಳುವ ಕಥೆ, ಕೆಫೆಯ ಸರ್ವರನೊಬ್ಬ ತನ್ನ ಕೆಲಸ ಮತ್ತು ನಾಟಕದ ಪಾತ್ರದ ನಡುವೆ ಒದ್ದಾಡುವ ಪ್ರಸಂಗವನ್ನು ಚಿತ್ರಿಸುತ್ತದೆ. ಎರಡು ಪಾತ್ರಗಳ ನಡುವಿನ ಈ ಒದ್ದಾಟ, ಒಮ್ಮಿಂದೊಮ್ಮೆಗೆ ಸ್ಥಾನಪಲ್ಲಟಗೊಂಡು, ವೇಟರನ ಜಾಗದಲ್ಲಿ ಹಸ್ತಾಕ್ಷರನ ತಾಯಿ ನಿಲ್ಲುತ್ತಾಳೆ. ಮುಂದೆ ಈ ಒದ್ದಾಟ ಕಥಾನಾಯಕನ ತಂದೆಯದಾಗುತ್ತದೆ. ಗಾಣಿಗಾಪುರ ಮತ್ತು ಭೀಮಾನದಿ ಹಾಗೂ ಮುಂಬಯಿ, ಸಮುದ್ರ, ಧೋಬಿಘಾಟ್ – ಕಥೆಯ ಎರಡು ತುದಿಗಳಂತೆ ಕಾಣಿಸುತ್ತವೆ. ವೇಟರನ ದ್ವಂದ್ವದೊಂದಿಗೆ ಆರಂಭವಾಗುವ ಕಥೆ ಕೊನೆಗೆ ಹಸ್ತಾಕ್ಷರನ ದ್ವಂದ್ವ ತಿಳಿಗೊಳ್ಳುವ ಸೂಚನೆಯಲ್ಲಿ ಕೊನೆಗೊಳ್ಳುತ್ತದೆ.

ಅವ್ಯವಸ್ಥಿತವಾದ ಬದುಕು ಮತ್ತು ಸಮಾಜವನ್ನು ಯಾವುದೋ ಎಳೆಯೊಂದು ಸುಸಂಗತವಾಗಿ ಇರಿಸಿರುವುದರ ದರ್ಶನವನ್ನು ಜಯಂತರ ಕಥೆಗಳು ನಮಗೆ ಕಾಣಿಸುತ್ತವೆ. ಅನಾರ್ಕಲಿಯ ಉದ್ದಲಂಗದ ಆಕಾರವನ್ನು ನೂರಾರು ಸೇಫ್ಟಿಪಿನ್ನುಗಳು ತಮ್ಮ ಮುಖದೋರದೆ ಹಿಡಿದಿಟ್ಟಿವೆ. ಇಂಥ ನಿಸ್ವಾರ್ಥ ಸೇಫ್ಟಿಪಿನ್‌ಗಳು ಜಯಂತರ ಎಲ್ಲ ಕಥೆಗಳಲ್ಲೂ ಬೇರೆ ಬೇರೆ ರೂಪದಲ್ಲಿವೆ. ಏನೆಲ್ಲ ಜಂಜಡಗಳ ನಡುವೆಯೂ ಈ ಜಗತ್ತು ಜೀವಿಸಲಿಕ್ಕೆ ಅಗತ್ಯವಾದ ತಾಯಿಗುಣವನ್ನು ಉಳಿಸಿಕೊಂಡಿವೆ ಎನ್ನುವ ಭರವಸೆಯನ್ನು ಅವರ ಕಥೆಗಳು ನೀಡುತ್ತವೆ.

ವಿಮರ್ಶೆ

ಕತ್ತರಿಸಿ ತೆಗೆದರೆ ಸ್ವತಂತ್ರ ಕಿರುಗಥೆಗಳಂತೆ ತೋರುವ ಸಾಲುದೀಪಗಳು ಜಯಂತರ ಕಥೆಗಳಲ್ಲಿ ಇದ್ದಕ್ಕಿದ್ದಂತೆ ಎದುರಾಗಿ ಮನಸ್ಸನ್ನು ಬೆಳಗಿಸುತ್ತವೆ. 'ಎಷ್ಟೆಲ್ಲ ಹಕ್ಕಿಗಳು ಕುಹು ಹಾಡಿ ಹೋದ ಮರದಂತಿತ್ತು' ಎನ್ನುವ ಸಿಯಾನೊದ ಕುರಿತ ಬಣ್ಣನೆ, 'ಇಲ್ಲೊಂದು ಅಸಹಜವಾದ ನಿಶ್ಶಬ್ದವಿತ್ತು. ಏಕೆಂದರೆ ಎಲ್ಲರೂ ತಂತಮ್ಮ ಮೊಬೈಲುಗಳೆಂಬ ಹಾಲಿನ ಬಾಟಲಿಗೆ ಅಂಟಿಕೊಂಡ ಶಿಶುವಾಗಿದ್ದರು' ಎನ್ನುವಂಥ ಸಾಲುಗಳು, ಸಂದರ್ಭದಾಚೆಗೂ ಬೆಳಕು ಚೆಲ್ಲುವ ದೀಪಗಳಲ್ಲದೆ ಮತ್ತೇನು?

ಜಯಂತರ ಕಥೆಗಳು, ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಿತವಾದ ಸಣ್ಣಕಥೆಯ ಪರಿಕಲ್ಪನೆಗಳನ್ನು ಬುಡಮೇಲು ಮಾಡುವ ರಚನೆಗಳಂತೆ; ಸುರಿತ ವ್ಯಾಕರಣದೊಂದಿಗೆ ಮುರಿದು ಕಟ್ಟಿದ ವ್ಯಾಕರಣದಂತೆ ಕಾಣಿಸುತ್ತವೆ. ರೂಢಿಗತ ಕಥನದ ಚೌಕಟ್ಟನ್ನು ಬಿಟ್ಟು, ಮಕ್ಕಳನ್ನು ತಮ್ಮೊಂದಿಗೆ ಕರೆದೊಯ್ಯುವ ಕಿಂದರಜೋಗಿಯಂತೆ ಜಯಂತ ಓದುಗರನ್ನು ತಮ್ಮೊಂದಿಗೆ ಸಹಪಯಣಿಗರನ್ನಾಗಿ ಮಾಡಿಕೊಳ್ಳುತ್ತಾರೆ. 'ಎವರ್ ಗ್ರೀನ್' ಕಥೆಯೊಂದನ್ನು ಬಿಟ್ಟರೆ ಉಳಿದವು ಕಥೆಯ ಸಾಧ್ಯತೆಗಳನ್ನು ಬೇರೆಯದೇ ರೀತಿಯಲ್ಲಿ ನೋಡಲು ಒತ್ತಾಯಿಸುವಂತಹವು. ಉಳಿದ ಕಥೆಗಾರರ ಬರವಣಿಗೆಯಲ್ಲಿ ಅಗತ್ಯ ವಿವರಗಳ ಕಸರತ್ತಷ್ಟೇ ಆಗಬಹುದಾದ ಸಾಲುಗಳು ಜಯಂತರ ಬರವಣಿಗೆಯಲ್ಲಿ ಶಬ್ದಚಿತ್ರಗಳ ಮೆರವಣಿಗೆಯಾಗಿ ಕಂಗೊಳಿಸುತ್ತವೆ.

'ಎವರ್‌ಗ್ರೀನ್' ಜಯಂತರ ವ್ಯಕ್ತಿತ್ವಕ್ಕೂ ಅವರ ಕಥನಶೈಲಿಗೂ ಹೋಲಿಕೆಯಾಗಿ ಓದಿಕೊಳ್ಳಬಹುದಾದ ಕಥೆ. ಎದೆಮಟ್ಟಕ್ಕೆ ಬೆಳೆದ ಮಗನಿದ್ದರೂ, ತನ್ನ ತಾರುಣ್ಯದ ಚಾರ್ಮ್ ಮತ್ತು ಫಾರ್ಮ್ ಉಳಿಸಿಕೊಳ್ಳಲು ಹೆಣಗಾಡುವ ಎವರ್‌ಗ್ರೀನ್ ಹೀರೊ ಒದ್ದಾಡುತ್ತಾನೆ. ಕಥೆಯ ಹೀರೊ ದಣಿದಿರುವುದು ಮಗನ ಸ್ವಗತದಲ್ಲಿ ಸ್ಪಷ್ಟವಾಗುತ್ತದೆ. ಆದರೆ, ಜಯಂತ್ ದಣಿದಿಲ್ಲ ಎನ್ನುವುದಕ್ಕೆ 'ಅನಾರ್ಕಲಿಯ ಸೇಫ್ಟಿಪಿನ್' ಸಂಕಲನದ ಕಥೆಗಳು ಸಾಕ್ಷ್ಯನುಡಿಯುವಂತಿವೆ. ಸುಮಾರು ನಾಲ್ಕು ದಶಕಗಳ ಕಾಲ ಕಥೆಗಾರನಾಗಿ ಓದುಗರ ಕುತೂಹಲ ಉಳಿಸಿಕೊಂಡಿರುವುದು ಕನ್ನಡ ಸಾಹಿತ್ಯದ ಮಟ್ಟಿಗೆ ಒಂದು ವಿಶೇಷ ವಿದ್ಯಮಾನವೇ ಸರಿ. ❖

## ಧರ್ಮಗುರುಗಳಿಗೆ...

8ನೇ ಪುಟದಿಂದ...

ನಿನ್ನ ಜನರು ತಪ್ಪು ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದ್ದೂ ಅವರನ್ನು ಬೆಂಬಲಿಸುವುದು ಕೋಮುವಾದ' ಎಂದು ಉತ್ತರಿಸಿದರು. ಅದಕ್ಕಾಗಿ ನಾವು ನಮ್ಮ ಧರ್ಮವನ್ನು ತಿಳಿದರೆ ಸಾಲದು. ಇತರ ಧರ್ಮಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ತುಲನಾತ್ಮಕ ಅಧ್ಯಯನ ನಡೆಸಬೇಕು. ಹಾಗೆ ಮಾಡಿದಾಗ ಮಾತ್ರ ಎಲ್ಲ ಧರ್ಮಗಳ ಸಾರವೂ ಒಂದೇ ಎನ್ನುವುದು ಗೊತ್ತಾಗುತ್ತದೆ.

ನಾನು ಚಿಕ್ಕವನಿದ್ದಾಗ ಕುರಾನ್ ಅಧ್ಯಯನ ಮಾಡಿದ್ದೆ. ಮಹಾಲಿಂಗಪುರದಲ್ಲಿ ಬಸವಾನಂದ ಸ್ವಾಮಿಗಳು ಅಂತ ಇದ್ದರು. ಅವರು ತೀರಿಕೊಂಡ ನಂತರ ಅವರ ಸ್ಮರಣೆಗಾಗಿ ಒಂದು ತಿಂಗಳು ಬೇರೆ ಬೇರೆ ವಿದ್ವಾಂಸರಿಂದ ಉಪನ್ಯಾಸವನ್ನು ಏರ್ಪಡಿಸುತ್ತಿದ್ದರು. ಬೆಳಿಗ್ಗೆ ಮತ್ತು ಸಂಜೆ ವಿದ್ವತ್ ಗೋಷ್ಠಿ. ನಾನು ಕೇಳಲು ಹೋಗುತ್ತಿದ್ದೆ. ನನಗೆ ಅದೇ ವಿಶ್ವವಿದ್ಯಾಲಯ ಆಯಿತು. ವೇದ, ಉಪನಿಷತ್, ಶರಣತತ್ವ ಎಲ್ಲವುದರ ಅರಿವು ಸಿಕ್ಕಿತು. ಆರಾಧನಾ ವಿಧಾನ ಬೇರೆ. ಆದರೆ ಪರಮಾತ್ಮ ಒಂದೇ ಎನ್ನುವುದು ಮನದಟ್ಟಾಯಿತು'.

ನಂತರ ನಾನು ಭಜನಾ ಸಂಘ ಸೇರಿದೆ. ಪ್ರಶ್ನೋತ್ತರ ರೂಪದಲ್ಲಿ ಭಜನಾ ಸಂಘ ನಡೆಸುತ್ತಿದ್ದೆ. ಜನರು ನನ್ನ ಮಾತನ್ನು ಕೇಳತೊಡಗಿದರು. ಇದರಿಂದ ನನ್ನ ಮೂಲ ವೃತ್ತಿ ನೇಕಾರಿಕೆ ಮಾಡುವುದು ಕಷ್ಟವಾಯಿತು. ಭಜನಾ ಸಂಘ ಅಥವಾ ನೇಕಾರಿಕೆ ಎರಡರಲ್ಲಿ ಯಾವುದಾದರೂ ಒಂದನ್ನು ನಾನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಆಗ ನನ್ನ ತಾಯಿ 'ನಿನಗೆ ಯಾವುದು ಇಷ್ಟವೋ ಅದನ್ನು ಮಾಡು. ನಿನ್ನ ಹೆಂಡತಿ ಮಕ್ಕಳ ಚಿಂತೆ ಬಿಡು. ನಾನು ಮಂದಿ ಮನೆಯಲ್ಲಿ ಕೂಲಿ ಮಾಡಿಯಾದರೂ ನಿನ್ನ ಹೆಂಡತಿ ಮಕ್ಕಳನ್ನು ಸಾಕುತ್ತೇನೆ. ನೀನು ಭಜನಾ ಮಂಡಳಿಗೇ ಹೋಗು' ಎಂದರು. ತಾಯಿ ಬೆನ್ನೆಲುಬಾಗಿ ನಿಂತಿದ್ದರಿಂದ ನಾನು ಈ ಮಟ್ಟಕ್ಕೆ ಬೆಳೆದೆ ಎಂದು ತಾಯಿಯನ್ನು ನೆನಪಿಸಿಕೊಂಡು ಅವರ ಕಣ್ಣುಗಳಲ್ಲಿ ನೀರಿನ ಪಸೆ ಹರಿಯಿತು.

ಒಬ್ಬ ವ್ಯಕ್ತಿ ಪರಿಪೂರ್ಣ ಆಗಬೇಕು ಎಂದರೆ ತಂದೆ ತಾಯಿ, ಶಿಕ್ಷಕ, ಧರ್ಮಗುರು, ಸಮಾಜದವರು ಎಲ್ಲರೂ ಸರಿಯಾದ ರೀತಿಯಲ್ಲಿ ಪ್ರಯತ್ನಿಸಬೇಕು. ಯಾರಾದರೂ ಒಬ್ಬರು ಬೇಜವಾಬ್ದಾರಿಯಿಂದ ನಡೆದುಕೊಂಡರೂ ವ್ಯಕ್ತಿ ಅಪರಿಪೂರ್ಣನಾಗುತ್ತಾನೆ. ಎಲ್ಲರೂ ಕೋಮುವಾದಿಗಳಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ವಿಶಾಲ ಮನೋಭಾವದಿಂದ ಅಧ್ಯಯನ ಮಾಡುವವರ ಕೊರತೆ ಇದೆ.

ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ಎಂದು ಭಗವದ್ಗೀತೆ ಹೇಳುತ್ತದೆ. ಇದೇ ಮಾತನ್ನು ಕುರಾನ್ ಕೂಡ ಹೇಳುತ್ತದೆ. ಅಲ್ಲಮ ಕೂಡಾ ಇದನ್ನೇ ಹೇಳುತ್ತಾನೆ. ಧರ್ಮ ಒಂದೆ. ಭಾಷೆ ಬೇರೆ ಅಷ್ಟೆ. ಧರ್ಮದ ಸಂಸ್ಥಾಪಕ ಸರ್ವಜ್ಞನಾದ ದೇವರೇ ಹೊರತು ಅಲ್ಪಜ್ಞನಾದ ಜೀವಿಯಲ್ಲ. ಹಾಗಾದರೂ ಇಷ್ಟೊಂದು ಧರ್ಮಗಳು ಹೇಗೆ ಹುಟ್ಟಿಕೊಂಡವು? ಹೇಗೆಂದರೆ ಧರ್ಮಪ್ರಚಾರಕರ ಅನುಯಾಯಿಗಳು ಮೂಲತತ್ವವನ್ನು ಬಿಟ್ಟು ವ್ಯಕ್ತಿಪೂಜೆಗೆ ಇಳಿದರು. ಮಹಮದ್ ಪೈಗಂಬರರಿಗಿಂತಲೂ ಮೊದಲು ಇಸ್ಲಾಂ ಧರ್ಮ ಇರಲಿಲ್ಲವೇ? ಇತ್ತು ಎನ್ನುವುದಕ್ಕೆ ಕುರಾನ್ ಸಾಕ್ಷಿ. ಯೇಸು ಕ್ರಿಸ್ತ, ಬಸವಣ್ಣ, ಬುದ್ಧ, ಮಹಾವೀರ ಎಲ್ಲರ ವಿಷಯದಲ್ಲಿಯೂ ಹೀಗೆಯೇ ಆಯಿತು.

ಮನುಷ್ಯ ಹುಟ್ಟಿದಾಗಿನಿಂದಲೂ ಧರ್ಮ ಇದೆ. ಅದನ್ನು ಸುಧಾರಣೆ ಮಾಡಿಕೊಂಡು ಬರಲಾಗುತ್ತಿದೆ. ಬಿದ್ದವನನ್ನು ಮೇಲೆತ್ತುವುದೇ ಧರ್ಮ. ಪ್ರಾಮಾಣಿಕವಾಗಿ, ಸತ್ಯಗ್ರಾಹಿಯಾಗಿ ಇನ್ನೊಂದು ಧರ್ಮವನ್ನು ನೋಡಿದರೆ ಇದು ಗೊತ್ತಾಗುತ್ತದೆ. ಇಲ್ಲವಾದರೆ ಕೋಮುವಾದದ ಕೂಪದಲ್ಲಿ ಮುಳುಗುತ್ತೇವೆ ಅಷ್ಟೆ. ರಾಮಕೃಷ್ಣಾಶ್ರಮದ ರಾಮತೀರ್ಥರು ವಿದೇಶಗಳಿಗೆ ಹೋಗಿ ಧರ್ಮ ಪ್ರಚಾರ ಮಾಡುತ್ತಿದ್ದರು. ಯಾರೋ ಭಕ್ತರೊಬ್ಬರು 'ನೀವು ಯಾಕೆ ಆಶ್ರಮ, ಮತ ಪಂಥ ಸ್ಥಾಪಿಸಲಿಲ್ಲ ಎಂದು ಕೇಳಿದಾಗ 'ಎಲ್ಲ ಮತ ಪಂಥಗಳೂ ಹೋಗಲಿ ಎಂದು ನಾನು ಪ್ರಯತ್ನ ಪಡುತ್ತಿದ್ದೇನೆ. ಅದು ಸಾಧ್ಯವಾಗಲಿಲ್ಲ. ಕನಿಷ್ಠ ನನ್ನದೊಂದು ಪಂಥವಾದರೂ ಕಡಿಮೆಯಾಗಲಿ ಎಂದು ಆಶ್ರಮ ಸ್ಥಾಪಿಸಲಿಲ್ಲ' ಎಂದು ಉತ್ತರಿಸಿದರು. ಮುಸ್ಲಿಂ ಧರ್ಮದಲ್ಲಿ ಗಾನ ಬಜಾನಾ ಹರಾಮ್. ಆದರೂ ನೀವು ಭಜನೆ ಮಾಡುತ್ತೀರಲ್ಲ ಎಂದು ಕೆಲವು ಮೌಲ್ವಿಗಳು ನನ್ನ ಕೇಳಿದ್ದರು. 'ಯಾವ ಹಾಡಿನಲ್ಲಿ ಕೇಳುವವರ ಮನಸ್ಸು ವಿಕಾರಗೊಳಿಸುವ ಸಾಲುಗಳು ಇವೆಯೋ, ಧರ್ಮ ಪ್ರಚಾರ ಮಾಡುವ ಸಾಹಿತ್ಯ ಇದೆಯೋ ಅದನ್ನು ನಿಷೇಧ ಮಾಡಿದ್ದಾರೆ. ಧರ್ಮ ಪ್ರಚಾರವೇ ಹಾಡಿನಲ್ಲಿ ಇದ್ದರೆ ಅದನ್ನು ಯಾಕೆ ನಿಷೇಧ ಮಾಡುತ್ತಾರೆ ಎಂದು ನಾನು ಪ್ರಶ್ನೆ ಮಾಡಿದೆ. ನನ್ನ ಭಜನಾ ಕಾರ್ಯಕ್ರಮಕ್ಕೆ ಅವರನ್ನೂ ಕರೆದೆ. ಅವರು ಬಂದು ಕೇಳಿ ನನ್ನ ವಾದವನ್ನು ಒಪ್ಪಿದರು.

ಮನುಷ್ಯ ವಿರೋಧ ಮಾಡುವುದು ತಪ್ಪು ತಿಳಿವಳಿಕೆಯಿಂದ. ಇಂತಹ ತಪ್ಪು ತಿಳಿವಳಿಕೆಗಳು ಮುಸ್ಲಿಮರಲ್ಲಿಯೂ ಇವೆ. ಹಿಂದೂಗಳಲ್ಲಿಯೂ ಇವೆ. ಇಬ್ಬರೂ ಬೇರೆ ಧರ್ಮದ ಅಂತರ್ಯವನ್ನು ಸರಿಯಾಗಿ ತಿಳಿದುಕೊಂಡರೆ ಸಾಮರಸ್ಯ ಮೂಡುತ್ತದೆ. ಅದಕ್ಕಾಗಿಯೇ ನಾನು ಧರ್ಮಗುರುಗಳಿಗೆ ಸಾಮರಸ್ಯದ ತರಬೇತಿ ಬೇಕು ಎಂದು ಹೇಳುವುದು.

ಜಗದ್ಗುರುಗಳು ಜಗತ್ತಿಗೇ ತಾನು ಗುರು ಎಂದುಕೊಂಡಿದ್ದಾರೆ. ಆದರೆ ನಿಜವಾದ ಜಗದ್ಗುರು ಯಾರು ಎಂದರೆ 'ಈ ಜಗತ್ತೇ ನನ್ನ ಗುರು ಎಂದು ಯಾರು ತಿಳಿದುಕೊಂಡಿರುತ್ತಾರೋ ಅವರು ಜಗದ್ಗುರುಗಳು. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಮ್ಮೆ ಸಿದ್ದೇಶ್ವರ ಸ್ವಾಮೀಜಿಗೆ ಒಬ್ಬ ಕುಡುಕ ಬಂದು ನಮಸ್ಕಾರ ಮಾಡಿದ. ಸುತ್ತಲೂ ಇದ್ದ ಭಕ್ತರು ಈ ಕುಡುಕನಿಗೆ ಆಶೀರ್ವಾದ ಮಾಡಬೇಡಿ ಎಂದರು. ಆದರೆ ಸಿದ್ದೇಶ್ವರ ಸ್ವಾಮೀಜಿ ಮಾತ್ರ ಆತ ನನ್ನ ಗುರು ಎಂದರು. ಹೇಗೆ ಎಂದು ಕೇಳಿದ್ದಕ್ಕೆ 'ನೋಡಿ ನಾನು ಕುಡಿದು ಕುಡಿದು ಹೀಗೆ ಆಗಿದ್ದೀನಿ. ನಿಮ್ಮ ಕಾಲಿಗೆ ಬಿದ್ದು ಕೇಳಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ನೀವು ಕುಡಿಯಬೇಡಿ ಎನ್ನುತ್ತಾನೆ ಅವನು' ಎಂದರು. ಎಲ್ಲರಿಂದ ಎಲ್ಲದರಿಂದ ಕಲಿಯುವವನು ಗುರು ಆಗುತ್ತಾನೆ. ಜಗದ್ಗುರುಗಳು ಉಪದೇಶ ಮಾಡುವಾಗ ಎಚ್ಚರದಿಂದ ಇರಬೇಕು. ಕೇಳುಗರನ್ನು ಸತ್ಯದ ಸಮೀಪ ಕರೆದುಕೊಂಡು ಹೋಗುವುದು ಉಪದೇಶ. ನಡೆನುಡಿ ಒಂದಾಗದೆ ಮಾಡುವ ಉಪದೇಶ ಅದು ಎಷ್ಟೇ ದೊಡ್ಡದಿದ್ದರೂ ಉಪಯೋಗವಿಲ್ಲ.

ಶರಣೆಯೊಬ್ಬಳು ಕೇಳುತ್ತಾಳೆ. 'ಶಿವನ ನೆನೆದರೆ ಭವಹರಿಯುವುದೆಂಬ ವಿವರಗೇಡಿಗಳ ಮಾತು ಕೇಳಲಾಗದು. ಜ್ಯೋತಿಯ ನೆನೆದರೆ ಕತ್ತಲೆ ಹರಿಯುವುದೇ? ಮೃಷ್ಟಾನ್ನ ನೆನೆದರೆ ಹಸಿವು ಇಂಗುವುದೇ?' ಎಂದು ಪ್ರಶ್ನೆ ಮಾಡುತ್ತಾಳೆ. ಬರೀ ದೇವರ ಪೂಜೆಯಿಂದ ಏನೂ ಆಗದು. ಒಳ್ಳೆಯದು ಮಾಡುವ ಸಂಕಲ್ಪದಿಂದ ಮಾತ್ರ ಒಳ್ಳೆಯದು ಆಗುತ್ತದೆ. ಸುತಾರ ಅವರ ಮಾತುಗಳಿಗೆ ಬಿಡುವು ಇಲ್ಲ. ಕೇಳುಗರ ಮನಸ್ಸಿನಲ್ಲಿ ಅಚ್ಚು ಒತ್ತುವ ಹಾಗೆ ಮಾತನಾಡುತ್ತಾರೆ. ಅವರ ಮಾತುಗಳೂ ಸ್ಪಷ್ಟ. ವಿಚಾರಗಳೂ ಸ್ಪಷ್ಟ. ಅಲ್ಲಿ ಗೊಂದಲಗಳಿಗೆ ಅವಕಾಶವಿಲ್ಲ. ನಾವು ತಿಳಿದುಕೊಳ್ಳಬೇಕು ಅಷ್ಟೆ. ❖

## ಲಾರಾಳ 'ಲಿಟಲ್ ಹೌಸ್'





ಲಾರಾ ಇಂಗಲ್ಸ್ ವೈಲ್ಡರ್

ಕೆ.ಪಿ. ಸುಸ್ಮಿತ

**ಅಮೆರಿಕದ** ಒಬ್ಬ ರೈತ ಹುಡುಗಿ ಲಾರಾ ಇಂಗಲ್ಸ್ ವೈಲ್ಡರ್ (19ನೇ ಶತಮಾನ). ಮಕ್ಕಳಿಗಾಗಿ ಅವಳು ತನ್ನ ಆತ್ಮಕತೆಯನ್ನು ಒಂಬತ್ತು ಪುಸ್ತಕಗಳ Little House ಸರಣಿಯಲ್ಲಿ ಬರೆದಿದ್ದು, ಅವು ಅಂದಿನ ಅಮೆರಿಕ, ಅಲ್ಲಿನ ಪರಿಸರ, ಸಂಸ್ಕೃತಿಗಳ ಪರಿಚಯವನ್ನು ಮಕ್ಕಳು ಬೆರಗಾಗುವಂತೆ ಪರಿಚಯಿಸುತ್ತವೆ. ಈ ಸರಣಿ ಕನ್ನಡವೂ ಸೇರಿದಂತೆ ಜಗತ್ತಿನ 40ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ.

ಈ ಸರಣಿಯ ಜನಪ್ರಿಯತೆಯನ್ನು ಕಂಡು ಕಳೆದ ಶತಮಾನದ ಅರವತ್ತರ ದಶಕದಲ್ಲಿ ಇದನ್ನು ಕನ್ನಡಕ್ಕೆ ಅನುವಾದಿಸಿದವರು ಮೈಸೂರಿನ 'ಮಾನಸ ಗಂಗೋತ್ರಿ'ಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಎಸ್. ಅನಂತ ನಾರಾಯಣ. ಅವರು ಮೊದಲ ಏಳು ಪುಸ್ತಕಗಳನ್ನು ಪ್ರಕಟಿಸಿದರು. ಎಂಟನೇ ಪುಸ್ತಕವನ್ನು ಪ್ರಕಟಿಸುವ ಮುಂಚೆಯೇ ದುರದೃಷ್ಟವಶಾತ್ ತೀರಿಕೊಂಡರು. ನಂತರದ ದಿನಗಳಲ್ಲಿ ನನ್ನ ತಂದೆ ಪೂರ್ಣಚಂದ್ರ ತೇಜಸ್ವಿ ಹಾಗೂ ಶ್ರೀರಾಮ್ ಅವರು ಎಲ್ಲ ಪುಸ್ತಕಗಳನ್ನು ಮರು ಪ್ರಕಟಿಸಿದರು. ಒಂಬತ್ತನೇ ಪುಸ್ತಕವನ್ನು ನನ್ನ ತಂಗಿ ಕೆ.ಪಿ. ಈಶಾನ್ಯೆ ಅನುವಾದಿಸಿ ಪ್ರಕಟಿಸಿದಳು.

ನಾನು ಚಿಕ್ಕಂದಿನಿಂದಲೂ ಕನ್ನಡ ಪುಸ್ತಕಗಳನ್ನು ಯಥೇಚ್ಛವಾಗಿ ಓದುತ್ತಿದ್ದೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ಬಂದ ಹಲವು ಕ್ಲಾಸಿಕ್ ಕೃತಿಗಳು ನಮ್ಮ ಮನೆಯ ಸಂಗ್ರಹದಲ್ಲಿದ್ದವು. ನಾನು ಅವೆಲ್ಲವುಗಳನ್ನೂ ಓದಿದ್ದೆ. ಪಾತಾಳದಲ್ಲಿ ಪಾಪಚ್ಚಿ, ಆಲಿವರ್ ಟ್ವಿಸ್ಟ್, ರಾಬಿನ್ಸನ್ ಕ್ರೂಸೊ, ರಾಬಿನ್ ಹುಡ್, ಕೆನಿಲ್ ವರ್ತ್, ಹಮ್ಮು ಮತ್ತು ಬಿಮ್ಮು, ಸಿಂದಾಬಾದ್ ನಾವಿಕ ಮುಂತಾದವುಗಳ ಮಧ್ಯೆ ಲಾರಾ ಇಂಗಲ್ಸ್ ವೈಲ್ಡರ್ ಪುಸ್ತಕಗಳೂ ಇದ್ದವು. ನನ್ನ ಹತ್ತನೇ ಹುಟ್ಟುಹಬ್ಬಕ್ಕೆ ನಮ್ಮಮ್ಮ ಲಾರಾ ಇಂಗಲ್ಸ್ ವೈಲ್ಡರ್ ಪುಸ್ತಕಗಳನ್ನು ಉಡುಗೊರೆಯಾಗಿ ಕೊಟ್ಟರು. ನನಗೂ ಮತ್ತು ನನ್ನ ತಂಗಿಗೂ ಖುಷಿಯೋ ಖುಷಿ! ಚಿಕ್ಕಂದಿನ ಭಾಗವಾಗಿ ಏನನ್ನಾದರೂ ವಿಪರೀತ ಆಸಕ್ತಿಯಿಂದ ಓದಿದ್ದರೆ ಅವು ಎಂದಿಗೂ ಮರೆತು ಹೋಗುವುದಿಲ್ಲವಂತೆ. ಈ ಪುಸ್ತಕಗಳು ನನ್ನ ಮತ್ತು ನನ್ನ ತಂಗಿಯ ಪಾಲಿಗೆ ಅಂತಹದೊಂದು ಸವಿನೆನಪಿನ ಪುಸ್ತಕಗಳು.

ದೊಡ್ಡ ಕಾಡಿನ ಪುಟ್ಟ ಮನೆಯಲ್ಲಿ ಬೆಳೆಯುವ ಲಾರಾ, ಆಕೆಯೊಂದಿಗೆ ಆಟವಾಡುವ ಅಕ್ಕ ಮೇರಿ. ಬೇಟೆಯಲ್ಲಿ ಎತ್ತಿದ ಕೈಯ್ಯಾದ ತಂದೆ 'ಪಾ'... ಹೀಗೆ ಮೊದಲಾಗುವ ಈ ಸರಣಿಯಲ್ಲಿ ತನ್ನ ಗಂಭೀರ ಸ್ವಭಾವದಿಂದ ಎಲ್ಲರ ಮನಗೆಲ್ಲುವ ಅಕ್ಕ ಮೇರಿ, ಯಾವಾಗಲೂ ಚೇಷ್ಟೆ ಮಾಡಿ ತಾಯಿಯ ಕೈಯಲ್ಲಿ ಬೈಯಿಸಿಕೊಳ್ಳುತ್ತ, ತನ್ನ ಇಚ್ಛೆಯಂತೆ ಬದುಕಲು ಬಯಸುವ ಲಾರಾ ಮತ್ತು ಅವರ ಒಡನಾಟದ ಕುತೂಹಲದ ಕತೆಯಿದೆ.

ಅವರಿದ್ದ ಹಿಮ ಬೀಳುವ ಪ್ರದೇಶದಿಂದ ಕೆಲ ವರ್ಷಗಳ ನಂತರ ರೆಡ್ ಇಂಡಿಯನ್ ಪ್ರದೇಶಕ್ಕೆ ವಲಸೆ ಹೋಗುವ ಅವರು ಅಲ್ಲಿ ಮಾಡುವ ಸಾಲು ಸಾಲು ಸಾಹಸಗಳ ಕತೆಗಳು ಮಕ್ಕಳನ್ನು ಮಂತ್ರಮುಗ್ಧಗೊಳಿಸುತ್ತವೆ. ಹಿಮಕಟ್ಟಿದ ಮಹಾನದಿ ಮಿಸ್ಸಿಸಿಪ್ಪಿಯನ್ನು ದಾಟುವಾಗ ಪೇಚಾಟಕ್ಕೆ ಸಿಲುಕುವ ಕುದುರೆ ಬಂಡಿಯನ್ನು ದಾಟಿಸುವ ಸಾಹಸ, ಆ ಕಾಲದ ಕ್ರಿಸ್ಮಸ್ ಹಬ್ಬ ತರುತ್ತಿದ್ದ ಸಂಭ್ರಮ, ಜ್ವರದಿಂದ ಮೇರಿಗೆ ಕುರುಡುತನ ಆವರಿಸಿದಾಗ ಆಗುವ ನೋವು, ಮಿಡತೆಗಳ ದಾಳಿಯಲ್ಲಿ ವರ್ಷದ ಫಸಲೆಲ್ಲ ನಾಶವಾದಾಗ ಆದ ಹತಾಶೆ, ಸೌತ್ ಡಕೋಟಾ ಪಟ್ಟಣದಲ್ಲಿದ್ದಾಗ ಊಟಕ್ಕೂ ಗತಿಯಿಲ್ಲದೇ ಚಳಿಯಲ್ಲಿ ಸಿಲುಕಿ ಎದುರಿಸುವ ಕಷ್ಟ, ಹೀಗೆ ಲಾರಾಳ ಬಾಲ್ಯದ ಪಯಣದ ವಿವರಗಳು ಮಕ್ಕಳನ್ನು ಬಿಟ್ಟೂಬಿಡದೆ ಓದಿಸಿಕೊಂಡು ಹೋಗುತ್ತವೆ. ಮುಂದೆ ಲಾರಾ ಅಧ್ಯಾಪಕಿಯಾಗುತ್ತಾಳೆ. ಅಲ್ಮಾಜೋನನ್ನು ಪ್ರೀತಿಸಿ ಮದುವೆಯಾಗುತ್ತಾಳೆ.

ಎಸ್. ಅನಂತ ನಾರಾಯಣ ಅವರು ತುಂಬಾ ಸರಳವಾಗಿ ಮತ್ತು ಆಸಕ್ತಿದಾಯಕವಾಗಿ ಅನುವಾದಿಸಿದ್ದಾರೆ. ನನ್ನ ಜೀವನಕ್ಕೆ ಈ ಪುಸ್ತಕಗಳು ಬಹಳ ಹತ್ತಿರವಾದವು. ನಾವೂ ಕಾಡಿನಲ್ಲಿ ಬೆಳೆದವರು. ನಮ್ಮೊಡನೆಯೂ ಲಾರಾಳ ಪ್ರೀತಿಯ ನಾಯಿ 'ಜಾಕ್'ನಂತೆ 'ಕಿವಿ', 'ಜೂಲಿ', 'ಮಿಟ್ಟಿ', 'ಜಾಕಿ', 'ಜೀನಿ' ನಾಯಿಗಳಿದ್ದವು. ನಮ್ಮ ತಂದೆಯೂ 'ಪಾ'ನಂತೆ ಬೇಟೆಯಾಡುತ್ತಿದ್ದರು. ನಾವೂ ಹಳ್ಳಗಳಲ್ಲಿ ಮೀನು, ಏಡಿಗಳನ್ನು ಹಿಡಿದುಕೊಂಡು ತೋಟದಲ್ಲಿ ನಮ್ಮ ಪಾಡಿಗೆ ನಾವು ತಿರುಗುತ್ತಿದ್ದೆವು. ನಾವೂ ಅವಳಂತೆ ಪೇಟೆಯಲ್ಲಿ ಶಾಲೆಗೆ ಹೋಗಿ ಹಿಂದಿರುಗುತ್ತಿದ್ದೆವು.

ನಾನು ಪ್ರತೀ ಬೇಸಿಗೆ ರಜೆಯಲ್ಲೂ ಈ ಕೃತಿಗಳನ್ನು ಓದುತ್ತಿದ್ದೆ. ಹೀಗೆ ಆರೇಳು ಬಾರಿ ಈ ಸರಣಿಯನ್ನು ಓದಿದ್ದೇನೆ. ನನಗೆ ಬೇರೆ ದೇಶಗಳನ್ನು ಸುತ್ತಿ ಹೊರ ಪ್ರಪಂಚವನ್ನು ನೋಡುವ ಆಸೆ ಹುಟ್ಟಿಸಿದ ಮೊದಲ ಪುಸ್ತಕಗಳು ಇವು. ಈಗಿನ ಮಕ್ಕಳು, ಯುವಕ, ಯುವತಿಯರು ಈ ಸರಣಿಯನ್ನು ಓದಿ ನಮ್ಮಂತೆಯೇ ಆನಂದಿಸಬಹುದು, ಅಮೆರಿಕದಲ್ಲಿ ರೈತರ ಜೀವನ ಹಿಂದೆ ಹೇಗಿತ್ತು ಎಂದು ತಿಳಿಯಬಹುದು. ನಾವು ಪರ್ಯಟನೆ ಮಾಡಲಾಗದಿದ್ದರೂ ಪುಸ್ತಕಗಳನ್ನು ಓದಿ ಪ್ರಪಂಚವನ್ನು ತಿಳಿಯಬಹುದು.



ಈಶಾನ್ಯೆ ಹಾಗೂ ಸುಸ್ಮಿತ... ಬಾಲ್ಯದ ದಿನಗಳಲ್ಲಿ...
ಚಿತ್ರ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಮೈಲ್ಯಾಂಗ್ ಬುಕ್ಸ್ ಈಗ ಲಾರಾ ಇಂಗಲ್ಸ್ ವೈಲ್ಡರ್ ಮಕ್ಕಳ ಸರಣಿಯ ಎಲ್ಲ ಒಂಬತ್ತು ಪುಸ್ತಕಗಳನ್ನು ಇ ಬುಕ್ಸ್ ರೂಪದಲ್ಲಿ ಮೈಲ್ಯಾಂಗ್ ಆ್ಯಪ್ (MyLang) ಮೂಲಕ ಕನ್ನಡದಲ್ಲಿ ಬಿಡುಗಡೆ ಆಗುತ್ತಿದೆ. ಮಕ್ಕಳಲ್ಲಿ ಓದುವ ಆಸಕ್ತಿ, ಪ್ರಪಂಚದ ಬೇರೆ ಸಂಸ್ಕೃತಿಗಳ ಬಗ್ಗೆ ಕಲಿಯುವ ಮನಸ್ಸು ಹುಟ್ಟು ಹಾಕುವಲ್ಲಿ ಈ ಸರಣಿ ಉಪಯುಕ್ತ. ಕನ್ನಡದ ಮಕ್ಕಳು ಇದನ್ನು ಓದುವ ಹಾಗಾಗಲಿ. ❖



## 'ಬಂಡಾಯ'ದ ಆ ದಿನಗಳು

**'ವೇಗದ ಬದುಕಿನ ಡಿ.ಆರ್.'** ಎಂಬ ಕಾಳೇಗೌಡ ನಾಗವಾರರ ಲೇಖನವು ಭಾನುವಾರದ ಪುರವಣಿಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಯಾರ್ಯಾರನ್ನೋ ಓಲೈಸಲು ಪ್ರಯತ್ನಿಸಿದ್ದಾರೆ. ಇರಲಿ, ಅದೇ ಲೇಖನದಲ್ಲಿ ಬಂಡಾಯ ಸಂಘಟನೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸುತ್ತ, 'ಸಂಚಾಲಕರಲ್ಲಿ ಒಬ್ಬನಾಗಿದ್ದ ಶೂದ್ರ ಶ್ರೀನಿವಾಸ್ ನಮ್ಮೆಲ್ಲರಿಗೆ ಪ್ರೀತಿ ಪಾತ್ರನಾಗಿದ್ದರೂ ತನ್ನ ಮಾಮೂಲಿ ಗೊಂದಲದಿಂದ ಸಂಚಾಲಕ ಸಮಿತಿಯಿಂದ ಹೊರಬಿದ್ದ' ಎಂದು ದಾಖಲಿಸಿದ್ದಾರೆ. ಅವರ ಅಭಿಪ್ರಾಯವನ್ನು ಗೌರವಿಸುವೆ. ಆದರೆ, ನಾನು ಯಾಕೆ ಹೊರಗೆ ಬರಬೇಕಾಯಿತು ಎಂಬುದರ ಬಗ್ಗೆ ನನ್ನ ಹೇಳಿಕೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆ.

ಇಂಥ ಸಂಘಟನೆಯ ಅವಶ್ಯಕತೆ ಯಾಕೆ ಬೇಕಾಗಿದೆ ಎಂದು ಅತ್ಯಂತ ದೀರ್ಘವಾಗಿ ಡಿ.ಆರ್., ಸಿದ್ಧಲಿಂಗಯ್ಯ ಮತ್ತು ನಾನು ಚರ್ಚಿಸಿದೆವು. ಆಗ ನಮ್ಮ ಮುಂದೆ ಇದ್ದದ್ದು: ಅಮೆರಿಕದ ಬ್ಲ್ಯಾಕ್ ಪ್ಯಾಂಥರ್ಸ್ ಸಂಘಟನೆ ಹಾಗೂ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿಯ ಧ್ಯೇಯ ಧೋರಣೆಗಳು. ಜೊತೆಗೆ ಭಾರತದ ಬೇರೆ ಬೇರೆ ಪ್ರಗತಿಪರ ಚಳವಳಿಗಳ ವಿಚಾರಗಳ ಕುರಿತು ಒಂದು ವಾರ ಚರ್ಚಿಸಿದೆವು. 'ಬಂಡಾಯ' ಹೆಸರಿನ ಬಗ್ಗೆ ಎಷ್ಟೊಂದು ತಲೆ ಕೆಡಿಸಿಕೊಂಡಿದ್ದೆವು. ಅದಕ್ಕೆ ಒಂದು ಆಕಾರ ಬಂದಮೇಲೆ ಸಿ.ಜಿ.ಕೃಷ್ಣಸ್ವಾಮಿ ಮತ್ತು ಇಂದೂಧರ ಹೊನ್ನಾಪುರ ಅವರನ್ನು ಚರ್ಚೆಗೆ ಆಹ್ವಾನಿಸಿದ್ದೆವು.

ಪ್ರತಿಕ್ರಿಯೆ

ಬಂಡಾಯ ಸಂಘಟನೆಯ ಧ್ಯೇಯ ಧೋರಣೆಗಳ ವಿಷಯವನ್ನು ಡಿ.ಆರ್. ಸಿದ್ಧಪಡಿಸಿದ. ಅದನ್ನು ಪತ್ರಿಕಾ ಗೋಷ್ಠಿ ಕರೆಯುವ ಮುನ್ನ ಚರ್ಚಿಸುವ ಸಮಯದಲ್ಲಿ 'ಜೀವ ವಿರೋಧಿ ಲೇಖಕರು' ಎಂಬುದರ ಕೆಳಗೆ ನಮ್ಮ ಕೆಲವು ಬಹುಮುಖ್ಯ ಲೇಖಕರನ್ನು ಪ್ರಸ್ತಾಪಿಸಿದ್ದ. ನಾನು ಅದನ್ನು ತೀವ್ರವಾಗಿ ವಿರೋಧಿಸಿದೆ. 'ಜೀವ ವಿರೋಧಿ' ಎಂಬುದನ್ನು ತೆಗೆಯೋಣ. ಯಾವ ದೊಡ್ಡ ಮಹತ್ವಪೂರ್ಣ ಲೇಖಕರೂ ಜೀವ ವಿರೋಧಿಯಾಗಿರುವುದಿಲ್ಲ. ಜೀವಪರವಾಗಿಯೇ ಇರ್ತಾರೆ' ಎಂದು ಹೇಳಿದೆ. ಎಷ್ಟು ವಿನಂತಿಸಿಕೊಂಡರೂ ಅದನ್ನು ತೆಗೆಯಲು ಡಿ.ಆರ್. ಒಪ್ಪಲಿಲ್ಲ. ನಾನು ಅತ್ಯಂತ ವಿಷಾದದಿಂದ ಹೊರಬಂದೆ. ಇದರ ಅರ್ಥ ನಾನು ಒಟ್ಟು ಬಂಡಾಯ ಸಂಘಟನೆಗೆ ವಿರೋಧಿಯಾಗಿದ್ದೆ ಎಂದು ಅಲ್ಲ. ಅದರ ಉದ್ಘಾಟನೆ ಆದಮೇಲೆ ನಾನು ಕೋಲಾರ ಮತ್ತು ಬಳ್ಳಾರಿಯ ಬಂಡಾಯ ಸಾಹಿತ್ಯ ಸಮಾವೇಶದಲ್ಲಿ ಭಾಗವಹಿಸಿದ್ದೇನೆ.

ಡಿ.ಆರ್. ಮತ್ತು ನಾನು ಕೋಲಾರ ಸಮಾವೇಶದಲ್ಲಿ ಭಾಗವಹಿಸಿದ್ದಾಗ ಡಿ.ಆರ್.ನನ್ನು ಕೆಲವರು ಎಷ್ಟು ವಕ್ರವಾಗಿ ಅವಮಾನಿಸಿದರು. ಆಗ ನಾನು ಅವನಿಗೆ ಬೆಂಬಲವಾಗಿ ನಿಂತೆ. ಆದರೆ, ಡಿ.ಆರ್. 'ಜೀವ ವಿರೋಧಿ ಲೇಖಕರು' ಎಂಬ ಹೇಳಿಕೆಯ ಬಗ್ಗೆ ತುಂಬಾ ವಿರೋಧ ಎದುರಿಸಬೇಕಾಯಿತು. ಅವನಿಗೂ ಅದು ಗೊತ್ತಾಯಿತು, ಎಲ್ಲಿ ಎಡವಿದ್ದೇನೆ ಎಂದು. ಒಮ್ಮೆ ಲಂಕೇಶ್ ಮತ್ತು ಅಡಿಗರು ಡಿ.ಆರ್.ಗೆ ಸಾಕಷ್ಟು ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಇದೆಲ್ಲ ಕಾಳೇಗೌಡರಿಗೆ ಗೊತ್ತಿಲ್ಲ. ಜಾಗೃತ ಸಾಹಿತ್ಯ ಸಮಾವೇಶದ ಸಮಯದಲ್ಲಿ ಕಾಳೇಗೌಡರು ನಮ್ಮ ಜೊತೆಯಲ್ಲಿ ಇರಲಿಲ್ಲ, ತಟಸ್ಥವಾಗಿದ್ದರು. ಆಗ ಕಿ.ರಂ., ಡಿ.ಆರ್. ಮತ್ತು ನಾನು ರಾತ್ರಿಹಗಲು ದುಡಿದಿದ್ದೇವೆ. ಅವನ ಬೌದ್ಧಿಕ ವ್ಯಕ್ತಿತ್ವ ಎಷ್ಟು ದಟ್ಟವಾಗಿತ್ತು ಎಂಬುದನ್ನು ಭಾರತದ ಬೇರೆ ಬೇರೆ ವೇದಿಕೆಗಳಲ್ಲಿ ಕಂಡಿದ್ದೇನೆ.

ಲಂಕೇಶ್ ಮತ್ತು ಅನಂತಮೂರ್ತಿಯವರು 'ನೀವು ಬಂಡಾಯ ಸಾಹಿತ್ಯ ಸಂಘಟನೆಯಿಂದ ಹೊರ ಬರಬಾರದಾಗಿತ್ತು' ಎಂದು ಹೇಳಿದಾಗ ನಾವು ಅದಕ್ಕೆ ಉತ್ತರಿಸಲಾಗದೆ ಮೌನಿಗಳಾಗಿದ್ದೆವು. ಇಷ್ಟಂತೂ ಸತ್ಯ: ನಾನು ಎಂದೂ ಬಂಡಾಯ ಸಾಹಿತ್ಯ ಸಂಘಟನೆಗೆ ವಿರೋಧಿಯಾಗಿರಲಿಲ್ಲ. ಆದರೆ ನನ್ನ ಬಂಡಾಯದ ಪರಿಕಲ್ಪನೆಗಳು ಬೇರೆ.

**ಶೂದ್ರ ಶ್ರೀನಿವಾಸ್,** ಬೆಂಗಳೂರು

## ಅವರು ಕಾರಣರಲ್ಲ


**ಕಾಳೇಗೌಡ** ನಾಗವಾರರ ಲೇಖನ ಗಮನಿಸಿರುವೆ. ಪ್ರಜಾವಾಣಿಗೆ ಅವರು ಯಾರು ಯಾರನ್ನೆಲ್ಲ ಸೇರಿಸಿದರು ಎಂದು ಬರೆಯುತ್ತ ನನ್ನ ಹೆಸರನ್ನೂ ಪ್ರಸ್ತಾಪಿಸಿದ್ದಾರೆ. 1980ರ ದಶಕದ ವಿದ್ಯಮಾನವದು. ನನ್ನ ನಿರುದ್ಯೋಗ ಪರ್ವವನ್ನು 'ಹತ್ತಿರದಿಂದ, ಆತಂಕದಿಂದ' ಗಮನಿಸಿದ್ದ ಅವರು ಹರಿಕುಮಾರ್ ಅವರ ಬಳಿ ನನ್ನ ಪರವಾಗಿ ನಿಯೋಗವನ್ನೇ ತೆಗೆದುಕೊಂಡು ಹೋಗುವುದಾಗಿ ಹೇಳಿದ್ದರು. ಆದರೆ, ಪ್ರಜಾವಾಣಿಯಲ್ಲಿ ಅರ್ಜಿ ಕರೆದುದನ್ನು ಗಮನಿಸಿ ನನಗೆ ಟೆಲಿಗ್ರಾಂ ಕೊಟ್ಟು ಬೆಂಗಳೂರಿಗೆ ಕರೆಸಿಕೊಂಡವರು ನಾಗವಾರರೂ ಅಲ್ಲ, ಡಿ.ಆರ್.ನಾಗರಾಜರೂ ಅಲ್ಲ.

ಆದಾಗ್ಯೂ, 'ಇಂಥವರನ್ನೆಲ್ಲ ಸೇರಿಸಲು ಸಾಧ್ಯವಾಯಿತು' ಎಂದು ಅವರು ಹೇಳುವುದು ದಾರ್ಷ್ಟ್ಯದ ಮಾತು. ನಾನು ಪ್ರಜಾವಾಣಿ ಸೇರಲು ಅವರು ಕಾರಣರಲ್ಲ ಎಂದು ಹೇಳಲು ವಿಷಾದಿಸುತ್ತೇನೆ!

**ಪದ್ಮರಾಜ ದಂಡಾವತಿ,** ಬೆಂಗಳೂರು

## ಪೋಲಿಷ್ ಜನಜೀವನ ಶೋಧದ ಕತೆಗಳು

ಎಸ್. ದಿವಾಕರ್



**ಸ್ಲಾವೊಮೀರ್ ಮ್ರೋಜೆಕ್‌ನ ಕತೆಗಳು – ಪೋಲಿಷ್ ಕತೆಗಳ ಅನುವಾದ**
ಅನುವಾದ: ಡಾ.ಬಿ.ಎ.ವಿವೇಕ ರೈ
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪು: 104 ₹80

**ಸ್ಲಾವೊಮೀರ್ ಮ್ರೋಜೆಕ್‌ನ** ಈ ಕತೆಗಳನ್ನು ಕುರಿತು ಬರೆಯಲು ನನಗೊಂದು ಕಾರಣವಿದೆ. 1974ರಲ್ಲಿ ಗೋಪಾಲಕೃಷ್ಣ ಅಡಿಗರ ಕೋರಿಕೆಯಂತೆ ನಾನು 'ಸಾಕ್ಷಿ' ತ್ರೈಮಾಸಿಕದ 25ನೆಯ ಸಂಚಿಕೆಗೆ ಗೌರವ ಸಂಪಾದಕನಾಗಿದ್ದೆ. ಪೋಲಿಷ್ ಸಾಹಿತ್ಯಕ್ಕೆ ಮೀಸಲಾಗಿದ್ದ ಆ ಸಂಚಿಕೆಯಲ್ಲಿ ಇದೇ ಮ್ರೋಜೆಕ್‌ನ 'ಶಿಬಿರದ ದಾರಿ' ಎಂಬ ಕತೆಯನ್ನು ಸೇರಿಸಿದ್ದೆ. ಅದನ್ನು ದಿವಂಗತ ಜಿ.ಎಸ್. ಸದಾಶಿವ ಅನುವಾದಿಸಿ ಕೊಟ್ಟಿದ್ದರು. ಆಮೇಲೆ ನಾನೂ ಇವನ ಕೆಲವು ಕತೆಗಳನ್ನು ಅನುವಾದಿಸಿದ್ದುಂಟು. ತೊಂಬತ್ತರ ದಶಕದಲ್ಲಿ ಬಿ.ವಿ.ಕಾರಂತರಿಗೆ ಇವನು ಬರೆದ 'ಟ್ಯಾಂಗೊ' ನಾಟಕವನ್ನು ಯಾರಿಂದಲಾದರೂ ಅನುವಾದ ಮಾಡಿಸಿ ಆಡಿಸುವ ಆಸೆಯಿತ್ತು.

ಮ್ರೋಜೆಕ್ ಪೋಲೆಂಡಿನ ಪ್ರಸಿದ್ಧ ವ್ಯಂಗ್ಯಚಿತ್ರಕಾರ, ಕತೆಗಾರ, ನಾಟಕಕಾರ. ಇವನ ಮೊದಲ ಕಥಾ ಸಂಕಲನ ಪೋಲಿಷ್ ಭಾಷೆಯಲ್ಲಿ ಪ್ರಕಟಗೊಂಡದ್ದು 1957ರಲ್ಲಿ. ಇದು 1968ರಲ್ಲಿ 'ದಿ ಎಲಿಫೆಂಟ್' ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಅನುವಾದಗೊಂಡಿತು. ಇದರಲ್ಲಿ ವಿಡಂಬನೆಯಿಂದ ಹಿಡಿದು ಬುಡಮೇಲುಗೊಳಿಸುವಂಥ ಅಸಂಗತ ಧಾಟಿಯವರೆಗೆ ಒಟ್ಟು 42 ಕತೆಗಳಿವೆ. ಶೀರ್ಷಿಕೆಯ ಕತೆ 'ಆನೆ'ಯಲ್ಲಿ ಸಣ್ಣದೊಂದು ಪಟ್ಟಣದಲ್ಲಿ ಹಣ ಉಳಿಸುವ ಉದ್ದೇಶದಿಂದ ನಿಜವಾದ ಆನೆಗೆ ಬದಲಾಗಿ ಆನೆಯಾಕಾರದ ಒಂದು ರಬ್ಬರಿನ ಬಲೂನನ್ನು ಕೊಂಡು ತಂದು ಅದಕ್ಕೆ ಗಾಳಿಯೂದಿ ಉಬ್ಬಿಸಿ ಅದನ್ನು ಮೃಗಾಲಯದಲ್ಲಿ ನಿಲ್ಲಿಸುವ ವಿದ್ಯಮಾನವಿದೆ. ಆದರೆ ಗಾಳಿ ಬೀಸಿದ್ದೇ ಅದು ನಿಂತಲ್ಲಿ ನಿಲ್ಲದೆ ಹಾರಿಹೋಗಿಬಿಡುತ್ತದೆ. ಈ ಪ್ರಸಂಗದ ಋಣಾತ್ಮಕ ಪರಿಣಾಮವನ್ನು ಚಿತ್ರಿಸುವ ಮೂಲಕ ಪಟ್ಟಣದ ಜನರಿಗೆ ಸುಳ್ಳುಗಳ ಹಿಂದಿನ ಉದ್ದೇಶವನ್ನು ಸ್ಪಷ್ಟಪಡಿಸುವ ಕತೆಯಲ್ಲಿ ರಾಜಕೀಯ ವರ್ಗದ ವಂಚನೆಯ ಸ್ವರೂಪವಿದೆ, ಸಾಮಾನ್ಯ ಜನರ ಮುಗ್ಧತೆಯ ನಕಾಶೆಯಿದೆ, ನಮ್ಮ ನೀತಿಕತೆಗಳ ಕಾಲಾತೀತ ಗುಣವಿದೆ. ಜೊತೆಗೆ ಸರಳ ನೇರ ನಿರೂಪಣಾ ಶೈಲಿಯ ಕತೆಯಲ್ಲಿ ಮ್ರೋಜೆಕ್‌ನ ಕಾಲದ ಅನುಭವಗಳ ಬಗ್ಗೆ ಸಾಕಷ್ಟು ಒಳನೋಟಗಳೂ ಇವೆ.

ಮ್ರೋಜೆಕ್‌ನ ಕಾಲವೆಂದರೆ ಪೋಲೆಂಡ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಸರ್ವಾಧಿಕಾರಿ ಆಳ್ವಿಕೆಯಿದ್ದ ಕಾಲ; ತಮ್ಮ ಸಮಾಜದ ಕುಂದುಕೊರತೆಗಳ ವಿರುದ್ಧ ನೇರವಾಗಿ ಮಾತಾಡಿದವರನ್ನು ಜೈಲಿಗೆ ಅಟ್ಟುತ್ತಿದ್ದ, ಗಡಿಪಾರು ಮಾಡುತ್ತಿದ್ದ ಕಾಲ. ಆಗ ಸರ್ವಾಧಿಕಾರಿಯಾಗಿದ್ದ ವ್ಲಾದಿಸ್ಲಾ ಗೋಮುಲ್ಕ (1905-1982) ಎರಡನೆಯ ಮಹಾಯುದ್ಧದ ನಂತರ ಪೋಲೆಂಡ್ ಕಮ್ಯುನಿಸಂಗೆ ಹೊರಳುವಲ್ಲಿ ಪ್ರಮುಖ ಪಾತ್ರ ವಹಿಸಿದವನು; ಸ್ವತಃ ಯಹೂದಿಗಳ ವಿರೋಧಿಯಾಗಿದ್ದು ಸಮಾಜದ ಅನೇಕ ಯಹೂದಿಗಳ ವಿರುದ್ಧ ಬರ್ಬರ ಕಾರ್ಯಾಚರಣೆ ನಡೆಸಿದವನು.

ಒಳನೋಟ

ವಿಪರ್ಯಾಸವೆಂದರೆ 1948ರಲ್ಲಿ ಅವನೇ ಅಧಿಕಾರ ಕಳೆದುಕೊಂಡದ್ದು. ಅದಕ್ಕೆ ಕಾರಣ ಅವನು ಸೋವಿಯತ್ ಯೂನಿಯನ್‌ನಲ್ಲಿ ಸ್ಟಾಲಿನ್ನನಿಗೆ ನಿಷ್ಠೆಯಿಂದಿದ್ದ ಗುಂಪಿಗೆ ಬದಲಾಗಿ ಪೋಲಿಷ್ ಕಮ್ಯುನಿಸ್ಟರಿಗೇ ಹೆಚ್ಚು ಬೆಂಬಲ ನೀಡಿದ್ದು. ಸುಮಾರು ಒಂದು ದಶಕ ಜೈಲಿನಲ್ಲಿದ್ದವನು ಸ್ಟಾಲಿನ್ನನ ಮರಣಾನಂತರ ಮತ್ತೆ ಅಧಿಕಾರಕ್ಕೆ ಬಂದ. ಅಂಥ ಕಾಲದಲ್ಲಿ ವಸ್ತುಸ್ಥಿತಿಯನ್ನು ವ್ಯಕ್ತಪಡಿಸುವ ತುರ್ತಿದ್ದ ಲೇಖಕರಿಗೆ ವಾಸ್ತವಕ್ಕೊಂದು ಪ್ರತಿ-ವಾಸ್ತವವನ್ನು ಸೃಷ್ಟಿಸುವುದಲ್ಲದೆ ಬೇರೆ ದಾರಿಯೇ ಇರಲಿಲ್ಲ.

'ದಿ ಎಲಿಫೆಂಟ್' ಸಂಕಲನದ ವೈವಿಧ್ಯವನ್ನು ನೋಡಿ: ಒಬ್ಬ ಫಾರೆಸ್ಟರನ ಬಹುದೊಡ್ಡ ಮೀಸೆಯೇ ಬಟ್ಟೆ ಒಣಹಾಕುವ ತಂತಿಯಾಗುತ್ತದೆ; ಸಿಂಹವೊಂದು ಕ್ರಿಶ್ಚಿಯನ್ನರು ಅಧಿಕಾರಕ್ಕೆ ಬರಬಹುದೆಂದು ಎಚ್ಚರಿಸುತ್ತದೆ; ಒಬ್ಬ ಹವಾಮಾನತಜ್ಞನಿಗೆ ಪ್ರವಾಹವಿದ್ದರೂ ಒಳ್ಳೆಯ ಮುನ್ಸೂಚನೆ ನೀಡುವಂತೆ ಒತ್ತಾಯ ಮಾಡಲಾಗುತ್ತದೆ; ನಾಗರಿಕಸೇವಾ ಅಧಿಕಾರಿಗಳು ತಮ್ಮ ಅಜಾಗರೂಕತೆಯಿಂದಾಗಿಯೇ ಆಫೀಸಿನ ಕಿಟಕಿಗಳಿಂದ ಹಾರಿಹೋಗುತ್ತಾರೆ; ರೈತನೊಬ್ಬ ಹೆಂಚುಹೊದಿಸುವ ಕಾರ್ಯದ ಮುಂಚೂಣಿಯಲ್ಲಿದ್ದರೆ ಮನೆಯಲ್ಲಿ ಅವನ ಹೆಂಡತಿ ಚಳಿಯಿಂದ ನಡುಗುತ್ತಿರುತ್ತಾಳೆ; ಹೆಂಡತಿಯೊಬ್ಬಳಿಗೆ ಮದುವೆಯಾಗಿ ಏಳು ವರ್ಷಗಳ ನಂತರ ತನ್ನ ಗಂಡ ತಯಾರಾಗಿರುವುದು ಜಿಗುಟು ಮಣ್ಣಿನಿಂದ ಎಂದು ಅರಿವಾಗುತ್ತದೆ.

ಯುದ್ಧೋತ್ತರ ಪೋಲಿಷ್ ಜನಜೀವನವನ್ನೂ ಪರಮಾಧಿಕಾರದ ಅಸಂಗತತೆಯನ್ನೂ ಒಟ್ಟಿಗೆ ಶೋಧಿಸುವ ಈ ಸಂಕಲನದ 22 ಕತೆಗಳು ಇದೀಗ ಕನ್ನಡಕ್ಕೆ ಬಂದಿವೆ - ಡಾ. ಬಿ.ಎ.ವಿವೇಕ ರೈ ಅವರ ಸೊಗಸಾದ ಅನುವಾದದಲ್ಲಿ. ವಿವೇಕ ರೈ ಅವರು ಶಿಕ್ಷಣತಜ್ಞರು, ಬಹುಶ್ರುತ ವಿದ್ವಾಂಸರು. 'ಚಿಲಿಯಲ್ಲಿ ಭೂಕಂಪ', '80 ದಿನಗಳಲ್ಲಿ ವಿಶ್ವ ಪರ್ಯಟನ' ಮುಂತಾದವನ್ನೂ ಬರ್ಟೋಲ್ಟ್ ಬ್ರೆಖ್ಟ್, ಪಾಲ್ ಸೆಲಾನ್‌ರಂಥ ಜರ್ಮನ್ ಕವಿಗಳ ಕೆಲವು ಕವನಗಳ ಅನುವಾದವನ್ನೂ ನೋಡಿದರೆ ಅವರ ಆಸಕ್ತಿಯ ಹರವು ಗೊತ್ತಾಗುತ್ತದೆ. ಅರ್ಜೆಂಟೀನಾದ ಲೇಖಕ ಬೋರ್ಹೆಸ್ 'ನಾವು ಒಂದು ಅನುವಾದಿತ ಕೃತಿಯನ್ನು ಅನುವಾದವೆಂದು ಓದಬೇಕೇ ಹೊರತು ಅದೊಂದು ಸ್ವತಂತ್ರ ಕೃತಿಯೆಂದು ಅಲ್ಲ' ಎಂದೊಮ್ಮೆ ಹೇಳಿದ್ದುಂಟು.

ಆದರೆ, ನಮ್ಮಲ್ಲೀಗ ಮೂಲ ಲೇಖಕನನ್ನು 'ಕನ್ನಡ ಜಾಯಮಾನ'ಕ್ಕೆ ಒಗ್ಗಿಸುವುದೇ ಅನುವಾದದ ಪರಮೋದ್ದೇಶವೆಂದಾಗಿದೆ. ಹಾಗಾಗಿ ಮೂಲ ಪಠ್ಯದಲ್ಲಿ ಎರಡು ಮೂರು ವಾಕ್ಯಗಳ ಒಂದು ಪ್ಯಾರಾ ಇದ್ದರೆ ಅದು ಕನ್ನಡದಲ್ಲಿ ಹತ್ತು ಹನ್ನೆರಡು ವಾಕ್ಯಗಳ ಪ್ಯಾರಾ ಆಗುವುದು ಅಸಂಭವವಲ್ಲ. ವಿವೇಕ ರೈ ಅವರು ಮೂಲ ಪಠ್ಯದ 'ಟೋನ್' ಅನ್ನು ಬಿಟ್ಟುಕೊಡುವ ಅನುವಾದಕರಲ್ಲ. ಹಾಗಾಗಿ ಅವರ ಈ ಅನುವಾದದಲ್ಲಿ ಮ್ರೋಜಕ್‌ನ ಆಶಯದ ಜೊತೆಗೆ ಅವನ ನಿರೂಪಣೆಯಲ್ಲಿರುವ ಧ್ವನಿಯ ಏರಿಳಿತಗಳು ಕೂಡ ಅನುರಣಿಸುತ್ತಿವೆ. ನನ್ನ ದೃಷ್ಟಿಯಲ್ಲಿ ಕನ್ನಡವು ಮ್ರೋಜೆಕ್‌ನಂಥ ಲೇಖಕರನ್ನು ಒಳಗೊಳ್ಳಬೇಕಾದದ್ದೇ ಹೀಗೆ.

ನಮ್ಮ ವಿಶ್ವವಿದ್ಯಾಲಯಗಳು ಸಮಕಾಲೀನ ಸೃಜನಶೀಲ ಸಾಹಿತ್ಯವನ್ನು ಪ್ರಕಟಿಸಲೇಬಾರದೆಂದು ಪಣತೊಟ್ಟಂತಿವೆ. ಹೀಗಿದ್ದೂ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ಮುಖ್ಯ ಅನುವಾದವನ್ನು ಪ್ರಕಟಿಸಿರುವುದು ನಿಜಕ್ಕೂ ಸ್ವಾಗತಾರ್ಹ. ❖

# ಕೇಂದ್ರದಲ್ಲಿ ಬೇಕು ಬಲಿಷ್ಠ ಸರ್ಕಾರ



ಸುಧಾಕರ ಹೊಸಳ್ಳಿ

ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳ ಕುರಿತು, ಆಡಳಿತಾತ್ಮಕ ಪ್ರಕ್ರಿಯೆಗಳ ಕುರಿತು ನಿಯಮಗಳಿದ್ದರೂ ಆಗಾಗ ಕೇಂದ್ರ-ರಾಜ್ಯಗಳ ನಡುವೆ ತಿಕ್ಕಾಟ, ಸಂಘರ್ಷ ಉದ್ಭವಿಸುತ್ತಿರುವುದನ್ನು ಕಾಣಬಹುದು. ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಾಯಕರು ಕೇಂದ್ರದಲ್ಲಿ ತಮ್ಮದಲ್ಲದ ಪಕ್ಷ ಆಡಳಿತ ನಡೆಸುವ ಸಂದರ್ಭದಲ್ಲೆಲ್ಲ, ಕೇಂದ್ರವನ್ನು ದೂರುವ ಹಾಗೂ ಸಂಸದೀಯ ನಡಾವಳಿಗಳಲ್ಲಿ ಅಸಹಕಾರವನ್ನು ತೋರುವ ಪ್ರಕ್ರಿಯೆಗಳು ಜರುಗುತ್ತಾ ಬಂದಿವೆ.

ಮೊನ್ನೆ ಕಾರ್ಯಕ್ರಮವೊಂದರಲ್ಲಿ ಸಚಿವ ಜೆ.ಮಾಧುಸ್ವಾಮಿ ಅವರು, 'ಕೇಂದ್ರದ ಹಸ್ತಕ್ಷೇಪ ರಾಜ್ಯಗಳ ಮೇಲೆ ಹೆಚ್ಚುತ್ತಿದೆ. ಹಾಗಾಗಿ ರಾಜ್ಯಗಳ ಅಧಿಕಾರ ವ್ಯಾಪ್ತಿ ಕುಬ್ಜವಾಗುತ್ತಿದೆ' ಎಂಬ ಹೇಳಿಕೆ ನೀಡಿದ್ದಾರೆ. ಆಡಳಿತ ಪಕ್ಷದ ಸಚಿವರೊಬ್ಬರು ನೀಡಿದ ಈ ರೀತಿಯ ಹೇಳಿಕೆ ಚರ್ಚೆಗೆ ಕಾರಣವಾಗಿದೆ.

ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಣ ತಿಕ್ಕಾಟ ಗಂಭೀರ ಸ್ವರೂಪವನ್ನು ಪಡೆದುಕೊಂಡದ್ದು 1970ರ ಕಾಲಘಟ್ಟದಲ್ಲಿ. ಆಗ 356ನೇ ವಿಧಿಯ ಅಧಿಕಾರವನ್ನು ಅಂದಿನ ಕೇಂದ್ರ ಸರ್ಕಾರ ದುರುಪಯೋಗ ಮಾಡಿಕೊಂಡು, ಹಲವು ರಾಜ್ಯಗಳನ್ನು ರಾಷ್ಟ್ರಪತಿ ಆಡಳಿತಕ್ಕೆ ಒಳಪಡಿಸಿತ್ತು.

ನಾವೆಲ್ಲರೂ 1949 ನವೆಂಬರ್ 26ರ ನಂತರ ಸಂವಿಧಾನದ ಚೌಕಟ್ಟಿಗೆ ಒಳಪಟ್ಟಿದ್ದೇವೆ. ಭಾರತಕ್ಕೊಂದು ಸಂವಿಧಾನ ರಚನೆ ಮಾಡುವ ಜವಾಬ್ದಾರಿ ಹೊತ್ತ ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದ ಸಮಿತಿಯು ಭಾರತಕ್ಕೆ ಯಾವ ಮಾದರಿಯ ನಿಯಮಗಳನ್ನು ಒಳಗೊಂಡ ಸಂವಿಧಾನ ರಚನೆಯಾಗಬೇಕು? ಯಾವ ಪದ್ಧತಿಗಳನ್ನು ಅಥವಾ ಮಾದರಿಗಳನ್ನು ಎಲ್ಲಿಂದ ಎರವಲು ಪಡೆಯಬೇಕು ಎಂಬ ಸಂಗತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಚರ್ಚಿಸಿ, ಸಂವಿಧಾನದಲ್ಲಿ ಅಳವಡಿಸಿಕೊಂಡಿದೆ .

1946ರ ಡಿ. 17ರಂದು ತಮ್ಮ ಮೊದಲ ಭಾಷಣದಲ್ಲಿ ಅಂಬೇಡ್ಕರ್ ಅವರು, ಬಲಿಷ್ಠ ಕೇಂದ್ರ ಸರ್ಕಾರದ ಕುರಿತು ಮಾತನಾಡಿದ್ದರು. ಬಹುಮತ ಹೊಂದಿದ ಪಕ್ಷ ನಿಯಮಗಳನ್ನು ಸಡಿಲಗೊಳಿಸುತ್ತಿದೆ, ಇದು ಭವಿಷ್ಯ ಭಾರತಕ್ಕೆ ಅಪಾಯ ತರಲಿದೆ ಎಂದಿದ್ದರು. ಜೊತೆಗೆ ಸಂಯುಕ್ತ ಮಾದರಿಯ ಸರ್ಕಾರದ ಅಳವಡಿಕೆ ಚರ್ಚೆಯ ಅವಧಿಯಲ್ಲಿ ಅಮೆರಿಕದ ರಾಜ್ಯಗಳ ವಿಪರೀತ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ತಿರಸ್ಕರಿಸುತ್ತಾ ಅದರ ದೋಷಗಳನ್ನು ಸದನದ ಮುಂದೆ ಬಿಚ್ಚಿಟ್ಟಿದ್ದರು.

ಅದರ ಬದಲಾಗಿ ಕೆನಡಾ ಮಾದರಿಯ ಅರೆ ಸಂಯುಕ್ತ ವ್ಯವಸ್ಥೆಯನ್ನು ಅನುಮೋದಿಸಿದ್ದರು. ಹತ್ತು ಹಲವು ಪ್ರಾಂತಗಳಾಗಿ ವಿಭಜನೆಗೊಂಡಿದ್ದ ದೇಶವು ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಅದಕ್ಕೊಂದು ಪ್ರಬಲ ಕೇಂದ್ರ ಸರ್ಕಾರದ ಅಗತ್ಯ ಇದೆ ಎಂದು ಪ್ರತಿಪಾದಿಸಿದ್ದರು. ಈ ಕಾರಣಕ್ಕಾಗಿಯೇ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿ ಪಟ್ಟಿ ನಂತರ ಉಳಿಕೆ ವಿಷಯಗಳ ಮೇಲೆ ಕೇಂದ್ರದ ಅಧಿಕಾರವನ್ನು ಮಾನ್ಯ ಮಾಡಿದ್ದರು. ಇದರೊಟ್ಟಿಗೆ ಯಾವುದೇ ಒಂದು ವಿಷಯದ ಕುರಿತು, ಕೇಂದ್ರ ಮತ್ತು ರಾಜ್ಯಗಳೆರಡೂ ಕಾನೂನು ಮಾಡಿದರೆ, ಕೇಂದ್ರದ ಕಾನೂನು ಅಂತಿಮ ಎಂಬ ವಿಧಿಯನ್ನು ಸೇರ್ಪಡೆ ಮಾಡಿದ್ದರು.

ಸಂವಿಧಾನ ರಚನಾ ಸಭೆಯಲ್ಲಿ ಮೂರನೇ ವಿಧಿಯ ಅನುಮೋದನೆ ಸಂದರ್ಭ ವಿವಿಧ ದಿನಗಳಂದು ಕೇಂದ್ರ ಸರ್ಕಾರಕ್ಕೆ ರಾಜ್ಯಗಳ ಗಡಿ ಮರುಸೃಷ್ಟಿ, ರಾಜ್ಯಗಳ ವಿಭಜನೆ, ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನೆ ಅಧಿಕಾರವನ್ನು ಮಾನ್ಯ ಮಾಡಿ, ಸಾಂವಿಧಾನಿಕ ನಿಯಮ ಮಾಡಿದರು. ಸುಪ್ರೀಂ ಕೋರ್ಟ್ ಕೂಡ, ಅದಾನಿ ಪವರ್ ಲಿಮಿಟೆಡ್ ವರ್ಸಸ್ ಗುಜರಾತ್ ಎಲೆಕ್ಟ್ರಿಸಿಟಿ ಪ್ರಕರಣ, ಬೇರುಬಾರಿ ಪ್ರಕರಣ, ಬೋರ್ಡ್ ಆಫ್ ಟ್ರೇಡರ್ಸ್ ವರ್ಸಸ್ ಚೆನ್ನೈ ಕಂಟೇನರ್ಸ್ ಪ್ರಕರಣದಲ್ಲಿ ಕೇಂದ್ರದ ಅಧಿಕಾರ ವ್ಯಾಪ್ತಿಯನ್ನು ಮಾನ್ಯ ಮಾಡಿದೆ. 370(C)ನೇ ಉಪ ವಿಧಿಯಲ್ಲಿ ಸಂವಿಧಾನದಲ್ಲಿ ಏನೇ ನಿಯಮಗಳಿದ್ದರೂ ರಾಷ್ಟ್ರಪತಿ ಅನುಮೋದನೆಯೊಂದಿಗೆ ಕಾಶ್ಮೀರಕ್ಕಿರುವ ವಿಶೇಷ ಸವಲತ್ತನ್ನು ರಾಷ್ಟ್ರಪತಿ ಆದೇಶದ ಮೂಲಕ ಹಿಂಪಡೆಯಬೇಕೆಂಬ ನಿಯಮಕ್ಕೆ ಅಂಬೇಡ್ಕರ್ ಅವರ ಸಮಿತಿಯೇ ಅನುಮೋದನೆ ನೀಡಿತ್ತು.

ಭಾರತದಲ್ಲಿ ಕೇಂದ್ರ ಸರ್ಕಾರಕ್ಕೆ ಮಾತ್ರ ಪರಮಾಧಿಕಾರವಿದ್ದು ವಿದೇಶಾಂಗ ನೀತಿ, ರಕ್ಷಣೆ, ಸೈನ್ಯ, ವಾಯು ಸಂಬಂಧಿತ ನಿರ್ಧಾರಗಳ ಕುರಿತು ಕಾನೂನು ಮಾಡಲು ಕೇಂದ್ರಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಸಂವಿಧಾನದ 18ನೇ ಭಾಗದಲ್ಲಿ ತುರ್ತು ಪರಿಸ್ಥಿತಿ ಅಧಿಕಾರ ಹೇರಿಕೆಗೂ ಕೇಂದ್ರಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ತುರ್ತು ಪರಿಸ್ಥಿತಿಯ ಸಂದರ್ಭ ಮತ್ತು ವಿಶೇಷ ಸಂದರ್ಭಗಳಲ್ಲಿ ರಾಜ್ಯಪಟ್ಟಿಯ ಯಾವುದೇ ವಿಷಯಗಳ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನು ಮಾಡಲು ಶಿಫಾರಸು ಮಾಡುವ ಅಧಿಕಾರ ಕೂಡ ಕೇಂದ್ರಕ್ಕೆ ಇದೆ.

ಬಲಿಷ್ಠ ಕೇಂದ್ರ ಪದ್ಧತಿಯನ್ನು ಸಾಂವಿಧಾನಿಕವಾಗಿ ಒಪ್ಪಿಕೊಂಡಿರುವ ನಾವು, ರಾಜಕೀಯ ಕಾರಣಗಳಿಗಾಗಿ ವಿರೋಧಿಸಲು ಅಥವಾ ತಿರಸ್ಕರಿಸಲು ಅವಕಾಶವಿಲ್ಲ. ಇತ್ತೀಚೆಗೆ ಪಶ್ಚಿಮ ಬಂಗಾಳ, ಕೇರಳ, ತೆಲಂಗಾಣಗಳಂತಹ ರಾಜ್ಯಗಳು ಕೇಂದ್ರದ ವಿರುದ್ಧ ಸಂಘರ್ಷಕ್ಕಿಳಿದು ರಾಷ್ಟ್ರದ ಸ್ಥಿರತೆಯ ಮೇಲೆ ದುಷ್ಪರಿಣಾಮ ಬೀರಿವೆ. ದೆಹಲಿ ಮತ್ತು ಕೇಂದ್ರ ಸರ್ಕಾರಗಳ ನಡುವಿನ ತಿಕ್ಕಾಟ, ಪುದುಚೇರಿ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷದಂತಹ ಪ್ರಕರಣಗಳು ಪ್ರಗತಿಯತ್ತ ಸಾಗಿರುವ ಭಾರತದ ಆಲೋಚನೆಗೆ ಮಾರಕ. ಕೇಂದ್ರ ತನ್ನ ಸಾಂವಿಧಾನಿಕ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಅವಕಾಶವನ್ನು ಹೊಂದಿದ್ದರೂ ತನಗಿಷ್ಟ ಬಂದಂತೆ ಅಧಿಕಾರ ದುರುಪಯೋಗ ಮಾಡಿಕೊಳ್ಳಲು ಸಂವಿಧಾನ ಅವಕಾಶ ನೀಡಿಲ್ಲ. 124ನೇ ವಿಧಿಯ ಐದನೆಯ ಉಪ ವಿಧಿಯನ್ವಯ ನ್ಯಾಯಿಕ ಸ್ವಾತಂತ್ರ್ಯ ಹಾಗೂ ಸಂವಿಧಾನದ ನಾಲ್ಕನೇ ಭಾಗದ ಐದನೇ ಅಧ್ಯಾಯದಲ್ಲಿ ಸಂವಿಧಾನದ ಮರುವ್ಯಾಖ್ಯಾನ ಮತ್ತು ರಕ್ಷಣೆ ಹೊಣೆಯನ್ನು ನ್ಯಾಯಾಂಗಕ್ಕೆ ನೀಡಿದೆ. 973ರ ಕೇಶವಾನಂದ ಭಾರತಿ ವರ್ಸಸ್ ಕೇರಳ ಪ್ರಕರಣದಲ್ಲಿ ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುವ ಎಲ್ಲ ಕಾಯ್ದೆಗಳನ್ನು ಅಸಿಂಧುಗೊಳಿಸುವ ತನ್ನ ಅಧಿಕಾರದ ಕುರಿತು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ. ಸಾಂವಿಧಾನಿಕವಾಗಿ ಕೇಂದ್ರಕ್ಕಿರುವ ಅಧಿಕಾರ ಚಲಾವಣೆಗೆ ರಾಜ್ಯಗಳು ಅಡ್ಡಿ ಮಾಡುವುದು ಅಥವಾ ರಾಜ್ಯಗಳ ಮೇಲೆ ಅನಗತ್ಯ ಆಕ್ರಮಣ ಮಾಡುವುದು ಎರಡೂ ಸ್ವೀಕೃತ ನಡಾವಳಿಯಲ್ಲ. ರಾಜಕೀಯ ನಾಯಕರು ಸಂವಿಧಾನವನ್ನು, ಅಂಬೇಡ್ಕರರನ್ನು ಪೂರ್ಣ ಓದದೆ ಸ್ವಸ್ಥ ಸಮಾಜವನ್ನು ಹಾಳುಗೆಡಹುವ ಹೇಳಿಕೆ ನೀಡುವುದು ಅಪಾಯಕಾರಿ ನಡೆ. ❖

## ಸ್ವಾಯತ್ತತೆಗೆ ಕುತ್ತು?

8ನೇ ಪುಟದಿಂದ...

ಬಜೆಟ್‌ನಲ್ಲಿ ಬೃಹತ್ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ, ಇಂಧನ ಹಾಗೂ ಲೋಕೋಪಯೋಗಿ ಇಲಾಖೆಗಳಿಗೆ ಮಾತ್ರ ಹೆಚ್ಚಿನ ಅನುದಾನ ಸಂದಾಯವಾಗುತ್ತದೆ. ಏಕೆ ಹೀಗೆ? ಇದರಿಂದ ಈ ನಾಲ್ಕು ಇಲಾಖೆಗಳಿಗೆ ಸಂಬಂಧಿಸಿದಂತೆ ದೊಡ್ಡ ಅಭಿವೃದ್ಧಿಯೇನಾದರೂ ಆಗುತ್ತದೆಯೇ? ಹಾಗೇನಿಲ್ಲ, ಇದಕ್ಕೆ ಎರಡು ಕಾರಣಗಳಿವೆ. ಒಂದು, ಸದರಿ ಖಾತೆಗಳನ್ನು ಹಿಡಿಯುವ ಮಂತ್ರಿಗಳೆಲ್ಲರೂ ನಂತರ ಪ್ರಭಾವಿಗಳಾಗುತ್ತಾರೆ ಮತ್ತು ಫಲವತ್ತಾಗುತ್ತಾರೆ. ಹೈಕಮಾಂಡ್ ಅನ್ನು ಸಾಕುವುದಕ್ಕೂ ಈ ಇಲಾಖೆಗಳ ಹಣವೇ ಬಳಕೆಯಾಗುತ್ತದೆ. ಹಾಗಾಗಿ ನೀರೂ ಹರಿಯುವುದಿಲ್ಲ, ಇಲಾಖೆಗಳೂ ಅಭಿವೃದ್ಧಿಯಾಗುವುದಿಲ್ಲ. ಇದು ಕರ್ನಾಟಕವನ್ನು ಕಾಡುತ್ತಿರುವ ಮತ್ತೊಂದು ಪಿಡುಗು.


ಇಂತಹ ಸರ್ಕಾರಗಳು ಮತ್ತು ಒಕ್ಕೂಟ ಸರ್ಕಾರದ ನೀತಿಯು ಕರ್ನಾಟಕವನ್ನು ಹಿಂದುಳಿದ ರಾಜ್ಯವನ್ನಾಗಿಸುವುದರ ಕಡೆಗೆ ತಳ್ಳುತ್ತಿವೆ. ಒಂದು ವೇಳೆ ಬಯಸಿದರೂ ಈಗಿರುವ ಪಕ್ಷಗಳು ಕರ್ನಾಟಕದ ಘನತೆ, ವಿತ್ತೀಯ ಹಾಗೂ ಆಡಳಿತಾತ್ಮಕ ಸ್ವಾಯತ್ತತೆಯ ಕೂಗನ್ನು ಹಾಕಲಾರವು. ಈ ಗಂಭೀರ ಸಮಸ್ಯೆಗಳನ್ನು ಸಮಸ್ತ ಕರ್ನಾಟಕದ ಹಿತ ಬಯಸುವ ಪ್ರಜ್ಞಾವಂತರು ತಮ್ಮ ಆದ್ಯತೆಯ ಸಂಗತಿಗಳನ್ನಾಗಿಸಿಕೊಳ್ಳುವುದು ಇಂದಿನ ತುರ್ತಾಗಿದೆ.

ಮೊದಲಿಗೆ, ಸಮಸ್ತ ಕರ್ನಾಟಕದ ಸಮಗ್ರ ಹಿತಾಸಕ್ತಿಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುವುದರಿಂದ ಆರಂಭಿಸಬೇಕು. ಅಲ್ಲಿಂದ ಮುಂದಕ್ಕೆ ರಾಜಕೀಯ ಒತ್ತಡ ನಿರ್ಮಾಣದ ಕಡೆಗೆ ಅದು ಸಾಗಬೇಕು. ಆದರೆ, ಇಂದಿನ ಸ್ಥಾಪಿತ ಪಕ್ಷಗಳ ನೆಲೆಯಿಂದಲೇ ಪ್ರಾದೇಶಿಕ ಹಿತಾಸಕ್ತಿಯೂ ಹುಟ್ಟಿ ಬರಬೇಕೆಂಬ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅದು ಸಾಧ್ಯವಿದ್ದದ್ದೇ ಆಗಿದ್ದಲ್ಲಿ, ಈಗಿನ ಅಪಾಯಕಾರಿ ವಿದ್ಯಮಾನಗಳಿಗೆ ಆಳುವ ಪಕ್ಷವನ್ನು ಪಕ್ಕಕ್ಕಿಟ್ಟರೂ, ಕರ್ನಾಟಕದ ವಿರೋಧ ಪಕ್ಷಗಳು ಪ್ರತಿಕ್ರಿಯಿಸಬೇಕಿದ್ದ ರೀತಿಯೇ ಬೇರೆಯಾಗಬೇಕಿತ್ತು. ಹಾಗಾಗಿಯೇ ಹೊಸ ರಾಜಕೀಯ ಒತ್ತಾಸೆಯನ್ನು ಕಟ್ಟಬೇಕಾದ ಅಗತ್ಯವು ಎದ್ದು ಕಾಣುತ್ತಿದೆ. ಅಂತಹ ಹೊಸದು, ಈಗಿನ ರಾಜಕೀಯ ಪಕ್ಷಗಳ ಒಳಗಿಂದ ಹುಟ್ಟುವುದು ಅಸಾಧ್ಯವೆಂದಾಗ ಚಳವಳಿಗಳ ಕಡೆಗೆ ದೃಷ್ಟಿ ಹೋಗುತ್ತದೆ. ಅಲ್ಲಿ ವಿವಿಧ ಜನಸಮುದಾಯಗಳ ಪರವಾಗಿ ಕೆಲಸ ಮಾಡುತ್ತಿರುವ ಗುಂಪುಗಳು ಇವೆಯಾದರೂ, ಸಮಸ್ತ ಕರ್ನಾಟಕದ ಹಿತಾಸಕ್ತಿಯನ್ನು ಕೈಗೆತ್ತಿಕೊಂಡು ನಿರಂತರವಾಗಿ ಚಳವಳಿ ರೂಪಿಸಿದ್ದು ಕಾಣುವುದಿಲ್ಲ.

ದೆಹಲಿ ಸಿಂಹಾಸನಾಧೀಶ್ವರರ ಕಿರೀಟಕ್ಕೆ ಪೆಟ್ಟು ನೀಡಿರುವ ರೈತ ಹೋರಾಟದ ಶಕ್ತಿಯನ್ನು ನಾವು ನೋಡುತ್ತಿದ್ದೇವೆ. ಅದು ಕೇವಲ ಎಪಿಎಂಸಿ, ಕನಿಷ್ಠ ಬೆಂಬಲ ನೀತಿಯ ವಿಚಾರದ್ದು ಮಾತ್ರವಾಗಿರದೇ, ರಾಜ್ಯಪಟ್ಟಿಯಲ್ಲಿರುವ ಬಾಬ್ತುಗಳ ಮೇಲೆ ಒಕ್ಕೂಟ ಸರ್ಕಾರದ ದಾಳಿಯ ವಿರುದ್ಧ ನಡೆಯುತ್ತಿರುವ ಹೋರಾಟವೂ ಆಗಿದೆ. ಆದರೆ ದೆಹಲಿ ಹೋರಾಟಕ್ಕೆ 'ಬೆಂಬಲವಾಗಿ' ಮಾತ್ರ ಕರ್ನಾಟಕದಲ್ಲಿ ಚಳವಳಿ ನಡೆಯುವುದು ಕರ್ನಾಟಕದ ಸಮಸ್ಯೆಗೆ ಪರಿಹಾರ ಒದಗಿಸುವುದಿಲ್ಲ. ಅದನ್ನು ದಾಟಿ ಗ್ರಾಮೀಣ ಕರ್ನಾಟಕದ ಸಮಸ್ಯೆಗಳನ್ನು ಮುಂದಿಟ್ಟುಕೊಂಡು 'ಕರ್ನಾಟಕದ ಮಾದರಿ'ಯೊಂದನ್ನು ನಿರ್ಮಿಸಬೇಕು. ಸಮಸ್ತ ಕರ್ನಾಟಕದ ವಿಚಾರಗಳನ್ನು ಮುಂದಿಟ್ಟುಕೊಂಡು ನಗರ ಗ್ರಾಮೀಣಗಳೆರಡನ್ನೂ ಬೆಸೆಯುವ ವಿನೂತನ ಮಾದರಿಯೊಂದು ಸಾಧ್ಯವೂ ಇದೆ. ಅದು ಯಶಸ್ವಿಯಾದರೆ ಕರ್ನಾಟಕಕ್ಕೆ ಘನತೆಯನ್ನೂ, ಸ್ವಾಯತ್ತತೆಯನ್ನೂ ತಂದುಕೊಡುವ ರಾಜಕೀಯ ಜಾಗೃತಿಗೆ ದಾರಿ ಮಾಡಿಕೊಡಬಲ್ಲದು.

ಆ ನಿಟ್ಟಿನಲ್ಲಿ ಕರ್ನಾಟಕದ ಎಲ್ಲಾ ಭಾಗಗಳ, ಎಲ್ಲಾ ಸಮುದಾಯಗಳ ಮತ್ತು ವಿವಿಧ ತಲೆಮಾರಿನ ಪ್ರಜ್ಞಾವಂತರು ಜೊತೆ ಸೇರಿ ಪ್ರಯತ್ನ ಮಾಡಿದರೆ ಅಂತಹದೊಂದು ಸಾಧ್ಯತೆ ತೆರೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಆದರೆ ಅದು ಇದುವರೆಗಿನ ಅರೆಬರೆ ಪ್ರಯತ್ನಗಳ ರೂಪದಲ್ಲಲ್ಲದೇ, ವಿನೂತನ ಹಾಗೂ ಪರಿಣಾಮಕಾರಿ ಪ್ರಯತ್ನವಾದರೆ ಮಾತ್ರ ಸಾಕಾರವಾಗಲು ಸಾಧ್ಯ. ❖

# ಮಜ ಮಜ ಮಜಕೂರ



• ಎಂ.ಎಸ್.ಪೂಜಾರ

## ಶಬ್ದಗಳೊಡನೆ ಸರಸ...

**ವಾರದ ವಿನೋದ**

ನಿಮಗೆ ಈಗಾಗಲೇ ವಾರದ ಏಳು ದಿನಗಳು ಗೊತ್ತು. ಆದರೆ, ನಿಮ್ಮ ಶಬ್ದ ಭಂಡಾರದಿಂದ 'ವಾರ' ಎಂಬ ಶಬ್ದದಿಂದ ಕೊನೆಗೊಳ್ಳುವ ನಾಲ್ಕು ಅಕ್ಷರಗಳ ಬೇರೆ ಏಳು ಪದಗಳನ್ನು ಹೇಳಬಲ್ಲಿರಾ? ಉದಾಹರಣೆಗೆ: ಕಾರವಾರ.


1. ___ ___ ವಾರ
2. ___ ___ ವಾರ
3. ___ ___ ವಾರ
4. ___ ___ ವಾರ
5. ___ ___ ವಾರ
6. ___ ___ ವಾರ
7. ___ ___ ವಾರ

ಮಜ ಮಜ ಮಜಕೂರದ ಮಾರ್ಚ್ 28ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ದಡ್ಡ ಚಿಕ್ಕ ಕೇಳ್ರಪ್ಪ ಕಥೆಯ

## ನೋಡಿದ್ದು ಸುಳ್ಳಾಗಬಹುದು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಒಂದೂರಿನ ಪಕ್ಕದ ಕಾಡಿನಲ್ಲಿ ಒಂದು ಮನೆಯಿತ್ತು. ಆ ಮನೆಯ ಒಡತಿ ಹೆಸರು ಗಂಗಮ್ಮ. ಕಾಡಿನ ಪರಿಸರದಲ್ಲಿ ಅವಳ ಸಂಸಾರ ಸುಖವಾಗಿ ಸಾಗಿತ್ತು




ಮನೆಯಲ್ಲಿ ಎಂದಿನಂತೆ ತನ್ನ ಪುಟ್ಟ ಮಗುವನ್ನು ಆಡಿಸುತ್ತಿದ್ದ ಅವಳಿಗೆ ನೀರು ಇಲ್ಲದಿರುವುದು ಅರಿವಿಗೆ ಬಂತು. ನೀರು ತರಲು ನಿರ್ಧರಿಸಿದಳು



ಮಗುವನ್ನು ತೊಟ್ಟಿಲಲ್ಲಿ ಹಾಕಿ, ತೂಗಿ ಮಲಗಿಸಿದ ಆಕೆ ನೀರು ತರಲು ಸಿದ್ಧವಾದಳು. ತಾನು ಸಾಕಿದ ಮುಂಗುಸಿಗೆ 'ಹುಷಾರು' ಎಂದು ಹೇಳಿಹೊರಟಳು



ಮುಂಗುಸಿ ಮಗುವನ್ನು ನೋಡಿಕೊಳ್ಳಲಿದೆ ಎಂಬ ನಿರಾಳ ಭಾವದಲ್ಲಿ ಹೊರಟ ಗಂಗಮ್ಮ, ನದಿಯಿಂದ ನೀರು ತೆಗೆದುಕೊಂಡು ವಾಪಸ್ ಮನೆಯ ಕಡೆಗೆ ಬಂದಳು



ಗಂಗಮ್ಮ ನದಿಯತ್ತ ಹೋದಾಗ ನಾಗರ ಹಾವೊಂದು ತೊಟ್ಟಿಲ ಕಡೆಗೆ ನುಸುಳಿಬಂತು. ಹೋರಾಡಿದ ಮುಂಗುಸಿ, ಹಾವನ್ನು ಕೊಂದು ಹಾಕಿತು



ನೀರು ತಂದ ಗಂಗಮ್ಮ ಮುಂಗುಸಿ ಬಾಯಿಯಲ್ಲಿ ರಕ್ತ ನೋಡಿ, ಮಗುವನ್ನು ಕೊಂದಿತೆಂದು ಸಿಟ್ಟಿನಿಂದ ಕೊಡವನ್ನು ಅದರ ಮೇಲೆ ಹಾಕಿದಳು. ಒಳಗೆ ಹೋದರೆ ಮಗು ಆಡುತ್ತಿತ್ತು

## ಗಣಿತದಲ್ಲಿ ಗರ್ದಿ ಗಮ್ಮತ್ತು

**ಹಟಮಾರಿ ವರ್ಗ ಸಂಖ್ಯೆ**

**275625**

ಇದೊಂದು ತುಂಡು ಮಾಡಿದರೂ ಮೊಂಡುತನ ಬಿಡದ ಹಟಮಾರಿ ವರ್ಗ ಸಂಖ್ಯೆ. ಇದನ್ನು ಎಡಗಡೆಯಿಂದ ಒಂದೊಂದಾಗಿ ಕಡಿಯುತ್ತಾ ಹೋಗಿರಿ. ಉಳಿಯುವ ಎಲ್ಲ ಸಂಖ್ಯೆಗಳೂ ವರ್ಗ ಸಂಖ್ಯೆಗಳೇ.

275625 = 525ರ ವರ್ಗ
75625 = 275ರ ವರ್ಗ
5625 = 75ರ ವರ್ಗ
625 = 25ರ ವರ್ಗ
25 = 5ರ ವರ್ಗ



## ಟ್ವೆಂಟಿ – 20 ಮ್ಯಾಚ್

ಎಡಭಾಗದ ವ್ಯಕ್ತಿಗಳಿಗೂ ಬಲಭಾಗದ ಪದಗಳಿಗೂ ಹೊಂದಿಸಿ



| | | | |
|---|---|---|---|
| 1 | ಭಗೀರಥ | A. | ತಂತ್ರ |
| 2. | ಭೀಷ್ಮ | B. | ಸಾಹಸ |
| 3. | ಶಕುನಿ | C. | ಯಾತನೆ |
| 4. | ಶ್ರೀಕೃಷ್ಣ | D. | ದಾನ |
| 5. | ಧ್ರುವ | E | ಹಾಸ್ಯ |
| 6. | ಯಮ | F. | ಬಲ |
| 7. | ಹರ | G. | ಶಿವಭಕ್ತಿ |
| 8. | ಚಿದಂಬರ | H. | ನೀತಿಕಥೆ |
| 9. | ಮೀರಾಬಾಯಿ | I. | ಸತ್ಯ |
| 10. | ಪ್ರಹ್ಲಾದ | J. | ಹರಿಭಕ್ತಿ |
| 11. | ಶ್ರವಣ | K. | ನಕ್ಷತ್ರ |
| 12. | ಹರಿಶ್ಚಂದ್ರ | L. | ಗಾರುಡಿ |
| 13. | ಕರ್ಣ | M. | ಕುತಂತ್ರ |
| 14. | ಚಾಣಕ್ಯ | N. | ಪ್ರಯತ್ನ |
| 15. | ಯುಸೋಪ | O. | ಪ್ರತಿಜ್ಞೆ |
| 16. | ಬೀರಬಲ್ಲ | P. | ರಹಸ್ಯ |
| 17. | ಇಂದ್ರ | Q. | ಕಾಯುವಿಕೆ |
| 18. | ಶಬರಿ | R. | ಧನುಸ್ಸು |
| 19. | ರಾವಣ | S. | ಪಿತೃಭಕ್ತಿ |
| 20. | ಭೀಮ | T. | ಭಕ್ತಿ |

## ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.



**ಪದ ಪಟ್ಟಿ**

ಬಾ ಬ ದಿ ಸ ಬಿ
ನ ಚು ಗ್ಲಾ ದಿ ಹಿ

| | | | |
|---|---|---|---|
| ◯ | ಂ | ◯ | ಮೋಸ |
| ◯ | ಂ | ◯ | ಒಂದು ಭಾಷೆ |
| ◯ | ಂ | ◯ | ಒಂದು ದೇಶ |
| ◯ | ಂ | ◯ | ಶಿವನ ವಾಹನ |
| ◯ | ಂ | ◯ | ನೆರಳು |

### ಕಳೆದ ಸಂಚಿಕೆಯ ಸರಿ ಉತ್ತರಗಳು

**ಪುಟಾಣಿ ಪದಬಂಧ**

1. ಗುಂಪು, 2. ಬಂಕ, 3. ಲಂಗ, 4. ಚಂದಾ, 5. ಗಿಂಡಿ

**ಟ್ವೆಂಟಿ–20 ಮ್ಯಾಚ್**

1-K, 2-N, 3-D, 4-F, 5-B, 6-G, 7-A, 8-H, 9-I, 10-P, 11-Q, 12-O, 13-M, 14-L, 15-R, 16-E, 17-C, 18-S, 19-T, 20-J.

### ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ತೇಜಸ್ವಿನಿ ಕೋಟಿ, ಧಾರವಾಡ



ಅನನ್ಯ ಮೋಹನ್, ಬೆಂಗಳೂರು



ಮನ್ವಿತ್ ಡಿ.ಎಂ., ಚಿಕ್ಕಮಗಳೂರು

### ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಾಜಿ ರಾಯಭಾರಿ ಬರ್ನ್ಸ್ ಅವರೊಂದಿಗೆ ಸಂವಾದದ ವೇಳೆ ರಾಹುಲ್ ಗಾಂಧಿ ಕಳವಳ

# ಭಾರತದ ವಿದ್ಯಮಾನಗಳತ್ತ ಅಮೆರಿಕ ಮೌನ


ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಭಾರತದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಗೆ ಧಕ್ಕೆ ಬಂದಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗುತ್ತಿದೆ. ಆದರೆ, ಭಾರತದಲ್ಲಿನ ಇಂಥ ಹಲವಾರು ವಿದ್ಯಮಾನಗಳ ಬಗ್ಗೆ ಅಮೆರಿಕ ಮೌನವಾಗಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಶುಕ್ರವಾರ ಹೇಳಿದರು

ಹಾರ್ವರ್ಡ್ ಕೆನಡಿ ಸ್ಕೂಲ್‌ನ ಪ್ರಾಧ್ಯಾಪಕ ಹಾಗೂ ಅಮೆರಿಕದ ಮಾಜಿ ರಾಯಭಾರಿ ನಿಕೋಲಾಸ್ ಬರ್ನ್ಸ್ ಅವರೊಂದಿಗೆ ಆನ್‌ಲೈನ್ ಮೂಲಕ ನಡೆದ ಸಂವಾದದಲ್ಲಿ 'ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳ ಮುನ್ನೋಟ' ಎಂಬ ವಿಷಯ ಕುರಿತು ಅವರು ಮಾತನಾಡಿದರು.'

'ನನ್ನ ಪ್ರಕಾರ ಅಮೆರಿಕ ಎಂಬುದು ಪ್ರಬುದ್ಧವಾದ ಚಿಂತನಾ ಕ್ರಮದ ಪ್ರತಿರೂಪ. ಸ್ವಾತಂತ್ರ್ಯ ಎಂಬುದು ನಿಮ್ಮ ಸಂವಿಧಾನದ ಮುಖ್ಯ ಆಶಯ. ಅದೇ ತಳಹದಿ. ಹೀಗಾಗಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಅದನ್ನು ರಕ್ಷಿಸುವ ಕೆಲಸ ನಿಮ್ಮಿಂದಾಗಬೇಕು' ಎಂದು ಅವರು ಅಮೆರಿಕವನ್ನು ಉದ್ದೇಶಿಸಿ ಹೇಳಿದರು.

'ರಷ್ಯಾ ಮತ್ತು ಚೀನಾದಲ್ಲಿನ ಚಟುವಟಿಕೆಗಳು ಪ್ರಜಾತಾಂತ್ರಿಕ ವ್ಯವಸ್ಥೆ ವಿರುದ್ಧವಾಗಿವೆ' ಎಂಬುದಾಗಿ ಬರ್ನ್ಸ್ ಹೇಳಿದಾಗ, ಅದಕ್ಕೆ ರಾಹುಲ್ ಗಾಂಧಿ ಮೇಲಿನಂತೆ ಪ್ರತಿಕ್ರಿಯಿಸಿದರು.

'ಇತರ ದೇಶಗಳ ವಿದ್ಯಮಾನಗಳ ಬಗ್ಗೆ ನೀವು ಮಾತನಾಡುತ್ತೀರಿ. ಆದರೆ, ಭಾರತದಲ್ಲಿನ ಆಗುಹೋಗುಗಳ ಬಗ್ಗೆ ನಿಮ್ಮಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ' ಎಂದು ಪುನರುಚ್ಚರಿಸಿದರು.

'ಭಾರತದಲ್ಲಿ ಪ್ರಸ್ತುತ ಆಡಳಿತಾರೂಢ ಪಕ್ಷ ಪ್ರಮುಖ ಸಂಸ್ಥೆಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. 2014ರ ನಂತರ ಈ ವಿದ್ಯಮಾನ ಹೆಚ್ಚಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳು ಹೇಗೆ ಕಾರ್ಯ ನಿರ್ವಹಿಸಬೇಕಿತ್ತೋ ಆ ರೀತಿ ಅವುಗಳಿಗೆ ಕಾರ್ಯನಿರ್ವಹಿಸಲು ಆಗುತ್ತಿಲ್ಲ' ಎಂದರು.

'ರಾಜಕೀಯವಾಗಿ ಬಿಜೆಪಿಯ ಮಾರ್ಗದರ್ಶಿಯಾಗಿರುವ ಆರ್‌ಎಸ್‌ಎಸ್, ದೇಶದ ಪ್ರಮುಖ ಸಂಸ್ಥೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ' ಎಂದೂ ಆರೋಪಿಸಿದರು.

'ದೇಶದಲ್ಲಿ ಈಗ ಚುನಾವಣೆಯನ್ನು ಎದುರಿಸಬೇಕು ಎಂದರೆ, ನ್ಯಾಯಾಂಗದಿಂದ ರಕ್ಷಣೆ ಸಿಗಬೇಕು, ಮಾಧ್ಯಮಗಳಿಗೆ ಸ್ವಾತಂತ್ರ್ಯ ಇರಬೇಕು, ಖರ್ಚು–ವೆಚ್ಚಗಳಿಗೆ ಸಂಬಂಧಿಸಿ ಸಮಾನ ನಿಯಮಗಳು ಅಗತ್ಯ. ಆದರೆ, ಇಂಥ ಯಾವ ಸಾಂಸ್ಥಿಕ–ಮೌಲಿಕ ವ್ಯವಸ್ಥೆಯೂ ಈಗ ದೇಶದಲ್ಲಿ ಇಲ್ಲ' ಎಂದು ಪ್ರತಿಪಾದಿಸಿದರು.

'ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕಾದ ಸಂಸ್ಥೆಗಳನ್ನು ಬಿಜೆಪಿ ಹಿಡಿತದಲ್ಲಿವೆ. ಹಣಕಾಸು ಹಾಗೂ ಮಾಧ್ಯಮಗಳ ಮೇಲೆ ಆ ಪಕ್ಷ ಬಿಗಿ ಹಿಡಿತ ಸಾಧಿಸಿದೆ. ಹೀಗಾಗಿ ಕಾಂಗ್ರೆಸ್ ಮಾತ್ರವಲ್ಲ, ಇತರ ಪಕ್ಷಗಳಾದ ಬಿಎಸ್‌ಪಿ, ಎಸ್‌ಪಿ, ಎನ್‌ಸಿಪಿ ಸಹ ಈಗ ಚುನಾವಣೆಗಳಲ್ಲಿ ಗೆಲ್ಲಲಾರದಂತಹ ಸ್ಥಿತಿ ನಿರ್ಮಾಣವಾಗಿದೆ' ಎಂದೂ ಆರೋಪಿಸಿದರು.

'ಮಾತುಕತೆ, ಚರ್ಚೆಯೇ ಭಾರತದ ಆಧಾರಸ್ತಂಭ. ಅದಕ್ಕೆ ಅವಕಾಶವೇ ಇಲ್ಲದಂತಾಗುತ್ತದೆಯೇ ಎಂಬ ಆತಂಕ ನಮ್ಮಲ್ಲಿ ಮನೆ ಮಾಡಿದೆ. ಒಂದು ವೇಳೆ ಅಂಥ ಪರಿಸ್ಥಿತಿ ನಿರ್ಮಾಣವಾದರೆ ಖಂಡಿತ ನಾವು ಭಾರಿ ಸಂಕಷ್ಟಕ್ಕೆ ಸಿಲುಕುತ್ತೇವೆ' ಎಂದೂ ರಾಹುಲ್ ಗಾಂಧಿ ಹೇಳಿದರು.

## ರಾಹುಲ್ ಮಾತಿಗೆ ತೀವ್ರ ಆಕ್ಷೇಪ, ಟೀಕೆ

'ಭಾರತದಲ್ಲಿನ ವಿದ್ಯಮಾನಗಳಿಗೆ ಸಂಬಂಧಿಸಿ ಅಮೆರಿಕ ಮೌನ ವಹಿಸಿದೆ' ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಟೀಕೆ, ಆಕ್ಷೇಪ ವ್ಯಕ್ತವಾಗಿದೆ.

ಮಾಜಿ ವಿದೇಶಾಂಗ ಕಾರ್ಯದರ್ಶಿ ಕನ್ವಲ್ ಸಿಬಲ್ ಅವರು, 'ರಾಹುಲ್ ಹೇಳಿಕೆ ಅಚ್ಚರಿ ಮೂಡಿಸಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಮೆರಿಕ ಕೀಳಾಗಿ ಅರ್ಥ ಮಾಡಿಕೊಳ್ಳುವಂತಿದೆ' ಎಂದು ಆಕ್ಷೇಪಿಸಿ ಟ್ವೀಟ್ ಮಾಡಿದ್ದಾರೆ.

'ಭಾರತ ಕುರಿತು ಇಂಥ ಪ್ರಶ್ನೆಗಳನ್ನು ಕೇಳಿದ ನಿಕೋಲಾಸ್ ಬರ್ನ್ಸ್ ಅವರ ಉದ್ದೇಶವಾದರು ಏನು' ಎಂದೂ ಪ್ರಶ್ನಿಸಿದ್ದಾರೆ.

ಆರ್‌ಎಸ್‌ಎಸ್ ಪರ ಒಲವುಳ್ಳ ಚಿಂತಕ ಗುರುಮೂರ್ತಿ ಅವರ ಪ್ರತಿಕ್ರಿಯೆಯನ್ನು ರಿಪಬ್ಲಿಕ್ ಟಿವಿ ಪ್ರಸಾರ ಮಾಡಿದೆ. 'ದೇಶದ ಚುನಾವಣಾ ಆಯೋಗ ಸ್ವತಂತ್ರವಾಗಿಯೇ ಕಾರ್ಯ ನಿರ್ವಹಿಸುತ್ತಿದೆ. ಅದಕ್ಕೆ ಮತ್ತಷ್ಟು ಸ್ವಾತಂತ್ರ್ಯ ತಂದುಕೊಟ್ಟ ಕೀರ್ತಿ ಟಿ.ಎನ್.ಶೇಷನ್ ಅವರದು. ಇಂಥ ಕ್ರಮ ಕೈಗೊಂಡರೆ ಮಾತ್ರ ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆ ಭಾರತದ ವ್ಯವಸ್ಥೆಯನ್ನು ಸರಿಗಟ್ಟಲು ಸಾಧ್ಯ' ಎಂದು ತಿರುಗೇಟು ನೀಡಿದ್ದಾರೆ.

ಬಿಜೆಪಿ ವಕ್ತಾರ ಗೌರವ್ ಭಾಟಿಯಾ, 'ರಾಹುಲ್ ಗಾಂಧಿ ಅವರಿಗೆ ಭಾರತದ 'ಸಿ' (ಕಾನ್‌ಸ್ಟಿಟ್ಯೂಷನ್), 'ಡಿ' (ಡೆಮಾಕ್ರಸಿ) ಎಂದರೆ ಏನು ಎಂಬುದೇ ಗೊತ್ತಿಲ್ಲ' ಎಂದು ಹೇಳಿದ್ದಾರೆ.

## ಆರ್‌ಎಸ್‌ಎಸ್ ದಾಳಿ ಕಲಿಸಿದರೆ...


ನವದೆಹಲಿ: 'ಆರ್‌ಎಸ್‌ಎಸ್ ದಾಳಿ ಮಾಡುವಂತೆ ಬೋಧನೆ ಮಾಡುತ್ತದೆ. ಆದರೆ, ಅಹಿಂಸಾ ಮಾರ್ಗದಲ್ಲಿ ನಡೆಸುವ ಸತ್ಯಾಗ್ರಹ ರೈತರನ್ನು ಮತ್ತಷ್ಟು ನಿರ್ಭೀತರನ್ನಾಗಿ ಮಾಡುತ್ತದೆ' ಎಂದು ರಾಹುಲ್ ಗಾಂಧಿ ಅವರು ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಶನಿವಾರ ಟ್ವೀಟ್ ಮಾಡಿದ್ದಾರೆ.

'ನೂತನ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವವರೆಗೆ ಕಾಂಗ್ರೆಸ್ ಹೋರಾಟ ಮುಂದುವರಿಸುವುದು. ಆರ್‌ಎಸ್ ಎಸ್ ವಿರುದ್ಧವೂ ಪಕ್ಷ ಹೋರಾಡಲಿದೆ' ಎಂದು ಹೇಳಿದ್ದಾರೆ.

ರಾಜಸ್ಥಾನದಲ್ಲಿ ರೈತ ಮುಖಂಡ ರಾಕೇಶ್ ಟಿಕಾಯತ್ ಹಾಗೂ ಅವರ ಬೆಂಬಲಿಗರಿದ್ದ ವಾಹನಗಳ ಮೇಲೆ ಶುಕ್ರವಾರ ಕೆಲವು ದುಷ್ಕರ್ಮಿಗಳು ಕಲ್ಲುಗಳನ್ನು ಎಸೆದಿದ್ದಾರೆ. ಈ ಘಟನೆಯಲ್ಲಿ ಟಿಕಾಯತ್ ಅವರ ಕಾರಿನ ಹಿಂದಿನ ಕಿಟಕಿ ಗಾಜುಗಳು ಒಡೆದಿವೆ. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ವಿದ್ಯಾರ್ಥಿ ಮುಖಂಡನನ್ನು ಬಂಧಿಸಿದ್ದಾರೆ. ಬಂಧಿತ ಯುವಕ ಬಿಜೆಪಿಯ ವಿದ್ಯಾರ್ಥಿ ಘಟಕವಾದ ಎಬಿವಿಪಿಗೆ ಸೇರಿದ್ದಾನೆ ಎಂದು ಭಾರತೀಯ ಕಿಸಾನ್ ಯೂನಿಯನ್ ಹೇಳಿದೆ.

**ಮತ್ತಷ್ಟು ಗಟ್ಟಿಗೊಳಿಸುತ್ತವೆ:** (ಅಲಿಗಡ ಪಿಟಿಐ): 'ಬಿಜೆಪಿ ಕಾರ್ಯಕರ್ತರು ತಮ್ಮ ವಾಹನಗಳ ಮೇಲೆ ಪೂರ್ವಯೋಜಿತ ದಾಳಿ ನಡೆಸಿದ್ದಾರೆ' ಎಂದು ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್ ಹೇಳಿದ್ದಾರೆ.

ಭೈಮಲಖೇಡ ಗ್ರಾಮದಲ್ಲಿ 'ಕಿಸಾನ್ ಮಹಾಪಂಚಾಯತ್' ಉದ್ದೇಶಿಸಿ ಮಾತನಾಡಿದ ಅವರು, 'ನಮ್ಮ ಹೋರಾಟ ಮತ್ತಷ್ಟು ತೀವ್ರಗೊಳಿಸಬೇಕು ಎಂಬ ನಮ್ಮ ಸಂಕಲ್ಪವನ್ನು ಇಂಥ ದಾಳಿಗಳು ಮತ್ತಷ್ಟು ಗಟ್ಟಿಗೊಳಿಸುತ್ತವೆ' ಎಂದಿದ್ದಾರೆ.



## ಸುಡುಬಿಸಿಲು...

ಆಗ್ರಾದ ತಾಜ್‌ಮಹಲ್‌ಗೆ ಭೇಟಿ ನೀಡಿದ ಪ್ರವಾಸಿಗರೊಬ್ಬರು ಶನಿವಾರ ಬಿಸಿಲ ಬೇಗೆ ತಾಳಲಾರದೇ ಕೊಡೆ ಹಿಡಿದು ಸಾಗಿದರು –ಪಿಟಿಐ ಚಿತ್ರ



## ಛತ್ತೀಸ್‌ಗಡ: ಐವರು ಯೋಧರು ಹುತಾತ್ಮ

ರಾಯ್‌ಪುರ (ಪಿಟಿಐ): ಛತ್ತೀಸ್‌ಗಡದ ಬಿಜಾಪುರ ಜಿಲ್ಲೆಯಲ್ಲಿ ಶನಿವಾರ ಮಾವೋವಾದಿ ನಕ್ಸಲರೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಯ ಐವರು ಸಿಬ್ಬಂದಿ ಸಾವನ್ನಪ್ಪಿದ್ದು, 12 ಯೋಧರು ಗಾಯಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಎನ್‌ಕೌಂಟರ್ ಸ್ಥಳದಲ್ಲಿ ಮಹಿಳಾ ನಕ್ಸಲ್‌ವೊಬ್ಬರ ಮೃತದೇಹ ದೊರೆತಿದೆ. ಗುಂಡಿನ ಚಕಮಕಿಯಲ್ಲಿ ಮಾವೋವಾದಿ ನಕ್ಸಲರು ತೀವ್ರ ನಷ್ಟ ಅನುಭವಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಮಾವೋವಾದಿ ನಕ್ಸಲರ ಭದ್ರಕೋಟೆಗಳೆಂದು ಪರಿಗಣಿಸಲಾಗಿರುವ ದಕ್ಷಿಣ ಬಸ್ತಾರ್ ಕಾಡುಗಳಲ್ಲಿನ ಬಿಜಾಪುರ ಮತ್ತು ಸುಕ್ಮಾ ಜಿಲ್ಲೆಗಳಲ್ಲಿ ಭದ್ರತಾ ಪಡೆಗಳು ಶುಕ್ರವಾರ ರಾತ್ರಿಯಿಂದಲೇ ನಕ್ಸಲ್ ವಿರೋಧಿ ಕಾರ್ಯಾಚರಣೆ ಕೈಗೊಂಡಿವೆ.ಈ ಸಂದರ್ಭದಲ್ಲೇ ನಕ್ಸಲರು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಛತ್ತೀಸ್‌ಗಡದ ಪೊಲೀಸ್ ಮಹಾ ನಿರ್ದೇಶಕ ಡಿ.ಎಂ. ಅವಸ್ಥಿ ತಿಳಿಸಿದ್ದಾರೆ.

### ಸಂಕ್ಷಿಪ್ತ ಸುದ್ದಿ

## ವಾಜೆ ಬಂಧನ ಅವಧಿ ಏ.7ರವರೆಗೆ ವಿಸ್ತರಣೆ

ಮುಂಬೈ (ಪಿಟಿಐ): ಬಂಧಿತ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಎನ್‌ಐಎ ವಶಕ್ಕೆ ಒಪ್ಪಿಸಿದ್ದ ಅವಧಿಯನ್ನು ವಿಶೇಷ ಎನ್‌ಐಎ ಕೋರ್ಟ್ ಏಪ್ರಿಲ್ 7ರವರೆಗೂ ವಿಸ್ತರಿಸಿದೆ. ಆರು ದಿನಗಳು ವಾಜೆ ಅವರನ್ನು ತನ್ನ ವಶಕ್ಕೆ ಒಪ್ಪಿಸಬೇಕು ಎಂದು ತನಿಖಾ ಸಂಸ್ಥೆಯು ಕೋರ್ಟ್‌ಗೆ ಕೇಳಿತ್ತು.

ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಹಾಗೂ ಉದ್ಯಮಿ ಮನ್‌ಸುಖ್ ಹಿರೇನ್ ಶಂಕಾಸ್ಪದ ಸಾವಿನ ಪ್ರಕರಣದ ಸಂಬಂಧ ವಾಜೆ ಅವರನ್ನು ಎನ್‌ಐಎ ಬಂಧಿಸಿದೆ. ಈ ಮೊದಲು ಅವರನ್ನು ಮಾರ್ಚ್ 13ರಂದು ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು.

## ಎಂಎನ್‌ಎಸ್ ನಾಯಕನ ಕೊಲೆ ಆರೋಪಿ ಬಂಧನ

ಲಖನೌ: 2020ರ ನವೆಂಬರ್‌ನಲ್ಲಿ ಮಹಾರಾಷ್ಟ್ರ ನವನಿರ್ಮಾಣ ಸೇನಾದ (ಎಂಎನ್‌ಎಸ್) ನಾಯಕರೊಬ್ಬರನ್ನು ಕೊಲೆ ಮಾಡಿದ ಆರೋಪಿಯನ್ನು ಶನಿವಾರ ಪೊಲೀಸರು ಬಂಧಿಸಿದ್ದಾರೆ.

2020ರ ನ. 23ರಂದು ಠಾಣೆ ಜಿಲ್ಲೆಯಲ್ಲಿ ಎಂಎನ್‌ಎಸ್ ನಾಯಕ ಮತ್ತು ಆರ್‌ಟಿಐ ಕಾರ್ಯಕರ್ತ ಜಮೀಲ್ ಅಹಮ್ಮದ್ ಶೇಖ್ ಅವರನ್ನು ಕೊಲೆ ಮಾಡಲಾಗಿತ್ತು.

'ಎನ್‌ಸಿಪಿ ಮುಖಂಡರ ಸೂಚನೆಯ ಮೇರೆಗೆ ಜಮೀಲ್‌ನನ್ನು ಕೊಲೆ ಮಾಡಿದೆ ಎಂದು ಆರೋಪಿ ಇರ್ಫಾನ್ ಸೋನು ಶೇಖ್ ಮನ್ಸೂರಿ ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾನೆ' ಎಂದು ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆಯು (ಎಸ್‌ಟಿಎಫ್) ತಿಳಿಸಿದೆ.


'ಖಚಿತ ಸುಳಿವಿನ ಆಧಾರದ ಮೇರೆಗೆ ಮನ್ಸೂರಿಯನ್ನು ಕಥೌಟ ಕೆರೆಯ ಬಳಿ ಬಂಧಿಸಲಾಗಿದೆ. ಜಮೀಲ್‌ನನ್ನು ಕೊಂದಿದ್ದಕ್ಕೆ ಒಸಾಮ ಎನ್ನುವ ವ್ಯಕ್ತಿಯು ನನಗೆ ₹ 2 ಲಕ್ಷ ನೀಡಿದ್ದ' ಎಂದೂ ಆರೋಪಿ ಮನ್ಸೂರಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ.

## ಅತ್ಯಾಚಾರ: 25 ವರ್ಷದ ನಂತರ ಸಿಕ್ಕಿಬಿದ್ದ ಅಪರಾಧಿ

ಮುಜಾಫರ್ ನಗರ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಕೋರ್ಟ್ ಶಿಕ್ಷೆ ಪ್ರಕಟಿಸುವ ಹಿಂದಿನ ದಿನ ತಪ್ಪಿಸಿಕೊಂಡಿದ್ದ ಅಪರಾಧಿಯೊಬ್ಬ 25 ವರ್ಷದ ನಂತರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಶಹೀದ್ ಹಸನ್ ಬಂಧಿತ ಅಪರಾಧಿ.

ಅಪಹರಣ ಮತ್ತು ಅತ್ಯಾಚಾರ ಪ್ರಕರಣದಲ್ಲಿ 1995ರಲ್ಲಿ ಬಂಧಿತನಾಗಿದ್ದ, ಶಿಕ್ಷೆ ಪ್ರಕಟಿಸುವ ಹಿಂದಿನ ದಿನ ತಪ್ಪಿಸಿಕೊಂಡಿದ್ದು, ಈತನ ಸಹಚರರಿಗೆ ಅದೇ ಪ್ರಕರಣದಲ್ಲಿ 10 ವರ್ಷ ಶಿಕ್ಷೆಯಾಗಿತ್ತು ಎಂದು ಪೊಲೀಸರು ಶನಿವಾರ ತಿಳಿಸಿದರು.

## ವಿಜ್ಞಾನಿ ನಂಬಿ ನಾರಾಯಣನ್ ಅಕ್ರಮ ಬಂಧನ: 'ಸುಪ್ರೀಂ'ಗೆ ವರದಿ ಸಲ್ಲಿಕೆ


ಡಾ.ನಂಬಿ ನಾರಾಯಣನ್

ನವದೆಹಲಿ (ಪಿಟಿಐ): ಬೇಹುಗಾರಿಕೆಯಲ್ಲಿ ತೊಡಗಿದ್ದರು ಎಂಬ ಆರೋಪದ ಮೇಲೆ, ಇಸ್ರೊದಲ್ಲಿ ವಿಜ್ಞಾನಿಯಾಗಿದ್ದ ಡಾ.ನಂಬಿ ನಾರಾಯಣನ್ ಅವರನ್ನು ಅಕ್ರಮವಾಗಿ ಬಂಧಿಸಿಟ್ಟು, ಅವರಿಗೆ ಭಾರಿ ಮುಜುಗರ ಹಾಗೂ ಯಾತನೆ ಆಗುವಂತೆ ಮಾಡಿದ್ದ ಪೊಲೀಸ್ ಅಧಿಕಾರಿಗಳ ವಿರುದ್ಧ ನಡೆಸಿದ ಉನ್ನತ ಮಟ್ಟದ ತನಿಖೆಯ ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿದೆ.

ಸಮಿತಿಯು ಮುಚ್ಚಿದ ಲಕೋಟೆಯಲ್ಲಿ ತನ್ನ ವರದಿಯನ್ನು ಇತ್ತೀಚೆಗೆ ಸಲ್ಲಿಸಿದೆ ಎಂದು ಮೂಲಗಳು ಹೇಳಿವೆ.

ಡಾ.ನಾರಾಯಣನ್ ಅವರ 'ಅಕ್ರಮ ಬಂಧನ' ಕುರಿತಂತೆ ಉನ್ನತ ಮಟ್ಟದ ತನಿಖೆ ನಡೆಸಲು ಸುಪ್ರೀಂಕೋರ್ಟ್ 2018ರ ಸೆ. 14ರಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಿ.ಕೆ. ಜೈನ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು.

ಅಲ್ಲದೇ, ನಾರಾಯಣನ್ ಅವರಿಗೆ ₹ 50 ಲಕ್ಷ ಪರಿಹಾರ ನೀಡುವಂತೆ ಕೇರಳ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿತ್ತು.

ದೇಶದ ಬಾಹ್ಯಾಕಾಶ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಇತರ ಮೂವರೊಂದಿಗೆ ಸೇರಿ ವಿದೇಶಗಳಿಗೆ ಮಾರಾಟ ಮಾಡಿದ ಆರೋಪದ ಮೇಲೆ ನಾರಾಯಣನ್ ಅವರನ್ನು 1994ರಲ್ಲಿ ಬಂಧಿಸಲಾಗಿತ್ತು. ಆಗ ಅವರು, ಇಸ್ರೊದ ಕ್ರಯೋಜೆನಿಕ್ ಪ್ರಾಜೆಕ್ಟ್‌ನ ನಿರ್ದೇಶಕರಾಗಿದ್ದರು.

'ಕೇರಳ ಪೊಲೀಸರು ಇಡೀ ಪ್ರಕರಣವನ್ನು ತಿರುಚಿ, ನನ್ನ ವಿರುದ್ಧ ಆರೋಪ ಹೊರಿಸಿದ್ದಾರೆ. ನಾನು ಮಾರಾಟ ಮಾಡಲು ಕಳುವು ಮಾಡಿದ್ದೇನೆ ಎನ್ನಲಾದ ತಂತ್ರಜ್ಞಾನ ಆ ವೇಳೆ (1994ರಲ್ಲಿ) ಅಸ್ತಿತ್ವದಲ್ಲಿಯೇ ಇರಲಿಲ್ಲ' ಎಂದು ನಾರಾಯಣನ್ ಹೇಳಿದ್ದರು.

ಈ ಹಿನ್ನೆಲೆಯಲ್ಲಿ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು. ತನಿಖೆ ನಡೆಸಿದ್ದ ಸಿಬಿಐ, ನಾರಾಯಣನ್ ಅವರನ್ನು ದೋಷಮುಕ್ತರನ್ನಾಗಿ ಮಾಡಿತ್ತು.


ಜಿಲ್ಲಾ, ಮಂಡಲ ಪರಿಷತ್ ಚುನಾವಣೆ ಬಹಿಷ್ಕಾರ: ನಾಯ್ಡು

## ಟಿಡಿಪಿಯಲ್ಲಿ ಅಸಮಾಧಾನ ಸ್ಫೋಟ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಜಿಲ್ಲಾ ಮತ್ತು ಮಂಡಲ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಏಪ್ರಿಲ್ 8ರಂದು ನಡೆಯಲಿರುವ ಮತದಾನವನ್ನು ಬಹಿಷ್ಕರಿಸಬೇಕೆಂಬ ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರ ನಿರ್ಧಾರ, ಪಕ್ಷದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಕೆಲವು ಹಿರಿಯ ನಾಯಕರು ಬಹಿರಂಗವಾಗಿಯೇ ಈ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಹುತೇಕ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಕಣದಲ್ಲಿ ಉಳಿಯಲು ಒಲವು ಹೊಂದಿದ್ದಾರೆ. ಅಭ್ಯರ್ಥಿಗಳ ಈ ನಿಲುವನ್ನು ಸ್ಥಳೀಯ ಮುಖಂಡರೂ ಬೆಂಬಲಿಸಿದ್ದಾರೆ.


ಚಂದ್ರಬಾಬು ನಾಯ್ಡು

ಜಿಲ್ಲಾ ಮತ್ತು ಮಂಡಲ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಹೊಸದಾಗಿ ಅಧಿಸೂಚನೆ ಹೊರಡಿಸಬೇಕು ಎಂದು ನಾಯ್ಡು ಆಗ್ರಹಿಸಿದ್ದರು.

'ಚುನಾವಣಾ ಪ್ರಕ್ರಿಯೆ ಮೇಲೆ ಸಂಪೂರ್ಣ ವಿಶ್ವಾಸ ಕಳೆದುಕೊಂಡಿದ್ದೇವೆ. ನೂತನ ರಾಜ್ಯ ಚುನಾವಣಾ ಆಯುಕ್ತೆ ನೀಲಂ ಸಾಹ್ನಿ ಅವರು ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ' ಎಂದು ನಾಯ್ಡು ಅವರು ಶುಕ್ರವಾರ ಟೀಕಿಸಿದ್ದರು.

ಇದರ ಬೆನ್ನಲ್ಲೇ, ಪರಿಷತ್‌ಗಳಿಗೆ ನಡೆಯುವ ಮತದಾನದಿಂದ ಪಕ್ಷವು ದೂರ ಉಳಿಯಲಿದೆ ಎಂದೂ ಘೋಷಿಸಿದ್ದರು.

ಚಂದ್ರಬಾಬು ನಾಯ್ಡು ಅವರಿಂದ ಇಂಥ 'ಕಠಿಣ ನಿರ್ಧಾರ' ಹೊರಬಿದ್ದ ಬೆನ್ನಲ್ಲೇ, ಕೇಂದ್ರದ ಮಾಜಿ ಸಚಿವರೂ ಆದ ಪಕ್ಷದ ಮುಖಂಡ ಅಶೋಕ್ ಗಜಪತಿರಾಜು ಅಸಮಾಧಾನ ಹೊರಹಾಕಿದ್ದಾರೆ.

'ಇಂಥ ನಿರ್ಧಾರವನ್ನು ಘೋಷಿಸುವ ಮುನ್ನ ವರಿಷ್ಠರು ಪಕ್ಷದ ಕಾರ್ಯಕರ್ತರೊಂದಿಗೆ ಸುದೀರ್ಘ ಸಮಾಲೋಚನೆ ಮಾಡಬೇಕಿತ್ತು' ಎಂದು ಪ್ರತಿಕ್ರಿಯಿಸಿದ್ದಾರೆ.

ಅಶೋಕ್ ಗಜಪತಿರಾಜು ಅವರ ಪುತ್ರಿ ಅದಿತಿ ಗಜಪತಿರಾಜು ಸೇರಿದಂತೆ ವಿಜಯನಗರಂ ಜಿಲ್ಲೆಯ ಮುಖಂಡರು ಸಹ ಚಂದ್ರಬಾಬು ನಾಯ್ಡು ಅವರ ಮಾತಿಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಪಕ್ಷದ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಇರಲಿದ್ದಾರೆ ಎಂದು ಘೋಷಿಸಿದ್ದಾರೆ.

## ನ್ಯಾಯಮೂರ್ತಿ ಮಾರ್ಕಂಡೇಯ ಕಟ್ಜು ವಿರುದ್ಧ ನ್ಯಾಯಾಂಗ ನಿಂದನೆಗೆ ಅನುಮತಿ ಕೋರಿಕೆ

ಪ್ರಜಾವಾಣಿ ವಾರ್ತೆ


ನ್ಯಾ. ಕಟ್ಜು

ನವದೆಹಲಿ: ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಕಟ್ಜು ಅವರ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ನೀಡುವಂತೆ ಕೋರಿ ವಕೀಲ ರೊಬ್ಬರು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಶನಿವಾರ ಮನವಿ ಸಲ್ಲಿಸಿದ್ದಾರೆ.

ವಕೀಲ ಅಲಖ್ ಅಲೋಕ್ ಶ್ರೀವಾಸ್ತವ ಈ ಅರ್ಜಿ ಸಲ್ಲಿಸಿದ್ದಾರೆ. ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿ ಹಸ್ತಾಂತರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಮೂರ್ತಿ ಕಟ್ಜು ಅವರು ಸುಪ್ರೀಂಕೋರ್ಟ್ ವಿರುದ್ಧ ನಿಂದನಾತ್ಮಕ ಹೇಳಿಕೆ ನೀಡಿ, ಅದರ ಘನತೆಗೆ ಕುಂದು ತಂದಿದ್ದಾರೆ ಎಂಬುದು ವಕೀಲ ಶ್ರೀವಾಸ್ತವ ಅವರ ಆರೋಪ.

ಇದಕ್ಕೂ ಮುನ್ನ, ಶ್ರೀವಾಸ್ತವ ಅವರು ಅನುಮತಿ ಕೋರಿ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ ಅವರಿಗೆ ಮನವಿ ಸಲ್ಲಿಸಿದ್ದರು.

'ಕಳೆದ 16 ವರ್ಷಗಳಿಂದ ನಾನು ನ್ಯಾಯಮೂರ್ತಿ ಕಟ್ಜು ಅವರೊಂದಿಗೆ ಒಡನಾಟ ಹೊಂದಿದ್ದೇನೆ. ಈಗಲೂ ಪರಸ್ಪರ ಸಂಪರ್ಕದಲ್ಲಿಯೂ ಇದ್ದೇವೆ. ಈ ಹಿನ್ನೆಲೆಯಲ್ಲಿ ನೀವು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ನನ್ನ ನಿರ್ಧಾರ ತಿಳಿಸುವುದು ಸಮಂಜಸ ಎನಿಸುವುದಿಲ್ಲ' ಎಂದು ವೇಣುಗೋಪಾಲ ಅವರು ಮಾರ್ಚ್ 30ರಂದು ಶ್ರೀವಾಸ್ತವ ಅವರಿಗೆ ಪತ್ರ ಬರೆದ ಪತ್ರದಲ್ಲಿ ವಿವರಿಸಿದ್ದರು.

'ಈ ವಿಷಯ ಕುರಿತ ಅನುಮತಿಗಾಗಿ ಸಾಲಿಸಿಟರ್ ಜನರಲ್ ಮೆಹ್ತಾ ಅವರನ್ನು ಸಂಪರ್ಕಿಸುವಂತೆಯೂ' ಅವರು ಪತ್ರದಲ್ಲಿ ಉಲ್ಲೇಖಿಸಿದ್ದರು.

ಈ ಹಿನ್ನೆಲೆಯಲ್ಲಿ ವಕೀಲ ಶ್ರೀವಾಸ್ತವ ಅವರು ಸಾಲಿಸಿಟರ್ ಜನರಲ್ ಮೆಹ್ತಾ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ.

### ಮುಖ್ಯಾಂಶಗಳು

- ಸಾಲಿಸಿಟರ್ ಜನರಲ್ ಅವರಿಗೆ ಮನವಿ ಸಲ್ಲಿಕೆ
- ಸುಪ್ರೀಂ ಕೋರ್ಟ್ ಘನತೆಗೆ ಕುಂದು ತಂದ ಆರೋಪ
- ವಕೀಲ ಶ್ರೀವಾಸ್ತವ ಅವರಿಂದ ಅರ್ಜಿ

ಉತ್ತರ ಪ್ರದೇಶದ ಮೀರತ್ ಘಟನೆಯಲ್ಲಿ ಬಂಧಿತರಾಗಿದ್ದ ಇಬ್ಬರು

## ಅತ್ಯಾಚಾರ ಪ್ರಕರಣ: ಪಾರಾಗಲು ಯತ್ನ– ಆರೋಪಿಗೆ ಗುಂಡು

ಮೀರತ್/ನವದೆಹಲಿ: ಹತ್ತನೇ ತರಗತಿ ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಸಂಬಂಧ ಬಂಧಿಸಲಾಗಿದ್ದ ಇಬ್ಬರು ಆರೋಪಿಗಳು ಕೋರ್ಟ್‌ಗೆ ಕರೆದೊಯ್ಯುವಾಗ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಮತ್ತೆ ಸೆರೆ ಹಿಡಿಯುವ ಯತ್ನದಲ್ಲಿ ಪೊಲೀಸರು ಗುಂಡು ಹಾರಿಸಿದ್ದು, ಒಬ್ಬನಿಗೆ ಪೆಟ್ಟಾಗಿದೆ.

ನಾಲ್ವರು ಆರೋಪಿಗಳಲ್ಲಿ ಲಖನ್ ಮತ್ತು ವಿಕಾಸ್ ಅವರನ್ನು ಬಂಧಿಸಲಾಗಿತ್ತು. ಕೋರ್ಟ್‌ಗೆ ಹಾಜರುಪಡಿಸಲು ಒಯ್ಯುವಾಗ ಇನ್‌ಸ್ಪೆಕ್ಟರ್‌ರ ಪಿಸ್ತೂಲು ಕಸಿದುಕೊಂಡು ಪರಾರಿಯಾಗಿದ್ದರು. ಹಿಡಿಯಲು ಮುಂದಾಗಿದ್ದ ಪೊಲೀಸರ ಮೇಲೇ ಗುಂಡು ಹಾರಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಮೇಲೆ ಲಖನ್ ಗುಂಡು ಹಾರಿಸಿದ್ದ. ಪೊಲೀಸರೂ ಪ್ರತಿಯಾಗಿ ಗುಂಡು ಹಾರಿಸಿದ್ದು, ಲಖನ್‌ನ ಕಾಲಿಗೆ ಬಿದ್ದಿತ್ತು. ಬಳಿಕ ಇಬ್ಬರನ್ನು ಮತ್ತೆ ಬಂಧಿಸಿದ್ದು, ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಮೀರತ್ ಗ್ರಾಮೀಣ ವಿಭಾಗದ ಎಸ್‌ಪಿ ಕೇಶವ್ ಕುಮಾರ್ ತಿಳಿಸಿದರು.

**ಘಟನೆ ವಿವರ:** ಪರಿಶಿಷ್ಟ ಜಾತಿಯ 10ನೇ ತರಗತಿ ವಿದ್ಯಾರ್ಥಿನಿಯೊಬ್ಬರ ಮೇಲೆ, ಸಹಪಾಠಿ ಸೇರಿ ನಾಲ್ವರು ಪಾಳುಬಿದ್ದಿದ್ದ ಮನೆಯೊಂದಕ್ಕೆ ಕರೆದೊಯ್ದು ಸಾಮೂಹಿಕವಾಗಿ ಅತ್ಯಾಚಾರ ಎಸಗಿದ್ದು, ಬಾಲಕಿ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದರು.

ಮನೆಯಲ್ಲಿ ಪೋಷಕರಿಗೆ ಘಟನೆ ತಿಳಿಸಿದ್ದ ಬಾಲಕಿ ಕೊಠಡಿಗೆ ತೆರಳಿ ಕದ ಹಾಕಿಕೊಂಡಿದ್ದು, ವಿಷ ಸೇವಿಸಿದ್ದರು. ಅದಕ್ಕೂ ಮುನ್ನ ಪತ್ರ ಬರೆದಿದ್ದು, ಇಬ್ಬರು ಆರೋಪಿಗಳ ಹೆಸರನ್ನು ಉಲ್ಲೇಖಿಸಿದ್ದರು. ಅದರ ಆಧಾರದಲ್ಲಿ ಇಬ್ಬರನ್ನೂ ಪೊಲೀಸರು ಬಂಧಿಸಿದ್ದರು.

ಆರೋಪಿಗಳೇ ಬಾಲಕಿಗೆ ವಿಷ ಕುಡಿಸಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ. ಪತ್ರ ಬಾಲಕಿಯೇ ಬರೆದಿದ್ದೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಪರಿಣತರು ಕೈಬರಹ ಪರಿಶೀಲಿಸಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯ ಕುರಿತು ವಿರೋಧಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ. ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್, ಮುಖ್ಯಮಂತ್ರಿ ವಿರುದ್ಧ ಹರಿಹಾಯ್ದಿದ್ದು ಬಿಜೆಪಿ ಪರವಾಗಿ ಪ್ರಚಾರಕ್ಕೆ ಬದಲಾಗಿ ರಾಜ್ಯದಲ್ಲಿ ಅಪರಾಧ ಪ್ರಕರಣಗಳ ತಡೆಗೆ ಹೆಚ್ಚಿನ ಸಮಯ ವಿನಿಯೋಗಿಸಬೇಕು ಎಂದಿದ್ದಾರೆ. ರಾಜ್ಯದಲ್ಲಿ ಮಹಿಳೆಯ ವಿರುದ್ಧದ ದೌರ್ಜನ್ಯ ತಡೆಯಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ವಿಫಲವಾಗಿದೆ ಎಂದು ಸಮಾಜವಾದಿ ಪಕ್ಷದ ಹಿರಿಯ ನಾಯಕ ಸುನಿಲ್ ಸಿಂಗ್ ಸಜ್ಜನ್ ತರಾಟೆಗೆ ತೆಗೆದುಕೊಂಡಿದ್ದಾರೆ.

# ಕೋವಿಡ್: ಐಸಿಯು ದಾಖಲಾತಿ ಏರಿಕೆ

## ನಾಲ್ಕನೇ ದಿನವೂ ನಾಲ್ಕು ಸಾವಿರಕ್ಕೂ ಅಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪೀಡಿತರಲ್ಲಿ ಶನಿವಾರ ಒಂದೇ ದಿನ 58 ಮಂದಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗಿದ್ದಾರೆ. ಇದರಿಂದಾಗಿ ಸದ್ಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರ ಸಂಖ್ಯೆ 327ಕ್ಕೆ ಏರಿಕೆಯಾಗಿದೆ.

ಸತತ ನಾಲ್ಕನೇ ದಿನ ಕೂಡ ರಾಜ್ಯದಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. 24 ಗಂಟೆಗಳ ಅವಧಿಯಲ್ಲಿ 4,373 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಸಂಖ್ಯೆ 10.10 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 5 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ ಮತ್ತೆ 3,002 ಮಂದಿ ಸೋಂಕಿತರಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 4.44 ಲಕ್ಷ ದಾಟಿದೆ. ಬೀದರ್ (172), ಮೈಸೂರು (171), ತುಮಕೂರು (167), ಕಲಬುರ್ಗಿ (151) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಕಳೆದೊಂದು ತಿಂಗಳಿನಿಂದ ಹೊಸ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದರಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 36,614ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 19 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ತಲಾ 6 ಮಂದಿ, ಹಾಸನದಲ್ಲಿ 3 ಮಂದಿ, ಮಂಡ್ಯದಲ್ಲಿ ಇಬ್ಬರು, ತುಮಕೂರು, ಕಲಬುರ್ಗಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 12,610ಕ್ಕೆ ತಲುಪಿದೆ.


ಕೋವಿಡ್ ಪರೀಕ್ಷೆಗಳ ಸಂಖ್ಯೆ ಕೂಡ ಏರಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 1.23 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಕಳೆದ ಎರಡು ತಿಂಗಳಲ್ಲಿ ನಡೆಸಲಾದ ಗರಿಷ್ಠ ಪರೀಕ್ಷೆಗಳು ಇವಾಗಿವೆ. ಕೊರೊನಾ ಸೋಂಕಿತರಲ್ಲಿ 1,959 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.61 ಲಕ್ಷ ದಾಟಿದೆ.

### ಒಂದೇ ದಿನ 2.05 ಲಕ್ಷ ಮಂದಿಗೆ ಲಸಿಕೆ

**ಬೆಂಗಳೂರು:** ರಾಜ್ಯದಲ್ಲಿ ಶನಿವಾರ 45 ರಿಂದ 60 ವರ್ಷದೊಳಗಿನ 1.11 ಲಕ್ಷ ಮಂದಿ ಸೇರಿದಂತೆ 2.05 ಲಕ್ಷ ಮಂದಿಗೆ ಕೋವಿಡ್ ಲಸಿಕೆ ವಿತರಿಸಲಾಗಿದೆ. ಒಂದು ದಿನದ ಅವಧಿಯಲ್ಲಿ ಲಸಿಕೆ ಪಡೆದವರ ಗರಿಷ್ಠ ಸಂಖ್ಯೆಗಳು ಇವಾಗಿವೆ.

ಆರೋಗ್ಯ ಉಪ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ 4,789 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ನಡೆದಿದೆ. ಹಿರಿಯ ನಾಗರಿಕರಲ್ಲಿ 80,217 ಮಂದಿ ಮೊದಲ ಡೋಸ್ ಹಾಗೂ 3,673 ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡರು. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಈವರೆಗೆ 42.97 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.67 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.47 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ 21.51 ಲಕ್ಷ ತಲುಪಿದೆ. ಅವರಲ್ಲಿ 10,493 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಮುಂಚೂಣಿ ಕೋವಿಡ್ ಯೋಧರಲ್ಲಿ 2.45 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.




## ಮ್ಯಾನ್ಮಾರ್ ದಂಗೆ: ಮೃತ ನಾಗರಿಕರ ಸಂಖ್ಯೆ 550ಕ್ಕೆ ಏರಿಕೆ

**ಯಾಂಗೂನ್ (ಎಪಿ):** ಮ್ಯಾನ್ಮಾರ್‌ನಲ್ಲಿ ಮಿಲಿಟರಿ ದಂಗೆ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಹತ್ತಿಕ್ಕಲು ಸೇನೆ ನಡೆಸುತ್ತಿರುವ ದೌರ್ಜನ್ಯದಿಂದ ಮೃತಪಟ್ಟ ನಾಗರಿಕರ ಸಂಖ್ಯೆ 550ಕ್ಕೆ ತಲುಪಿದೆ ಎಂದು ಮಾನವ ಹಕ್ಕುಗಳ ಗುಂಪು ತಿಳಿಸಿದೆ.

ಸತ್ತವರಲ್ಲಿ 46 ಮಕ್ಕಳು ಸೇರಿದ್ದಾರೆ. ಸುಮಾರು 2751 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಶಕ್ಕೆ ಪಡೆದಿರುವವರಲ್ಲಿ ಕೆಲವರು ಶಿಕ್ಷೆಗೊಳಗಾಗಿರಬಹುದು ಎಂದು ಈ ಗುಂಪು ಮಾಹಿತಿ ನೀಡಿದೆ.

ಮಿಲಿಟರಿ ಆಡಳಿತ ಎಷ್ಟೇ ಪ್ರಯತ್ನಿಸುತ್ತಿದ್ದರೂ ಪ್ರತಿಭಟನೆ ಹತ್ತಿಕ್ಕಲು ಸಾಧ್ಯವಾಗುತ್ತಿಲ್ಲ.

ಈ ನಡುವೆ ಶುಕ್ರವಾರ ಯಾಂಗೂನ್ ಮಾರ್ಕೆಟ್ ಬಳಿ ಸಿಎನ್‌ಎನ್ ವರದಿಗಾರರೊಂದಿಗೆ ಮಾತನಾಡುತ್ತಿದ್ದ ಐವರು ವ್ಯಕ್ತಿಗಳನ್ನು ಮಫ್ತಿಯಲ್ಲಿದ್ದ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿಮಾಡಿದೆ.

### ದೇಶದಲ್ಲಿ ಶನಿವಾರ 89,129 ಹೊಸ ಪ್ರಕರಣ: ಆರೂವರೆ ತಿಂಗಳಲ್ಲೇ ಗರಿಷ್ಠ

# 8 ರಾಜ್ಯಗಳಲ್ಲಿ ಹೆಚ್ಚಿದ ಕೋವಿಡ್

**ನವದೆಹಲಿ (ಪಿಟಿಐ):** 'ಎಂಟು ರಾಜ್ಯಗಳಲ್ಲಿ ದೈನಂದಿನ ಕೋವಿಡ್ ಪ್ರಕರಣಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಶನಿವಾರ ವರದಿಯಾದ ಹೊಸ ಪ್ರಕರಣಗಳ ಪೈಕಿ ಈ 8 ರಾಜ್ಯಗಳಲ್ಲಿ ಶೇ 81.42ರಷ್ಟು ಪ್ರಕರಣಗಳು ದಾಖಲಾಗಿವೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಹಾರಾಷ್ಟ್ರ, ಕರ್ನಾಟಕ, ಛತ್ತೀಸಗಡ, ದೆಹಲಿ, ತಮಿಳುನಾಡು, ಉತ್ತರ ಪ್ರದೇಶ, ಪಂಜಾಬ್ ಮತ್ತು ಮಧ್ಯಪ್ರದೇಶದಲ್ಲಿ ದೈನಂದಿನ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ.

ಪುಣೆ, ಮುಂಬೈ, ನಾಗಪುರ, ಠಾಣೆ, ನಾಸಿಕ್, ಬೆಂಗಳೂರು ನಗರ, ಔರಂಗಾಬಾದ್, ದೆಹಲಿ, ಅಹ್ಮದ್‌ನಗರ ಮತ್ತು ನಾಂದೇಡ್ ಜಿಲ್ಲೆಗಳು ಒಟ್ಟು ಪ್ರಕರಣದ ಶೇ 50 ರಷ್ಟು ಭಾಗವನ್ನು ಹೊಂದಿದೆ.

ದಿನದಲ್ಲಿ 44,213 ಸಕ್ರಿಯ ಪ್ರಕರಣಗಳು ಹೆಚ್ಚಿವೆ. ಈ ಮೂಲಕ ದೇಶದ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 6,58,909 ಏರಿಕೆಯಾಗಿದೆ.

ಮಹಾರಾಷ್ಟ್ರ, ಕರ್ನಾಟಕ, ಛತ್ತೀಸಗಡ ಕೇರಳ ಮತ್ತು ಪಂಜಾಬ್ ದೇಶದ ಒಟ್ಟು ಸಕ್ರಿಯ ಪ್ರಕರಣದ ಶೇಕಡ 77.3 ಪಾಲನ್ನು ಹೊಂದಿವೆ.

'ದೇಶದಲ್ಲಿ ಶನಿವಾರ 89,129 ಹೊಸ ಪ್ರಕರಣಗಳು ವರದಿಯಾಗಿವೆ. ಇದು ಆರೂವರೆ ತಿಂಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾದ ದಿನವಾಗಿದೆ. ಈ ಮೂಲಕ ದೇಶದ ಒಟ್ಟು ಪ್ರಕರಣಗಳ ಸಂಖ್ಯೆ 1.23 ಕೋಟಿಗೆ ಹೆಚ್ಚಳವಾಗಿದೆ. ಮೃತರ ಸಂಖ್ಯೆಯು 1,64,110ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ದೈನಂದಿನ ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಎರಡು ವಾರಗಳಲ್ಲಿ ಹೆಚ್ಚಳವಾಗಿದೆ.



ಆರೋಗ್ಯ ಕಾರ್ಯಕರ್ತರು ಮುಂಬೈನ ಛತ್ರಪತಿ ಶಿವಾಜಿ ಟರ್ಮಿನಲ್ ಬಳಿ ಪ್ರಯಾಣಿಕರಿಂದ ಮೂಗಿನ ದ್ರವದ ಮಾದರಿ ಪಡೆದರು —ಪಿಟಿಐ ಚಿತ್ರ

**ಸಂಕ್ಷಿಪ್ತ ಸುದ್ದಿ**

### ₹ 197 ಕೋಟಿ ಮೌಲ್ಯದ ಆಸ್ತಿ ಜಪ್ತಿ

**ನವದೆಹಲಿ:** ರಿಯಲ್ ಎಸ್ಟೇಟ್ ಸಂಸ್ಥೆ ಯುನಿಟೆಕ್ ಗ್ರೂಪ್ ವಿರುದ್ಧ ದಾಖಲಾಗಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ₹ 197 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಹೇಳಿಕೆಯಲ್ಲಿ ತಿಳಿಸಿದೆ.

ಸಿಕ್ಕಿಂನ ಗ್ಯಾಂಗ್ಟಕ್, ಕೇರಳದ ಅಲಪ್ಪುಳಾದಲ್ಲಿ ಇದ್ದ ರೆಸಾರ್ಟ್ ಸೇರಿದಂತೆ 10 ಆಸ್ತಿಗಳನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅನ್ವಯ ಜಪ್ತಿ ಮಾಡಲಾಗಿದೆ. ಕಾರ್ನೌಸ್ಟೈಟ್ ಗ್ರೂಪ್‌ನ ವಿವಿಧ ಅಂಗ ಸಂಸ್ಥೆಗಳ ಮಾಲೀಕತ್ವವಿದ್ದ ಇವುಗಳ ಮೌಲ್ಯ ₹ 197.34 ಕೋಟಿ ಎಂದು ತಿಳಿಸಿದೆ.

ಯುನಿಟೆಕ್ ಸಮೂಹವು ಸುಮಾರು ₹ 325 ಕೋಟಿಯನ್ನು ಅಕ್ರಮವಾಗಿ ಕಾರ್ನೌಸ್ಟೈಟ್ ಗ್ರೂಪ್‌ಗೆ ವರ್ಗಾಹಿಸಿತ್ತು. ಇದನ್ನು ಬಳಸಿ ಈಗ ಜಪ್ತಿ ಮಾಡಲಾಗಿರುವ ಆಸ್ತಿಯನ್ನು ಖರೀದಿಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯದ ಹೇಳಿಕೆ ತಿಳಿಸಿದೆ.

ಯುನಿಟೆಕ್ ಗ್ರೂಪ್ ಮತ್ತು ಇವುಗಳ ಪ್ರವರ್ತಕರಾದ ಜಯ್ ಚಂದ್ರ ಮತ್ತು ಅಜಯ್ ಚಂದ್ರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಸೈಪ್ರಸ್ ಮತು ಕೇಮನ್ ಐಲ್ಯಾಂಡ್ ದೇಶಗಳಿಗೆ ₹ 2000 ಕೋಟಿ ಅಕ್ರಮವಾಗಿ ವರ್ಗಾವಣೆ ಮಾಡಿರುವ ಆರೋಪ ಇವರ ಮೇಲಿದೆ ಎಂದು ತಿಳಿಸಿದೆ.

### ಚೀನಾ ಪ್ರಯಾಣ ನಿರ್ಬಂಧ: ಭಾರತದ ಕಂಪನಿಗಳ ಆತಂಕ

**ಬೀಜಿಂಗ್ (ಪಿಟಿಐ):** ಚೀನಾದಲ್ಲಿ ಕೋವಿಡ್–19 ಸಂಬಂಧಿತ ವೀಸಾ ಮತ್ತು ಪ್ರಯಾಣ ನಿರ್ಬಂಧಗಳು ಮುಂದುವರಿದಿರುವ ಬಗ್ಗೆ ಅಲ್ಲಿ ವಹಿವಾಟು ನಡೆಸುತ್ತಿರುವ ಭಾರತದ ಕಂಪನಿಗಳು ಆತಂಕ ವ್ಯಕ್ತಪಡಿಸಿವೆ.

ಚೀನಾದಲ್ಲಿ ಭಾರತೀಯ ರಾಯಭಾರಿ ವಿಕ್ರಂ ಮಿಸ್ರಿ ಅವರೊಂದಿಗೆ ಭಾರತೀಯ ಕಂಪನಿಗಳ ಸಿಇಒಗಳು ಸಂವಾದ ನಡೆಸುವ ವೇಳೆ ಈ ಕುರಿತು ಮಾಹಿತಿ ನೀಡಿದ್ದಾರೆ.

ಭಾರತ ಸ್ವಾತಂತ್ರ್ಯ ಗಳಿಸಿ 75 ವರ್ಷ ಪೂರೈಸಲಿರುವ ಹಿನ್ನೆಲೆಯಲ್ಲಿ ಶಾಂಘೈನಲ್ಲಿ ಆಯೋಜಿಸಿದ್ದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಮಿಸ್ರಿ ಅವರು ಶುಕ್ರವಾರ ಉದ್ಘಾಟಿಸಿದ್ದಾರೆ. ಬಳಿಕ ಜವಳಿ, ಔಷಧ, ಎಲೆಕ್ಟ್ರಾನಿಕ್ಸ್, ತಯಾರಿಕೆ, ರಾಸಾಯನಿಕ ಮತ್ತು ಐ.ಟಿ ವಲಯಗಳ 30ಕ್ಕೂ ಅಧಿಕ ಪ್ರತಿನಿಧಿಗಳೊಂದಿಗೆ ಮಿಸ್ರಿ ಅವರು ಸಭೆ ನಡೆಸಿದರು.

ಪ್ರಯಾಣ ನಿರ್ಬಂಧಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಭಾರತೀಯ ರಾಯಭಾರಿ ಕಚೇರಿಯು ಚೀನಾ ಸರ್ಕಾರದೊಂದಿಗೆ ಮಾತುಕತೆ ನಡೆಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದೂ ಮೂಲಗಳು ಹೇಳಿವೆ.

# ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ: 2018ರಿಂದ ಅನ್ವಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** '2016-17 ಮತ್ತು 2017-18ರ ಶೈಕ್ಷಣಿಕ ವರ್ಷಗಳಲ್ಲಿ ಪ್ರವೇಶ ಪಡೆದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಡ್ಡಾಯ ಗ್ರಾಮೀಣ ಸೇವೆಯ ನಿಬಂಧನೆಗಳು ಅನ್ವಯವಾಗುವುದಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

2018-19 ಮತ್ತು ನಂತರದ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ ಈ ನಿಬಂಧನೆಗಳು ಅನ್ವಯವಾಗುತ್ತವೆ ಹೇಳಿದೆ.

2016-17, 2017-18ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಡಿಪ್ಲೊಮಾ ವಿದ್ಯಾರ್ಥಿಗಳು ಈ ನಿಬಂಧನೆ ಅನ್ವಯ ಮಾಡುವುದನ್ನು ಪ್ರಶ್ನಿಸಿದ್ದರು.

'ಕರ್ನಾಟಕ ಕಡ್ಡಾಯ ಸೇವಾ ತರಬೇತಿ ಕಾಯ್ದೆಗೆ ಸಂಬಂಧಿಸಿದ ಅಧಿಸೂಚನೆ 2015ರ ಜುಲೈ 24ರಂದು ಹೊರ ಬಿದ್ದಿದೆ. ಆದರೆ, 2017-18ನೇ ಶೈಕ್ಷಣಿಕ ವರ್ಷಕ್ಕೆ ನಡೆದ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ(ನೀಟ್) ಸಂದರ್ಭದಲ್ಲಿ ಹೊರಡಿಸಲಾದ ಮೂರು ಪ್ರಕಟಣೆಗಳಲ್ಲಿ ಯಾವುದೇ ಸೇವೆ ಕಡ್ಡಾಯದ ಅಗತ್ಯವನ್ನು ತಿಳಿಸಿಲ್ಲ. ಈ ನಿಬಂಧನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಗೊತ್ತಿಲ್ಲ' ಎಂದು ಅರ್ಜಿದಾರರು ವಾದಿಸಿದ್ದಾರೆ.

'ಕಡ್ಡಾಯ ಸೇವೆ ಬಗ್ಗೆ 2018–19 ಮತ್ತು ನಂತರದ ವರ್ಷಗಳ ಸ್ನಾತಕೋತ್ತರ ಕೋರ್ಸ್‌ಗಳ ಅಭ್ಯರ್ಥಿಗಳಿಂದ ಬಾಂಡ್ ಬರೆಸಿಕೊಳ್ಳಲಾಗಿದೆ. ಅದಕ್ಕೂ ಹಿಂದಿನ ವರ್ಷಗಳಲ್ಲಿ ಈ ರೀತಿಯ ಬಾಂಡ್ ಪಡೆದಿಲ್ಲ. ಹೀಗಾಗಿ, ಅವರ ಮೇಲೆ ಕಡ್ಡಾಯ ಸೇವೆಯ ನಿಯಮ ಹೇರಲು ಆಗುವುದಿಲ್ಲ' ಎಂದು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಪೀಠ ಹೇಳಿದೆ.

### ವಂಶಸ್ಥರಾದ ಸಂಭಾಜಿರಾಜೇ ಛತ್ರಪತಿ ಪರಿಶೀಲನೆ

# ರಾಯಗಡ ಕೋಟೆಯಲ್ಲಿ ಶಿವಾಜಿ ಕಾಲದ ಚಿನ್ನದ ಬಳೆ ಪತ್ತೆ

ಪ್ರಜಾವಾಣಿ ವಾರ್ತೆ

**ಮುಂಬೈ:** ಮಹಾರಾಷ್ಟ್ರದ ರಾಯಗಡ ಕೋಟೆಯ ಉತ್ಖನನದ ವೇಳೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಅವರ ಕಾಲದ್ದು ಎನ್ನಲಾದ ಚಿನ್ನದ ಬಳೆಯೊಂದು ಪತ್ತೆಯಾಗಿದೆ.

ಮುಂಬೈನಿಂದ 160 ಕಿ.ಮೀ. ದೂರವಿರುವ ಮಹಾಡ್‌ನಲ್ಲಿರುವ ಬೆಟ್ಟದ ಮೇಲಿರುವ ಕೋಟೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಮತ್ತು ರಾಯಗಡ ಅಭಿವೃದ್ಧಿ ಪ್ರಾಧಿಕಾರ (ಆರ್‌ಡಿಎ) ಸಹಯೋಗದಲ್ಲಿ ಉತ್ಖನನ ಕೈಗೊಳ್ಳಲಾಗಿದೆ.

ಚಿನ್ನದ ಬಳೆ ಪತ್ತೆಯಾದ ವಿಷಯ ತಿಳಿಯುತ್ತಿದ್ದಂತೆಛತ್ರಪತಿ ಶಿವಾಜಿಮಹಾರಾಜರ ವಂಶಸ್ಥರಾದ ಶ್ರೀ ಸಂಭಾಜಿರಾಜೇ ಛತ್ರಪತಿ ಅವರು ರಾಯಗಡ ಕೋಟೆಗೆ ಭೇಟಿ ನೀಡಿ, ಚಿನ್ನದ ಬಳೆಯನ್ನು ಪರಿಶೀಲಿಸಿದರು.

'ಇದು ಶಿವಾಜಿ ಮಹಾರಾಜರ ಸಮಕಾಲೀನ ಜೀವನಶೈಲಿ, ಸಂಸ್ಕೃತಿ ಮತ್ತು ವಾಸ್ತುಶಿಲ್ಪವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ರಾಯಗಡದ ಉತ್ಖನನ ಮತ್ತು ಸಂರಕ್ಷಣಾ ಕಾರ್ಯಗಳನ್ನು ಕೈಗೊಂಡ ಎಎಸ್‌ಐನ ಪ್ರಯತ್ನ ಶ್ಲಾಘನೀಯ' ಎಂದು ಸಂಭಾಜಿರಾಜೇ ಹೇಳಿದರು.



ಶಿವಾಜಿ ಕಾಲದ ಚಿನ್ನದ ಬಳೆ ಚಿತ್ರ: ಟ್ವಿಟ್ಟರ್


### ಹತ್ತಿ, ಹತ್ತಿ ನೂಲು, ಸಕ್ಕರೆ ಆಮದು ಪ್ರಸ್ತಾವ

# ಸದ್ಯ ಭಾರತ ಜೊತೆ ವ್ಯಾಪಾರ ಅಸಾಧ್ಯ: ಇಮ್ರಾನ್ ಖಾನ್

**ಇಸ್ಲಾಮಾಬಾದ್ (ಪಿಟಿಐ):** ಸದ್ಯದ ಪರಿಸ್ಥಿತಿಯಲ್ಲಿ ಭಾರತದೊಂದಿಗೆ ಯಾವುದೇ ತರಹದ ವ್ಯಾಪಾರ ವಹಿವಾಟು ನಡೆಸಲು ಸಾಧ್ಯವಿಲ್ಲ ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ನಿರ್ಧರಿಸಿದ್ದಾರೆ ಎಂದು ಡಾನ್ ಪತ್ರಿಕೆಯು ಶನಿವಾರ ತಿಳಿಸಿದೆ.

ಭಾರತದಿಂದ ಹತ್ತಿ ಮತ್ತು ಸಕ್ಕರೆ ಆಮದು ಮಾಡಿಕೊಳ್ಳುವ ಸಂಬಂಧ ಸಂಪುಟದ ಪ್ರಮುಖ ಸದಸ್ಯರ ಸಲಹೆ ಪಡೆದ ಬಳಿಕ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದೂ ಹೇಳಿದೆ.

ಅಗತ್ಯ ವಸ್ತುಗಳನ್ನು ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳಲು ಇರುವ ಪರ್ಯಾಯ ಮೂಲಗಳನ್ನು ಕಂಡುಕೊಳ್ಳುವಂತೆ ವಾಣಿಜ್ಯ ಸಚಿವಾಲಯ ಮತ್ತು ತಮ್ಮ ಆರ್ಥಿಕ ತಂಡಕ್ಕೆ ಸೂಚನೆ ನೀಡಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಅದು ವರದಿ ಮಾಡಿದೆ.



ದೇಶಿ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಹತ್ತಿ, ಹತ್ತಿ ನೂಲು ಮತ್ತು ಸಕ್ಕರೆಯನ್ನು ಭಾರತದಿಂದ ಆಮದು ಮಾಡಿಕೊಳ್ಳಲು ಅವಕಾಶ ನೀಡಲುವಂತೆ ಆರ್ಥಿಕ ಸಮನ್ವಯ ಸಮಿತಿಗೆ (ಇಸಿಸಿ) ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದಕ್ಕೆ ಇಸಿಸಿ ಸಹ ತನ್ನ ಒಪ್ಪಿಗೆ ನೀಡಿ ಸಂಪುಟದ ಅಂತಿಮ ಒಪ್ಪಿಗೆಗೆ ಕಳುಹಿಸಿತ್ತು.

ಈ ಕುರಿತಾಗಿ ಪ್ರಧಾನಿ ಇಮ್ರಾನ್ ಅವರು ಸಂಪುಟ ಸದಸ್ಯರೊಂದಿಗೆ ಸಭೆ ನಡೆಸಿದ ಬಳಿಕ ಭಾರತದೊಂದಿಗೆ ವ್ಯಾಪಾರ ನಡೆಸದೇ ಇರಲು ತೀರ್ಮಾನಿಸಿದರು.

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಮಾಡಿರುವ 2019ರ ತನ್ನ ನಿರ್ಧಾರವನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆಯದ ಹೊರತು ವ್ಯಾಪಾರ ಒಪ್ಪಂದ ಸಾಧ್ಯವಿಲ್ಲ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಹೇಳಿದ್ದಾರೆ.

## ವೇಮೊ: ಸಿಇಒ ಹುದ್ದೆ ತೊರೆಯಲಿರುವ ಜಾನ್ ಕ್ರಾಫ್ಸಿಕ್

**ಸ್ಯಾನ್ ರಮೋನ್ (ಎಪಿ):** ಸ್ವಯಂ ಚಾಲಿತ ಕಾರುಗಳನ್ನು ತಯಾರಿಸುವ ವೇಮೊ ಕಂಪನಿಯ ಸಿಇಒ ಜಾನ್ ಕ್ರಾಫ್ಸಿಕ್ ಅವರು ಹುದ್ದೆಯಿಂದ ಕೆಳಗಿಳಿಯುವುದಾಗಿ ತಿಳಿಸಿದ್ದಾರೆ. ಈ ಕಂಪನಿಯು ಅಲ್ಫಾಬೆಟ್‌ನ ಅಂಗಸಂಸ್ಥೆ.

ಐದು ವರ್ಷಗಳಿಗೂ ಹೆಚ್ಚಿನ ಸಮಯದವರೆಗೆ ವೇಮೊ ಕಂಪನಿಯ ಮುಖ್ಯಸ್ಥರಾಗಿದ್ದ ಅವರು ಇನ್ನುಮುಂದೆ ಸಲಹೆಗಾರರಾಗಿ ಇರಲಿದ್ದಾರೆ ಎಂದು ಕಂಪನಿ ತಿಳಿಸಿದೆ.

'ಹಳೆಯ ಸ್ನೇಹಿತರು ಹಾಗೂ ಕುಟುಂಬದೊಂದಿಗೆ ಮತ್ತೆ ಸಮಯ ಕಳೆಯಲು ಬಯಸುತ್ತೇನೆ. ಜಗತ್ತಿನ ವಿವಿಧ ಪ್ರದೇಶಗಳಿಗೆ ಭೇಟಿ ನೀಡಲು ಇಚ್ಛಿಸಿದ್ದೇನೆ' ಎಂದು 59 ವರ್ಷದ ಕ್ರಾಫ್ಸಿಕ್ ಅವರು ಬ್ಲಾಗ್ ಪೋಸ್ಟ್‌ನಲ್ಲಿ ಬರೆದಿದ್ದಾರೆ.

# ತುಮಕೂರು–ಶಿವಮೊಗ್ಗ ಹೆದ್ದಾರಿ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ತುಮಕೂರು-ಶಿವಮೊಗ್ಗವರೆಗೆ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್–206)ಯ ಚತುಷ್ಪಥ ಅಭಿವೃದ್ಧಿ ಯೋಜನೆಗಾಗಿ ₹ 6398.02 ಕೋಟಿಯ ಪರಿಷ್ಕೃತ ವೆಚ್ಚಕ್ಕೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಅನುಮೋದನೆ ನೀಡಿದೆ.

ಈ ಹೆದ್ದಾರಿಯನ್ನು ಭಾರತಮಾಲಾ ಯೋಜನಾ ಅಡಿ ಚತುಷ್ಪಥ ಮಾರ್ಗವಾಗಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಕೇಂದ್ರದ ಸಾರಿಗೆ ಸಚಿವ ನಿತಿನ್ ಗಡ್ಕರಿ ಪ್ರತ್ಯೇಕವಾದ 4 ಪ್ಯಾಕೇಜ್‌ಗಳನ್ನು ಘೋಷಿಸಿದ್ದಾರೆ.

ಮಲ್ಲಸಂದ್ರದಿಂದ ಕರಡಿವರೆಗೆ ಅಂದಾಜು ₹ 1,364.14 ಕೋಟಿ (ಪ್ಯಾಕೇಜ್–1), ಕರಡಿಯಿಂದ ಬಾಣಾವರದವರೆಗೆ ₹ 1,505.85 ಕೋಟಿ (ಪ್ಯಾಕೇಜ್2), ಬಾಣಾವರದಿಂದ ಬೆಟ್ಟದಹಳ್ಳಿವರೆಗೆ ₹ 1,444.50 ಕೋಟಿ (ಪ್ಯಾಕೇಜ್–3) ಹಾಗೂ ಬೆಟ್ಟದಹಳ್ಳಿಯಿಂದ ಶಿವಮೊಗ್ಗವರೆಗೆ ₹ 2,082.98 ಕೋಟಿ (ಪ್ಯಾಕೇಜ್–4) ಹೂಡಿಕೆಯೊಂದಿಗೆ ಚತುಷ್ಪಥ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈ ಕಾಮಗಾರಿಯ ಶೇ 40ರಷ್ಟು ವೆಚ್ಚವನ್ನು ಭರಿಸಲಿದ್ದು, ಕಾಮಗಾರಿ ಗುತ್ತಿಗೆ ಪಡೆದ ಏಜೆನ್ಸಿಯು ಶೇ 60ರಷ್ಟು ವೆಚ್ಚ ಭರಿಸಲಿದೆ.

**'ಸಂಪರ್ಕ ಇನ್ನಷ್ಟು ಸುಗಮ'**

'ತುಮಕೂರು-ಶಿವಮೊಗ್ಗ ಮಧ್ಯೆ ಭಾರತ್ ಮಾಲಾ ಯೋಜನೆಯಡಿ ₹ 6397.47 ಕೋಟಿ ಮೊತ್ತದಲ್ಲಿ ಚತುಷ್ಪಥ ರಸ್ತೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವುದರಿಂದ ಬೆಂಗಳೂರು– ಮಲೆನಾಡು ಮಧ್ಯದ ಸಂಪರ್ಕ ಇನ್ನಷ್ಟು ಸುಗಮವಾಗಲಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

## ಅಮೆರಿಕ: ಕಟ್ಟಡಕ್ಕೆ ನುಗ್ಗಿದ ಕಾರು; ಪೊಲೀಸ್ ಅಧಿಕಾರಿ ಸಾವು

**ವಾಷಿಂಗ್ಟನ್ (ಪಿಟಿಐ):** ವಾಷಿಂಗ್ಟನ್‌ನಲ್ಲಿರುವ ಕ್ಯಾಪಿಟಲ್ ಕಟ್ಟಡಕ್ಕೆ ವ್ಯಕ್ತಿಯೊಬ್ಬ ಕಾರನ್ನು ವೇಗವಾಗಿ ನುಗ್ಗಿಸಿದ ಪರಿಣಾಮ ಸಂಭವಿಸಿದ ಅವಘಡದಲ್ಲಿ ಪೊಲೀಸ್ ಅಧಿಕಾರಿ ಮೃತಪಟ್ಟಿದ್ದು, ಮತ್ತೊಬ್ಬ ಹಿರಿಯ ಅಧಿಕಾರಿ ಗಾಯಗೊಂಡಿದ್ದಾರೆ. ಬಳಿಕ ವಾಹನ ಚಾಲಕನನ್ನು ಗುಂಡಿಕ್ಕಿ ಕೊಲ್ಲಲಾಯಿತು ಎಂದು ಅಮೆರಿಕ ಕ್ಯಾಪಿಟಲ್ ಪೊಲೀಸ್ (ಯುಎಸ್‌ಸಿಪಿ) ಮಾಹಿತಿ ನೀಡಿದೆ.

ಮೃತ ಪೊಲೀಸ್ ಅಧಿಕಾರಿ ಬಿಲ್ಲಿ ಇವಾನ್ಸ್ ಎಂದು ಗುರುತಿಸಲಾಗಿದ್ದು, 18 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು ಎಂಬುದು ತಿಳಿದು ಬಂದಿದೆ. 'ಗುಡ್ ಫ್ರೈಡೇ' ದಿನದಂದೇ ಈ ಘಟನೆ ನಡೆದಿದೆ.

ಕಾರು ಚಾಲಕ 25 ವರ್ಷದ ನೋವಾ ಗ್ರೀನ್ ಎಂದು ಗುರುತಿಸಲಾಗಿದೆ. ಚಾಲಕ ಕೈಯಲ್ಲಿ ಚಾಕುವನ್ನು ಹಿಡಿದಿದ್ದ ಎಂಬುದು ವಿಡಿಯೊದಲ್ಲಿ ದಾಖಲಾಗಿದೆ ಎಂದು ಕ್ಯಾಪಿಟಲ್ ಪೊಲೀಸ್ ಮುಖ್ಯಸ್ಥ ಯೋಗಾನಂದ ಪಿಟ್‌ಮ್ಯಾನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

# ಬ್ಯಾಡ್ಮಿಂಟನ್: ನಿಯಮ ಬದಲಿಗೆ ಮತದಾನ

**ಲಂಡನ್ (ರಾಯಿಟರ್ಸ್):** ಈ ಬಾರಿಯ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ನಂತರ ಬ್ಯಾಡ್ಮಿಂಟನ್‌ನ ಸ್ಕೋರಿಂಗ್ ಮಾದರಿಯಲ್ಲಿ ಬದಲಾವಣೆ ಮಾಡಲು ಬಯಸಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಈ ವಿಷಯವನ್ನು ಮೇ ತಿಂಗಳಲ್ಲಿ ಮತಕ್ಕೆ ಹಾಕಲು ನಿರ್ಧರಿಸಿದೆ.

ನಿಯಮ ಬದಲಿಸಲು ಕೋರಿ ಬ್ಯಾಡ್ಮಿಂಟನ್ ಇಂಡೊನೇಷ್ಯಾ ಮತ್ತು ಬ್ಯಾಡ್ಮಿಂಟನ್ ಮಾಲ್ಡಿವ್ಸ್ ಸಂಸ್ಥೆಗಳು ಸಲ್ಲಿಸಿರುವ ಮನವಿಗಳನ್ನು ಪರಿಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿರುವ ಬಿಡಬ್ಲ್ಯುಎಫ್ ಈಗ ಇರುವ 21 ಪಾಯಿಂಟ್‌ಗಳ ಗೇಮ್‌ಗಳಿಗೆ ಬದಲಾಗಿ ಇನ್ನು ಮುಂದೆ 11 ಪಾಯಿಂಟ್‌ಗಳ ಗೇಮ್ ಇರುತ್ತದೆ. ಬೆಸ್ಟ್ ಆಫ್ ತ್ರಿ ಬದಲು ಬೆಸ್ಟ್ ಆಫ್ ಫೈವ್ ಗೇಮ್‌ಗಳಲ್ಲಿ ವಿಜಯಿಯನ್ನು ನಿರ್ಧರಿಸಲಾಗುತ್ತದೆ ಎಂದು ವಿವರಿಸಿದೆ.

'ಬ್ಯಾಡ್ಮಿಂಟನ್‌ನ ರೋಚಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಬದಲಾವಣೆ ಮಾಡಲು ನಿರ್ಧರಿಸಲಾಗಿದ್ದು ಹೊಸ ನಿಯಮ ಜಾರಿಗೆ ಬಂದರೆ ಟಿವಿಗಳಲ್ಲಿ ಪಂದ್ಯ ವೀಕ್ಷಿಸುವವರ ಸಂಖ್ಯೆ ಹೆಚ್ಚಲಿದೆ' ಎಂದು ಬಿಡಬ್ಲ್ಯುಎಫ್ ಅಧ್ಯಕ್ಷ ಪೌಲ್ ಎರಿಕ್ ಹಾಯರ್ ತಿಳಿಸಿದ್ದಾರೆ.

ಫೆಡರೇಷನ್‌ನ ವಾರ್ಷಿಕ ಸಾಮಾನ್ಯ ಸಭೆ ಮೇ 22ರಂದು ವರ್ಚುವಲ್ ಆಗಿ ನಡೆಯಲಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಒಳಗೊಂಡ ಕಾರ್ಯಕಾರಿ ಮಂಡಳಿಯು ಮತದಾನ ಮಾಡಲಿದೆ. ಬದಲಾವಣೆಯ ಪರವಾಗಿ ಮೂರನೇ ಎರಡು ಭಾಗದಷ್ಟು ಮತಗಳು ಲಭಿಸಿದರೆ ಹೊಸ ನಿಯಮ ಜಾರಿಗೆ ಬರಲಿದೆ.

ಸ್ಕೋರಿಂಗ್ ಮಾದರಿಯಲ್ಲಿ ಬದಲಾವಣೆ ತರಲು 2014 ಮತ್ತು 2018ರಲ್ಲೂ ಪ್ರಯತ್ನ ನಡೆದಿತ್ತು. ಆದರೆ ಬಹುಮತ ಸಿಗದ ಕಾರಣ ಈ ಪ್ರಸ್ತಾಪ ಬಿದ್ದುಹೋಗಿತ್ತು.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| ಬೆಂಗಳೂರು | |
|---|---|
| 100 ಮೊಟ್ಟೆಗೆ | ₹425 |
| 12 ಮೊಟ್ಟೆಗೆ | ₹56 |
| ಮೈಸೂರು | |
| 100 ಮೊಟ್ಟೆಗೆ | ₹431 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1570 (1570) |
| ಸೋಯಾ (ರಿಫೈನ್ಡ್) | ₹1285 (1285) |
| ಸೂರ್ಯಕಾಂತಿ (ರಿಫೈನ್ಡ್) | ₹1710 (1700) |
| ಪಾಮೋಲಿನ್ | ₹1220 (1218) |

**ಕೊಬ್ಬರಿ ಧಾರಣೆ** ತಿಪಟೂರು (ಕ್ವಿಂಟಲ್‌ಗೆ)

| | |
|---|---|
| ಕನಿಷ್ಠ | ₹15000 |
| ಮಾದರಿ | ₹15,200 |
| ಗರಿಷ್ಠ | ₹16,006 |

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 900-9050 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1550 |
| ಹೆರಕಿದ್ದು | 1900-2000 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |
| ಕಾಳು ಮೆಣಸು | 390 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-41000 |
| ಹಳತು | 42500-50500 |
| **ಚಿತ್ರದುರ್ಗ** | |
| ಆಪಿ | 42419-42829 |
| ಬೆಟ್ಟೆ | 33510-33959 |
| ಕೆಂಪುಗೋಟು | 29500-29900 |
| ರಾಶಿ | 41939-42369 |
| **ಹೊನ್ನಾಳಿ** | |
| ರಾಶಿ | 42100-42599 |
| ಹೊಸತು | 35000-40000 |
| **ಸಿದ್ದಾಪುರ** | |
| ಬಿಳಿಗೋಟು | 22911-31108 |
| ಚಾಲಿ | 35499-38009 |
| ಕೋಕ | 21399-29889 |
| ಕೆಂಪುಗೋಟು | 24669-28699 |
| ರಾಶಿ | 39099-42009 |
| ತಟ್ಟಿಬೆಟ್ಟೆ | 32109-37609 |
| **ಶಿರಸಿ** | |
| ಬೆಟ್ಟೆ | 30001-38669 |
| ಬಿಳಿಗೋಟು | 23799-31601 |
| ಚಾಲಿ | 35608-38099 |
| ರಾಶಿ | 40298-41299 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 9750 | 9600 | 9650 | --- ಸೆಂಟ್ಸ್ |
| ಎಸಿ | 3920 | 3700 | 3675 | |
| ಆರ್‌ಪಿ | 5100 | 5050 | 5025 | |
| ಆರ್‌ಸಿ | 2900 | 2900 | 2825 | --- ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ**

3-4-2021

| | |
|---|---|
| ಜಾವಾ 70/80(ಹೊಸ) | 10950-11000 |
| ಜಾವಾ 80/90(ಹೊಸ) | 10450-10500 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 9100-9200 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1580 (1580) |
| ಒಂದು ವಾರದ ಡೆಲಿವರಿ | 1575 (1575) |
| ಸೋಯಾ ಕಚ್ಚಾ | 1267 (1270) |
| ಪಾಮ್ ವಾರದ ಡೆಲಿವರಿ | 1218 (1216) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1650 (1640) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ 45,175 (45,050)
ಬೆಳ್ಳಿ ಕೆ.ಜಿ 65,300 (65,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ರಿಷಭ್ 'ಮ್ಯಾಚ್ ವಿನ್ನರ್': ಗಂಗೂಲಿ

**ನವದೆಹಲಿ (ಪಿಟಿಐ):** ಭಾರತ ತಂಡದ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರ ಆಟಕ್ಕೆ ಮನಸೋತಿದ್ದೇನೆ. ನಿಜಕ್ಕೂ ಅವರೊಬ್ಬ 'ಮ್ಯಾಚ್ ವಿನ್ನರ್' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

ನಾಯಕ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಬ್ಯಾಟಿಂಗ್ ನೋಡುವುದನ್ನು ಹೆಚ್ಚು ಇಷ್ಟಪಡುತ್ತೇನೆ ಎಂದೂ ಅವರು ಹೇಳಿದ್ದಾರೆ.

ತಂಡದಲ್ಲಿ ಅನೇಕ ಅದ್ಭುತ ಆಟಗಾರರಿದ್ದಾರೆ. ಬಿಸಿಸಿಐ ಅಧ್ಯಕ್ಷರಾಗಿದ್ದುಕೊಂಡು ನನ್ನ ನೆಚ್ಚಿನ ಆಟಗಾರ ಯಾರು ಎಂಬುದನ್ನು ಹೇಳುವುದು ಸರಿಯಲ್ಲ. ಎಲ್ಲರೂ ನೆಚ್ಚಿನ ಆಟಗಾರರೇ. ಆದರೆ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಬ್ಯಾಟಿಂಗನ್ನು ಆಸ್ವಾದಿಸುತ್ತೇನೆ ಎಂದು ಆನ್‌ಲೈನ್ ಟ್ಯುಟೋರಿಯಲ್ ಆ್ಯಪ್ 'ಕ್ಲಾಸ್‌ಪ್ಲಸ್' ನಡೆಸಿದ ಸಂವಾದದಲ್ಲಿ ಅವರು ಹೇಳಿದ್ದಾರೆ.



ಗಂಗೂಲಿ

'ರಿಷಭ್ ಪಂತ್ ಆಟಕ್ಕೆ ನಾನು ಮನಸೋತಿದ್ದೇನೆ. ಯಾಕೆಂದರೆ ಅವರೊಬ್ಬ ಮ್ಯಾಚ್ ವಿನ್ನರ್ ಆಟಗಾರ ಎಂದು ನಾನು ಭಾವಿಸಿದ್ದೇನೆ. ಜಸ್‌ಪ್ರೀತ್ ಬೂಮ್ರಾ ಹಾಗೂ ಮೊಹಮ್ಮದ್ ಶಮಿ ಕೂಡ ಒಳ್ಳೆಯ ಆಟಗಾರರು. ಶಾರ್ದೂಲ್ ಠಾಕೂರ್ ಅವರ ಆಟವನ್ನು ಇಷ್ಟಪಡುತ್ತೇನೆ. ಯಾಕೆಂದರೆ ಅವರು ಧೈರ್ಯವಂತ ಆಟಗಾರ' ಎಂದು ಗಂಗೂಲಿ ಹೇಳಿದ್ದಾರೆ.

ಮುಂಬೈನಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸುವ ಭರವಸೆಯಲ್ಲಿ ಬಿಸಿಸಿಐ

# ವಾಂಖೆಡೆ ಸಿಬ್ಬಂದಿಗೆ ಕೋವಿಡ್

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ಸಜ್ಜಾಗುತ್ತಿರುವ ವಾಂಖೆಡೆ ಕ್ರೀಡಾಂಗಣದ 10 ಮಂದಿ ಸಿಬ್ಬಂದಿ ಮತ್ತು ಆರು ಮಂದಿ ಕಾರ್ಯಕ್ರಮ ಸಂಯೋಜಕರಲ್ಲಿ ಕೋವಿಡ್ 19 ಸೋಂಕು ಪತ್ತೆಯಾಗಿದೆ. ಆದರೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪಂದ್ಯಗಳನ್ನು ಆಯೋಜಿಸುವ ಭರವಸೆಯಲ್ಲಿದೆ.

ಟೂರ್ನಿಯ 10 ಪಂದ್ಯಗಳಿಗೆ ಮುಂಬೈ ಆತಿಥ್ಯ ವಹಿಸಲಿದೆ. ಆದರೆ ಕೋವಿಡ್ ನಿಯಂತ್ರಣಾತೀತವಾಗಿ ಏರುಗತಿಯಲ್ಲಿ ಸಾಗಿದರೆ ಇಂದೋರ್ ಮತ್ತು ಹೈದರಾಬಾದ್‌ನಲ್ಲಿ ಪಂದ್ಯಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ದಿನೇ ದಿನೇ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಿನಿ ಲಾಕ್‌ಡೌನ್ ಹೇರಲು ಸರ್ಕಾರ ಚಿಂತನೆ ನಡೆಸಿದೆ.

ಎಂಟು ಮಂದಿ ಸಿಬ್ಬಂದಿಯಲ್ಲಿ ಕೋವಿಡ್ ಇರುವುದು ಶುಕ್ರವಾರ ಸಂಜೆ ಗೊತ್ತಾಗಿತ್ತು. ಶನಿವಾರ ಬೆಳಿಗ್ಗೆ ಈ ಸಂಖ್ಯೆ 10ಕ್ಕೆ ಏರಿದೆ. ಇದೇ ವೇಳೆ ಕಾರ್ಯಕ್ರಮ ಸಂಯೋಜಕರಲ್ಲೂ ಸೋಂಕು ಇರುವುದು ದೃಢಪಟ್ಟಿದೆ.

'ಸೋಂಕು ಪತ್ತೆಯಾಗಿದ್ದು ಕಳವಳಕಾರಿ ವಿಷಯ. ಈ ಹಿನ್ನೆಲೆಯಲ್ಲಿ ಕಾಂಡಿವಲಿಯ ಮುಂಬೈ ಸಿಎ ಕ್ರೀಡಾಂಗಣದಿಂದ ಸಿಬ್ಬಂದಿಯನ್ನು ಕರೆದುಕೊಂಡು ಬರಲಾಗಿದೆ. ಮುಂಬೈಯಲ್ಲಿರುವ ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ತಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳ ಯಾವ ಆಟಗಾರನೂ ಈ ವರೆಗೆ ವಾಂಖೆಡೆ ಕ್ರೀಡಾಂಗಣಕ್ಕೆ ಬರಲಿಲ್ಲ. ಹೀಗಾಗಿ ಆಟಗಾರರ ವಿಷಯದಲ್ಲಿ ಆತಂಕವಿಲ್ಲ' ಎಂದು ಮುಂಬೈ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಯೊಬ್ಬರು ತಿಳಿಸಿದರು.

ಡೆಲ್ಲಿ ಮತ್ತು ಪಂಜಾಬ್ ತಂಡಗಳು ಬ್ರಬೋರ್ನ್ ಮತ್ತು ಬಾಂದ್ರಾ ಕುರ್ಲಾ ಕ್ರೀಡಾ ಸಂಕೀರ್ಣದಲ್ಲಿ ಅಭ್ಯಾಸ ನಡೆಸುತ್ತಿದ್ದು ಕೋಲ್ಕತ್ತ ನೈಟ್ ರೈಡರ್ಸ್ ನವಿ ಮುಂಬೈನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಅಭ್ಯಾಸ ಮಾಡುತ್ತಿದೆ.


ಇಂಡಿಯನ್ ಪ್ರೀಮಿಯರ್ ಲೀಗ್ ಟ್ರೋಫಿ– ಐಪಿಎಲ್ ವೆಬ್‌ಸೈಟ್ ಚಿತ್ರ

### ಅಕ್ಷರ್‌ಗೆ ಸೋಂಕು

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರಲ್ಲಿ ಕೋವಿಡ್–19 ಇರುವುದು ದೃಢಪಟ್ಟಿದ್ದು, ಸದ್ಯ ಪ್ರತ್ಯೇಕವಾಸದಲ್ಲಿದ್ದಾರೆ ಎಂದು ಅವರು ಪ್ರತಿನಿಧಿಸುವ ಐಪಿಎಲ್ ಫ್ರಾಂಚೈಸ್ ಡೆಲ್ಲಿ ಕ್ಯಾಪಿಟಲ್ಸ್ ತಿಳಿಸಿದೆ. ಹೀಗಾಗಿ ಸಿಎಸ್‌ಕೆ ಎದುರಿನ ಮೊದಲ ಪಂದ್ಯದಲ್ಲಿ ಅವರು ಆಡುತ್ತಿಲ್ಲ.

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟ್ಸ್‌ಮನ್ ನಿತೀಶ್ ರಾಣಾ ಅವರಲ್ಲಿ ಸೋಂಕು ದೃಢಪಟ್ಟಿತ್ತು. ಆದರೆ ಎರಡನೇ ಬಾರಿಯ ಪರೀಕ್ಷೆಯಲ್ಲಿ ಅವರ ವರದಿ 'ನೆಗೆಟಿವ್' ಬಂದಿದೆ.

# ಅಭ್ಯಾಸಕ್ಕೆ ನಿರ್ಬಂಧ: ಪ್ರತಿಭಟನೆಗೆ ಸಜ್ಜಾದ ಈಜುಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ ಪ್ರಯತ್ನದ ನಂತರ ಅಭ್ಯಾಸಕ್ಕೆ ಅವಕಾಶ ಪಡೆದ ಕೆಲವೇ ತಿಂಗಳಲ್ಲಿ ಈಜುಗೊಳಗಳನ್ನು ಮತ್ತೆ ಮುಚ್ಚಲಾಗಿದೆ. ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಶುಕ್ರವಾರ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಈಜುಕೊಳ ಮತ್ತು ಜಿಮ್‌ಗಳನ್ನು ಮುಚ್ಚುವುದು ಕೂಡ ಇದರಲ್ಲಿ ಸೇರಿದೆ. ಇದರಿಂದ ಈಜುಪಟುಗಳು ಬೇಸರಗೊಂಡಿದ್ದು ಆದೇಶ ರದ್ದುಗೊಳಿಸುವಂತೆ ಕೋರಿ ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ.

ನಗರದ ಡಾಲ್ಫಿನ್ ಈಜು ಕೇಂದ್ರ ಮತ್ತು ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ರಾಷ್ಟ್ರ-ಮಟ್ಟದ ಈಜುಪಟುಗಳು ಅಭ್ಯಾಸ ಮಾಡುತ್ತಿದ್ದಾರೆ. ಮಾರ್ಚ್ 22ರಂದು ರಾಷ್ಟ್ರೀಯ ಶಿಬಿರ ಮುಗಿದಿತ್ತು. ಆದರೆ ಕೆಲವರು ಇಲ್ಲೇ ಉಳಿದು ತರಬೇತಿ ಪಡೆಯಲು ಬಯಸಿದ್ದರು. ಏಪ್ರಿಲ್ 20ರವರೆಗೆ ಈಜುಕೊಳಗಳನ್ನು ಮುಚ್ಚುವಂತೆ ಸೂಚಿಸಿರುವುದರಿಂದ ಅವರ ತರಬೇತಿಗೆ ಧಕ್ಕೆಯಾಗಿದೆ.



ಒಲಿಂಪಿಕ್ಸ್ ಅರ್ಹತೆ ಪಡೆಯಬೇಕಾಗಿರುವ ಕೊನೆಯ ದಿನಾಂಕ ಸಮೀಪಿಸುತ್ತಿರುವುದರಿಂದ ಈಜುಪಟುಗಳು ಕೆಲವು ಪ್ರಮುಖ ಕೂಟಗಳಲ್ಲಿ ಪಾಲ್ಗೊಂಡು ಸಾಮರ್ಥ್ಯ ಪ್ರದರ್ಶಿಸಬೇಕಾಗಿದೆ. ಕರ್ನಾಟಕದ ಶ್ರೀಹರಿ ನಟರಾಜ್ ಸದ್ಯದಲ್ಲೇ ಅಂತರರಾಷ್ಟ್ರೀಯ ಕೂಟವೊಂದಕ್ಕೆ ತೆರಳುವ ಸಿದ್ಧತೆಯಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ತರಬೇತಿ ಮೊಟಕುಗೊಂಡಿರುವುದರಿಂದ ಈಜುಪಟುಗಳು ಭವಿಷ್ಯಕ್ಕೆ ತೊಂದರೆಯಾಗುವ ಆತಂಕದಲ್ಲಿದ್ದಾರೆ.

'ಯಾವ ಮುನ್ಸೂಚನೆಯೂ ಇಲ್ಲದೆ ಈಜುಕೊಳಗಳನ್ನು ಮುಚ್ಚುವಂತೆ ತಾಕೀತು ಮಾಡಿದ್ದಾರೆ. ಇದರಿಂದ ಎಲ್ಲರಿಗೂ ಆಘಾತವಾಗಿದೆ. ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಆರೋಗ್ಯ ಸಚಿವರು ಸೇರಿದಂತೆ ಹಲವು ಮಂದಿಗೆ ಶನಿವಾರ ಮನವಿ ಸಲ್ಲಿಸಲಾಗಿದ್ದು ಶೀಘ್ರದಲ್ಲೇ ಪೂರಕ ಸ್ಪಂದನೆ ಸಿಗುವ ನಿರೀಕ್ಷೆಯಲ್ಲಿದ್ದೇವೆ. ಈಜು ಅಭ್ಯಾಸಕ್ಕೆ ಅವಕಾಶ ನೀಡದೇ ಇದ್ದರೆ ಪ್ರತಿಭಟನೆ ನಡೆಸುವುದೊಂದೇ ದಾರಿ' ಎಂದು ರಾಜ್ಯ ಈಜು ಸಂಸ್ಥೆಯ ಕಾರ್ಯದರ್ಶಿ ಎಂ. ಸತೀಶ 'ಪ್ರಜಾವಾಣಿ'ಗೆ ತಿಳಿಸಿದರು.

## ಜಿಮ್‌ಗಳಲ್ಲಿ ಶೇ 50ರಷ್ಟು ಅವಕಾಶ ನೀಡಿ: ರವಿ

ಮೈಸೂರು: 'ಸರ್ಕಾರವು ಕೋವಿಡ್‌ನ ಹೊಸ ಮಾರ್ಗಸೂಚಿಯಲ್ಲಿ ಜಿಮ್ ಮತ್ತು ಫಿಟ್‌ನೆಸ್ ಸೆಂಟರ್‌ಗಳನ್ನು ಕೆಲವು ದಿನಗಳವರೆಗೆ ಮುಚ್ಚಬೇಕು ಎಂದು ಸೂಚಿಸಿದ್ದು, ಈ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು' ಎಂದು ಕರ್ನಾಟಕ ರಾಜ್ಯ ಜಿಮ್ ಮತ್ತು ಫಿಟ್‌ನೆಸ್ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಎ.ವಿ.ರವಿ ಮನವಿ ಮಾಡಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಜಿಮ್‌ಗಳನ್ನು ಏಕಾಏಕಿ ಬಂದ್ ಮಾಡಿದರೆ ಮಾಲೀಕರು ಮತ್ತು ತರಬೇತುದಾರರು ಏನು ಮಾಡಬೇಕು? ಪ್ರತಿನಿತ್ಯ ಜಿಮ್‌ಗಳಿಗೆ ಬರುವವರು ಕೂಡಾ ಈ ನಿರ್ಧಾರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರ ತನ್ನ ನಿರ್ಧಾರವನ್ನು ಪುನರ್‌ಪರಿಶೀಲಿಸಿ ಶೇ 50 ರಷ್ಟು ವಹಿವಾಟು ನಡೆಸಲು ಅವಕಾಶ ಕಲ್ಪಿಸಬೇಕು' ಎಂದರು.

ಸಿನಿಮಾ, ಹೋಟೆಲ್, ಬಾರ್ ಮತ್ತು ಪಬ್‌ಗಳಿಗೆ ಶೇ 50 ರಷ್ಟು ವಹಿವಾಟು ನಡೆಸಲು ಅವಕಾಶ ನೀಡಿದೆ.


ಎ.ವಿ.ರವಿ

ಜಿಮ್‌ಗಳಿಗೂ ಅದೇ ನಿಯಮ ಅನ್ವಯವಾಗಲಿ. ಜಿಮ್ ಕೇಂದ್ರಗಳನ್ನು ಕೂಡಾ ಉದ್ಯಮವೆಂದು ಪರಿಗಣಿಸಿ ಕಾರ್ಯನಿರ್ವಹಿಸಲು ಅನುಮತಿ ಕೊಡಬೇಕು ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ 10 ಸಾವಿರ ಜಿಮ್‌ಗಳಿದ್ದು, ಕಳೆದ ವರ್ಷ ಕೋವಿಡ್ ಲಾಕ್‌ಡೌನ್‌ನಿಂದ ನಷ್ಟ ಅನುಭವಿಸಿ ಸುಮಾರು 2 ಸಾವಿರ ಜಿಮ್‌ಗಳು ಶಾಶ್ವತವಾಗಿ ಬಾಗಿಲು ಮುಚ್ಚಿವೆ. ಕಳೆದ 5–6 ತಿಂಗಳುಗಳಿಂದ ಉದ್ಯಮವು ಅಲ್ಪ ಚೇತರಿಕೆಯ ಹಾದಿಯಲ್ಲಿ ಸಾಗಿತ್ತು. ಇದೀಗ ಮತ್ತೆ ಬಾಗಿಲು ಮುಚ್ಚುವುದರಿಂದ ನಷ್ಟ ಎದುರಾಗಲಿದೆ. ಈಗ ಆಗಿರುವ ನಷ್ಟ ಭರಿಸಲು ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು' ಎಂದು ಮನವಿ ಮಾಡಿದರು.

### ಸಂಕ್ಷಿಪ್ತ ಸುದ್ದಿ

## ಅಂಧರ ಕ್ರಿಕೆಟ್: ಭಾರತಕ್ಕೆ ಸೋಲು

ಬೆಂಗಳೂರು: ಭಾರತ ಅಂಧರ ಕ್ರಿಕೆಟ್ ತಂಡವು ಟ್ವೆಂಟಿ–20 ತ್ರಿಕೋನ ಸರಣಿಯ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಎದುರು 58 ರನ್‌ಗಳಿಂದ ಸೋತಿದೆ.

ಬಾಂಗ್ಲಾದೇಶದ ಢಾಕಾದ ಬಶುಂಧರಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಾಕಿಸ್ತಾನ ತಂಡ ಮೊದಲ ಓವರ್‌ನಲ್ಲೇ ವಿಕೆಟ್ ಕಳೆದುಕೊಂಡಿತು. ಆದರೆ ಬಾದರ್ ಮುನೀರ್ ಅವರ ಅರ್ಧಶತಕ (50, 27 ಎಸೆತ, ಮೂರು ಬೌಂಡರಿ, ನಾಲ್ಕು ಸಿಕ್ಸರ್) ತಂಡಕ್ಕೆ ಆಸರೆಯಾಯಿತು. ಪಾಕಿಸ್ತಾನ ನಿಗದಿತ ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡರು 185 ರನ್ ಪೇರಿಸಿತು.

ಗುರಿ ಬೆನ್ನತ್ತಿದ ಭಾರತ ತಂಡವು ಉತ್ತಮ ಆರಂಭ ಕಂಡರೂ, ನಿರಂತರ ವಿಕೆಟ್ ಕಳೆದುಕೊಳುತ್ತ ಸಾಗಿತು. 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 127 ರನ್ ಗಳಿಸಲಷ್ಟೇ ಶಕ್ತವಾಯಿತು. ಭಾನುವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡವು ಆತಿಥೇಯ ಬಾಂಗ್ಲಾವನ್ನು ಎದುರಿಸಲಿದೆ.

## ಒಲಿಂಪಿಕ್ ಈಜುಪಟು ಕ್ಲಾರಾ ವಾಕರ್ ನಿಧನ

ನ್ಯೂಯಾರ್ಕ್ (ಎಪಿ): ಅಮೆರಿಕದ ಈಜುಪಟು, 1948ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಕ್ಲಾರಾ ಲ್ಯಾಮೋರ್ ವಾಕರ್ (94) ಶುಕ್ರವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೂರು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದ ಅವರು, ಮಾಸ್ಟರ್ಸ್ ವಯೋವರ್ಗಗಳ ಟೂರ್ನಿಗಳಲ್ಲಿ ಹಲವು ದಾಖಲೆ ನಿರ್ಮಿಸಿದ್ದರು.

ತಮ್ಮ 22ನೇ ವಯಸ್ಸಿನಲ್ಲಿ, ಒಲಿಂಪಿಕ್ಸ್‌ನ 200 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಅವರು ಸ್ಪರ್ಧಿಸಿದ್ದರು. ಆದರೆ ಇದೇ ಸ್ಪರ್ಧೆಯ ಕೊನೆಯಲ್ಲಿ ಒಂದು ಸದುದ್ದೇಶಕ್ಕಾಗಿ ಸ್ಪರ್ಧಾತ್ಮಕ ಈಜಿನಿಂದ ಹಿಂದೆ ಸರಿದರು ಎಂದು 'ಇಂಟರ್‌ನ್ಯಾಷನಲ್ ಸ್ವಿಮ್ಮಿಂಗ್ ಹಾಲ್ ಆಫ್ ಫೇಮ್' ವೆಬ್‌ಸೈಟ್‌ನಲ್ಲಿರುವ ಅವರ ಜೀವನಚರಿತ್ರೆಯಲ್ಲಿ ಹೇಳಲಾಗಿದೆ.

54ನೇ ವಯಸ್ಸಿನವರೆಗೆ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸದ ಕ್ಲಾರಾ, ನಂತರ ಮತ್ತೆ ಈಜುಕೊಳಕ್ಕಿಳಿದರು.

ಮಾಸ್ಟರ್ಸ್ ಈಜು ವಿಭಾಗದಲ್ಲಿ ಒಟ್ಟು 184 ವಿಶ್ವದಾಖಲೆಗಳು ಹಾಗೂ 468 ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರೆಂದು ವೆಬ್‌ಸೈಟ್ ಉಲ್ಲೇಖಿಸಿದೆ.

# ಸಿಎಸ್‌ಕೆ ಸಮತೋಲಿತ ತಂಡ: ಹಸ್ಸಿ

ಮುಂಬೈ (ಪಿಟಿಐ): ಈ ಸಲ ತಮ್ಮ ತಂಡವು ಸಮತೋಲನದಿಂದ ಕೂಡಿದೆ. ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಆಟಗಾರರು ಇದ್ದಾರೆ. ಆಟಗಾರರಲ್ಲಿ ಉತ್ತಮ ಬಾಂಧವ್ಯವೂ ಏರ್ಪಟ್ಟಿದೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕಲ್ ಹಸ್ಸಿ ಹೇಳಿದ್ದಾರೆ.

ಹೋದ ಸಲದ ಐಪಿಎಲ್‌ನಲ್ಲಿ ಚೆನ್ನೈ ತಂಡವು ಪ್ಲೇ ಆಫ್ ಪ್ರವೇಶಿಸಿರಲಿಲ್ಲ. ಟೂರ್ನಿಯ ಇತಿಹಾಸದಲ್ಲಿಯೇ ಚೆನ್ನೈ ತಂಡವು ಮೊದಲ ಬಾರಿ ಇಂತಹ ದೊಡ್ಡ ಹಿನ್ನಡೆ ಅನುಭವಿಸಿತ್ತು.

'ತಂಡದಲ್ಲಿರುವ ಮೊಯಿನ್ ಅಲಿ ಅಮೋಘವಾದ ಆಲ್‌ರೌಂಡರ್ ಆಗಿದ್ದಾರೆ. ರಾಬಿನ್ ಉತ್ತಪ್ಪ ಅವರಿಗೆ ಅಪಾರವಾದ ಅನುಭವ ಇದೆ. ಸ್ಪಿನ್–ಆಲ್‌ರೌಂಡರ್ ಕೆ. ಗೌತಮ್ ಕೂಡ ಉಪಯುಕ್ತ ಆಟಗಾರ. ಇವರೆಲ್ಲರೂ ಉತ್ತಮವಾಗಿ ಅಭ್ಯಾಸ ನಡೆಸುತ್ತಿದ್ದಾರೆ. ಟೂರ್ನಿಯಲ್ಲಿ ಚೆನ್ನಾಗಿ ಆಡುವ ಹುಮ್ಮಸ್ಸಿನಲ್ಲಿದ್ದಾರೆ' ಎಂದರು.

ಹೋದ ಫೆಬ್ರುವರಿಯಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ತಂಡವು ಇಂಗ್ಲೆಂಡ್‌ನ ಮೊಯಿನ್ ಅಲಿ ಸೇರಿದಂತೆ ಆರು ಮಂದಿ ಆಟಗಾರರನ್ನು ಹೊಸದಾಗಿ ಸೇರ್ಪಡೆ ಮಾಡಿಕೊಂಡಿತ್ತು. ಆದರೆ ಹರಾಜಿಗಿಂತ ಮುಂಚೆಯೇ ಟ್ರೇಡಿಂಗ್‌ನಲ್ಲಿ ರಾಬಿನ್ ಅವರನ್ನು ಪಡೆದುಕೊಂಡಿತ್ತು.

'ಟೂರ್ನಿಯ ಆರಂಭವನ್ನು ಜಯದೊಂದಿಗೆ ಮಾಡುವುದು ಉತ್ತಮ. ಅದರಿಂದ ಆಟಗಾರರು ಮುಂದಿನ ಪಂದ್ಯಗಳಲ್ಲಿ ಹೆಚ್ಚು ನಿರಾಳ ಮತ್ತು ಆತ್ಮವಿಶ್ವಾಸಭರಿತರಾಗಿ ಆಡಲು ಅನುಕೂಲವಾಗುತ್ತದೆ. ಮೊದಲ ಸುತ್ತಿನಲ್ಲಿ ಹೆಚ್ಚು ಸೋಲು ಅನುಭವಿಸಿದರೆ ಒತ್ತಡ ಹೆಚ್ಚುತ್ತ ಹೋಗುತ್ತದೆ' ಎಂದು ಆಸ್ಟ್ರೇಲಿಯಾ ತಂಡದ ಮಾಜಿ ಬ್ಯಾಟ್ಸ್‌ಮನ್ ಹಸ್ಸಿ ವಿಶ್ಲೇಷಿಸಿದರು.

'ವಾಂಖೆಡೆ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್ ಮತ್ತು ಬೌಲಿಂಗ್‌ಗಳೆರಡಕ್ಕೂ ನೆರವು ನೀಡುವ ಗುಣ ಹೊಂದಿದೆ. ಮೊದಲ ಸುತ್ತಿನಲ್ಲಿ ಇಲ್ಲಿ ಹೆಚ್ಚು ಪಂದ್ಯಗಳನ್ನು ಆಡುವುದರಿಂದ ನಮ್ಮ ಆಟಗಾರರಿಗೆ ಒಳ್ಳೆಯದಾಗಲಿದೆ'ಎಂದು ಅಭಿಪ್ರಾಯಪಟ್ಟರು.


ರಾಬಿನ್ ಉತ್ತಪ್ಪ


ಮೈಕಲ್ ಹಸ್ಸಿ

ಚೆಸ್: ಅಗ್ರ ಸ್ಥಾನ ಹಂಚಿಕೊಂಡ ಓಜಸ್ ಕುಲಕರ್ಣಿ

# ಶರಣ್ ರಾವ್‌ಗೆ ಮಣಿದ ಸಂಜಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ಆಟಗಾರ, ಮಾಜಿ ರಾಜ್ಯ ಚಾಂಪಿಯನ್ ಸಂಜಯ್ ಎನ್ ಎದುರು ಜಯ ಸಾಧಿಸಿದ ಮಂಗಳೂರಿನ ಶರಣ್ ರಾವ್ ಅವರು ನಗರದ ವೈಟ್‌ಫೀಲ್ಡ್‌ನಲ್ಲಿ ನಡೆಯುತ್ತಿರುವ ಬೆಂಗಳೂರು ಗ್ರಾಮಾಂತರ ಚೆಸ್ ಸಂಸ್ಥೆ ಆಶ್ರಯದ ಫಿಡೆ ರೇಟೆಡ್ ರಾಜ್ಯ ಚಾಂಪಿಯನ್‌ಷಿಪ್‌ನ ಅಗ್ರ ಸ್ಥಾನಕ್ಕೇರಿದರು.

ಸಂಜಯ್ 2330 ಇಲೊ ರೇಟಿಂಗ್ ಹೊಂದಿದ್ದು ಶರಣ್ 1992 ರೇಟಿಂಗ್ ಹೊಂದಿದ್ದಾರೆ. ಶನಿವಾರ ನಡೆದ ಏಳನೇ ಸುತ್ತಿನಲ್ಲಿ ಜಯ ಗಳಿಸುವುದರೊಂದಿಗೆ ಶರಣ್ ಅವರ ಪಾಯಿಂಟ್ ಗಳಿಕೆ 6.5ಕ್ಕೆ ಏರಿತು. ಇಶಾ ಶರ್ಮಾ ಎದುರು ಜಯ ಗಳಿಸಿದ ಓಜಸ್ ಕುಲಕರ್ಣಿ ಕೂಡ ಇಷ್ಟೇ ಪಾಯಿಂಟ್ ಹೊಂದಿದ್ದು ಅಗ್ರ ಸ್ಥಾನ ಹಂಚಿಕೊಂಡಿದ್ದಾರೆ.

ಸಂಜಯ್, ಪ್ರಚುರ, ಬಾಲಕಿಶನ್, ಇಶಾ ಶರ್ಮಾ, ಪಾರ್ಥಸಾರಥಿ, ರಕ್ಷಿತ್ ಶ್ರೀನಿವಾಸನ್ ಹಾಗೂ ರಂಗನಾಯಕಿ ತಲಾ ಆರು ಪಾಯಿಂಟ್ ಗಳಿಸಿದ್ದಾರೆ. ಭಾನುವಾರ ಕೊನೆಯ ದಿನವಾಗಿದ್ದು ಎರಡು ಸುತ್ತುಗಳು ಬಾಕಿ ಇವೆ. ಅಗ್ರ ನಾಲ್ಕು ಸ್ಥಾನ ಗಳಿಸುವವರು ಉತ್ತರ ಪ್ರದೇಶದ ಕಾನ್ಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಅರ್ಹತೆ ಗಳಿಸಲಿದ್ದಾರೆ.


ಶರಣ್ ರಾವ್

**ಏಳನೇ ಸುತ್ತಿನ ಫಲಿತಾಂಶಗಳು:** ಶರಣ್ ರಾವ್‌ಗೆ ಸಂಜಯ್ ಎನ್ ವಿರುದ್ಧ ಜಯ; ಓಜಸ್ ಕುಲಕರ್ಣಿಗೆ ಇಶಾ ಶರ್ಮಾ ಎದುರು ಗೆಲುವು; ಪ್ರಚುರ ಪಿ.ಪಿಗೆ ದಿಲೀಪ್ ಕುಮಾರ್ ವಿರುದ್ಧ, ಬಾಲಕಿಶನ್‌ಗೆ ಅಪೂರ್ವಾ ಕಾಂಬ್ಳೆ ವಿರುದ್ಧ, ಪಾರ್ಥಸಾರಥಿಗೆ ಪ್ರಣಯ್ ಸಿಂಗ್ ವಿರುದ್ಧ, ರಕ್ಷಿತ್ ಶ್ರೀನಿವಾಸನ್‌ಗೆ ಅದ್ವೈತ್ ರತ್ನಾಕರ್ ಎದುರು ಜಯ.

ದ್ರಿಕ್ಷು ವಸಂತ್ ಮತ್ತು ಸುದರ್ಶನ್ ಭಟ್ ನಡುವಿನ ಪಂದ್ಯ ಡ್ರಾ; ರಂಗನಾಯಕಿಗೆ ಶಾನ್ ಡಿಯಾನ್ ಎದುರು ಗೆಲುವು; ತೇಜಸ್ ಸುರೇಶ್ ಮತ್ತು ಮಿಥುಲ್ ಕೆ.ಎಚ್ ನಡುವಿನ ಪಂದ್ಯ ಡ್ರಾ; ವಿವೇಕ್ ನಂಬಿಯಾರ್‌ಗೆ ತೇಜಸ್ ಕುಮಾರ್ ವಿರುದ್ಧ ಜಯ; ಸುಜಯ್ ಬಿ.ಎಂ ಮತ್ತು ದೇವಾಂಶ್ ಚೌಧರಿ ನಡುವಿನ ಪಂದ್ಯ ಡ್ರಾ; ಅರವಿಂದ ರಾಮನಾಥ ಅಯ್ಯರ್‌ಗೆ ಲಯುಕ್ತಿ ವಿ.ಎಸ್ ವಿರುದ್ಧ, ಹರ್ಷಿಣಿಗೆ ಗೋಪಾಲ್ ಅಯ್ಯಂಗಾರ್ ಎದುರು, ದರ್ಶನ್ ವಿ.ಪಿ.ಎಸ್‌ಗೆ ಶ್ರೀರಾಂ ಎದುರು, ನಿಶಾಂತ್ ಡಿ ಸೋಜಾಗೆ ನಿಶಾ ಪೇಟ್ಕರ್ ಎದುರು ಜಯ.

## ಪ್ಯಾರಾ ಬ್ಯಾಡ್ಮಿಂಟನ್: ಫೈನಲ್‌ಗೆ ಪ್ರಮೋದ್

ದುಬೈ (ಪಿಟಿಐ): ಭಾರತದ ಪ್ರಮೋದ್ ಭಗತ್ ಹಾಗೂ ಸುಕಾಂತ್ ಕದಂ ಅವರು ದುಬೈ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಫೈನಲ್ಸ್‌ಗೆ ಲಗ್ಗೆಯಿಟ್ಟಿದ್ದಾರೆ.

ಎಸ್‌ಎಲ್ 3 ವಿಭಾಗದಲ್ಲಿ ಸ್ಪರ್ಧಿಸಿರುವ ಪ್ರಮೋದ್, ಶನಿವಾರ ನಡೆದ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ 21-7, 21-17ರಿಂದ ಮಲೇಷ್ಯಾದ ಮುಹಮ್ಮದ್ ಹುಜೈರಿ ಅಬ್ದುಲ್ ಮಲಿಕ್ ಅವರನ್ನು ಮಣಿಸಿದರು. ಫೈನಲ್‌ನಲ್ಲಿ ಅವರು ಭಾರತದವರೇ ಆದ ಕುಮಾರ್ ನಿತೇಶ್ ಎದುರು ಸೆಣಸಲಿದ್ದಾರೆ.

ಎಸ್‌ಎಲ್ 4 ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸುಕಾಂತ್ ಕದಂ 21-11, 21-11ರಿಂದ ಜರ್ಮನಿಯ ಮಾರ್ಸೆಲ್ ಆ್ಯಡಂ ಎದುರು ಗೆದ್ದರು.ಎಸ್‌ಎಲ್ 3 ವಿಭಾಗದ ಪುರುಷರ ಡಬಲ್ಸ್‌ನಲ್ಲಿ ಮನೋಜ್ ಸರ್ಕಾರ್ ಜೊತೆಗೂಡಿದ ಪ್ರಮೋದ್ 21-19, 23-21ರಿಂದ ಮೊಹಮ್ಮದ್ ಅರ್ವಾಜ್ ಅನ್ಸಾರಿ–ದೀಪ್ ರಂಜನ್ ಬಿಸೋಯಿ ಅವರನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿದರು.

## 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ 16 ವರ್ಷದೊಳಗಿನವರ ವಲಯ ಟೂರ್ನಿಯ ಮೂರು ಪಂದ್ಯಗಳನ್ನು ಮುಂದೂಡಲಾಗಿದೆ.

'ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ರಾಜ್ಯ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ. ಅದರಲ್ಲಿ ಕ್ರಿಕೆಟ್ ಪಂದ್ಯಗಳಿಗೆ ನಿರ್ಬಂಧವಿಲ್ಲ. ಆದರೆ, ಆಟಗಾರರು ಮತ್ತು ಸಿಬ್ಬಂದಿಯ ಸುರಕ್ಷತೆ ದೃಷ್ಟಿಯಿಂದ ನಮ್ಮ ಸಂಸ್ಥೆಯು ಸ್ವಯಂಪ್ರೇರಣೆಯಿಂದ ಈ ನಿರ್ಧಾರ ಕೈಗೊಂಡಿದೆ. ಟೂರ್ನಿಯಲ್ಲಿ ಪ್ರತಿ ಪಂದ್ಯವೂ ಎರಡು ದಿನಗಳ ಅವಧಿಯದ್ದು. ಶನಿವಾರ ಆರಂಭವಾಗಿರುವ ಪಂದ್ಯಗಳು ಭಾನುವಾರ ಮುಗಿಯಲಿವೆ. ಅದರ ನಂತರದ ಪಂದ್ಯಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಪರಿಸ್ಥಿತಿ ಅವಲೋಕಿಸಿ ಮುಂದಿನ ದಿನಾಂಕ ಪ್ರಕಟಿಸಲಾಗುವುದು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

## ಬ್ಯಾಡ್ಮಿಂಟನ್: ತಾನ್ಯಾ ರನ್ನರ್‌ಅಪ್

ಬೆಂಗಳೂರು: ಕರ್ನಾಟಕದ ತಾನ್ಯಾ ಹೇಮಂತ್ ಅವರು ಪೋಲಿಶ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಆಗಿದ್ದಾರೆ. ಪೋಲೆಂಡ್‌ನ ಗ್ನಿಜ್ನೊದಲ್ಲಿ ಇತ್ತೀಚೆಗೆ ನಡೆದ ಟೂರ್ನಿಯ ಫೈನಲ್‌ನಲ್ಲಿ ತಾನ್ಯಾ 22–24, 14–21ರಿಂದ ಈಸ್ಟೋನಿಯಾದ ಕ್ರಿಸ್ಟಿನಾ ಕೂಬಾ ಎದುರು ಸೋತಿದ್ದರು.

ಕಳೆದ ವರ್ಷ ಆಗಸ್ಟ್‌ನಲ್ಲಿ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ (ಪಿಪಿಬಿಎ) ಹಾಗೂ ಐಸ್ಪೋರ್ಟ್ಸ್ ಅಕಾಡೆಮಿಗಳು ಒಪ್ಪಂದ ಮಾಡಿಕೊಂಡಿದ್ದವು.

ಇಲ್ಲಿ ತರಬೇತಿ ಪಡೆದು ಅಂತರರಾಷ್ಟ್ರೀಯ ಮಟ್ಟದಲ್ಲಿ 'ಪೋಡಿಯಂ ಫಿನಿಶ್' ಮಾಡಿದ ಮೊದಲ ಜೂನಿಯರ್ ಆಟಗಾರ್ತಿಯಾಗಿದ್ದಾರೆ ತಾನ್ಯಾ.